ಕುರ್‌ಆನ್‌ನ
ನಾಲ್ಕು
ಪಾರಿಭಾಷಿಕ ಪದಗಳು

ಲೇಖಕರು

ಮೌ। ಸೈಯದ್ ಅಬುಲ್ ಆಲಾ ಮೌದೂದಿ

ಅನುವಾದಕರು

ಇಬ್ರಾಹೀಮ್ ಸಈದ್

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಪವಿತ್ರ ಕುರ್‌ಆನ್‌ನಲ್ಲಿ ಅತ್ಯಧಿಕ ಬಳಕೆಯಾಗಿರುವ ಪಾರಿಭಾಷಿಕ ಪದಗಳಾದ 'ಇಲಾಹ್', 'ರಬ್ಬ್', 'ದೀನ್' ಮತ್ತು 'ಇಬಾದತ್'ಗಳ ಒಂದು ಸಂಶೋಧನಾತ್ಮಕ ಅಧ್ಯಯನವೇ ಈ ಪುಸ್ತಕದ ವಿಷಯ.

''ಪವಿತ್ರ ಕುರ್‌ಆನ್‌ನ ಕೆಲವು ವಾಕ್ಯಗಳು ಇತರ ಕೆಲವು ವಾಕ್ಯಗಳ ವ್ಯಾಖ್ಯಾನವಾಗಿದೆ'' ಎಂಬ ತತ್ವದ ಆಧಾರದಲ್ಲಿ ಕುರ್‌ಆನ್‌ನ ಮೂಲಕವೇ ಈ ಪಾರಿಭಾಷಿಕ ಶಬ್ದಗಳ ಅರ್ಥವನ್ನು ಖಚಿತವಾಗಿ ತಿಳಿಯಲು ಇದರಲ್ಲಿ ಪ್ರಯತ್ನಿಸಲಾಗಿದೆ.

ಜತೆಗೆ ಆ ಪದಗಳು ಇಸ್ಲಾಮ್ ಪೂರ್ವ ಅರಬೀ ಸಾಹಿತ್ಯದಲ್ಲಿ ಬಳಕೆಯಾದ ರೀತಿ ಮತ್ತು ಅವುಗಳ ನಿಘಂಟು ಅರ್ಥಗಳನ್ನು ವಿವರಿಸಲಾಗಿದೆ. ಅರಬೀ ಭಾಷೆಯ ಪ್ರಖ್ಯಾತವೂ ಅಧಿಕೃತವೂ ಆದ ನಿಘಂಟುಗಳಿಂದಲೇ ಅವುಗಳ ಅರ್ಥ ವ್ಯಾಪ್ತಿಯನ್ನು ವಿವರಿಸಲಾಗಿದೆ.

ಈ ಗ್ರಂಥದ ಕರ್ತರಾದ ಮೌಲಾನಾ ಸೈಯದ್ ಅಬುಲ್ ಆಲಾ ಮೌದೂದಿ(1903-79) 20ನೇ ಶತಮಾನದ ಸುಪ್ರಸಿದ್ಧ ಇಸ್ಲಾಮಿ ಗ್ರಂಥಕರ್ತ ಮತ್ತು ಕುರ್‌ಆನ್ ವ್ಯಾಖ್ಯಾನಕಾರರಾಗಿರುವರು. ಅವರ ಜಗದ್ವಿಖ್ಯಾತ ಕುರ್‌ಆನ್ ವ್ಯಾಖ್ಯಾನದ ಸಹಿತ ಸುಮಾರು ಮೂವತ್ತು ಪುಸ್ತಕಗಳು ಈಗಾಗಲೇ ಕನ್ನಡಕ್ಕೆ ಅನುವಾದಗೊಂಡು ಪ್ರಕಟವಾಗಿವೆ.

ಪವಿತ್ರ ಕುರ್‌ಆನ್‌ನ ಅಧ್ಯಯನಕ್ಕೆ ಮತ್ತು ಇಸ್ಲಾಮ್ ಧರ್ಮದ ನೈಜ ಕಲ್ಪನೆಯನ್ನು ಗ್ರಹಿಸಲಿಕ್ಕೆ ಈ ಗ್ರಂಥ ಸಹಕಾರಿಯಾದೀತೆಂದು ನಿರೀಕ್ಷಿಸುತ್ತೇವೆ.

-ಪ್ರಕಾಶಕರು

ಅನುಕ್ರಮಣಿಕೆ

ಪ್ರಸ್ತಾವನೆ

الٰہ 'ಇಲಾಹ್' ربّ 'ರಬ್ಬ್', دین 'ದೀನ್' ಮತ್ತು عبادت 'ಇಬಾದತ್'
ಈ ನಾಲ್ಕು ಪದಗಳಿಗೆ ಕುರ್‌ಆನ್‌ನ ಪಾರಿಭಾಷಿಕದಲ್ಲಿ ಮೂಲಭೂತ ಮಹತ್ವವಿದೆ. ಅಲ್ಲಾಹನೇ ಏಕೈಕ 'ರಬ್ಬ್' ಮತ್ತು 'ಇಲಾಹ್' ಆಗಿದ್ದಾನೆ. ಅವನ ಹೊರತು ಯಾರೂ ಇಲಾಹ್ ಮತ್ತು ರಬ್ಬ್ ಇಲ್ಲ. 'ಉಲೂಹಿಯ್ಯತ್' ಮತ್ತು 'ರುಬೂಬಿಯ್ಯತ್'ನಲ್ಲಿ ಯಾರೂ ಅವನ ಸಹಭಾಗಿಗಳಿಲ್ಲ. ಆದ್ದರಿಂದ ಅವನನ್ನೇ ನಿಮ್ಮ 'ಇಲಾಹ್' ಮತ್ತು 'ರಬ್ಬ್' ಎಂದು ಅಂಗೀಕರಿಸಬೇಕು. ಅವನ ಹೊರತು ಇತರ ಎಲ್ಲರ 'ಉಲೂಹಿಯ್ಯತ್' ಮತ್ತು 'ರುಬೂಬಿಯ್ಯತ್'ನ್ನು ನಿರಾಕರಿಸಬೇಕು. ಅವನ ಇಬಾದತ್ ಮಾಡಬೇಕು. ಅವನ ಹೊರತು ಇತರ ಯಾರ ಇಬಾದತನ್ನು ಮಾಡಬಾರದು. ನಿಮ್ಮ ಧರ್ಮವನ್ನು ಅವನಿಗೇ ಮೀಸಲಿಡಬೇಕು. ಇತರ ಧರ್ಮಗಳನ್ನು ತಿರಸ್ಕರಿಸಬೇಕು ಎಂಬುದೇ ಕುರ್‌ಆನ್ ನೀಡುವ ಒಟ್ಟು ಕರೆಯಾಗಿದೆ.

وَمَآ اَرْسَلْنَا مِنْ قَبْلِكَ مِنْ رَّسُوْلٍ اِلَّا نُوْحِیْٓ اِلَیْهِ اَنَّهٗ
لَآ اِلٰهَ اِلَّآ اَنَا فَاعْبُدُوْنِ ۝ (انبیاء-۲۵)

ನಾವು ನಿಮಗಿಂತ ಮುಂಚೆ ಕಳುಹಿಸಿದ ಪ್ರತಿಯೊಬ್ಬ ಸಂದೇಶವಾಹಕರಿಗೂ "ನನ್ನ ಹೊರತು ಅನ್ಯ ಇಲಾಹ್ ಇಲ್ಲ. ಆದ್ದರಿಂದ ನೀವು ನನ್ನ ಇಬಾದತನ್ನೇ ಮಾಡಿರಿ" ಎಂದು ವಹ್ಯ್ ಮಾಡಿದ್ದೆವು. (21. ಅಲ್ ಅಂಬಿಯಾ :25)

وَمَآ اُمِرُوْٓا اِلَّا لِیَعْبُدُوْٓا اِلٰهًا وَّاحِدًا ۚ لَآ اِلٰهَ اِلَّا هُوَ ۔ سُبْحٰنَهٗ
عَمَّا یُشْرِكُوْنَ ۔ (التوبہ-۳۱)

ವಸ್ತುತಃ ಅವರಿಗೆ ಏಕ ದೇವನನ್ನು ಹೊರತು ಇನ್ನಾರ ಇಬಾದತನ್ನೂ ಮಾಡಲು ಅಪ್ಪಣೆ ಕೊಡಲಾಗಿಲ್ಲ. ಆತನ ಹೊರತು ಅನ್ಯ ಇಲಾಹ್ ಯಾರೂ ಇಲ್ಲ. ಅವರು ಮಾಡುತ್ತಿರುವ ಶಿರ್ಕ್‌ನಿಂದ ಅವನು ಪರಿಶುದ್ಧನಾಗಿದ್ದಾನೆ. (ಅತ್ತೌಬಃ 31)

اِنَّ هٰذِهٖٓ اُمَّتُكُمْ اُمَّةً وَّاحِدَةً ۖ وَّاَنَا رَبُّكُمْ فَاعْبُدُوْنِ ۔ (انبیاء-۹۲)

ಈ ನಿಮ್ಮ ಸಮುದಾಯವು ಒಂದೇ ಸಮುದಾಯವಾಗಿದೆ ಮತ್ತು ನಾನು ನಿಮ್ಮ ರಬ್ಬ್ ಆಗಿದ್ದೇನೆ. ಆದುದರಿಂದ ನೀವು ನನ್ನ ಇಬಾದತ್ ಮಾಡಿರಿ. (ಅಲ್ ಅಂಬಿಯಾ: 92)

قُلْ أَغَيْرَ اللَّهِ أَبْغِي رَبًّا وَهُوَ رَبُّ كُلِّ شَيْءٍ - (انعام - ١٦٤)

ಹೇಳಿರಿ ಅಲ್ಲಾಹನೇ ಸಕಲ ವಸ್ತುಗಳ ರಬ್ಬ್ ಆಗಿರುವಾಗ ನಾನು ಅವನ ಹೊರತು ಬೇರೆ ರಬ್ಬ್ ಅನ್ನು ಅರಸಬೇಕೇ? (ಅಲ್ ಅನ್‌ಆಮ್ :164)

فَمَنْ كَانَ يَرْجُوا لِقَاءَ رَبِّهِ فَلْيَعْمَلْ عَمَلًا صَالِحًا وَلَا يُشْرِكْ
بِعِبَادَةِ رَبِّهِ أَحَدًا - (كهف ١١٠)

ಆದುದರಿಂದ ತನ್ನ ಪ್ರಭುವಿನ ಭೇಟಿಯನ್ನು ನಿರೀಕ್ಷಿಸುವವನು ಸತ್ಕರ್ಮಗಳನ್ನು ಮಾಡಲಿ ಮತ್ತು ತನ್ನ ರಬ್ಬ್‌ಗೆ ಇಬಾದತ್‌ನಲ್ಲಿ ಯಾರನ್ನೂ ಸಹಭಾಗಿಯಾಗಿ ಮಾಡದಿರಲಿ. (ಅಲ್‌ಕಹಫ್ :110)

وَلَقَدْ بَعَثْنَا فِي كُلِّ أُمَّةٍ رَّسُولًا أَنِ اعْبُدُوا اللَّهَ وَاجْتَنِبُوا
الطَّاغُوتَ - (نحل - ٣٦)

ನಾವು ಪ್ರತಿಯೊಂದು ಸಮುದಾಯದಲ್ಲಿ ಓರ್ವ ಸಂದೇಶವಾಹಕನನ್ನು ಕಳುಹಿಸಿದೆವು ಮತ್ತು ಅಲ್ಲಾಹನ ಇಬಾದತ್ ಮಾಡಿರಿ ಹಾಗೂ ತಾಗೂತ್‌ನ ಇಬಾದತ್‌ನಿಂದ ದೂರವಿರಿ ಎಂದು ಅವರ ಮುಖಾಂತರ ಎಚ್ಚರಿಕೆ ನೀಡಿದೆವು. (ಅನ್ನಹ್ಲ್: 36)

أَفَغَيْرَ دِينِ اللَّهِ يَبْغُونَ وَلَهُ أَسْلَمَ مَنْ فِي السَّمَاوَاتِ وَالْأَرْضِ
طَوْعًا وَكَرْهًا وَإِلَيْهِ يُرْجَعُونَ - (آل عمران - ٨٣)

ಇವರೇನು ಅಲ್ಲಾಹನ ದೀನ್‌ಗೆ ಹೊರತಾಗಿ ಬೇರೆ ಯಾವುದಾದರೂ ದೀನನ್ನು ಬಯಸುತ್ತಾರೆಯೇ? ವಸ್ತುತಃ ಆಕಾಶಗಳ ಮತ್ತು ಭೂಮಿಯ ಸಕಲ ವಸ್ತುಗಳೂ ಬಯಸಿಯೋ ಬಯಸದೆಯೋ ಅಲ್ಲಾಹನಿಗೆ ವಿಧೇಯವಾಗಿವೆ ಮತ್ತು ಎಲ್ಲರಿಗೂ ಅವನ ಕಡೆಗೇ ಮರಳಲಿಕ್ಕಿದೆ. (ಆಲಿ ಇಮ್ರಾನ್: 81)

قُلْ إِنِّي أُمِرْتُ أَنْ أَعْبُدَ اللَّهَ مُخْلِصًا لَّهُ الدِّينَ - (الزمر - ١١)

ಸಂದೇಶವಾಹಕರೇ! ಅವರೊಡನೆ ಹೇಳಿರಿ. ದೀನನ್ನು ಅಲ್ಲಾಹನಿಗೇ ಮೀಸಲಾಗಿಟ್ಟು ಅವನ ಇಬಾದತ್ ಮಾಡಬೇಕೆಂದು ನನಗೆ ಆಜ್ಞಾಪಿಸಲಾಗಿದೆ. (ಅಝ್ಝುಮರ್: 11)

إِنَّ اللّٰهَ رَبِّيْ وَرَبُّكُمْ فَاعْبُدُوْهُ ۚ هٰذَا صِرَاطٌ مُّسْتَقِيْمٌ۔ (آل عمران-٥١)

ಅಲ್ಲಾಹನೇ ನನ್ನ ಮತ್ತು ನಿಮ್ಮೆಲ್ಲರ ರಬ್ಬ್ ಆಗಿದ್ದಾನೆ. ಆದ್ದರಿಂದ ನೀವು ಅವನ ಇಬಾದತನ್ನೇ ಮಾಡಿರಿ. ಇದುವೇ ನೇರ ಮಾರ್ಗವಾಗಿದೆ. (ಆಲಿ ಇಮ್ರಾನ್: 51)

ಇವು ಉದಾಹರಣೆಗಾಗಿ ಉದ್ಧರಿಸಲ್ಪಟ್ಟ ಕೆಲವು ಸೂಕ್ತಗಳು ಮಾತ್ರ. ಕುರ್‌ಆನನ್ನು ಅಭ್ಯಸಿಸುವವನಿಗೆ ಮೊದಲ ನೋಟದಲ್ಲೇ ಕುರ್‌ಆನ್‌ನ ಎಲ್ಲ ವಿವರಣೆಗಳೂ ಈ ನಾಲ್ಕು ಪಾರಿಭಾಷಿಕ ಪದಗಳ ಸುತ್ತ ತಿರುಗುತ್ತವೆಂದು ಭಾಸವಾಗುತ್ತದೆ. ಈ ಗ್ರಂಥದ ಕೇಂದ್ರೀಯ ವಿಚಾರ(Central Idea) ಹೀಗಿದೆ:

ಅಲ್ಲಾಹನೇ 'ರಬ್ಬ್' ಮತ್ತು 'ಇಲಾಹ್' ಆಗಿದ್ದಾನೆ. 'ರುಬೂಬಿಯ್ಯತ್' ಮತ್ತು 'ಇಲಾಹಿಯ್ಯತ್' ಅಲ್ಲಾಹನ ಹೊರತು ಯಾರಿಗೂ ಇಲ್ಲ.

ಆದ್ದರಿಂದ ಅವನಿಗೆ ಮಾತ್ರ 'ಇಬಾದತ್' ಮಾಡಬೇಕು. 'ದೀನ್' ಸಂಪೂರ್ಣವಾಗಿ ಅವನಿಗೇ ಮೀಸಲಾಗಿರಬೇಕು.

ನಾಲ್ಕು ಪಾರಿಭಾಷಿಕ ಪದಗಳ ಮಹತ್ವ

ಕುರ್‌ಆನ್‌ನ ಶಿಕ್ಷಣವನ್ನು ಗ್ರಹಿಸಲು ಈ ನಾಲ್ಕು ಪಾರಿಭಾಷಿಕ ಪದಗಳ ಸರಿಯಾದ ಮತ್ತು ಸಂಪೂರ್ಣವಾದ ತಾತ್ಪರ್ಯವನ್ನು ಗ್ರಹಿಸುವುದು ಅನಿವಾರ್ಯವಾಗಿದೆ ಎಂಬುದು ಸ್ಪಷ್ಟ. 'ಇಲಾಹ್' ಮತ್ತು 'ರಬ್ಬ್'ನ ತಾತ್ಪರ್ಯವೇನೆಂದು ಒಬ್ಬನಿಗೆ ಗೊತ್ತಿಲ್ಲದಿದ್ದರೆ 'ಇಬಾದತ್' ಎಂದರೇನು? 'ದೀನ್' ಎಂದು ಯಾವುದಕ್ಕೆ ಹೇಳುತ್ತಾರೆ ಎಂಬುದು ತಿಳಿಯದಿದ್ದರೆ ಅವನ ಮಟ್ಟಿಗೆ ಇಡೀ ಕುರ್‌ಆನ್ ಅರ್ಥ ಶೂನ್ಯವಾಗುವುದು. ಅವನು ತೌಹೀದ್‌ಅನ್ನು ಗ್ರಹಿಸಲಾರ. ಇಬಾದತನ್ನು ಅಲ್ಲಾಹನಿಗೆ ಮೀಸಲಿಡಲಾರ. ಧರ್ಮವನ್ನು ಆತನಿಗೆ ಮೀಸಲಿಡಲಾರ. ಈ ರೀತಿ ಯಾರದಾದರೂ ಮನಸ್ಸಿನಲ್ಲಿ ಈ ಪಾರಿಭಾಷಿಕ ಪದಗಳ ತಾತ್ಪರ್ಯವು ಅಸ್ಪಷ್ಟ ಮತ್ತು ಅಪೂರ್ಣವಾಗಿದ್ದರೆ ಅವನ ಪಾಲಿಗೆ ಇಡೀ ಕುರ್‌ಆನ್‌ನ ಶಿಕ್ಷಣವು ಅಸ್ಪಷ್ಟವಾಗಿರುವುದು. ಕುರ್‌ಆನ್‌ನ ಮೇಲೆ ವಿಶ್ವಾಸವಿಡುವುದರ ಹೊರತಾಗಿಯೂ ಅವನ ವಿಶ್ವಾಸ ಮತ್ತು ಕರ್ಮಗಳೆರಡೂ ಅಪೂರ್ಣವಾಗಿರುವುದು. ಅವನು 'ಲಾ ಇಲಾಹ ಇಲ್ಲಲ್ಲಾಹ್' ಎಂದು ಹೇಳುತ್ತಿದ್ದಂತೆಯೇ ಅನೇಕರನ್ನು 'ಇಲಾಹ್' ಮಾಡುತ್ತಿರುವನು. ಅವನು ಅಲ್ಲಾಹನ ಹೊರತು ಯಾರೂ ರಬ್ಬ್ ಇಲ್ಲ ಎಂದು ಘೋಷಿಸುತ್ತಿದ್ದಂತೆಯೇ ಅಲ್ಲಾಹನ ಹೊರತು ಅನೇಕರು ಅವನ ರಬ್ಬ್‌ಗಳಾಗಿರುವರು. ಅವನು ನಾನು ಅಲ್ಲಾಹನ ಧರ್ಮದಲ್ಲಿರುವೆನೆಂದು ಅತ್ಯಂತ ಪ್ರಾಮಾಣಿಕವಾಗಿ ಹೇಳುವನು. ನೀನು ಬೇರೆ ಧರ್ಮದವನು ಎಂದು ನೀವು ಅವನಿಗೆ ಹೇಳಿದರೆ ಅವನು ನಿಮ್ಮಲ್ಲಿ ಜಗಳಕ್ಕಿಳಿಯುವನು. ಆದರೂ ಅನೇಕ ಧರ್ಮಗಳ ನೊಗವನ್ನು ಅವನು ಹೊತ್ತಿರುವನು. ಅಲ್ಲಾಹನ ಹೊರತು ಇತರ ಯಾರಿಗೂ ಅವನ ಬಾಯಿಯಿಂದ 'ಇಲಾಹ್' ಮತ್ತು 'ರಬ್ಬ್' ಎಂಬ ಪದಗಳು ಹೊರಡಲಾರವು. ಆದರೆ ಈ ಪದಗಳು ಯಾವ ಅರ್ಥಗಳಿಗಾಗಿ

ರಚಿಸಲ್ಪಟ್ಟಿವೆಯೋ ಅವುಗಳ ಪ್ರಕಾರ ಅವನಿಗೆ ಅನೇಕ ಇಲಾಹ್ ಮತ್ತು ರಬ್ಬ್‌ಗಳಿರುವರು. ಆದರೆ ಆ ಬಡಪಾಯಿಗೆ ತಾನು ಅಲ್ಲಾಹನ ಹೊರತು ಇತರರನ್ನು ಇಲಾಹ್ ಮತ್ತು ರಬ್ಬ್ ಮಾಡಿರುವೆನೆಂಬ ಪರಿವೆಯೇ ಇರಲಾರದು. 'ನೀನು ಇತರರ ಇಬಾದತ್ ಮಾಡುತ್ತಿರುವಿ' ಎಂದು ನೀವು ಅವನಿಗೆ ಹೇಳಿದರೆ ಅವನು ನಿಮಗೆ ಕಲ್ಲು ಹೊಡೆಯಲು ಮತ್ತು ನಿಮ್ಮ ಮುಖ ಪರಚಲು ಮುಂದಾಗುವನು. ಆದರೆ ಇಬಾದತ್ ಮತ್ತು ದೀನ್‌ನ ವಾಸ್ತವಿಕತೆಯ ದೃಷ್ಟಿಯಿಂದ ವಸ್ತುಶಃ ಅವನು ಇತರರ ಇಬಾದತ್ ಮಾಡುತ್ತಿದ್ದು ಇತರರ ಧರ್ಮದಲ್ಲಿ ಸೇರಿರುವನು. ತಾನು ಮಾಡುತ್ತಿರುವುದು ಇತರರ ಇಬಾದತ್ ಆಗಿದೆ ಮತ್ತು ತಾನು ಯಾವ ಸ್ಥಿತಿಯಲ್ಲಿರುವೆನೋ ಅದು ವಾಸ್ತವದಲ್ಲಿ ಅಲ್ಲಾಹನ ಹೊರತು ಇತರರ ಧರ್ಮವಾಗಿದೆ ಎಂಬುದು ಅವನಿಗೆ ತಿಳಿದಿರಲಾರದು.

ತಪ್ಪು ಕಲ್ಪನೆಯ ಮೂಲ ಕಾರಣ

ಅರೇಬಿಯಾದಲ್ಲಿ ಕುರ್‌ಆನ್ ಪ್ರಸ್ತುತ ಪಡಿಸಲ್ಪಟ್ಟಾಗ 'ಇಲಾಹ್'ನ ಅರ್ಥವೇನು ಮತ್ತು 'ರಬ್ಬ್' ಎಂದು ಯಾರಿಗೆ ಹೇಳಲಾಗುತ್ತದೆ ಎಂಬುದು ಪ್ರತಿಯೊಬ್ಬನಿಗೂ ತಿಳಿದಿತ್ತು. ಏಕೆಂದರೆ ಈ ಎರಡೂ ಪದಗಳು ಅವರು ಆಡುವ ಭಾಷೆಯಲ್ಲಿ ಬಳಕೆಯಲ್ಲಿದ್ದುವು. ಈ ಪದಗಳ ತಾತ್ಪರ್ಯವೇನೆಂಬುದನ್ನು ಅವರು ಅರಿತಿದ್ದರು. ಆದ್ದರಿಂದ ಏಕೈಕ ಅಲ್ಲಾಹನೇ ಇಲಾಹ್ ಮತ್ತು ರಬ್ಬ್ ಆಗಿದ್ದಾನೆ ಹಾಗೂ ಉಲೂಹಿಯ್ಯತ್ ಮತ್ತು ರುಬೂಬಿಯ್ಯತ್‌ನಲ್ಲಿ ಇತರ ಯಾರದೇ ಕಿಂಚಿತ್ ಪಾಲಿಲ್ಲ ಎಂದು ಹೇಳಿದಾಗ ಅವರು ಅದರ ಪೂರ್ಣ ತಾತ್ಪರ್ಯವನ್ನು ಗ್ರಹಿಸಿದರು. ಇತರರಿಗೆ ಯಾವುದನ್ನು ಅಲ್ಲಗಳೆಯಲಾಗುತ್ತದೋ ಮತ್ತು ಕೇವಲ ಅಲ್ಲಾಹನಿಗೆ ಯಾವುದನ್ನು ಮೀಸಲುಗೊಳಿಸಲಾಗುತ್ತದೋ ಎಂಬುದು ಯಾವ ಸಂಶಯಕ್ಕೂ ಎಡೆಯಿಲ್ಲದಂತೆ ಅವರಿಗೆ ತಿಳಿಯಿತು. ಅದನ್ನು ವಿರೋಧಿಸಿದವರು ಅಲ್ಲಾಹನ ಹೊರತು ಇತರರ ಉಲೂಹಿಯ್ಯತ್‌ನ ನಿರಾಕರಣೆಯ ಏಟು ಯಾರ ಮೇಲೆಲ್ಲಾ ಬೀಳುತ್ತದೆ ಎಂದು ತಿಳಿದೇ ವಿರೋಧಿಸಿದರು. ಅದನ್ನು ನಂಬಿದವರು ಈ ವಿಶ್ವಾಸವನ್ನು ಸ್ವೀಕರಿಸಿದರೆ ನಮಗೆ ಯಾವುದನ್ನು ತೊರೆಯಬೇಕಾದೀತು ಮತ್ತು ಯಾವುದನ್ನು ಸ್ವೀಕರಿಸಬೇಕಾದೀತು ಎಂದು ಅರಿತುಕೊಂಡೇ ನಂಬಿದರು. ಇದೇ ರೀತಿ 'ಇಬಾದತ್' ಮತ್ತು 'ದೀನ್' ಎಂಬ ಪದಗಳೂ ಅವರ ಆಡುಭಾಷೆಯಲ್ಲಿ ಹಿಂದಿನಿಂದಲೇ ಬಳಕೆಯಲ್ಲಿದ್ದವು. 'ಅಬ್ದ್' ಎಂದು ಯಾರಿಗೆ ಹೇಳುತ್ತಾರೆ, ಯಾವ ಸ್ಥಿತಿಗೆ ಉಲೂಹಿಯ್ಯತ್' ಎನ್ನುತ್ತಾರೆ, ಯಾವ ನಡವಳಿಕೆಗೆ 'ಇಬಾದತ್' ಎನ್ನುತ್ತಾರೆ ಮತ್ತು 'ದೀನ್'ನ ತಾತ್ಪರ್ಯವೇನು ಎಂಬುದು ಅವರಿಗೆ ತಿಳಿದಿತ್ತು. ಆದ್ದರಿಂದ ಎಲ್ಲರ 'ಇಬಾದತ್' ಬಿಟ್ಟು ಕೇವಲ ಒಬ್ಬ ಅಲ್ಲಾಹನ 'ಇಬಾದತ್' ಮಾಡಿರಿ, ಎಲ್ಲ ಧರ್ಮಗಳಿಂದ ಬೇರ್ಪಟ್ಟು ಅಲ್ಲಾಹನ ಧರ್ಮದಲ್ಲಿ ಸೇರಿರಿ ಎಂದು ಅವರಿಗೆ ಹೇಳಿದಾಗ ಕುರ್‌ಆನ್‌ನ ಈ ಕರೆಯನ್ನು ಗ್ರಹಿಸುವಲ್ಲಿ ಅವರಿಗೆ ಯಾವುದೇ ತಪ್ಪು ಕಲ್ಪನೆ ಉಂಟಾಗಲಿಲ್ಲ. ಈ ಶಿಕ್ಷಣವು ನಮ್ಮ ಜೀವನ ವ್ಯವಸ್ಥೆಯಲ್ಲಿ ಅದು ಯಾವ ರೀತಿಯ ಮಾರ್ಪಾಟು ಬಯಸುತ್ತದೆಂದು ಅವರು ಅದನ್ನು ಆಲಿಸುತ್ತಲೇ ಗ್ರಹಿಸಿದರು.

ಆದರೆ ಕುರ್‌ಆನ್ ಅವತರಣದ ಕಾಲದಲ್ಲಿ ಈ ಪದಗಳಿಗಿದ್ದ ನೈಜ ಅರ್ಥವು ನಂತರದ ಶತಮಾನಗಳಲ್ಲಿ ಕ್ರಮೇಣ ಬದಲಾಗುತ್ತಾ ಹೋಯಿತು. ಎಲ್ಲಿಯವರೆಗೆಂದರೆ ಇವುಗಳ ಪೈಕಿ ಪ್ರತಿಯೊಂದು ಪದವು ತನ್ನ ಅರ್ಥ ವೈಶಾಲ್ಯವನ್ನು ಕಳಕೊಂಡು ಅತ್ಯಂತ ಸೀಮಿತ ಮತ್ತು ಅಸ್ಪಷ್ಟ ಅರ್ಥದಲ್ಲಿ ಬಳಸಲ್ಪಡ ತೊಡಗಿತು. ಇದಕ್ಕೆ ಒಂದು ಕಾರಣ ಅಪ್ಪಟ ಅರಬೀ ಭಾಷೆಯ ಬಗೆಗಿನ ಅಭಿರುಚಿ ಕಡಿಮೆಯಾದುದಾಗಿದೆ. ಇನ್ನೊಂದು ಕಾರಣ ಇಸ್ಲಾಮೀ ಸಮಾಜದಲ್ಲಿ ಹುಟ್ಟಿದವರ ಪಾಲಿಗೆ 'ಇಲಾಹ್', 'ರಬ್ಬ್' , 'ದೀನ್' ಮತ್ತು 'ಇಬಾದತ್'ಗೆ ಕುರ್‌ಆನ್ ಅವತರಣವಾಗುತ್ತಿದ್ದ ಕಾಲದಲ್ಲಿ ಮುಸ್ಲಿಮೇತರ ಸಮಾಜದಲ್ಲಿದ್ದ ಅರ್ಥವು ಬಾಕಿ ಉಳಿಯಲಿಲ್ಲ. ಈ ಎರಡು ಕಾರಣಗಳಿಂದಾಗಿ ಆಧುನಿಕ ಯುಗದ ಅರ್ಥಕೋಶ ಮತ್ತು ವ್ಯಾಖ್ಯಾನ ಗ್ರಂಥಗಳಲ್ಲಿ ಕುರ್‌ಆನ್‌ನ ಹೆಚ್ಚಿನ ಪದಗಳ ವಿವರಣೆಯನ್ನು ಅದರ ನೈಜ ಅರ್ಥದ ಬದಲು ನಂತರದ ಕಾಲದ ಮುಸ್ಲಿಮರಲ್ಲಿ ಬಳಕೆಯಲ್ಲಿದ್ದ ಅರ್ಥದ ಪ್ರಕಾರವೇ ಮಾಡಲಾಯಿತು. ಉದಾ: 'ಇಲಾಹ್' ಎಂಬ ಪದವನ್ನು ಮೂರ್ತಿ ಮತ್ತು ದೇವತೆಗಳಿಗೆ ಸಮಾನಾರ್ಥದ ಪದವೆಂದು ಪರಿಗಣಿಸಲಾಯಿತು. 'ರಬ್ಬ್' ಎಂಬ ಪದವನ್ನು ಪಾಲನೆ-ಪೋಷಣೆ ಮಾಡುವವನೆಂದು ಅರ್ಥೈಸಲಾಯಿತು. 'ಇಬಾದತ್' ಎಂದರೆ ಪೂಜೆ ಮತ್ತು ಉಪಾಸನೆಯೆಂದು ಬಗೆಯಲಾಯಿತು. 'ದೀನ್' ಎಂದರೆ ಮತ, ಧರ್ಮ ಅಥವಾ ರಿಲಿಜನ್ (Religion)ಗೆ ಸಮಾನವೆಂದು ಸಾರಲಾಯಿತು. 'ತಾಗೂತ್' ಎಂಬುದನ್ನು ಮೂರ್ತಿ ಅಥವಾ ಶೈತಾನ್ ಎಂದು ಅನುವಾದಿಸಲಾಯಿತು.

ಇದರಿಂದಾಗಿ ಜನರಿಗೆ ಕುರ್‌ಆನ್‌ನ ನೈಜ ಉದ್ದೇಶವನ್ನೇ ತಿಳಿಯುವುದು ಕಷ್ಟವಾಯಿತು. ಅಲ್ಲಾಹನ ಹೊರತು ಇತರ ಯಾರನ್ನೂ ಇಲಾಹ್ ಮಾಡದಿರಿ ಎಂದು ಕುರ್‌ಆನ್ ಹೇಳುತ್ತದೆ. ಜನರು ಹೇಳುತ್ತಾರೆ ನಾವು ಮೂರ್ತಿಗಳನ್ನೂ ದೇವತೆಗಳನ್ನೂ ಬಿಟ್ಟಿದ್ದೇವೆ. ಆದ್ದರಿಂದ ಕುರ್ ಆನ್‌ನ ಇಂಗಿತವನ್ನು ನಾವು ಪೂರ್ಣಗೊಳಿಸಿದೆವು. ವಸ್ತುಶಃ ಇಲಾಹ್‌ನ ತಾತ್ಪರ್ಯವು ಯಾವ ಯಾವ ವಸ್ತುಗಳಿಗೆ ಅನ್ವಯಿಸುತ್ತದೋ ಅವುಗಳನ್ನೆಲ್ಲಾ ಅವರು ಚೆನ್ನಾಗಿ ಬಿಗಿ ಹಿಡಿದಿರುವರು. ತನ್ಮೂಲಕ ನಾವು ಅಲ್ಲಾಹೇತರರನ್ನು ಇಲಾಹ್ ಮಾಡುತ್ತಿದ್ದೇವೆಂಬುದರ ಪರಿವೆಯೂ ಅವರಿಗೆ ಇಲ್ಲ. ಅಲ್ಲಾಹನ ಹೊರತು ಯಾರನ್ನೂ ರಬ್ಬ್ ಎಂದು ಅಂಗೀಕರಿಸಬೇಡಿ ಎಂದು ಕುರ್‌ಆನ್ ಹೇಳುತ್ತದೆ. ಜನರು ಹೇಳುತ್ತಾರೆ, ನಾವು ಅಲ್ಲಾಹನ ಹೊರತು ಯಾರನ್ನೂ ಪರಿಪಾಲಕನೆಂದು ಪರಿಗಣಿಸುವುದಿಲ್ಲ. ಆದ್ದರಿಂದ ನಮ್ಮ ತೌಹೀದ್ ಪೂರ್ಣಗೊಂಡಿದೆ. ಆದರೆ ರಬ್ಬ್ ಎಂಬ ಪದವು ಬೇರೆ ಯಾವುದೆಲ್ಲಾ ತಾತ್ಪರ್ಯವನ್ನು ಹೊಂದಿದೆಯೋ ಅವುಗಳ ಪ್ರಕಾರ ಹೆಚ್ಚಿನ ಜನರು ಅಲ್ಲಾಹನ ಹೊರತು ಇತರರ ರುಬೂಬಿಯ್ಯತನ್ನೂ ಅಂಗೀಕರಿಸಿರುವರು. ತಾಗೂತ್‌ನ ಇಬಾದತ್ ತೊರೆಯಿರಿ ಮತ್ತು ಕೇವಲ ಅಲ್ಲಾಹನ ಇಬಾದತ್ ಮಾಡಿರಿ ಎಂದು ಕುರ್‌ಆನ್ ಹೇಳುತ್ತದೆ. ಜನರು ಹೇಳುತ್ತಾರೆ, ನಾವು ಮೂರ್ತಿ ಪೂಜೆ ಮಾಡುವುದಿಲ್ಲ, ಶೈತಾನನ್ನು ಶಪಿಸುತ್ತೇವೆ ಮತ್ತು ಕೇವಲ ಅಲ್ಲಾಹನಿಗೆ ಸಾಷ್ಟಾಂಗವೆರಗುತ್ತೇವೆ. ಆದ್ದರಿಂದ ಕುರ್‌ಆನ್‌ನ ಈ ಆದೇಶವೂ ಪೂರ್ತಿಯಾಯಿತು. ವಾಸ್ತವದಲ್ಲಿ ಕಲ್ಲಿನ ಮೂರ್ತಿಗಳನ್ನು ಬಿಟ್ಟು ಇತರ

ತಾಗೂತ್‌ಗಳಿಗೆ ಅವರು ಅಂಟಿಕೊಂಡಿದ್ದಾರೆ ಮತ್ತು ಪೂಜೆಯ ಹೊರತು ಇತರೆಲ್ಲ ವಿಧದ ಇಬಾದತ್‌ಗಳನ್ನು ಅವರು ಅಲ್ಲಾಹನ ಹೊರತು ಇತರರಿಗೆ ಮೀಸಲಿಟ್ಟಿದ್ದಾರೆ. ದೀನ್‌ನ ಅವಸ್ಥೆಯೂ ಇದುವೇ ಆಗಿದೆ. ದೀನನ್ನು ಅಲ್ಲಾಹನಿಗೆ ಮೀಸಲಿಡುವುದೆಂದರೆ ಒಬ್ಬ ವ್ಯಕ್ತಿಯು 'ಇಸ್ಲಾಮ್ ಮತ'ವನ್ನು ಸ್ವೀಕರಿಸುವುದು ಮತ್ತು ಹಿಂದೂ, ಕ್ರೈಸ್ತ ಅಥವಾ ಯಹೂದಿ ಆಗದಿರುವುದು. ಆದ್ದರಿಂದ ಯಾರು 'ಇಸ್ಲಾಮ್ ಮತ'ದಲ್ಲಿರುವನೋ ಅವನು ತಾನು ದೀನನ್ನು ಅಲ್ಲಾಹನಿಗೆ ಮೀಸಲಿಟ್ಟಿದ್ದೇನೆಂದು ಬಗೆಯುತ್ತಾನೆ. ಆದರೆ ದೀನ್‌ನ ವಿಶಾಲ ಅರ್ಥದ ದೃಷ್ಟಿಯಿಂದ ಹೆಚ್ಚಿನ ಜನರ ದೀನ್ ಅಲ್ಲಾಹನಿಗೆ ಮೀಸಲಾಗಿಲ್ಲ.

ತಪ್ಪು ಕಲ್ಪನೆಯ ಪರಿಣಾಮಗಳು

ಈ ನಾಲ್ಕು ಮೂಲಭೂತ ಪಾರಿಭಾಷಿಕ ಪದಗಳ ತಾತ್ಪರ್ಯದ ಮೇಲೆ ಪರದೆ ಬಿದ್ದಿರುವುದರಿಂದ ಕುರ್‌ಆನ್‌ನ ಮುಕ್ಕಾಲು ಭಾಗ ಬೋಧನೆಗಳು ಮಾತ್ರವಲ್ಲ ಅದರ ನೈಜ ತಿರುಳು ಅಗೋಚರವಾಗಿರುವುದು ಒಂದು ವಾಸ್ತವಿಕತೆಯಾಗಿದೆ. ಇಸ್ಲಾಮ್ ಸ್ವೀಕರಿಸಿದ ನಂತರವೂ ಜನರ ವಿಶ್ವಾಸ ಮತ್ತು ಕರ್ಮಗಳಲ್ಲಿ ಕಂಡು ಬರುತ್ತಿರುವ ಕೊರತೆಗಳಿಗೆ ಒಂದು ದೊಡ್ಡ ಕಾರಣ ಇದುವೇ ಆಗಿದೆ. ಆದ್ದರಿಂದ ಪವಿತ್ರ ಕುರ್‌ಆನ್‌ನ ಕೇಂದ್ರೀಯ ಶಿಕ್ಷಣ ಮತ್ತು ಅದರ ನೈಜ ಉದ್ದೇಶವನ್ನು ಸ್ಪಷ್ಟಪಡಿಸಲು ಈ ಪಾರಿಭಾಷಿಕ ಪದಗಳ ಪೂರ್ಣ ವಿವರಣೆ ಅತ್ಯಗತ್ಯವಾಗಿದೆ.

ನಾನು ಈ ಹಿಂದೆ ನನ್ನ ಅನೇಕ ಲೇಖನಗಳಲ್ಲಿ ಇವುಗಳ ತಾತ್ಪರ್ಯವನ್ನು ವಿವರಿಸಲು ಪ್ರಯತ್ನಿಸಿದ್ದೇನೆ. ಆದರೆ ಅದು ಎಲ್ಲ ತಪ್ಪು ಕಲ್ಪನೆಗಳನ್ನು ನೀಗಿಸಲು ಪರ್ಯಾಪ್ತವಲ್ಲ. ಅದರಿಂದ ಜನರಿಗೆ ಸಂಪೂರ್ಣ ತೃಪ್ತಿಯೂ ದೊರೆಯದು. ಏಕೆಂದರೆ ಶಬ್ದಕೋಶ ಮತ್ತು ಕುರ್‌ಆನ್ ವಚನಗಳಿಂದ ಸಾಕ್ಷ್ಯಗಳನ್ನು ಒದಗಿಸದೆ ಇದ್ದರೆ ನನ್ನ ಪ್ರತಿಯೊಂದು ವಿವರಣೆಯನ್ನೂ ಜನರು ನನ್ನ ವೈಯಕ್ತಿಕ ಅಭಿಪ್ರಾಯವೆಂದೇ ಪರಿಗಣಿಸುತ್ತಾರೆ. ನನ್ನೊಂದಿಗೆ ಭಿನ್ನಾಭಿಪ್ರಾಯ ಹೊಂದಿದವರಿಗಂತೂ ನನ್ನ ಅಭಿಪ್ರಾಯದಿಂದ ತೃಪ್ತಿಯಾಗದು. ಈ ಲೇಖನದಲ್ಲಿ ಈ ನಾಲ್ಕು ಪಾರಿಭಾಷಿಕ ಪದಗಳ ಪೂರ್ಣ ತಾತ್ಪರ್ಯವನ್ನು ಸ್ಪಷ್ಟಪಡಿಸಲು ಮತ್ತು ಪದಕೋಶ ಮತ್ತು ಕುರ್‌ಆನ್‌ನಿಂದ ಪುರಾವೆಯಿಲ್ಲದೆ ಯಾವ ವಿಷಯವನ್ನೂ ವಿವರಿಸದಿರಲು ಪ್ರಯತ್ನಿಸುವೆನು.

ನಾವು ಅನುಕ್ರಮವಾಗಿ ಮೊದಲು ಇಲಾಹ್, ನಂತರ ರಬ್ಬ್, ಆ ಬಳಿಕ ಇಬಾದತ್ ಮತ್ತು ಕೊನೆಗೆ ದೀನ್ ಅನ್ನು ತೆಗೆದುಕೊಳ್ಳುವೆವು.

-ಸೈಯದ್ ಅಬುಲ್ ಆಲಾ ಮೌದೂದಿ

ಇಲಾಹ್

ಶಬ್ದ ಕೋಶಾರ್ಥ

ಈ ಪದದ ಮೂಲವು ا ل ہ ಆಗಿದೆ. ಈ ಮೂಲದಿಂದ ನಿಘಂಟಿನಲ್ಲಿ ಬಂದಿರುವ ಪದಗಳ ವಿವರವು ಹೀಗಿದೆ:

أَلِهَ إِذَا تَحَيَّرَ - ಗಾಬರಿ ಮತ್ತು ವ್ಯಾಕುಲಗೊಂಡ

الهت الى فلان اى سكنت اليه -

ಅವನ ಆಶ್ರಯದಲ್ಲಿ ಹೋಗಿ ಅಥವಾ ಅವನೊಂದಿಗೆ ಸಂಬಂಧ ಬೆಳೆಸಿ ನಾನು ಶಾಂತಿ ಸಮಾಧಾನ ಗಳಿಸಿದೆ.

اله الرجل يأله اذا فزع من امر نزل به فالهه غيره اي اجاره

ವ್ಯಕ್ತಿಯು ಯಾವುದೋ ವಿಪತ್ತು ಅಥವಾ ಸಂಕಷ್ಟ ಎರಗಿದಾಗ ಭಯಭೀತನಾದ ಮತ್ತು ಇನ್ನೊಬ್ಬನು ಅವನಿಗೆ ಆಶ್ರಯ ನೀಡಿದನು.

اله الرجل اتجه اليه لشدة شوقه اليه -

ವ್ಯಕ್ತಿಯು ಇನ್ನೊಬ್ಬನ ಕಡೆಗೆ ತೀವ್ರ ಆಸಕ್ತಿಯ ಕಾರಣ ಗಮನ ಹರಿಸಿದನು.

اله الفصيل اذا ولع بامه -

ತಾಯಿಯಿಂದ ಬೇರ್ಪಟ್ಟ ಮರಿ ಒಂಟೆ ಅದನ್ನು ಕಂಡಾಗ ಅದಕ್ಕೆ ಅಂಟಿಕೊಂಡಿತು.

لاه يليه ليها ولاهًا اذا احتجب -

ಅಡಗಿತು ಮತ್ತು ಮರೆಯಾಯಿತು. ಮತ್ತು ಅಂದರೆ ಉನ್ನತವಾಯಿತು.

ಇಬಾದತ್ ಮಾಡಿದನು. اله الهة والوهة والوهية عَبَدَ -

ಈ ಎಲ್ಲಾ ಕ್ರಿಯಾಧಾತು ಅರ್ಥಗಳ ಬಗ್ಗೆ ಯೋಚಿಸಿದಾಗ. أَلَهَ يَأْلَهُ أُلُهَةً

ಇಬಾದತ್ ಮತ್ತು ಇಲಾಹ್‌ನ ಅರ್ಥ 'ಮಅ್‌ಬೂದ್' ಆಗಿರುವುದರ ಔಚಿತ್ಯವೇನೆಂದು ತಿಳಿಯಬಹುದಾಗಿದೆ:

1) ಮನುಷ್ಯನ ಮನಸ್ಸಿನಲ್ಲಿ 'ಇಬಾದತ್' ಮಾಡಲು ಉಂಟಾಗುವ ಪ್ರಪ್ರಥಮ ಪ್ರೇರಣೆ

ಅವನ ಬೇಡಿಕೆಗಳಾಗಿವೆ. ಅವನ ಬೇಡಿಕೆಗಳನ್ನು ಈಡೇರಿಸಬಲ್ಲನು, ಅಪಾಯ ಮತ್ತು ಆಪತ್ತುಗಳಲ್ಲಿ ಅವನಿಗೆ ಆಶ್ರಯ ನೀಡಬಲ್ಲನು ಮತ್ತು ಉದ್ವಿಗ್ನತೆಯ ಸ್ಥಿತಿಯಲ್ಲಿ ಅವನಿಗೆ ನೆಮ್ಮದಿ ದಯಪಾಲಿಸಬಲ್ಲನು ಎಂಬ ಭರವಸೆಯಿಲ್ಲದಿದ್ದರೆ ಅವನು ಆತನ 'ಇಬಾದತ್' ಮಾಡುವ ಬಗ್ಗೆ ಊಹಿಸುವುದೂ ಸಾಧ್ಯವಿಲ್ಲ.

2) ಯಾರಾದರೂ ತನ್ನ ಇಷ್ಟಾರ್ಥಗಳನ್ನು ಪೂರೈಸಬಲ್ಲನು ಎಂದು ಮನುಷ್ಯನು ಭಾವಿಸಿದರೆ ಅನಿವಾರ್ಯವಾಗಿಯೂ ಅವನು ತನಗಿಂತ ಪದವಿಯಲ್ಲೂ ಶಕ್ತಿ-ಸಾಮರ್ಥ್ಯಗಳಲ್ಲೂ ಮೇಲುಗೈ ಉಳ್ಳವನೆಂದು ಅಂಗೀಕರಿಸಬೇಕಾಗುತ್ತದೆ.

3) ಕಾರ್ಯ-ಕಾರಣಗಳ ಪ್ರಕ್ರಿಯೆಯ ಮೂಲಕ ಯಾವ ವಸ್ತುಗಳು ಸಾಮಾನ್ಯವಾಗಿ ಮನುಷ್ಯನ ಬಯಕೆಗಳನ್ನು ಈಡೇರಿಸುತ್ತವೋ ಮತ್ತು ಅವುಗಳು ಯಾವ ರೀತಿ ಆತನ ಬಯಕೆಗಳನ್ನು ಪೂರೈಸುತ್ತವೆಂಬುದು ಅವನ ಕಣ್ಣ ಮುಂದೆ ಅಥವಾ ಅವನ ಅರಿವಿನ ವ್ಯಾಪ್ತಿಯಲ್ಲಿರುತ್ತದೋ ಅವುಗಳ ಬಗೆಗೆ ಅವನಲ್ಲಿ 'ಇಬಾದತ್'ನ ಯಾವ ಭಾವನೆಯೂ ಹುಟ್ಟುವುದಿಲ್ಲ. ಉದಾ: ನನಗೆ ಖರ್ಚಿಗೆ ಹಣ ಬೇಕು. ನಾನು ಹೋಗಿ ಒಬ್ಬನಲ್ಲಿ ನೌಕರಿ ಕೇಳುತ್ತೇನೆ. ಆತ ನನ್ನ ಅರ್ಜಿಯನ್ನು ಸ್ವೀಕರಿಸಿ ಕೆಲಸ ಕೊಡುತ್ತಾನೆ. ತಿಂಗಳ ಕೊನೆಯಲ್ಲಿ ಸಂಬಳ ಕೊಡುತ್ತಾನೆ. ಈ ಎಲ್ಲ ಪ್ರಕ್ರಿಯೆ ನನ್ನ ಪಂಚೇದ್ರಿಯ ಮತ್ತು ಅರಿವಿನ ವ್ಯಾಪ್ತಿಯಲ್ಲೇ ನಡೆದಿರುವುದರಿಂದ ಮತ್ತು ಅವನು ನನ್ನ ಬೇಡಿಕೆಯನ್ನು ಹೇಗೆ ಪೂರೈಸಿದನೆಂಬುದು ನನಗೆ ತಿಳಿದಿರುವುದರಿಂದ ಅವನು ಇಬಾದತ್‌ಗೆ ಅರ್ಹನೆಂಬ ಭಾವನೆಯೂ ನನ್ನ ಮನಸ್ಸಿನಲ್ಲಿ ಮೂಡುವುದಿಲ್ಲ. ಇಬಾದತ್‌ನ ಕಲ್ಪನೆ ನನ್ನ ಮನಸ್ಸಿನಲ್ಲಿ ಮೂಡುವುದು ಯಾವಾಗ ಎಂದರೆ ಒಬ್ಬನ ವ್ಯಕ್ತಿತ್ವ ಅವನ ಶಕ್ತಿ ಅಥವಾ ಅವನ ಇಷ್ಟಾರ್ಥ ಸಿದ್ಧಿಯ ಮತ್ತು ಪ್ರಭಾವ ಬೀರುವ ಸ್ಥಿತಿಯು ಅಗೋಚರವಾಗಿರಬೇಕು. ಆದ್ದರಿಂದಲೇ ಮಅ್‌ಬೂದ್ ಅರ್ಥದಲ್ಲಿ ಬಂದಿರುವ ಪದದಲ್ಲಿ ಉನ್ನತಿಯ ಜತೆಗೆ ಅಡಗಿರು, ವಿಸ್ಮಯಗೊಳ್ಳು ಮತ್ತು ಬೆರಗಾಗು ಎಂಬ ಅರ್ಥವೂ ಸೇರಿದೆ.

4) ಯಾರ ಕುರಿತು ಮನುಷ್ಯನಿಗೆ- ಅವನು ಬಯಕೆಗಳನ್ನು ಈಡೇರಿಸಬಲ್ಲನು. ಅಪಾಯಗಳಿಂದ ರಕ್ಷಿಸಬಲ್ಲನು. ಉದ್ವಿಗ್ನತೆಯಲ್ಲಿ ನೆಮ್ಮದಿ ನೀಡಬಲ್ಲನು ಎಂದು ಭಾಸವಾಗುತ್ತದೋ ಅವನೆಡೆಗೆ ಮನುಷ್ಯನು ಆಸಕ್ತಿಯೊಂದಿಗೆ ಗಮನ ಹರಿಸುವುದು ಸಹಜ.

ಇದರಿಂದ ತಿಳಿದು ಬರುವಂತೆ 'ಮಅ್‌ಬೂದ್'ನಿಗೆ ಇಲಾಹ್ ಎಂಬ ಪದವು ಯಾವ ಕಲ್ಪನೆಗಳಿಂದಾಗಿ ಹೇಳಲಾಗುತ್ತದೋ ಅವು ಹೀಗಿವೆ:

ಇಷ್ಟಾರ್ಥ ಪೂರೈಸುವುದು, ಆಶ್ರಯ ಒದಗಿಸುವುದು, ನೆಮ್ಮದಿ ನೀಡುವುದು, ಉನ್ನತನಾಗಿರುವುದು, ಪ್ರಾಬಲ್ಯ ಹೊಂದಿರುವುದು, ಆರಾಧ್ಯನು ಬಯಕೆಗಳನ್ನು ಈಡೇರಿಸಬಲ್ಲನು ಮತ್ತು ಆಶ್ರಯ ನೀಡಬಲ್ಲನು ಎಂಬ ಭರವಸೆ ಮೂಡಿಸಬಲ್ಲಂತಹ ಅಧಿಕಾರ ಮತ್ತು ಶಕ್ತಿಗಳ ಒಡೆಯನಾಗಿರುವುದು. ಆತನ ಅಸ್ತಿತ್ವವು ರಹಸ್ಯವಾಗಿರುವುದು. ಅವನು ಬಹಿರಂಗವಲ್ಲದಿರುವುದು. ಮನುಷ್ಯನಿಗೆ ಅವನ ಕಡೆ ಒಲವು ಇರುವುದು.

'ಇಲಾಹ್'ನ ಕುರಿತು ಅಜ್ಞಾನ ಕಾಲದ ಜನರ ಕಲ್ಪನೆ

ಶಬ್ದ ಕೋಶಾರ್ಥದ ಈ ಅವಲೋಕನದ ಬಳಿಕ 'ಉಲೂಹಿಯ್ಯತ್' ನ ಕುರಿತು ಕುರ್ಆನ್ ಖಂಡಿಸಿದ ಅರಬರ ಮತ್ತು ಪ್ರಾಚೀನ ಜನಾಂಗಗಳ ಕಲ್ಪನೆಗಳು ಏನಾಗಿದ್ದುವು ಎಂಬುದನ್ನು ನೋಡೋಣ:

(١) وَاتَّخَذُوا مِن دُونِ اللَّهِ آلِهَةً لِّيَكُونُوا لَهُمْ عِزًّا ۔ (مریم ۔ ٨١)

1. ಮತ್ತು ಇವರು ಅಲ್ಲಾಹನನ್ನು ಬಿಟ್ಟು ಇತರರನ್ನು 'ಇಲಾಹ್' ಮಾಡಿ ಕೊಂಡಿದ್ದಾರೆ. ಅವರು ಇವರ ಬೆಂಬಲಿಗರಾದಾರೆಂಬ ನಿರೀಕ್ಷೆಯಿಂದ (ಅಥವಾ ಅವರ ಆಶ್ರಯದಲ್ಲಿ ಬಂದು ಅವರು ಸುರಕ್ಷಿತರಾಗಲೆಂದು) (ಮರ್ಯಮ್: 81)

وَاتَّخَذُوا مِن دُونِ اللَّهِ آلِهَةً لَّعَلَّهُمْ يُنصَرُونَ ۔ (يٰس ۔ ٧٤)

ಮತ್ತು ಇವರು ಅಲ್ಲಾಹನನ್ನು ಬಿಟ್ಟು ಇತರರನ್ನು 'ಇಲಾಹ್' ಮಾಡಿ ಕೊಂಡಿದ್ದಾರೆ. ತಮಗೆ ಸಹಾಯ ಮಾಡಲಾಗುವುದೆಂಬ ನಿರೀಕ್ಷೆಯಿಂದ (ಅರ್ಥಾತ್: ಆ ಇಲಾಹ್ ಅವರ ಸಹಾಯ ಮಾಡುವುದೆಂದು) (ಯಾಸೀನ್: 74)

ಈ ಎರಡೂ ಆಯತ್‌ಗಳಿಂದ ತಿಳಿದು ಬರುವುದೇನೆಂದರೆ ಅಜ್ಞಾನ ಕಾಲದ ಜನರು ಯಾರನ್ನು 'ಇಲಾಹ್' ಎನ್ನುತ್ತಿದ್ದರೋ ಅವರ ಕುರಿತು ಅವರು ತಮ್ಮ ಬೆಂಬಲಿಗರೆಂದೂ ಕಷ್ಟ-ಕೋಟಲೆಗಳಿಂದ ತಮ್ಮನ್ನು ರಕ್ಷಿಸುತ್ತಾರೆಂದೂ ಅವರ ಬೆಂಬಲದಿಂದ ತಾವು ಭಯ ಮತ್ತು ನಷ್ಟದಿಂದ ಸುರಕ್ಷಿತರಾಗಿರುತ್ತೇವೆಂದೂ ಅವರು ಭಾವಿಸಿದ್ದರು.

(٢) فَمَا أَغْنَتْ عَنْهُمْ آلِهَتُهُمُ الَّتِي يَدْعُونَ مِن دُونِ اللَّهِ مِن
شَيْءٍ لَّمَّا جَاءَ أَمْرُ رَبِّكَ ۖ وَمَا زَادُوهُمْ غَيْرَ تَتْبِيبٍ ۔ (ہود ۔ ١٠١)

2. ನಿಮ್ಮ ಪ್ರಭುವಿನ ಆಜ್ಞೆ ಬಂದಾಗ ಅವರು ಅಲ್ಲಾಹನನ್ನು ಬಿಟ್ಟು ಕೂಗಿ ಕರೆಯುತ್ತಿದ್ದ ಯಾವ 'ಇಲಾಹ್' ಕೂಡ ಅವರಿಗೆ ಪ್ರಯೋಜನಕ್ಕೆ ಬರದಾದರು ಮತ್ತು ಅವರಿಗೆ ವಿನಾಶವನ್ನು ಹೊರತು ಇನ್ನೇನನ್ನೂ ಹೆಚ್ಚಿಸಲಿಲ್ಲ. (ಹೂದ್: 101)

وَالَّذِينَ يَدْعُونَ مِن دُونِ اللَّهِ لَا يَخْلُقُونَ شَيْئًا وَهُمْ يُخْلَقُونَ ۝
أَمْوَاتٌ غَيْرُ أَحْيَاءٍ ۖ وَمَا يَشْعُرُونَ أَيَّانَ يُبْعَثُونَ ۝ إِلَٰهُكُمْ إِلَٰهٌ
وَاحِدٌ ۔ (النحل ۔ ٣ ۔ ٢ ع ٢٠ ۔ ٢١ ۔ ٢٢)

ಮತ್ತು ಇವರು ಅಲ್ಲಾಹನನ್ನು ಬಿಟ್ಟು ಇತರ ಯಾರನ್ನು ಕೂಗಿ ಪ್ರಾರ್ಥಿಸುತ್ತಿರುವರೋ ಅವರು ಯಾವುದೇ ವಸ್ತುವಿನ ಸೃಷ್ಟಿಕರ್ತರಲ್ಲ. ನಿಜವಾಗಿ ಅವರು ಸ್ವತಃ ಸೃಷ್ಟಿಗಳು. ಅವರು ನಿರ್ಜೀವಿಗಳು, ಸಜೀವಿಗಳಲ್ಲ. ಅವರನ್ನು ಯಾವಾಗ ಪುನಃ ಜೀವಂತಗೊಳಿಸಿ ಎಬ್ಬಿಸಲಾಗುವುದೆಂದು ಅವರಿಗೆ ತಿಳಿದಿರುವುದಿಲ್ಲ. ನಿಮ್ಮ ಇಲಾಹ್ ಕೇವಲ ಒಬ್ಬ ಇಲಾಹ್ ಆಗಿದ್ದಾನೆ.

(ಅನ್ನಹ್ಲ್: 20-22)

وَلَا تَدْعُ مَعَ اللّٰهِ اِلٰهًا اٰخَرَ لَا اِلٰهَ اِلَّا هُوَ - (قصص - ٨٨)

ಅಲ್ಲಾಹನೊಂದಿಗೆ ಇತರ ಯಾವ 'ಇಲಾಹ್'ಅನ್ನೂ ಕರೆದು ಪ್ರಾರ್ಥಿಸಬೇಡಿರಿ. ಅವನ ಹೊರತು ಯಾವನೇ 'ಇಲಾಹ್' ಇಲ್ಲ.' (ಅಲ್ ಕಸಸ್: 88)

وَمَا يَتَّبِعُ الَّذِيْنَ يَدْعُوْنَ مِنْ دُوْنِ اللّٰهِ شُرَكَآءَ اِنْ يَّتَّبِعُوْنَ اِلَّا الظَّنَّ وَاِنْ هُمْ اِلَّا يَخْرُصُوْنَ - (يونس - ٦٦)

ಅಲ್ಲಾಹನ ಹೊರತು (ಸ್ವಯಂಕೃತ) ಸಹಭಾಗಿಗಳನ್ನು ಕರೆಯುತ್ತಿರುವವರು ಕೇವಲ ಕಲ್ಪಿತ ಕಲ್ಪನೆಗಳ ಹಿಂಬಾಲಕರಾಗಿದ್ದಾರೆ. ಅವರು ಬರೇ ಊಹಾಪೋಹಗಳನ್ನು ಮಾಡುತ್ತಾರೆ.

(ಯೂನುಸ್: 66)

ಈ ಆಯತ್‌ಗಳಿಂದ ಕೆಲವು ವಿಷಯಗಳು ಸ್ಪಷ್ಟವಾಗುತ್ತವೆ:

1) ಅಜ್ಞಾನ ಕಾಲದ ಜನರು ಯಾರನ್ನು 'ಇಲಾಹ್' ಎನ್ನುತ್ತಿದ್ದರೋ ಅವರನ್ನು ಸಂಕಷ್ಟಗಳ ಪರಿಹಾರ ಮತ್ತು ಇಷ್ಟಾರ್ಥ ಸಿದ್ಧಿಗಾಗಿ ಕೂಗಿ ಕರೆಯುತ್ತಿದ್ದರು. ಬೇರೆ ಮಾತಿನಲ್ಲಿ ಹೇಳುವುದಾದರೆ ಅವರು ಅವರಲ್ಲಿ ಪ್ರಾರ್ಥಿಸುತ್ತಿದ್ದರು.

2) ಅವರ ಪಾಲಿಗೆ ಕೇವಲ ಜಿನ್ನ್‌ಗಳು (ಯಕ್ಷರು), ಮಲಕ್‌ಗಳು (ದೇವಚರರು)ಅಥವಾ ದೇವತೆಗಳು ಇಲಾಹ್ ಆಗಿದ್ದುದಲ್ಲ ಬದಲಾಗಿ ಮೃತ ವ್ಯಕ್ತಿಗಳೂ ಅವರ 'ಇಲಾಹ್' ಆಗಿದ್ದರು.

اَمْوَاتٌ غَيْرُ اَحْيَآءٍ وَمَا يَشْعُرُوْنَ اَيَّانَ يُبْعَثُوْنَ

"ಅವರು ನಿರ್ಜೀವಿಗಳು, ಸಜೀವಿಗಳಲ್ಲ. ಅವರನ್ನು ಯಾವಾಗ ಪುನಃ ಜೀವಂತಗೊಳಿಸಿ ಎಬ್ಬಿಸಲಾಗುವುದೆಂದು ಅವರಿಗೆ ತಿಳಿದಿರುವುದಿಲ್ಲ." ಎಂಬ ಮಾತಿನಿಂದ ಅದು ಸ್ಪಷ್ಟವಾಗುತ್ತದೆ.

3) ಅವರು 'ಇಲಾಹ್‌ಗಳು' ಅವರ ಪ್ರಾರ್ಥನೆಗಳನ್ನು ಆಲಿಸಲು ಮತ್ತು ಅವರ

---

* ಕುರ್‌ಆನ್‌ನಲ್ಲಿ 'ಇಲಾಹ್' ಎಂಬ ಪದ ಎರಡು ಅರ್ಥಗಳಲ್ಲಿ ಬಳಕೆಯಾಗುತ್ತದೆಂಬುದನ್ನು ಇಲ್ಲಿ ಗಮನಿಸಬೇಕು. 1) ವಸ್ತುತಃ ಯಾರ 'ಇಬಾದತ್' ಮಾಡಲಾಗುತ್ತದೋ ಆ ಆರಾಧ್ಯ. ಅದು ಸತ್ಯವಾಗಿದ್ದರೂ ಮಿಥ್ಯವಾಗಿದ್ದರೂ ಸರಿಯೆ. 2) ವಾಸ್ತವದಲ್ಲಿ 'ಇಬಾದತ್'ಗೆ ಅರ್ಹವಾಗಿರುವ ಆರಾಧ್ಯ. ಈ ಆಯತ್‌ನಲ್ಲಿ 'ಇಲಾಹ್' ಎಂಬ ಪದವು ಎರಡು ಕಡೆ ಈ ಎರಡು ವಿಭಿನ್ನ ಅರ್ಥಗಳಲ್ಲಿ ಬಳಕೆಯಾಗಿದೆ.

ಸಹಾಯಕ್ಕೆ ಒದಗಲು ಸಮರ್ಥರಾಗಿದ್ದಾರೆಂದು ನಂಬಿದ್ದರು.

ಇಲ್ಲಿ ಪ್ರಾರ್ಥನೆಯ ತಾತ್ಪರ್ಯ ಮತ್ತು 'ಇಲಾಹ್'ನಿಂದ ನಿರೀಕ್ಷಿಸಲಾಗುವ ಸಹಾಯದ ರೂಪವನ್ನು ಮನವರಿಕೆ ಮಾಡಿಕೊಳ್ಳುವುದು ಅಗತ್ಯ. ನನಗೆ ಬಾಯಾರಿಕೆಯಾಗಿದೆ. ನಾನು ನನ್ನ ಸೇವಕನನ್ನು ನೀರು ತರಲಿಕ್ಕಾಗಿ ಕರೆಯುತ್ತೇನೆ. ಅಥವಾ ನಾನು ರೋಗಿಯಾಗಿದ್ದೇನೆ. ಚಿಕಿತ್ಸೆಗಾಗಿ ವೈದ್ಯರನ್ನು ಕರೆಯುತ್ತೇನೆ. ಈ ಸಂದರ್ಭಗಳಲ್ಲಿ ನನ್ನ ಕರೆಯು ಪ್ರಾರ್ಥನೆ ಎನಿಸುವುದಿಲ್ಲ. ಅದರರ್ಥ ಸೇವಕ ಅಥವಾ ವೈದ್ಯನನ್ನು 'ಇಲಾಹ್' ಮಾಡುವುದು ಆಗುವುದೂ ಇಲ್ಲ. ಏಕೆಂದರೆ ಇವೆಲ್ಲವೂ ಕಾರ್ಯಕಾರಣದ ಅಧೀನವಾಗಿವೆಯೇ ಹೊರತು ಅದರಿಂದ ಹೊರತಲ್ಲ. ಆದರೆ ಒಂದು ವೇಳೆ ನಾನು ಬಾಯಾರಿಕೆ ಅಥವಾ ಅನಾರೋಗ್ಯದ ಸ್ಥಿತಿಯಲ್ಲಿ ಸೇವಕ ಅಥವಾ ವೈದ್ಯನನ್ನು ಕರೆಯುವ ಬದಲು ಯಾವುದೇ ದೇವತೆ ಅಥವಾ ವಲೀ(ಮಹಾ ಪುರುಷ)ಯನ್ನು ಕರೆದರೆ ಅದು ಅವರನ್ನು ಪ್ರಾರ್ಥಿಸುವುದು ಮತ್ತು ಇಲಾಹ್ ಮಾಡುವುದಾಗಿದೆ. ಏಕೆಂದರೆ ಯಾವ ಮಹಾ ಪುರುಷರು ನನ್ನಿಂದ ನೂರಾರು ಮೈಲಿ ದೂರ ಯಾವುದೋ ಗೋರಿಯಲ್ಲಿರುವರೋ ಅವರನ್ನು ಕರೆಯುವುದೆಂದರೆ ನಾನು ಅವರನ್ನು ಎಲ್ಲವನ್ನು ಕೇಳುವವರೂ ಎಲ್ಲವನ್ನು ನೋಡುವವರೂ ಎಂದು ಭಾವಿಸಿದಂತಾಗುತ್ತದೆ. ಮಾತ್ರವಲ್ಲ ಕಾರ್ಯ ಕಾರಣದ ಮೇಲೆ ಅವರ ಆಧಿಪತ್ಯ ನಡೆಯುತ್ತಿದ್ದು, ಅದರಿಂದಾಗಿ ಅವರು ನನಗೆ ನೀರು ಒದಗಿಸುವ ಅಥವಾ ನನ್ನ ರೋಗ ಗುಣ ಪಡಿಸುವ ವ್ಯವಸ್ಥೆ ಮಾಡಬಲ್ಲರು ಎಂದು ಭಾವಿಸುತ್ತೇನೆಂದು ಅರ್ಥವಾಗುತ್ತದೆ. ಅದೇ ರೀತಿ ಇಂತಹ ಸ್ಥಿತಿಯಲ್ಲಿ ಯಾವುದೇ ದೇವತೆಯನ್ನು ಕೂಗಿ ಕರೆಯುವುದರ ಅರ್ಥ ನೀರು ಅಥವಾ ರೋಗ ಶಮನದ ಮೇಲೆ ಅದಕ್ಕೆ ಅಧಿಕಾರವಿದೆ. ಅದು ಪ್ರಕೃತಿಗೆ ಅತೀತವಾಗಿ ನನ್ನ ಬಯಕೆಯನ್ನು ಈಡೇರಿಸಲು ವ್ಯವಸ್ಥೆ ಮಾಡುವ ಸಾಮರ್ಥ್ಯ ಹೊಂದಿದೆ ಎಂದಾಗುತ್ತದೆ. ಆದ್ದರಿಂದ ಯಾವ ಕಲ್ಪನೆಯೊಂದಿಗೆ 'ಇಲಾಹ್'ನಲ್ಲಿ ಪ್ರಾರ್ಥನೆ ಮಾಡಲಾಗುತ್ತದೋ ಅದರಲ್ಲಿ ನಿಸರ್ಗಕ್ಕೆ ಅತೀತವಾದ ಅಧಿಕಾರ ಮತ್ತು ಸಾಮರ್ಥ್ಯವಿದೆಯೆಂದು ಬಗೆದಂತಾಗುತ್ತದೆ.

(٣) وَلَقَدْ أَهْلَكْنَا مَا حَوْلَكُم مِّنَ الْقُرَىٰ وَصَرَّفْنَا الْآيَاتِ لَعَلَّهُمْ
يَرْجِعُونَ ۝ فَلَوْلَا نَصَرَهُمُ الَّذِينَ اتَّخَذُوا مِن دُونِ اللَّهِ
قُرْبَانًا آلِهَةً ۖ بَلْ ضَلُّوا عَنْهُمْ ۚ وَذَٰلِكَ إِفْكُهُمْ وَمَا كَانُوا يَفْتَرُونَ.
(احقاف - ٢٧ - ٢٨)

3. ನಾವು ನಿಮ್ಮ ಪರಿಸರದಲ್ಲಿ ಅನೇಕ ನಾಡುಗಳನ್ನು ನಾಶ ಮಾಡಿ ಬಿಟ್ಟಿದ್ದೇವೆ. ಅವರು ಮರಳಲೂಬಹುದೆಂದು ನಿರೀಕ್ಷಿಸಿ ನಾವು ಪದೇ ಪದೇ ತರತರದ ನಿದರ್ಶನಗಳನ್ನು ಕಳುಹಿಸಿ ಅವರಿಗೆ ತಿಳಿ ಹೇಳಿದೆವು. ಅವರು ಅಲ್ಲಾಹನನ್ನು ಬಿಟ್ಟು ದೇವ ಸಾಮೀಪ್ಯದ ಮಾಧ್ಯಮಗಳೆಂದು ಬಗೆದು ಯಾರನ್ನು ತಮ್ಮ 'ಇಲಾಹ್' ಎಂದು ಮಾಡಿಕೊಂಡಿದ್ದಾರೋ, ಅವರೇಕೆ ಇವರಿಗೆ ನೆರವಾಗಲಿಲ್ಲ. ನೆರವಾಗುವುದಂತಿರಲಿ, ಅವರಂತು ಇವರಿಂದ ಕಳೆದು ಹೋದರು. ಇದು ಅವರ

ಸುಳ್ಳು ಮತ್ತು ಕಪೋಲ ಕಲ್ಪಿತ ವಿಷಯಗಳ ಪರಿಣಾಮವಾಗಿತ್ತು.

(ಅಲ್‌ಅಹ್‌ಕಾಫ್: 27-28)

وَمَا لِيَ لَا أَعْبُدُ الَّذِي فَطَرَنِي وَإِلَيْهِ تُرْجَعُونَ ۝ ءَأَتَّخِذُ مِن دُونِهِ
آلِهَةً إِن يُرِدْنِ الرَّحْمَٰنُ بِضُرٍّ لَّا تُغْنِ عَنِّي شَفَاعَتُهُمْ شَيْئًا وَلَا
يُنقِذُونِ (يس-٢٢-٢٣)

ಯಾರು ನನ್ನನ್ನು ಸೃಷ್ಟಿಸಿರುವನೋ ಮತ್ತು ಯಾರ ಕಡೆಗೆ ನಿಮಗೆಲ್ಲರಿಗೂ ಮರಳಿ ಹೋಗಲಿಕ್ಕಿದೆಯೋ ಅವನನ್ನು ಬಿಟ್ಟು, ದಯಾಮಯನಾದ ದೇವನು ನನಗೆ ಏನಾದರೂ ಹಾನಿಯನ್ನುಂಟು ಮಾಡಲಿಚ್ಛಿಸಿದರೆ ಯಾರ ಶಿಫಾರಸ್ಸು ನನಗೇನೂ ಫಲಕಾರಿಯಾಗದೋ ಮತ್ತು ಯಾರು ನನ್ನನ್ನು ಬಿಡಿಸಲಾರರೋ ಅವರನ್ನು ನಾನು 'ಇಲಾಹ್' ಮಾಡಿಕೊಳ್ಳಬೇಕೇ?

(ಯಾಸೀನ್: 22-23)

وَالَّذِينَ اتَّخَذُوا مِن دُونِهِ أَوْلِيَاءَ مَا نَعْبُدُهُمْ إِلَّا لِيُقَرِّبُونَا
إِلَى اللَّهِ زُلْفَىٰ إِنَّ اللَّهَ يَحْكُمُ بَيْنَهُمْ فِي مَا هُمْ فِيهِ يَخْتَلِفُونَ (الزمر-٣)

ಇನ್ನು ಅವರ ಹೊರತು ಇತರರನ್ನು ಸಹಾಯಕ ಅಥವಾ ಕಾರ್ಯ ಸಾಧಕರೆಂದು ಬಗೆದವರ ವಿಷಯ- "ಅವರು ನಮ್ಮನ್ನು ಅಲ್ಲಾಹನಿಗೆ ನಿಕಟಗೊಳಿಸಲೆಂದು ಮಾತ್ರ ನಾವು ಅವರ 'ಇಬಾದತ್' ಮಾಡುತ್ತೇವೆ" ಎಂದು ಅವರು ವಾದಿಸುತ್ತಾರೆ. ಅಲ್ಲಾಹನು ಅವರ ಮಧ್ಯೆ, ಅವರು ಭಿನ್ನಾಭಿಪ್ರಾಯ ತೋರಿದಂತಹ ಈ ವಿಷಯದ ತೀರ್ಮಾನ ಪುನರುತ್ಥಾನ ದಿನದಂದು ಮಾಡುವನು.

(ಅಝ್ಝುಮರ್: 3)

وَيَعْبُدُونَ مِن دُونِ اللَّهِ مَا لَا يَضُرُّهُمْ وَلَا يَنفَعُهُمْ وَيَقُولُونَ
هَٰؤُلَاءِ شُفَعَاؤُنَا عِندَ اللَّهِ (يونس-١٨)

ಅವರು ಅಲ್ಲಾಹನನ್ನು ಬಿಟ್ಟು ಇವರಿಗೆ ನಷ್ಟವನ್ನಾಗಲಿ ಲಾಭವನ್ನಾಗಲಿ ಉಂಟು ಮಾಡದವರ 'ಇಬಾದತ್' ಮಾಡುತ್ತಾರೆ. ಮತ್ತು "ಇವರು ಅಲ್ಲಾಹನ ಬಳಿ ನಮ್ಮ ಶಿಫಾರಸ್ಸು ಮಾಡುವವರು' ಎನ್ನುತ್ತಾರೆ.

(ಯೂನುಸ್: 18)

ಈ ಆಯತ್‌ಗಳಿಂದ ಇನ್ನಷ್ಟು ವಿಷಯಗಳು ಸ್ಪಷ್ಟವಾಗುತ್ತವೆ. ಅಜ್ಞಾನ ಕಾಲದ ಜನರು ತಮ್ಮ 'ಇಲಾಹ್'ಗಳನ್ನು ದೇವತ್ವದ ಎಲ್ಲ ಅಧಿಕಾರಗಳ ಒಡೆಯರೆಂದೂ ಅವರ ಮೇಲೆ ಒಬ್ಬ ಉನ್ನತ ದೇವನಿಲ್ಲವೆಂದು ಪರಿಗಣಿಸುತ್ತಿರಲಿಲ್ಲ. ಅವರು ಒಬ್ಬ ಉನ್ನತ ದೇವನ ಸ್ಪಷ್ಟವಾದ

ಕಲ್ಪನೆಯನ್ನು ಇರಿಸಿಕೊಂಡಿದ್ದರು. ಆತನಿಗೆ ಅವರ ಭಾಷೆಯಲ್ಲಿ 'ಅಲ್ಲಾಹ್' ಎಂಬ ಪದ ಬಳಕೆಯಾಗುತ್ತಿತ್ತು. ಇತರ 'ಇಲಾಹ್'ಗಳ ಕುರಿತು ಅವರ ನಿಜವಾದ ನಂಬಿಕೆ ಏನಾಗಿತ್ತೆಂದರೆ ಆ ಉನ್ನತ ದೇವನ ದೇವತ್ವದಲ್ಲಿ ಈ 'ಇಲಾಹ್'ಗಳಿಗೂ ಸ್ವಲ್ಪ ಪಾಲು ಮತ್ತು ಪ್ರಭಾವವಿದೆ. ಅವರ ಮಾತು ಸ್ವೀಕೃತವಾಗುತ್ತದೆ. ಅವರ ಮೂಲಕ ನಮ್ಮ ಕೆಲಸ ಆಗುತ್ತದೆ. ಅವರ ಶಿಫಾರಸ್ಸಿನಿಂದ ನಮಗೆ ಲಾಭವಾದೀತು ಮತ್ತು ನಷ್ಟದಿಂದ ರಕ್ಷಣೆ ಸಿಕ್ಕೀತು. ಈ ವಿಚಾರಗಳ ಆಧಾರದಲ್ಲೇ ಅವರು ಅಲ್ಲಾಹನ ಜತೆ ಅವರನ್ನು 'ಇಲಾಹ್' ಎಂದು ಸಾರುತ್ತಿದ್ದರು. ಆದ್ದರಿಂದ ಅವರ 'ಪಾರಿಭಾಷಿಕ'ದಂತೆ, ಯಾರನ್ನಾದರೂ ಅಲ್ಲಾಹ್‌ನ ಬಳಿ ಶಿಫಾರಸ್ಸು ಮಾಡುವವರೆಂದು ಬಗೆದೂ ಅವನಲ್ಲಿ ಸಹಾಯ ಬೇಡುವುದು, ಅವನ ಮುಂದೆ ಗೌರವಾದರಗಳನ್ನು ಸಲ್ಲಿಸುವುದು ಮತ್ತು ಹರಕೆ-ಕಾಣಿಕೆಗಳನ್ನು ಸಲ್ಲಿಸುವುದು ಅವನನ್ನು 'ಇಲಾಹ್' ಮಾಡುವುದಾಗಿದೆ.[1]

(٤) وَقَالَ اللّٰهُ لَا تَتَّخِذُوْٓا اِلٰهَيْنِ اثْنَيْنِ اِنَّمَا هُوَ اِلٰهٌ وَّاحِدٌ
فَاِيَّايَ فَارْهَبُوْنِ - (النحل - ٥١)

4. "ಇಬ್ಬರನ್ನು 'ಇಲಾಹ್' ಮಾಡಿಕೊಳ್ಳಬೇಡಿರಿ. 'ಇಲಾಹ್' ಅಂತೂ ಒಬ್ಬನೇ ಆಗಿದ್ದಾನೆ. ಆದ್ದರಿಂದ ನೀವು ನನ್ನನ್ನೇ ಭಯಪಡಿರಿ" ಇದು ಅಲ್ಲಾಹ್ ಆಜ್ಞಾಪಿಸುತ್ತಾನೆ.
(ಅನ್ನಹ್ಲ್ : 51)

وَلَآ اَخَافُ مَا تُشْرِكُوْنَ بِهٖٓ اِلَّآ اَنْ يَّشَآءَ رَبِّيْ شَيْـًٔا - (انعام - ٨٠)

"ನೀವು ಅಲ್ಲಾಹನೊಂದಿಗೆ ಸಹಭಾಗಿಗಳನ್ನಾಗಿಸಿಕೊಂಡವರನ್ನು ನಾನು ಭಯಪಡುವುದಿಲ್ಲ. ನನ್ನ ಪ್ರಭು ಇಚ್ಛಿಸಿದುದು ಮಾತ್ರ ಆಗಲು ಸಾಧ್ಯ" ಎಂದು ಇಬ್ರಾಹೀಮ್ ಹೇಳಿದರು.
(ಅಲ್ ಅನ್‌ಆಮ್: 80)

---

1. ಶಿಫಾರಸ್ಸು ಮಾಡುವವರು ಎರಡು ವಿಧದವರಿದ್ದಾರೆ. i) ಯಾವುದಾದರೂ ರೀತಿಯ ಒತ್ತಾಯ ಮತ್ತು ಪ್ರಭಾವದ ಮೂಲಕ ತನ್ನ ಮಾತನ್ನು ಒಪ್ಪುವಂತೆ ಮಾಡಿಯೇ ತೀರುವುದು. ii) ಒಂದು ಬೇಡಿಕೆ ಮತ್ತು ಪ್ರಾರ್ಥನೆಯ ರೂಪದಲ್ಲಿದ್ದು, ಅದರ ಹಿಂದೆ ಯಾವುದೇ ಒತ್ತಾಯ ಬಲಾತ್ಕಾರವಿಲ್ಲದಿರುವುದು. ಮೊದಲನೆಯ ತಾತ್ಪರ್ಯದ ಪ್ರಕಾರ ಯಾರನ್ನಾದರೂ ಶಿಫಾರಸ್ಸು ಮಾಡುವವನೆಂದು ಬಗೆಯುವುದು ಅವನನ್ನು 'ಇಲಾಹ್' ಮಾಡುವುದು ಮತ್ತು ದೇವತ್ವದಲ್ಲಿ ಅಲ್ಲಾಹನಿಗೆ ಭಾಗೀದಾರನಾಗಿ ಮಾಡುವುದಕ್ಕೆ ಸಮಾನವಾಗಿದೆ. ಎರಡನೆಯ ತಾತ್ಪರ್ಯದ ಪ್ರಕಾರ ಪ್ರವಾದಿಗಳು, ದೇವಚರರು, ಸಜ್ಜನರಾದ ಸತ್ಯ ವಿಶ್ವಾಸಿಗಳು ಮತ್ತು ಇತರೆಲ್ಲ ಜನರು ಇತರರ ಪರವಾಗಿ ಶಿಫಾರಸ್ಸು ಮಾಡಬಲ್ಲರು. ಅವರ ಶಿಫಾರಸ್ಸನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಅಧಿಕಾರ ಅಲ್ಲಾಹನಿಗಿದೆ.

إِنْ نَّقُوْلُ إِلَّا اعْتَرٰىكَ بَعْضُ اٰلِهَتِنَا بِسُوْٓءٍ (هود-٥٤)

"ನಾವು ಹೇಳುವುದು - ನಿಮ್ಮ ಮೇಲೆ ನಮ್ಮ 'ಇಲಾಹ್'ಗಳ ಪೈಕಿ ಯಾರದೋ ಶಾಪ ಬಿದ್ದಿದೆ" ಎಂದು ಹೂದ್‌ರ ಜನಾಂಗದ ಜನರು ಹೇಳಿದರು. (ಹೂದ್: 54)

ಈ ವಚನಗಳಿಂದ ತಿಳಿದು ಬರುವುದೇನೆಂದರೆ ಅಜ್ಞಾನ ಕಾಲದ ಜನರು ತಮ್ಮ ಇಲಾಹ್‌ಗಳ ಬಗ್ಗೆ 'ನಾವು ಅವರನ್ನು ಅಸಂತುಷ್ಟಗೊಳಿಸಿದರೆ ಅಥವಾ ಅವರ ಗಮನ ಮತ್ತು ಅನುಗ್ರಹಗಳಿಂದ ವಂಚಿತರಾದರೆ ನಮ್ಮ ಮೇಲೆ ಕಾಯಿಲೆ, ಪ್ರಾಣ-ಸೊತ್ತುಗಳ ನಷ್ಟ, ಮತ್ತಿತರ ಆಪತ್ತುಗಳು ಎರಗಬಹುದು' ಎಂದು ಭಯಪಡುತ್ತಿದ್ದರು.

(٥) اِتَّخَذُوْٓا اَحْبَارَهُمْ وَرُهْبَانَهُمْ اَرْبَابًا مِّنْ دُوْنِ اللّٰهِ
وَالْمَسِيْحَ ابْنَ مَرْيَمَ وَمَآ اُمِرُوْٓا اِلَّا لِيَعْبُدُوْٓا اِلٰهًا وَّاحِدًا لَآ اِلٰهَ
اِلَّا هُوَ (التوبة-٣١)

ಅವರು ಅಲ್ಲಾಹನ ಹೊರತು ತಮ್ಮ ವಿದ್ವಾಂಸರನ್ನೂ ಸಂತರನ್ನೂ ತಮ್ಮ 'ರಬ್ಬ್'ಗಳಾಗಿ ಮಾಡಿಕೊಂಡಿದ್ದಾರೆ ಮತ್ತು ಮರ್ಯಮರ ಪುತ್ರ ಮಸೀಹರನ್ನೂ ರಬ್ಬ್ ಮಾಡಿಕೊಂಡಿದ್ದಾರೆ. ವಾಸ್ತವದಲ್ಲಿ ಅವರಿಗೆ ಕೇವಲ ಓರ್ವ 'ಇಲಾಹ್'ನ 'ಇಬಾದತ್' ಮಾಡಲು ಆದೇಶಿಸಲಾಗಿತ್ತು. ಅವನ ಹೊರತು ಅನ್ಯ 'ಇಲಾಹ್' ಇಲ್ಲ. (ಅತ್ತೌಬಃ :31)

اَرَءَيْتَ مَنِ اتَّخَذَ اِلٰهَهٗ هَوٰىهُ اَفَاَنْتَ تَكُوْنُ عَلَيْهِ وَكِيْلًا (الفرقان ٤٣)

ತನ್ನ ಚಿತ್ತಾಕಾಂಕ್ಷೆಯನ್ನು ತನ್ನ 'ಇಲಾಹ್' ಆಗಿ ಮಾಡಿಕೊಂಡವನ ಕುರಿತು ನಿಮ್ಮ ಅಭಿಪ್ರಾಯವೇನು? ನೀವು ಅವನನ್ನು ಸರಿ ದಾರಿಗೆ ತರುವ ಹೊಣೆ ಹೊರಿಸಬಲ್ಲಿರಾ? (ಅಲ್ ಫುರ್ಕಾನ್: 43)

وَكَذٰلِكَ زَيَّنَ لِكَثِيْرٍ مِّنَ الْمُشْرِكِيْنَ قَتْلَ اَوْلَادِهِمْ شُرَكَآؤُهُمْ
(الانعام-١٣٧)

ಇದೇ ರೀತಿ ಅನೇಕ ಬಹುದೇವ ವಿಶ್ವಾಸಿಗಳಿಗೆ ಅವರ ಸಹಭಾಗಿಗಳು (ಅಂದರೆ ಅವರು 'ಉಲೂಹಿಯತ್'ನಲ್ಲಿ ಅಲ್ಲಾಹನ ಜತೆ ಸಹಭಾಗಿಯಾಗಿ ಮಾಡಿಕೊಂಡರು) ತಮ್ಮ ಮಕ್ಕಳ ವಧೆಯನ್ನು ಮನೋಹರಗೊಳಿಸಿ ಬಿಟ್ಟಿದ್ದಾರೆ. (ಅಲ್ ಅನ್‌ಆಮ್: 137)

اَمْ لَهُمْ شُرَكٰٓؤُا شَرَعُوْا لَهُمْ مِّنَ الدِّيْنِ مَا لَمْ يَاْذَنْ بِهِ اللّٰهُ (الشورى-٢١)

ಇವರ ಬಳಿ ಇವರಿಗಾಗಿ ಧರ್ಮದ ಸ್ವರೂಪದಲ್ಲಿರುವ ಮತ್ತು ಅಲ್ಲಾಹನು ಅನುಮತಿಸಿರದ ಜೀವನ ವಿಧಾನವನ್ನು ನಿಶ್ಚಯಿಸಿಕೊಟ್ಟಂತಹ ದೇವ ಸಹಭಾಗಿಗಳು (ಅಂದರೆ 'ಉಲೂಹಿಯತ್'ನಲ್ಲಿ ಸಹಭಾಗಿಗಳು) ಇದ್ದಾರೆಯೇ? (ಅಶ್ಶೂರಾ: 21)

ಈ ಸೂಕ್ತಗಳಲ್ಲಿ 'ಇಲಾಹ್'ಗೆ ಮತ್ತೊಂದು ತಾತ್ಪರ್ಯ ದೊರೆಯುತ್ತದೆ. ಅದು ಹಿಂದಿನ ತಾತ್ಪರ್ಯಗಳಿಂದ ತೀರಾ ಭಿನ್ನವಾಗಿದೆ. ಇಲ್ಲಿ ನಿಸರ್ಗಕ್ಕೆ ಅತೀತವಾಗಿ ಯಾವುದೇ ಅಧಿಕಾರದ ಕಲ್ಪನೆಯಿಲ್ಲ. ಇಲ್ಲಿ ಯಾರನ್ನು 'ಇಲಾಹ್'ಎಂದು ಪರಿಗಣಿಸಲಾಗಿದೆಯೋ ಅದು ಒಂದೋ ಮನುಷ್ಯನಾಗಿದ್ದಾನೆ. ಇಲ್ಲವೇ ಮನುಷ್ಯನ ಸ್ವಚಿತ್ತವಾಗಿದೆ. ಆದರಿಂದ ದುಆ ಮಾಡಲಾಗುತ್ತದೆ. ಅದನ್ನು ಲಾಭ ನಷ್ಟ ಉಂಟು ಮಾಡುವವನೆಂದು ಬಗೆಯಲಾಗುತ್ತದೆ ಅಥವಾ ಅದರ ಆಶ್ರಯ ಬಯಸಲಾಗುತ್ತದೆ ಎಂಬ ಅರ್ಥದಲ್ಲಿ ಅದನ್ನು 'ಇಲಾಹ್' ಮಾಡಿಕೊಂಡಿರುವುದಲ್ಲ. ಬದಲಾಗಿ ಅದರ ಆಜ್ಞೆಯನ್ನು ಕಾನೂನು ಎಂದು ಪರಿಗಣಿಸಲಾಗುತ್ತದೆ. ಅದರ ವಿಧಿ-ನಿಷೇಧಗಳನ್ನು ಪಾಲಿಸಲಾಗುತ್ತದೆ. ಅದು ಹಲಾಲ್‌ಗೊಳಿಸಿದುದನ್ನು ಹಲಾಲ್ ಎಂದೂ ಅದು ಹರಾಮ್‌ಗೊಳಿಸಿದುದನ್ನು ಹರಾಮ್ ಎಂದೂ ಪರಿಗಣಿಸಲಾಗುತ್ತದೆ. ಅದಕ್ಕೆ ಆಜ್ಞೆ ನೀಡುವ ಮತ್ತು ತಡೆಯುವ ಅಧಿಕಾರವಿದೆಯೆಂದು ಭಾವಿಸಲಾಗುತ್ತದೆ. ಅದಕ್ಕಿಂತ ಮಿಗಿಲಾದ ಅಧಿಕಾರ ಬೇರೆಯಿಲ್ಲವೆಂದು ಕಲ್ಪಿಸಲಾಗುತ್ತದೆ ಎಂಬರ್ಥದಲ್ಲಿ ಅದನ್ನು 'ಇಲಾಹ್' ಮಾಡಿಕೊಳ್ಳಲಾಗಿದೆ.

ಪ್ರಥಮ ಆಯತ್‌ನಲ್ಲಿ ವಿದ್ವಾಂಸರು ಮತ್ತು ಸಂತರನ್ನು 'ಇಲಾಹ್' ಮಾಡಿಕೊಳ್ಳುವ ಪ್ರಸ್ತಾಪವಿದೆ. ಹದೀಸ್‌ನಲ್ಲಿ ಅದರ ಸ್ಪಷ್ಟ ವಿವರಣೆ ನಮಗೆ ಸಿಗುತ್ತದೆ. ಈ ಆಯತ್‌ನ ಬಗ್ಗೆ ಅದೀ ಬಿನ್ ಹಾತಿಮ್(ರ) ಅವರು ಪ್ರವಾದಿವರ್ಯರಲ್ಲಿ(ಸ) ಪ್ರಶ್ನಿಸಿದಾಗ ಪ್ರವಾದಿ(ಸ) ಹೇಳಿದರು: ನಿಮ್ಮ ವಿದ್ವಾಂಸರು ಮತ್ತು ಸಂತರು ಯಾವುದನ್ನು ಹಲಾಲ್ ಎನ್ನುತ್ತಿದ್ದರೋ ಅದನ್ನು ನೀವು ಹಲಾಲ್ ಎಂದು ಪರಿಗಣಿಸುತ್ತಿದ್ದಿರಿ. ಅವರು ಯಾವುದನ್ನು ಹರಾಮ್ ಎನ್ನುತ್ತಿದ್ದರೋ ಅದನ್ನು ನೀವು ಹರಾಮ್ ಎಂದು ಪರಿಗಣಿಸುತ್ತಿದ್ದಿರಿ. ಆ ಬಗ್ಗೆ ಅಲ್ಲಾಹನ ವಿಧಿ ಏನೆಂಬುದರ ಬಗ್ಗೆ ನಿಮಗೆ ಪರಿವೆಯಿರಲಿಲ್ಲ.

ಎರಡನೆಯ ಆಯತ್‌ನ ಅರ್ಥವು ಬಹಳ ಸ್ಪಷ್ಟವಿದೆ. ಯಾರು ತನ್ನ ಚಿತ್ತದ ಬಯಕೆಗಳನ್ನು ಅನುಸರಿಸುತ್ತಾನೋ ಮತ್ತು ಅದರ ಆಜ್ಞೆಗೇ ಪ್ರಾಶಸ್ತ್ಯ ನೀಡುತ್ತಾನೋ ಅವನು ವಾಸ್ತವದಲ್ಲಿ ಚಿತ್ತವನ್ನೇ ತನ್ನ 'ಇಲಾಹ್' ಆಗಿ ಮಾಡಿಕೊಂಡಿರುವನು.

ಅನಂತರದ ಎರಡು ಆಯತ್‌ಗಳಲ್ಲಿ 'ಇಲಾಹ್'ನ ಬದಲಿಗೆ 'ಶರೀಕ್' ಎಂಬ ಪದ ಬಳಸಲಾಗಿದ್ದರೂ ನಾವು ತರ್ಜುಮೆಯಲ್ಲಿ ಸ್ಪಷ್ಟಪಡಿಸಿರುವಂತೆ ಶರೀಕ್ (ಸಹಭಾಗಿ) ಎಂದರೆ 'ಇಲಾಹಿಯ್ಯತ್' (ದೇವತ್ವ)ದಲ್ಲಿ ಸಹಭಾಗಿಗೊಳಿಸುವುದಾಗಿದೆ. ಯಾರಾದರೂ ಅಲ್ಲಾಹನ ಆಜ್ಞೆಯ ಅಂಗೀಕಾರ ಇಲ್ಲದೆ ಯಾರಿಂದಾದರೂ ನಿಶ್ಚಯಿಸಲ್ಪಟ್ಟ ಕಾನೂನು ಕಟ್ಟಲೆಗಳನ್ನು ನೈಜ ಕಾನೂನೆಂದು ಬಗೆದರೆ ಆತ ಆ ಕಾನೂನು ನಿರ್ಮಾಪಕರನ್ನು ಇಲಾಹಿಯ್ಯತ್(ದೇವತ್ವ)ನಲ್ಲಿ ಶರೀಕ್(ಭಾಗೀದಾರ) ಮಾಡಿದಂತಾಗುತ್ತದೆ.

ಉಲೂಹಿಯ್ಯತ್ ಮತ್ತು ಸಾರ್ವಭೌಮತೆ

ಮೇಲೆ ವಿವರಿಸಿರುವ 'ಇಲಾಹ್'ನ ಅರ್ಥ ತಾತ್ಪರ್ಯಗಳ ಮಧ್ಯೆ ಒಂದು ತಾರ್ಕಿತ ಸಂಬಂಧವಿದೆ. ಒಬ್ಬನು ಯಾರನ್ನಾದರೂ ಪ್ರಕೃತಿಗೆ ಅತೀತವಾಗಿ ತನ್ನ ಬೆಂಬಲಿಗ-ಸಹಾಯಕ, ಸಂಕಷ್ಟ ನಿವಾರಕ, ಇಷ್ಟಾರ್ಥ ಸಿದ್ಧಿಸುವವ, ಪ್ರಾರ್ಥನೆಗಳನ್ನು ಆಲಿಸುವವ ಮತ್ತು ಲಾಭ-ನಷ್ಟಗಳನ್ನುಂಟು ಮಾಡಬಲ್ಲವನೆಂದು ಭಾವಿಸುವುದಾದರೆ ಅದಕ್ಕೆ ಕಾರಣ ಆ ಅಸ್ತಿತ್ವವು ವಿಶ್ವ ವ್ಯವಸ್ಥೆಯಲ್ಲಿ ಯಾವುದಾದರೂ ರೀತಿಯ ಆಧಿಪತ್ಯ ಹೊಂದಿದೆ ಎಂದು ಬಗೆದಿರುವುದಾಗಿದೆ. ಅದೇ ರೀತಿ ಒಬ್ಬ ವ್ಯಕ್ತಿ ಯಾರನ್ನಾದರೂ ಭಯ ಪಡುತ್ತಾನೆ. ಅವನ ಸಂಪ್ರೀತಿಯು ತನ್ನ ಮಟ್ಟಿಗೆ ಪ್ರಯೋಜನಕಾರಿ ಮತ್ತು ಅವನ ಕ್ರೋಧವು ತನ್ನ ಮಟ್ಟಿಗೆ ಹಾನಿಕಾರಕವೆಂದು ಭಾವಿಸಿದರೆ ಅವನ ಈ ನಂಬಿಕೆ ಮತ್ತು ಕೃತ್ಯಕ್ಕೆ ಕಾರಣ ಆ ಅಸ್ತಿತ್ವವು ಒಂದು ರೀತಿಯ ಅಧಿಕಾರವನ್ನು ಹೊಂದಿದೆ ಎಂಬ ಭಾವನೆಯೇ ಆಗಿದೆ. ಒಬ್ಬನು ಅಲ್ಲಾಹನನ್ನು ನಂಬುವ ಜತೆಗೆ ಅವನ ಹೊರತು ಇತರರನ್ನು ತನ್ನ ಬಯಕೆಗಳ ಈಡೇರಿಕೆಗಾಗಿ ಪ್ರಾರ್ಥಿಸುವುದಾದರೆ ಅದಕ್ಕೂ ಕಾರಣ ಅವನು ಅವರನ್ನು ಅಲ್ಲಾಹನ ಆಧಿಪತ್ಯದಲ್ಲಿ ಯಾವುದಾದರೂ ರೂಪದಲ್ಲಿ ಪಾಲುದಾರರೆಂದು ಭಾವಿಸುತ್ತಾನೆಂಬುದಾಗಿದೆ. ಅಂತೆಯೇ ಒಬ್ಬ ವ್ಯಕ್ತಿ ಯಾರದೇ ಆಜ್ಞೆಯನ್ನು ಕಾನೂನೆಂದೂ ಅವನ ವಿಧಿ-ನಿಷೇಧಗಳು ಅನುಸರಣಾರ್ಹವೆಂದೂ ಬಗೆಯುವುದಾದರೆ ಅವನನ್ನು ಸಾರ್ವಭೌಮನೆಂದು ಅಂಗೀಕರಿಸಿದಂತಾಗುತ್ತದೆ. ಒಟ್ಟಿನಲ್ಲಿ 'ಉಲೂಹಿಯ್ಯತ್'ನ ನೈಜ ತಿರುಳು ಸಾರ್ವಭೌಮತೆಯಾಗಿದೆ. ಅದು ವಿಶ್ವದ ಮೇಲೆ ನಿಸರ್ಗ ನಿಯಮಗಳಿಗೆ ಅತೀತವಾದ ಸಾರ್ವಭೌಮತೆಯಾಗಿರಲಿ ಅಥವಾ ಲೌಕಿಕ ಜೀವನದಲ್ಲಿ ಮನುಷ್ಯನು ಅದಕ್ಕೆ ಅಧೀನವಾಗಿದ್ದು ಅದರ ವಿಧಿ ನಿಷೇಧಗಳನ್ನು ನಿಶ್ಯರ್ಥವಾಗಿ ಅನುಸರಣಾರ್ಹವೆಂದು ಬಗೆಯುವ ಸಾರ್ವಭೌಮತೆಯಾಗಿರಲಿ.

ಕುರ್‌ಆನ್‌ನ ಪ್ರತಿಪಾದನೆ

ಈ ಸಾರ್ವಭೌಮತೆಯ ಕಲ್ಪನೆಯ ಆಧಾರದಲ್ಲೇ ಕುರ್‌ಆನ್ ಅಲ್ಲಾಹನ ಹೊರತು ಇತರರ 'ಇಲಾಹಿಯ್ಯತ್'ಅನ್ನು ನಿರಾಕರಿಸಿ ಕೇವಲ ಅಲ್ಲಾಹನ 'ಇಲಾಹಿಯ್ಯತ್'ಅನ್ನು ಸಮರ್ಥಿಸಲು ತನ್ನೆಲ್ಲ ಪ್ರತಿಪಾದನಾ ಸಾಮರ್ಥ್ಯವನ್ನು ಬಳಸುತ್ತದೆ. ಭೂಮಿ-ಆಕಾಶಗಳಲ್ಲಿ ಒಂದೇ ಅಸ್ತಿತ್ವವು ಎಲ್ಲ ಅಧಿಕಾರ ಮತ್ತು ಆಧಿಪತ್ಯಗಳ ಒಡೆತನವನ್ನು ಹೊಂದಿದೆ. ಸೃಷ್ಟಿ ಮತ್ತು ಜೀವನದ ಸಕಲ ಸೌಲಭ್ಯಗಳು ಅವನದು. ಆಜ್ಞಾಧಿಕಾರ ಅವನದು. ಶಕ್ತಿ-ಸಾಮರ್ಥ್ಯಗಳೆಲ್ಲವೂ ಅವನ ಕೈಯಲ್ಲಿವೆ. ಎಲ್ಲ ವಸ್ತುಗಳೂ ಬಯಸಿಯೋ ಬಯಸದೆಯೋ ಅವನನ್ನೇ ಅನುಸರಿಸುತ್ತವೆ. ಅವನ ಹೊರತು ಯಾರ ಬಳಿಯೂ ಯಾವುದೇ ಅಧಿಕಾರವಿಲ್ಲ. ಯಾರ ಆಜ್ಞೆಯೂ ಇಲ್ಲಿ ನಡೆಯುವುದಿಲ್ಲ. ಸೃಷ್ಟಿ, ಅದರ ಯೋಜನೆ ಮತ್ತು ವ್ಯವಸ್ಥೆಯ ರಹಸ್ಯಗಳನ್ನು ಬಲ್ಲವರು ಯಾರೂ ಇಲ್ಲ. ಆಧಿಪತ್ಯದ ಅಧಿಕಾರಗಳಲ್ಲಿ ಯಾರಿಗೂ ಸ್ವಲ್ಪವೂ ಪಾಲಿಲ್ಲ. ಆದ್ದರಿಂದ ಅವನ ಹೊರತು ವಾಸ್ತವದಲ್ಲಿ ಯಾರೂ 'ಇಲಾಹ್' ಇಲ್ಲ. ಆದ್ದರಿಂದ ಇತರರನ್ನು 'ಇಲಾಹ್'

ಎಂದು ಬಗೆಯುವ ನಿಮ್ಮ ಕೃತ್ಯವು ತಪ್ಪಾಗಿದೆ. ಅದು ಪ್ರಾರ್ಥನೆ ಸಲ್ಲಿಸುವುದು ಮತ್ತು ಆಶ್ರಯ ಹುಡುಕುವುದಾಗಿರಲಿ. ಭಯ ಮತ್ತು ನಿರೀಕ್ಷೆಯ ಕೃತ್ಯವಾಗಿರಲಿ. ಶಿಫಾರಸ್ಸುದಾರರಾಗಿ ಮಾಡುವುದಿರಲಿ. ಅನುಸರಿಸುವುದಿರಲಿ. ನೀವು ಇತರರೊಂದಿಗೆ ಇರಿಸಿಕೊಂಡಿರುವ ಈ ಎಲ್ಲ ರೀತಿಯ ಸಂಬಂಧಗಳು ಕೇವಲ ಅಲ್ಲಾಹನಿಗೆ ಮೀಸಲಾಗಿರಬೇಕು. ಏಕೆಂದರೆ ಅವನೇ ಏಕೈಕ ಸಾರ್ವಭೌಮನಾಗಿದ್ದಾನೆ ಎಂಬುದು ಕುರ್‌ಆನ್‌ನ ಪ್ರತಿಪಾದನೆಯಾಗಿದೆ. ಅದನ್ನು ಕುರ್‌ಆನ್‌ನ ಭಾಷೆಯಲ್ಲೇ ಕೇಳಿ:

وَهُوَ الَّذِي فِي السَّمَاءِ إِلَٰهٌ وَفِي الْأَرْضِ إِلَٰهٌ ۚ وَهُوَ الْحَكِيمُ
الْعَلِيمُ (الزخرف - ٨٤)

ಅವನೊಬ್ಬನೇ ಆಕಾಶದಲ್ಲೂ 'ಇಲಾಹ್' ಮತ್ತು ಭೂಮಿಯಲ್ಲೂ 'ಇಲಾಹ್' ಆಗಿರುತ್ತಾನೆ. ಅವನೇ ಯುಕ್ತಿಪೂರ್ಣನೂ ಸರ್ವಜ್ಞನೂ ಆಗಿರುತ್ತಾನೆ. (ಅಝ್ಝುಖ್‌ರುಫ್: 84)

أَفَمَن يَخْلُقُ كَمَن لَّا يَخْلُقُ ۗ أَفَلَا تَذَكَّرُونَ ۝ (النحل - ١٧)

ಹೀಗಿರುವಾಗ ಸೃಷ್ಟಿಸುವಾತನೂ ಏನನ್ನೂ ಸೃಷ್ಟಿಸದವರೂ ಸಮಾನರಾಗಬಲ್ಲರೇ? ಇದು ನಿಮಗೆ ಅರ್ಥವಾಗುವುದಿಲ್ಲವೇ? (ಅನ್ನಹ್ಲ್: 17)

وَالَّذِينَ يَدْعُونَ مِن دُونِ اللَّهِ لَا يَخْلُقُونَ شَيْئًا وَهُمْ يُخْلَقُونَ ۝
(النحل - ٢٠)

ಇವರು ಅಲ್ಲಾಹನನ್ನು ಬಿಟ್ಟು ಇತರ ಯಾರನ್ನು ಕೂಗಿ ಪ್ರಾರ್ಥಿಸುತ್ತಿರುವರೋ ಅವರು ಯಾವುದೇ ವಸ್ತುವಿನ ಸೃಷ್ಟಿಕರ್ತರಲ್ಲ. ನಿಜವಾಗಿ ಅವರು ಸ್ವತಃ ಸೃಷ್ಟಿಗಳು.(ಅನ್ನಹ್ಲ್: 20)

إِلَٰهُكُمْ إِلَٰهٌ وَاحِدٌ (النحل - ٢٢)

ನಿಮ್ಮ 'ಇಲಾಹ್' ಕೇವಲ ಒಬ್ಬನೇ ಆಗಿದ್ದಾನೆ. (ಅನ್ನಹ್ಲ್: 22)

يَا أَيُّهَا النَّاسُ اذْكُرُوا نِعْمَتَ اللَّهِ عَلَيْكُمْ ۚ هَلْ مِنْ خَالِقٍ غَيْرُ اللَّهِ
يَرْزُقُكُم مِّنَ السَّمَاءِ وَالْأَرْضِ ۚ لَا إِلَٰهَ إِلَّا هُوَ ۖ فَأَنَّىٰ تُؤْفَكُونَ -

(فاطر - ٣)

ಜನರೇ! ನಿಮ್ಮ ಮೇಲಿರುವ ಅಲ್ಲಾಹನ ಅನುಗ್ರಹಗಳನ್ನು ಸ್ಮರಿಸಿರಿ. ಅಲ್ಲಾಹನ ಹೊರತು ಆಕಾಶ ಮತ್ತು ಭೂಮಿಯಿಂದ ನಿಮಗೆ ಆಹಾರ ಒದಗಿಸುವಂತಹ ಸೃಷ್ಟಿಕರ್ತನಾರಾದರೂ ಇರುವನೇ? ಅವನ ಹೊರತು ಯಾವನೇ 'ಇಲಾಹ್' ಇಲ್ಲ. ನೀವು ಮೋಸ ಹೋಗುತ್ತಿರುವುದಾದರೂ ಎಲ್ಲಿಂದ? (ಫಾತಿರ್: 3)

قُلْ أَرَأَيْتُمْ إِنْ أَخَذَ اللَّهُ سَمْعَكُمْ وَأَبْصَارَكُمْ وَخَتَمَ
عَلَىٰ قُلُوبِكُمْ مَنْ إِلَٰهٌ غَيْرُ اللَّهِ يَأْتِيكُمْ بِهِ (انعام-٤٦)

ಓ ಪೈಗಂಬರರೇ! ಇವರೊಡನೆ ಕೇಳಿರಿ. ಅಲ್ಲಾಹನು ನಿಮ್ಮ ದೃಷ್ಟಿಯನ್ನೂ ಶ್ರವಣವನ್ನೂ ನಿಮ್ಮಿಂದ ಕಸಿದು ಕೊಂಡು ನಿಮ್ಮ ಹೃದಯಗಳಿಗೆ ಮುದ್ರೆಯೊತ್ತಿ ಬಿಟ್ಟರೆ ಈ ಶಕ್ತಿಗಳನ್ನು ನಿಮಗೆ ಮರಳಿ ಕೊಡಿಸಲು ಅಲ್ಲಾಹನ ಹೊರತು ಇನ್ನಾವ 'ಇಲಾಹ್' ಇದ್ದಾನೆ?
(ಅಲ್ ಅನ್‌ಆಮ್: 46)

وَهُوَ اللَّهُ لَا إِلَٰهَ إِلَّا هُوَ لَهُ الْحَمْدُ فِي الْأُولَىٰ وَالْآخِرَةِ وَلَهُ
الْحُكْمُ وَإِلَيْهِ تُرْجَعُونَ ۝ قُلْ أَرَأَيْتُمْ إِنْ جَعَلَ اللَّهُ عَلَيْكُمُ
اللَّيْلَ سَرْمَدًا إِلَىٰ يَوْمِ الْقِيَامَةِ مَنْ إِلَٰهٌ غَيْرُ اللَّهِ يَأْتِيكُمْ بِضِيَاءٍ
أَفَلَا تَسْمَعُونَ ۝ قُلْ أَرَأَيْتُمْ إِنْ جَعَلَ اللَّهُ عَلَيْكُمُ النَّهَارَ
سَرْمَدًا إِلَىٰ يَوْمِ الْقِيَامَةِ مَنْ إِلَٰهٌ غَيْرُ اللَّهِ يَأْتِيكُمْ بِلَيْلٍ
تَسْكُنُونَ فِيهِ أَفَلَا تُبْصِرُونَ ۝ (قصص-٧٠-٧١-٧٢)

ಅವನೇ ಏಕೈಕ ಅಲ್ಲಾಹ್. ಅವನ ಹೊರತು ಅನ್ಯ 'ಇಲಾಹ್' ಇಲ್ಲ. ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಸಕಲ ಸ್ತುತಿಸ್ತೋತ್ರಗಳೂ ಅವನಿಗೇ ಮೀಸಲು. ಪರಮಾಧಿಕಾರ ಅವನದು. ನೀವೆಲ್ಲರೂ ಅವನ ಕಡೆಗೇ ಮರಳಿಸಲ್ಪಡುವಿರಿ. ಸಂದೇಶವಾಹಕರೇ! "ಅಲ್ಲಾಹನು ಪುನರುತ್ಥಾನ ದಿನದ ವರೆಗೆ ನಿಮ್ಮ ಮೇಲೆ ಶಾಶ್ವತವಾಗಿ ರಾತ್ರಿಯನ್ನೇ ಕವಿಸಿಬಿಟ್ಟರೆ, ನಿಮಗೆ ಪ್ರಕಾಶವನ್ನು ತಂದು ಕೊಡಲು ಅಲ್ಲಾಹನ ಹೊರತು ಬೇರಾವ 'ಇಲಾಹ್' ಇದ್ದಾನೆಂದು ನೀವು ವಿವೇಚಿಸಿರುವಿರಾ? ನೀವು ಆಲಿಸುತ್ತಿಲ್ಲವೇ?" ಎಂದು ಇವರೊಡನೆ ಕೇಳಿರಿ. "ಅಲ್ಲಾಹನು ನಿಮ್ಮ ಮೇಲೆ ಪುನರುತ್ಥಾನ ದಿನದ ವರೆಗೆ ಶಾಶ್ವತವಾಗಿ ಹಗಲನ್ನೇ ಆವರಿಸಿಬಿಟ್ಟರೆ ನೀವು ವಿಶ್ರಾಂತಿ ಪಡೆಯುವಂತಹ ರಾತ್ರಿಯನ್ನು ನಿಮಗೆ ತಂದು ಕೊಡಲು ಅಲ್ಲಾಹನ ಹೊರತು ಬೇರಾವ 'ಇಲಾಹ್' ಇದ್ದಾನೆಂದು ನೀವೆಂದಾದರೂ ಆಲೋಚಿಸಿರುವಿರಾ? ನಿಮಗೆ ತೋರುವುದಿಲ್ಲವೇ?" ಎಂದೂ ಇವರೊಡನೆ ಕೇಳಿರಿ. (ಅಲ್ ಕಸಸ್: 70-72)

قُلِ ادْعُوا الَّذِينَ زَعَمْتُمْ مِنْ دُونِ اللَّهِ لَا يَمْلِكُونَ مِثْقَالَ
ذَرَّةٍ فِي السَّمَاوَاتِ وَلَا فِي الْأَرْضِ وَمَا لَهُمْ فِيهِمَا مِنْ شِرْكٍ

وَمَا لَهُ مِنْهُم مِّن ظَهِيرٍ ۝ وَلَا تَنفَعُ الشَّفَاعَةُ عِندَهُ إِلَّا لِمَنْ أَذِنَ لَهُ (السبا- ٢٢-٢٣)

ನೀವು ಅಲ್ಲಾಹನ ಹೊರತು ಕಲ್ಪಿಸಿ ಕೊಂಡಿರುವವರನ್ನು ಪ್ರಾರ್ಥಿಸಿ ನೋಡಿರಿ. ಆಕಾಶಗಳಲ್ಲಾಗಲೀ ಭೂಮಿಯಲ್ಲಾಗಲೀ ಅವರು ಅಣು ಗಾತ್ರದ ವಸ್ತುವಿಗೂ ಒಡೆಯರಲ್ಲ. ಅವರು ಭೂಮಿ-ಆಕಾಶಗಳ ಸೊತ್ತಿನಲ್ಲಿ ಪಾಲುದಾರರೂ ಅಲ್ಲ. ಅವರಲ್ಲಿ ಯಾರೂ ಅಲ್ಲಾಹನ ಸಹಾಯಕನೂ ಅಲ್ಲ. ಅಲ್ಲಾಹನು ಶಿಫಾರಸು ಮಾಡಲು ಅನುಮತಿ ನೀಡಿದ ವ್ಯಕ್ತಿಯ ಹೊರತು ಅಲ್ಲಾಹನ ಸನ್ನಿಧಿಯಲ್ಲಿ ಯಾವ ಶಿಫಾರಸೂ ಯಾರ ಬಗೆಗೂ ಫಲಕಾರಿಯಾಗದು.

(ಸಬಾ: 22-23)

خَلَقَ السَّمَاوَاتِ وَالْأَرْضَ بِالْحَقِّ ۖ يُكَوِّرُ اللَّيْلَ عَلَى النَّهَارِ وَيُكَوِّرُ النَّهَارَ عَلَى اللَّيْلِ ۖ وَسَخَّرَ الشَّمْسَ وَالْقَمَرَ ۖ كُلٌّ يَجْرِي لِأَجَلٍ مُّسَمًّى .... خَلَقَكُم مِّن نَّفْسٍ وَاحِدَةٍ ثُمَّ جَعَلَ مِنْهَا زَوْجَهَا وَأَنزَلَ لَكُم مِّنَ الْأَنْعَامِ ثَمَانِيَةَ أَزْوَاجٍ ۚ يَخْلُقُكُمْ فِي بُطُونِ أُمَّهَاتِكُمْ خَلْقًا مِّن بَعْدِ خَلْقٍ فِي ظُلُمَاتٍ ثَلَاثٍ ۚ ذَٰلِكُمُ اللَّهُ رَبُّكُمْ لَهُ الْمُلْكُ ۖ لَا إِلَٰهَ إِلَّا هُوَ ۖ فَأَنَّىٰ تُصْرَفُونَ ۝
(الزمر- ٥-٦)

ಅವನು ಭೂಮಿ-ಆಕಾಶಗಳನ್ನು ಸತ್ಯಪೂರ್ಣವಾಗಿ ಸೃಷ್ಟಿಸಿರುವನು. ಅವನೇ ಹಗಲಿನ ಮೇಲೆ ಇರುಳನ್ನು ಇರುಳಿನ ಮೇಲೆ ಹಗಲನ್ನು ಸುತ್ತುತ್ತಾನೆ. ಅವನೇ ಸೂರ್ಯ ಮತ್ತು ಚಂದ್ರನನ್ನು ನಿಯಂತ್ರಿಸಿರುತ್ತಾನೆ. ಅವುಗಳಲ್ಲಿ ಪ್ರತಿಯೊಂದೂ ಒಂದು ನಿರ್ದಿಷ್ಟ ಕಾಲದ ವರೆಗೆ ಚಲಿಸುತ್ತಿರುವುದು.

... ಅವನೇ ನಿಮ್ಮನ್ನು ಒಂದು ಜೀವದಿಂದ ಸೃಷ್ಟಿಸಿದನು. ತರುವಾಯ ಆ ಜೀವದಿಂದ ಅದರ ಜೊತೆಯನ್ನು ಸೃಷ್ಟಿಸಿದವನೂ ಅವನೇ ಮತ್ತು ನಿಮ್ಮ ಜಾನುವಾರುಗಳಿಂದ ನಿಮಗಾಗಿ ಎಂಟು ಗಂಡು-ಹೆಣ್ಣುಗಳನ್ನು ಒದಗಿಸಿದವನೂ ಅವನೇ. ಅವನು ನಿಮ್ಮ ಮಾತೆಯರ ಉದರಗಳೊಳಗೆ, ಮೂರು ಕತ್ತಲು ಪರದೆಗಳೊಳಗೆ[1] ನಿಮಗೆ ಒಂದರ ನಂತರ ಒಂದು ರೂಪ ಕೊಡುತ್ತಾ ಸಾಗುತ್ತಾನೆ. ಈ ಅಲ್ಲಾಹನೇ ನಿಮ್ಮ 'ರಬ್ಬ್'. ಆಧಿಪತ್ಯವು ಅವನಿಗೇ ಸೇರಿದೆ. ಅವನ ಹೊರತು ಅನ್ಯ 'ಇಲಾಹ್' ಇಲ್ಲ. ಹೀಗಿರುತ್ತ ನೀವು ಅದೆಲ್ಲಿಂದ ದಾರಿಗೆಡಿಸಲ್ಪಡುತ್ತಿರುವಿರಿ?

(ಅಝ್ಝುಮರ್: 5-6)

---

1. ಅರ್ಥಾತ್ ಹೊಟ್ಟೆ, ಗರ್ಭಕೋಶ ಮತ್ತು ಭ್ರೂಣವನ್ನು ಸುತ್ತುವರಿದಿರುವ ಪೊರೆ.

أَمَّنْ خَلَقَ السَّمٰوٰتِ وَالْأَرْضَ وَأَنْزَلَ لَكُمْ مِّنَ السَّمَآءِ مَآءً
فَأَنْبَتْنَا بِهٖ حَدَآئِقَ ذَاتَ بَهْجَةٍ ج مَا كَانَ لَكُمْ أَنْ تُنْبِتُوْا
شَجَرَهَا ۗ ءَإِلٰهٌ مَّعَ اللّٰهِ ط بَلْ هُمْ قَوْمٌ يَّعْدِلُوْنَ ۝ أَمَّنْ جَعَلَ الْأَرْضَ
قَرَارًا وَّجَعَلَ خِلٰلَهَآ أَنْهٰرًا وَّجَعَلَ لَهَا رَوَاسِيَ وَجَعَلَ بَيْنَ الْبَحْرَيْنِ حَاجِزًا ۗ
ءَإِلٰهٌ مَّعَ اللّٰهِ ط بَلْ أَكْثَرُهُمْ لَا يَعْلَمُوْنَ ۝ أَمَّنْ
يُّجِيْبُ الْمُضْطَرَّ إِذَا دَعَاهُ وَيَكْشِفُ السُّوْٓءَ وَيَجْعَلُكُمْ خُلَفَآءَ الْأَرْضِ ۗ
ءَإِلٰهٌ مَّعَ اللّٰهِ ۗ قَلِيْلًا مَّا تَذَكَّرُوْنَ ۝ أَمَّنْ يَّهْدِيْكُمْ فِيْ ظُلُمٰتِ الْبَرِّ
وَالْبَحْرِ وَمَنْ يُّرْسِلُ الرِّيٰحَ بُشْرًا بَيْنَ يَدَيْ رَحْمَتِهٖ ط ءَإِلٰهٌ
مَّعَ اللّٰهِ ط تَعٰلَى اللّٰهُ عَمَّا يُشْرِكُوْنَ ۝ أَمَّنْ يَّبْدَؤُا الْخَلْقَ ثُمَّ يُعِيْدُهٗ
وَمَنْ يَّرْزُقُكُمْ مِّنَ السَّمَآءِ وَالْأَرْضِ ط ءَإِلٰهٌ مَّعَ اللّٰهِ ط قُلْ
هَاتُوْا بُرْهَانَكُمْ إِنْ كُنْتُمْ صٰدِقِيْنَ ۝ (النمل - ٦٠ - ٦٤)

ಆಕಾಶಗಳನ್ನು ಭೂಮಿಯನ್ನೂ ಸೃಷ್ಟಿಸಿದವನು, ನಿಮಗಾಗಿ ಆಕಾಶದಿಂದ ನೀರನ್ನು ಸುರಿಸಿದವನು, ತನ್ಮೂಲಕ ನಿಮ್ಮಿಂದ ಬೆಳೆಸಲು ಸಾಧ್ಯವಿಲ್ಲದ ಮರಗಳಿರುವ ಸುಂದರ ಉದ್ಯಾನಗಳನ್ನು ಬೆಳೆಸಿದವನು ಯಾರು? ಅಲ್ಲಾಹನೊಂದಿಗೆ ಇತರ 'ಇಲಾಹ್' ಯಾರಾದರೂ ಈ ಕಾರ್ಯಗಳಲ್ಲಿ ಸಹಭಾಗಿಯಾಗಿರುವರೇ? ಆದರೆ ಇವರೇ ನೇರ ಮಾರ್ಗದಿಂದ ಸರಿದು ನಡೆಯುತ್ತಿದ್ದಾರೆ. ಭೂಮಿಯನ್ನು ವಾಸ ಸ್ಥಾನವಾಗಿ ಮಾಡಿದವನು, ಅದರೊಳಗೆ ನದಿಗಳನ್ನು ಹರಿಸಿದವನು, ಅದರಲ್ಲಿ ಪರ್ವತಗಳ ಮೊಳೆಗಳನ್ನು ನಾಟಿದವನು ಮತ್ತು ಎರಡು ಜಲಾಗಾರಗಳ ಮಧ್ಯೆ ತಡೆಯನ್ನಿರಿಸಿದವನು ಯಾರು? ಅಲ್ಲಾಹನೊಂದಿಗೆ ಇತರ 'ಇಲಾಹ್' ಯಾರಾದರೂ ಈ ಕಾರ್ಯಗಳಲ್ಲಿ ಸಹಭಾಗಿಯಾಗಿರುವರೇ? ಆದರೆ ಇವರಲ್ಲಿ ಹೆಚ್ಚಿನವರು ತಿಳಿಗೇಡಿಗಳು. ಕಳವಳಗೊಂಡವನು ಪ್ರಾರ್ಥಿಸಿದಾಗ ಅವನ ಪ್ರಾರ್ಥನೆಯನ್ನು ಆಲಿಸುವವನಾರು? ಅವನ ಸಂಕಷ್ಟವನ್ನು ನಿವಾರಿಸುವವನಾರು? ನಿಮ್ಮನ್ನು ಭೂಮಿಯಲ್ಲಿ ಪ್ರತಿನಿಧಿಯಾಗಿ ಮಾಡುವವನಾರು? ಅಲ್ಲಾಹನ ಹೊರತು ಇತರ 'ಇಲಾಹ್' ಯಾರಾದರೂ ಈ ಕಾರ್ಯಗಳಲ್ಲಿ ಸಹಭಾಗಿಯಾಗಿರುವರೇ? ಆದರೆ ನೀವು ಅಲ್ಪವೇ ವಿವೇಚಿಸುತ್ತೀರಿ. ನೆಲ ಮತ್ತು ಸಾಗರಗಳ ಅಂಧಕಾರಗಳಲ್ಲಿ ನಿಮಗೆ ದಾರಿ ತೋರಿಸುವವನು ಹಾಗೂ ತನ್ನ ಕೃಪೆಗಿಂತ ಮುಂಚಿತವಾಗಿ ಮಾರುತಗಳನ್ನು ಸುವಾರ್ತೆಯೊಂದಿಗೆ ಕಳುಹಿಸುವವನು ಯಾರು? ಅಲ್ಲಾಹನ ಜತೆ ಇತರ 'ಇಲಾಹ್' ಯಾರಾದರೂ

ಈ ಕಾರ್ಯಗಳಲ್ಲಿ ಸಹಭಾಗಿಯಾಗಿರುವರೇ? ಇವರು ಮಾಡುತ್ತಿರುವ ಶಿರ್ಕ್ (ದೇವ ಸಹಭಾಗಿತ್ವ)ನಿಂದ ಅಲ್ಲಾಹನು ಮಹೋನ್ನತನು. ಸೃಷ್ಟಿಯನ್ನು ಆರಂಭಿಸುವವನು ಮತ್ತು ಆ ಬಳಿಕ ಅದರ ಪುನರಾವರ್ತನೆ ಮಾಡುವವನು ಯಾರು? ನಿಮಗೆ ಆಕಾಶಗಳಿಂದಲೂ ಭೂಮಿಯಿಂದಲೂ ಜೀವನಾಧಾರ ಕೊಡುವವನು ಯಾರು? ಅಲ್ಲಾಹನ ಜತೆ ಇತರ'ಇಲಾಹ್' ಯಾರಾದರೂ ಈ ಕಾರ್ಯಗಳಲ್ಲಿ ಪಾಲುದಾರರಾಗಿರುವರೇ? ಹೇಳಿರಿ- 'ನೀವು ಸತ್ಯವಾದಿಗಳಾಗಿದ್ದರೆ ನಿಮ್ಮ ಪುರಾವೆಗಳನ್ನು ತನ್ನಿರಿ.'[2] (ಅನ್ನಮ್ಲ್: 60-64)

الَّذِي لَهُ مُلْكُ السَّمَاوَاتِ وَالْأَرْضِ وَلَمْ يَتَّخِذْ وَلَدًا وَلَمْ يَكُن
لَّهُ شَرِيكٌ فِي الْمُلْكِ وَخَلَقَ كُلَّ شَيْءٍ فَقَدَّرَهُ تَقْدِيرًا ۝ وَاتَّخَذُوا
مِن دُونِهِ آلِهَةً لَّا يَخْلُقُونَ شَيْئًا وَهُمْ يُخْلَقُونَ وَلَا يَمْلِكُونَ
لِأَنفُسِهِمْ ضَرًّا وَلَا نَفْعًا وَلَا يَمْلِكُونَ مَوْتًا وَلَا حَيَاةً وَلَا نُشُورًا
(الفرقان-٢-٣)

ಅವನು ಭೂಮಿ-ಆಕಾಶಗಳ ಆಧಿಪತ್ಯದ ಒಡೆಯನು. ಅವನು ಯಾರನ್ನು ಪುತ್ರನಾಗಿಸಿಕೊಂಡಿಲ್ಲ. ಅವನ ಜತೆ ಪ್ರಭುತ್ವದಲ್ಲಿ ಯಾರೂ ಸಹಭಾಗಿಯಿಲ್ಲ. ಅವನು ಪ್ರತಿಯೊಂದು ವಸ್ತುವನ್ನು ಸೃಷ್ಟಿಸಿದನು. ಅನಂತರ ಅದಕ್ಕೊಂದು ವಿಧಿಯನ್ನು ನಿಶ್ಚಯಿಸಿದನು. ಜನರು ಅವನನ್ನು ಬಿಟ್ಟು, ಯಾವ ವಸ್ತುವನ್ನೂ ಸೃಷ್ಟಿಸದ ಮತ್ತು ಸ್ವತಃ ಸೃಷ್ಟಿಸಲ್ಪಟ್ಟವುಗಳನ್ನು 'ಇಲಾಹ್'ಗಳಾಗಿ ಮಾಡಿಕೊಂಡರು. ಅವು ಸ್ವತಃ ತಮಗೂ ಯಾವುದೇ ಲಾಭ ಅಥವಾ ಹಾನಿಯನ್ನುಂಟು ಮಾಡುವ ಅಧಿಕಾರ ಹೊಂದಿಲ್ಲ. ಅವುಗಳಿಗೆ ಮರಣ, ಜೀವನ ಮತ್ತು ಪುನರುತ್ಥಾನದ ಮೇಲೆ ಯಾವುದೇ ರೀತಿಯ ಅಧಿಕಾರವಿಲ್ಲ. (ಅಲ್‌ಫುರ್ಕಾನ್: 2-3)

---

2. ಅರ್ಥಾತ್ ಈ ಎಲ್ಲ ಕಾರ್ಯಗಳನ್ನು ಅಲ್ಲಾಹನೇ ಮಾಡುತ್ತಾನೆ ಮತ್ತು ಅವುಗಳಲ್ಲಿ ಅವನಿಗಾರೂ ಸಹಾಯಕರಿಲ್ಲ ಎಂದು ನೀವು ಒಪ್ಪುವಿರಾದರೆ ಯಾವ ಪುರಾವೆಯಿಂದ ನೀವು 'ಇಲಾಹಿಯ್ಯತ್'ನಲ್ಲಿ ಅವನ ಜತೆ ಇತರರನ್ನು ಭಾಗೀದಾರರಾಗಿ ಮಾಡುತ್ತೀರಿ? ಯಾರ ಬಳಿ ಅಧಿಕಾರವಿಲ್ಲವೋ, ಭೂಮಿ-ಆಕಾಶಗಳಲ್ಲಿ ಯಾರಿಗೆ ಸ್ವಶಕ್ತಿಯಿಂದ ಯಾವ ಕೆಲಸ ಮಾಡುವುದು ಸಾಧ್ಯವಿಲ್ಲವೋ ಅವರು 'ಇಲಾಹ್' ಆಗುವುದು ಹೇಗೆ?

بَدِيْعُ السَّمٰوٰتِ وَالْاَرْضِ ؕ اَنّٰى يَكُوْنُ لَهٗ وَلَدٌ وَّلَمْ تَكُنْ لَّهٗ صَاحِبَةٌ
وَخَلَقَ كُلَّ شَيْءٍ وَهُوَ بِكُلِّ شَيْءٍ عَلِيْمٌ ○ ذٰلِكُمُ اللّٰهُ رَبُّكُمْ لَآ اِلٰهَ
اِلَّا هُوَ خَالِقُ كُلِّ شَيْءٍ فَاعْبُدُوْهُ وَهُوَ عَلٰى كُلِّ شَيْءٍ وَّكِيْلٌ ۔

(الانعام - ١٠١ - ١٠٢)

ಅವನು ಭೂಮಿ-ಆಕಾಶಗಳ ಕರ್ತೃ. ಅವನಿಗೊಬ್ಬ ಪತ್ನಿಯೇ ಇಲ್ಲದಿರುವಾಗ ಅವನಿಗೆ ಮಗನಾಗುವುದು ಹೇಗೆ? ಅವನಂತೂ ಎಲ್ಲ ವಸ್ತುಗಳನ್ನು ಸೃಷ್ಟಿಸಿದನು ಮತ್ತು ಅವನು ಸಕಲ ವಸ್ತುಗಳ ಜ್ಞಾನವುಳ್ಳವನು. ಅವನೇ ಅಲ್ಲಾಹ್, ನಿಮ್ಮ ಪ್ರಭು. ಅವನ ಹೊರತು ಅನ್ಯ 'ಇಲಾಹ್' ಇಲ್ಲ. ಸಕಲ ವಸ್ತುಗಳ ಕರ್ತೃ. ಆದುದರಿಂದ ಅವನದೇ 'ಇಬಾದತ್' ಮಾಡಿರಿ. ಅವನು ಸಕಲ ವಸ್ತುಗಳ ಸಂರಕ್ಷಣೆ ಮತ್ತು ಮೇಲ್ನೋಟ ವಹಿಸುವವನಾಗಿದ್ದಾನೆ.

(ಅಲ್ ಅನ್‌ಆಮ್: 101-102)

وَمِنَ النَّاسِ مَنْ يَّتَّخِذُ مِنْ دُوْنِ اللّٰهِ اَنْدَادًا يُّحِبُّوْنَهُمْ كَحُبِّ اللّٰهِ ؕ
وَالَّذِيْنَ اٰمَنُوْٓا اَشَدُّ حُبًّا لِّلّٰهِ ؕ وَلَوْ يَرَى الَّذِيْنَ ظَلَمُوْٓا اِذْ يَرَوْنَ
الْعَذَابَ اَنَّ الْقُوَّةَ لِلّٰهِ جَمِيْعًا (بقره - ١٦٥)

ಆದರೆ ಕೆಲವರು ಅಲ್ಲಾಹನ ಹೊರತು ಇತರರನ್ನು ಅವನ ಸರಿಸಾಟಿ ಮತ್ತು ಎದುರಾಳಿಯನ್ನಾಗಿ ಮಾಡುತ್ತಾರೆ. ಅಲ್ಲಾಹನನ್ನು ಪ್ರೀತಿಸಬೇಕಾದಂತೆ ಅವರನ್ನು ಪ್ರೀತಿಸುತ್ತಾರೆ. ವಸ್ತುತಃ ಸತ್ಯವಿಶ್ವಾಸಿಗಳು ಅಲ್ಲಾಹನನ್ನೇ ಅತ್ಯಧಿಕವಾಗಿ ಪ್ರೀತಿಸುತ್ತಾರೆ. ಅಕಟ! ಸಕಲ ಶಕ್ತಿ-ಅಧಿಕಾರಗಳೂ ಅಲ್ಲಾಹನ ವಶದಲ್ಲೇ ಇರುವವು ಎಂಬುದನ್ನು ಯಾತನೆಯನ್ನು ಕಣ್ಣ ಮುಂದೆ ಕಂಡಾಗ ಮನಗಾಣಲಿರುವ ಈ ಅಕ್ರಮಿಗಳು ಇಂದೇ ಅದನ್ನು ಮನಗಂಡಿದ್ದರೆ!

(ಅಲ್ ಬಕರಃ- 165)

قُلْ اَرَءَيْتُمْ مَّا تَدْعُوْنَ مِنْ دُوْنِ اللّٰهِ اَرُوْنِيْ مَاذَا خَلَقُوْا مِنَ
الْاَرْضِ اَمْ لَهُمْ شِرْكٌ فِي السَّمٰوٰتِ ؕ اِيْتُوْنِيْ بِكِتٰبٍ مِّنْ قَبْلِ هٰذَآ
اَوْ اَثٰرَةٍ مِّنْ عِلْمٍ اِنْ كُنْتُمْ صٰدِقِيْنَ ○ وَمَنْ اَضَلُّ مِمَّنْ يَّدْعُوْا
مِنْ دُوْنِ اللّٰهِ مَنْ لَّا يَسْتَجِيْبُ لَهٗٓ اِلٰى يَوْمِ الْقِيٰمَةِ (احقاف - ۴ - ۵)

ಸಂದೇಶವಾಹಕರೇ! ಇವರೊಡನೆ ಹೇಳಿರಿ: ನೀವು ಅಲ್ಲಾಹನನ್ನು ಬಿಟ್ಟು

ಪ್ರಾರ್ಥಿಸುತ್ತಿರುವವುಗಳು ಏನಾಗಿರುತ್ತವೆಂಬುದನ್ನು ನೀವು ಕಣ್ತೆರೆದು ನೋಡಿದಿರಾ? ಅವರು ಈ ಭೂಮಿಯಲ್ಲಿ ಏನನ್ನು ಸೃಷ್ಟಿಸಿದ್ದಾರೆಂಬುದನ್ನು ಅಥವಾ ಆಕಾಶಗಳ ಸೃಷ್ಟಿ ಹಾಗೂ ವ್ಯವಸ್ಥಾಪನೆಯಲ್ಲಿ ಅವರದ್ದೇನಾದರೂ ಪಾಲಿದೆಯೇ ಎಂಬುದನ್ನು ನನಗೆ ತೋರಿಸುವಿರಾ?... ಅಲ್ಲಾಹನನ್ನು ಬಿಟ್ಟು, ಪುನರುತ್ಥಾನ ದಿನದವರೆಗೂ ಅವನಿಗೆ ಉತ್ತರ ಕೊಡಲಾಗದಂತಹವರನ್ನು ಪ್ರಾರ್ಥಿಸುವವನಿಗಿಂತಲೂ ಹೆಚ್ಚು ದಾರಿಗೆಟ್ಟವನು ಇನ್ನಾರಿರಬಹುದು.[1]

(ಅಲ್ ಅಹ್‌ಕಾಫ್:4-5)

لَوْ كَانَ فِيهِمَآ ءَالِهَةٌ إِلَّا ٱللَّهُ لَفَسَدَتَا ۚ فَسُبْحَٰنَ ٱللَّهِ رَبِّ ٱلْعَرْشِ
عَمَّا يَصِفُونَ ۝ لَا يُسْـَٔلُ عَمَّا يَفْعَلُ وَهُمْ يُسْـَٔلُونَ ـ (انبیاء ـ ۲۲ـ۲۳)

ಭೂಮಿ-ಆಕಾಶಗಳಲ್ಲಿ ಒಬ್ಬ ಅಲ್ಲಾಹನ ಹೊರತು ಇತರ ಇಲಾಹ್‌ಗಳು ಇರುತ್ತಿದ್ದರೆ ವಿಶ್ವ ವ್ಯವಸ್ಥೆಯು ಕೆಟ್ಟು ಹೋಗುತ್ತಿತ್ತು. ಆದುದರಿಂದ ವಿಶ್ವ ಸಿಂಹಾಸನದ ಒಡೆಯನಾಗಿರುವ ಅಲ್ಲಾಹನು ಇವರು ಹೊರಿಸುವ ಆರೋಪಗಳಿಂದ ಪರಿಶುದ್ಧನಾಗಿರುತ್ತಾನೆ. ಅವನು ತನ್ನ ಯಾವ ಕಾರ್ಯಕ್ಕೂ ಪ್ರಶ್ನಿಸಲ್ಪಡುವವನಲ್ಲ. ಉಳಿದವರೆಲ್ಲರೂ ಪ್ರಶ್ನಿಸಲ್ಪಡುವವರಾಗಿದ್ದಾರೆ.

(ಅಲ್ ಅಂಬಿಯಾ: 22-23)

مَا ٱتَّخَذَ ٱللَّهُ مِن وَلَدٍ وَمَا كَانَ مَعَهُۥ مِنْ إِلَٰهٍ ۚ إِذًا لَّذَهَبَ كُلُّ إِلَٰهٍۭ
بِمَا خَلَقَ وَلَعَلَا بَعْضُهُمْ عَلَىٰ بَعْضٍ ـ (المومنون ـ ۹۱)

ಅಲ್ಲಾಹನು ಯಾರನ್ನೂ ತನ್ನ ಪುತ್ರರನ್ನಾಗಿ ಮಾಡಿಕೊಂಡಿಲ್ಲ. ಅವನ ಜತೆ ಇನ್ನೊಬ್ಬ 'ಇಲಾಹ್' ಕೂಡ ಇಲ್ಲ. ಹಾಗಿರುತ್ತಿದ್ದರೆ ಪ್ರತಿಯೊಬ್ಬ 'ಇಲಾಹ್' ತನ್ನ ಸೃಷ್ಟಿಯನ್ನು ತೆಗೆದುಕೊಂಡು ಬೇರೆ ಹೋಗಿ ಬಿಡುತ್ತಿದ್ದನು. ತರುವಾಯ ಅವರು ಪರಸ್ಪರರ ಮೇಲೆ ಮುಗಿ ಬೀಳುತ್ತಿದ್ದರು.

(ಅಲ್ ಮೂಮಿನೂನ್: 91)

قُل لَّوْ كَانَ مَعَهُۥٓ ءَالِهَةٌ كَمَا يَقُولُونَ إِذًا لَّٱبْتَغَوْا۟ إِلَىٰ ذِى ٱلْعَرْشِ سَبِيلًا ۝
سُبْحَٰنَهُۥ وَتَعَٰلَىٰ عَمَّا يَقُولُونَ عُلُوًّا كَبِيرًا ـ (بنی اسرائیل ـ ۴۲ـ۴۳)

---

1. ಅರ್ಥಾತ್ ಅವನ ಪ್ರಾರ್ಥನೆಗೆ ಉತ್ತರವಾಗಿ ಅವರು ಏನೂ ಮಾಡಲಾರರು

ಸಂದೇಶವಾಹಕರೇ! ಇವರೊಡನೆ ಹೇಳಿರಿ- ಇವರು ಹೇಳುವ ಪ್ರಕಾರ ಅಲ್ಲಾಹನ ಜತೆ ಇತರ 'ಇಲಾಹ್'ಗಳು ಇರುತ್ತಿದ್ದರೆ ಅವರು ವಿಶ್ವ ಸಿಂಹಾಸನದ ಒಡೆಯನ ಆಧಿಪತ್ಯವನ್ನು ವಶಪಡಿಸಲು ಖಂಡಿತ ಪ್ರಯತ್ನಿಸುತ್ತಿದ್ದರು. ಇವರಾಡುತ್ತಿರುವ ಮಾತುಗಳಿಂದ ಅವನು ಪರಿಶುದ್ಧನೂ ಅತ್ಯುನ್ನತನೂ ಆಗಿರುತ್ತಾನೆ. (ಬನೀ ಇಸ್ರಾಈಲ್: 42:43)

ಈ ಎಲ್ಲ ವಚನಗಳಲ್ಲಿ ಆದಿಯಿಂದ ಅಂತ್ಯದವರೆಗೆ ಒಂದೇ ಕೇಂದ್ರೀಯ ವಿಚಾರ ಗೋಚರಿಸುತ್ತದೆ. ಅದೇನೆಂದರೆ 'ಇಲಾಹಿಯತ್' ಮತ್ತು ಆಧಿಪತ್ಯವು ಒಂದಕ್ಕೊಂದು ಅನಿವಾರ್ಯವಾಗಿವೆ. ತಮ್ಮ ಅರ್ಥ ಮತ್ತು ಸ್ಫೂರ್ತಿಯ ದೃಷ್ಟಿಯಲ್ಲಿ ಅವೆರಡೂ ಒಂದೇ ಆಗಿದೆ. ಆಧಿಪತ್ಯ ಇಲ್ಲದವನು 'ಇಲಾಹ್' ಆಗಲಾರನು. ಅವನು 'ಇಲಾಹ್' ಆಗುವಂತಿಲ್ಲ. ಆಧಿಪತ್ಯ ಹೊಂದಿದವನೇ 'ಇಲಾಹ್' ಆಗಬಲ್ಲನು. ಅವನೇ 'ಇಲಾಹ್' ಆಗಬೇಕು. ಏಕೆಂದರೆ ನಿಮ್ಮ ಎಷ್ಟೆಲ್ಲ ಬೇಡಿಕೆಗಳು 'ಇಲಾಹ್'ನನ್ನು ಅವಲಂಬಿಸಿವೆಯೋ ಅಥವಾ ಯಾವೆಲ್ಲ ಬೇಡಿಕೆಗಳಿಗಾಗಿ ಯಾರನ್ನಾದರೂ 'ಇಲಾಹ್' ಎಂದು ಒಪ್ಪಿಕೊಳ್ಳುವುದು ನಿಮಗೆ ಅಗತ್ಯವೆನಿಸುತ್ತದೋ ಆ ಪೈಕಿ ಯಾವ ಬೇಡಿಕೆಯನ್ನೂ ಆಧಿಪತ್ಯ ಇಲ್ಲದೆ ಪೂರೈಸಲಾಗದು. ಆದ್ದರಿಂದ ಆಧಿಪತ್ಯ ಇಲ್ಲದವನು 'ಇಲಾಹ್' ಆಗುವುದು ಅರ್ಥಹೀನ ಮತ್ತು ವಾಸ್ತವಕ್ಕೆ ವಿರುದ್ಧವಾಗಿದೆ. ಅವನಲ್ಲಿ ನಿರೀಕ್ಷೆ ಇಟ್ಟಿರುವುದು ನಿರರ್ಥಕವಾಗಿದೆ.

ಈ ಕೇಂದ್ರೀಯ ವಿಚಾರವನ್ನು ಹಿಡಿದು ಕುರ್‌ಆನ್ ಯಾವ ರೀತಿ ವಾದಿಸುತ್ತದೆ? ಅದರ ಸಂದರ್ಭ ಮತ್ತು ಪರಿಣಾಮಗಳು ಈ ಕೆಳಗಿನ ಕ್ರಮದಲ್ಲಿ ಚೆನ್ನಾಗಿ ಮನವರಿಕೆಯಾಗುತ್ತದೆ:

1) ಇಷ್ಟಾರ್ಥ ಸಿದ್ಧಿ, ಸಂಕಷ್ಟ ನಿವಾರಣೆ, ಆಶ್ರಯ ನೀಡುವುದು, ಸಹಾಯ-ಸಹಕಾರ, ಮೇಲ್ನೋಟ ಮತ್ತು ಸಂರಕ್ಷಣೆ ಹಾಗೂ ಪ್ರಾರ್ಥನೆಗಳಿಗೆ ಉತ್ತರಿಸುವುದನ್ನೂ ನೀವು ಸಾಮಾನ್ಯ ಕೆಲಸವೆಂದು ತಿಳಿದಿರುವಿರಿ. ವಾಸ್ತವದಲ್ಲಿ ಇದು ಸಾಮಾನ್ಯ ಕೆಲಸವಲ್ಲ. ಇವುಗಳ ಮೂಲವು ಸಂಪೂರ್ಣ ವಿಶ್ವ ವ್ಯವಸ್ಥೆಯ ಸೃಷ್ಟಿ ಮತ್ತು ವ್ಯವಸ್ಥೆಯ ಸಾಮರ್ಥ್ಯವನ್ನು ಹೋಗಿ ಸೇರುತ್ತದೆ. ನಿಮ್ಮ ಚಿಕ್ಕ ಚಿಕ್ಕ ಬೇಡಿಕೆಗಳು ಯಾವ ರೀತಿ ಪೂರ್ತಿಯಾಗುತ್ತವೆಂಬುದರ ಕುರಿತು ಯೋಚಿಸಿ ನೋಡಿ. ಭೂಮಿ-ಆಕಾಶಗಳ ಅತ್ಯದ್ಭುತ ಕಾರ್ಖಾನೆಗಳಲ್ಲಿ ಅಸಂಖ್ಯ ಕಾರಣಗಳ ಸಾಮೂಹಿಕ ಕ್ರಿಯೆಯಿಂದ ಹೊರತು ಇವುಗಳು ಪೂರ್ತಿಯಾಗುವುದು ಅಸಾಧ್ಯವೆಂದು ನಿಮಗೆ ಮನವರಿಕೆಯಾಗುವುದು. ನೀವು ಕುಡಿಯುವ ಒಂದು ಲೋಟೆ ನೀರು ಮತ್ತು ನೀವು ತಿನ್ನುವ ಗೋಧಿಯ ಒಂದು ಧಾನ್ಯವನ್ನು ನಿಮಗೆ ಒದಗಿಸಲು ಸೂರ್ಯ, ಭೂಮಿ, ಗಾಳಿ ಮತ್ತು ಸಮುದ್ರಗಳಿಗೆ ಎಷ್ಟು ಕೆಲಸ ಮಾಡಬೇಕಾಗುತ್ತದೆಂದು ದೇವನೇ ಬಲ್ಲ. ಅದರ ನಂತರವೇ ಈ ವಸ್ತುಗಳು ನಿಮಗೆ ಒದಗುತ್ತವೆ. ಆದ್ದರಿಂದ ನಿಮ್ಮ ಪ್ರಾರ್ಥನೆಗಳನ್ನು ಆಲಿಸಲು ಹಾಗೂ ನಿಮ್ಮ ಬಯಕೆಗಳನ್ನು ಈಡೇರಿಸಲು ಸಾಮಾನ್ಯ ಅಧಿಕಾರವೇನಲ್ಲ. ಭೂಮಿ-ಆಕಾಶಗಳನ್ನು ಸೃಷ್ಟಿಸಲಿಕ್ಕೆ ಬೇಕಾಗುವ ಅಧಿಕಾರವೇ ಬೇಕಾಗಿದೆ.

2) ಈ ಅಧಿಕಾರವು ಅವಿಭಾಜ್ಯವಾಗಿದೆ. ಸೃಷ್ಟಿಯ ಅಧಿಕಾರ ಒಬ್ಬನಲ್ಲಿ ಮತ್ತು ಆಹಾರ ಒದಗಿಸುವ ಅಧಿಕಾರ ಇನ್ನೊಬ್ಬನಲ್ಲಿ ಇರುವುದು ಸಾಧ್ಯವಿಲ್ಲ. ಸೂರ್ಯ ಒಬ್ಬನ ಅಧೀನ

ಮತ್ತು ಭೂಮಿ ಇನ್ನೊಬ್ಬನ ಅಧೀನವಾಗಿರಲು ಸಾಧ್ಯವಿಲ್ಲ. ಸೃಷ್ಟಿಯ ಕಾರ್ಯವು ಒಬ್ಬನ ಅಧಿಕಾರದಲ್ಲಿ, ರೋಗ ಮತ್ತು ಆರೋಗ್ಯ ಇನ್ನೊಬ್ಬನ ಅಧಿಕಾರದಲ್ಲಿ ಹಾಗೂ ಜೀವನ ಮತ್ತು ಮರಣ ಮತ್ತೊಬ್ಬನ ಅಧಿಕಾರದಲ್ಲಿರುವುದು ಸಾಧ್ಯವಿಲ್ಲ. ಹೀಗಿರುತ್ತಿದ್ದರೆ ಈ ವಿಶ್ವ ವ್ಯವಸ್ಥೆಯು ನಡೆಯುತ್ತಲೇ ಇರಲಿಲ್ಲ. ಆದ್ದರಿಂದ ಎಲ್ಲ ಅಧಿಕಾರ ಮತ್ತು ಆಧಿಪತ್ಯಗಳು ಒಬ್ಬನೇ ಕೇಂದ್ರೀಯ ಅಧಿಪತಿಯ ವಶದಲ್ಲಿರುವುದು ಅಗತ್ಯ. ವಿಶ್ವದ ವ್ಯವಸ್ಥೆಯು ಹಾಗೆ ಆಗಿರಬೇಕೆಂದು ಬಯಸುತ್ತದೆ. ಮತ್ತು ವಾಸ್ತವದಲ್ಲಿಯೂ ಹಾಗೆಯೇ ಇದೆ.

3) ಎಲ್ಲ ಅಧಿಕಾರಗಳೂ ಓರ್ವ ಅಧಿಪತಿಯ ಕೈಯಲ್ಲಿರುವಾಗ ಹಾಗೂ ಅಧಿಕಾರದಲ್ಲಿ ಇತರ ಯಾರದೇ ಕಿಂಚಿತ್ ಪಾಲೂ ಇಲ್ಲದಿರುವಾಗ 'ಉಲೂಹಿಯ್ಯತ್' ಕೂಡಾ ಸರ್ವ ಸಂಪೂರ್ಣವಾಗಿ ಅಧಿಪತಿಗೇ ಮೀಸಲಿರಬೇಕಾದುದು ಮತ್ತು ಅದರಲ್ಲಿ ಯಾರೂ ಭಾಗಿಗಳಿಲ್ಲದಿರುವುದು ಅನಿವಾರ್ಯವಾಗಿದೆ. ನಿಮ್ಮ ಫಿರ್ಯಾದಿಗಳನ್ನು ಆಲಿಸುವ ಶಕ್ತಿ, ಪ್ರಾರ್ಥನೆಗಳನ್ನು ಸ್ವೀಕರಿಸುವ ಶಕ್ತಿ, ಆಶ್ರಯ ನೀಡುವ ಶಕ್ತಿ, ಸಹಾಯ-ಸಹಕಾರ ಒದಗಿಸುವ ಶಕ್ತಿ, ಮೇಲ್ವಿಚಾರಣೆ ಮತ್ತು ಸಂರಕ್ಷಣೆಯ ಶಕ್ತಿ ಹಾಗೂ ಲಾಭ-ನಷ್ಟಗಳನ್ನುಂಟು ಮಾಡುವ ಶಕ್ತಿ ಕೂಡಾ ಇತರ ಯಾರಲ್ಲೂ ಇಲ್ಲ. ಆದ್ದರಿಂದ 'ಇಲಾಹ್'ನ ಯಾವ ತಾತ್ಪರ್ಯವು ನಿಮ್ಮ ಮನದಲ್ಲಿದ್ದರೂ ಅದರ ಪ್ರಕಾರ ಇತರ ಯಾವುದೇ 'ಇಲಾಹ್' ಇಲ್ಲ. ವಿಶ್ವದ ಅಧಿಪತಿಯ ಬಳಿ ನಿಕಟವರ್ತಿ ಎಂಬ ನೆಲೆಯಲ್ಲಿ ಶಿಫಾರಸ್ಸು ನಡೆಯುವಂತಹ ಹಾಗೂ ಏನಾದರೂ ಸಾಧಿಸಬಲ್ಲಂತಹ ಶಕ್ತಿಯುಳ್ಳವನೆಂಬ ಅರ್ಥದಲ್ಲಿಯೂ ಯಾವುದೇ 'ಇಲಾಹ್' ಇಲ್ಲ. ಅವನ ಸಾಮ್ರಾಜ್ಯದ ವ್ಯವಸ್ಥಾಪನೆಯಲ್ಲಿ ಯಾರಿಗೂ ಹಸ್ತಕ್ಷೇಪ ನಡೆಸುವ ಶಕ್ತಿಯಿಲ್ಲ. ಅವನ ವ್ಯವಹಾರಗಳಲ್ಲಿ ಯಾರೂ ಮಧ್ಯೆ ಪ್ರವೇಶಿಸುವಂತಿಲ್ಲ. ಶಿಫಾರಸ್ಸನ್ನು ಸ್ವೀಕರಿಸುವ ಅಥವಾ ಸ್ವೀಕರಿಸದಿರುವ ಅಧಿಕಾರ ಅವನಿಗೇ ಇದೆ. ತನ್ನ ಶಿಫಾರಸ್ಸು ಸ್ವೀಕರಿಸಲ್ಪಡಲೇಬೇಕೆಂದು ಅವನನ್ನು ಬಲವಂತ ಪಡಿಸುವ ಸಾಮರ್ಥ್ಯ ಯಾರ ಬಳಿಯೂ ಇಲ್ಲ.

4) ಈ ಪರಮಾಧಿಕಾರವು ಒಬ್ಬನಲ್ಲೇ ಇದೆ ಎಂದ ಮೇಲೆ ಆಜ್ಞಾಧಿಕಾರ ಮತ್ತು ಆಧಿಪತ್ಯದ ಎಷ್ಟೆಲ್ಲ ವಿಧಗಳಿವೆಯೋ ಅವೆಲ್ಲವೂ ಆ ಏಕೈಕ ಸಾರ್ವಭೌಮ ಶಕ್ತಿಯಲ್ಲೇ ಕೇಂದ್ರೀಕೃತವಾಗಬೇಕೆಂಬುದು ಮತ್ತು ಆಜ್ಞಾಧಿಕಾರದ ಯಾವ ಅಂಶವೂ ಇತರ ಯಾರಿಗೂ ವರ್ಗಾಯಿಸಲ್ಪಡದಿರಬೇಕೆಂಬುದು ಅದರ ಅನಿವಾರ್ಯ ಬೇಡಿಕೆಯಾಗಿದೆ. ಸೃಷ್ಟಿಕರ್ತನು ಅವನಾಗಿದ್ದು ಸೃಷ್ಟಿ ಕಾರ್ಯದಲ್ಲಿ ಯಾರೂ ಅವನ ಭಾಗೀದಾರರಿಲ್ಲದಿರುವಾಗ ಅನ್ನದಾತನು ಅವನಾಗಿದ್ದು ಆಹಾರ ಒದಗಿಸುವಲ್ಲಿ ಯಾರೂ ಅವನ ಪಾಲುದಾರರಿಲ್ಲದಿರುವಾಗ ಸಂಪೂರ್ಣ ವಿಶ್ವದ ವ್ಯವಸ್ಥಾಪಕನು ಅವನಾಗಿದ್ದು ಅದರ ವ್ಯವಸ್ಥೆಯಲ್ಲಿ ಯಾರೂ ಅವನಿಗೆ ಸಹಭಾಗಿಗಳಿಲ್ಲದಿರುವಾಗ ಖಂಡಿತವಾಗಿಯೂ ಆಜ್ಞಾಧಿಕಾರಿ-ಅಧಿಪತಿ ಮತ್ತು ಕಾನೂನು ನಿರ್ಮಾತೃ ಕೂಡಾ ಅವನೇ ಆಗಿರಬೇಕು. ಅಧಿಕಾರದ ಈ ಅಂಶದಲ್ಲೂ ಯಾರೂ ಅವನ ಭಾಗೀದಾರರಾಗಲು ಯಾವ ಕಾರಣವೂ ಇಲ್ಲ. ಅವನ ಸಾಮ್ರಾಜ್ಯದ ಸೀಮೆಯೊಳಗೆ ಇತರ ಯಾರೂ ಪ್ರಾರ್ಥನೆಗಳನ್ನು ಸ್ವೀಕರಿಸುವವರು, ಇಷ್ಟಾರ್ಥಗಳನ್ನು ಈಡೇರಿಸುವವರು ಮತ್ತು

ಆಶ್ರಯದಾತರು ಆಗುವುದು ತಪ್ಪಾಗಿರುವಂತೆ ಇತರ ಯಾರೂ ವ್ಯಕ್ತಿಗತ ಅಧಿಕಾರ ಹೊಂದಿದ ಆಜ್ಞಾಧಿಕಾರಿ, ಸಾರ್ವಭೌಮ ಅಧಿಪತಿ ಮತ್ತು ಕಾನೂನು ನಿರ್ಮಾತೃ ಆಗುವುದು ಕೂಡಾ ತಪ್ಪಾಗಿದೆ. ಸೃಷ್ಟಿ ಕಾರ್ಯ, ಅನ್ನದಾತತ್ವ, ಜೀವನ-ಮರಣ ನೀಡುವ ಶಕ್ತಿ, ಸೂರ್ಯ-ಚಂದ್ರರ ನಿಯಂತ್ರಣ, ರಾತ್ರಿ-ಹಗಲುಗಳ ಉಂಟು ಮಾಡುವಿಕೆ, ವಿಧಿ-ಅದೃಷ್ಟ, ಆಜ್ಞಾಧಿಕಾರ-ಆಧಿಪತ್ಯ, ಕಾನೂನು-ನಿಯಮಗಳ ನಿರ್ಮಾಣ ಎಲ್ಲವೂ ಒಂದೇ ಸಾರ್ವಭೌಮತ್ವ ಮತ್ತು ಪರಮಾಧಿಕಾರದ ವಿಭಿನ್ನ ಮಗ್ಗುಲುಗಳಾಗಿವೆ. ಈ ಸಾರ್ವಭೌಮತೆ ಮತ್ತು ಪರಮಾಧಿಕಾರವು ಅವಿಭಾಜ್ಯವಾಗಿದೆ. ಒಬ್ಬನು ಅಲ್ಲಾಹನ ಆಜ್ಞೆಯ ಅಂಗೀಕಾರವಿಲ್ಲದೆಯೇ ಯಾರದಾದರೂ ಆಜ್ಞೆಯನ್ನು ಪಾಲಿಸಲೇಬೇಕು ಎಂದು ಹೇಳಿದರೆ ಅವನು, ಅಲ್ಲಾಹನ ಹೊರತು ಇತರರಿಂದ ಪ್ರಾರ್ಥಿಸುವವನು ಮಾಡುವಂತಹುದೇ ಶಿರ್ಕ್(ದೇವ ಸಹಭಾಗಿತ್ವ) ಮಾಡುತ್ತಾನೆ. ನಾನು ಪ್ರಕೃತಿ ನಿಯಮಗಳಿಗೆ ಅತೀತವಾಗಿ ನಿಮ್ಮ ಸಂರಕ್ಷಣೆ, ಮೇಲ್ವಿಚಾರಣೆ ಮತ್ತು ಸಹಾಯ ಮಾಡಬಲ್ಲನೆಂದು ಯಾರಾದರೂ ಹೇಳಿದರೆ ಯಾವ ರೀತಿ ಅದು ದೇವತ್ವದ ಘೋಷಣೆ ಎನಿಸುವುದೋ ಅದೇ ರೀತಿ ರಾಜಕೀಯ ಅರ್ಥದಲ್ಲಿ ಸಾರ್ವಭೌಮ, ಪರಮಾಧಿಕಾರಿ ಮತ್ತು ಅಧಿಪತಿಯಾಗಿದ್ದೇನೆಂದು ಯಾರಾದರೂ ಹೇಳಿದರೆ ಅದು ಕೂಡಾ ದೇವತ್ವದ ಘೋಷಣೆ ಎನಿಸುತ್ತದೆ. ಆದ್ದರಿಂದಲೇ ಸೃಷ್ಟಿ, ವಸ್ತುಗಳ ಅದೃಷ್ಟ ಮತ್ತು ವಿಶ್ವ ವ್ಯವಸ್ಥಾಪನೆಯಲ್ಲಿ ಅಲ್ಲಾಹನಿಗೆ ಯಾರೂ ಸಹಭಾಗಿಗಳಿಲ್ಲ ಎಂದು ಹೇಳುವುದರ ಜತೆಗೆ لَهُ الْحُكْمُ وَلَهُ الْمُلْكُ (ಆಜ್ಞಾಧಿಕಾರವೂ ಅವನಿಗೇ ಇದೆ ಮತ್ತು ಆಧಿಪತ್ಯವೂ ಅವನಿಗೇ ಇದೆ) ಎಂದೂ لَمْ يَكُنْ لَّهُ شَرِيكٌ فِي الْمُلْكِ (ಆಧಿಪತ್ಯದಲ್ಲಿ ಅವನಿಗೆ ಯಾರೂ ಭಾಗೀದಾರರಿಲ್ಲ) ಎಂದೂ ಹೇಳಲಾಗಿದೆ.

ಇದರಿಂದ ಸ್ಪಷ್ಟವಾಗುವುದೇನೆಂದರೆ 'ಉಲೂಹಿಯ್ಯತ್'ನ ತಾತ್ಪರ್ಯದಲ್ಲಿ ಆಧಿಪತ್ಯ ಮತ್ತು ಆಜ್ಞಾಧಿಕಾರವೂ ಸೇರಿದೆ ಹಾಗೂ 'ಇಲಾಹ್'ನ ಏಕತ್ವಕ್ಕೆ ಈ ಅರ್ಥದಲ್ಲೂ ಅವನ ಜತೆ ಯಾರದೇ ಸಹಭಾಗಿತ್ವವನ್ನು ಒಪ್ಪದಿರುವುದು ಕಡ್ಡಾಯವಾಗಿದೆ. ಇದನ್ನು ಇನ್ನಷ್ಟು ಸ್ಪಷ್ಟವಾಗಿ ಈ ಕೆಳಗಿನ ಆಯತ್‌ಗಳಲ್ಲಿ ವಿವರಿಸಲಾಗಿದೆ.

قُلِ اللّٰهُمَّ مَالِكَ الْمُلْكِ تُؤْتِي الْمُلْكَ مَنْ تَشَاءُ وَتَنْزِعُ الْمُلْكَ
مِمَّنْ تَشَاءُ وَتُعِزُّ مَنْ تَشَاءُ وَتُذِلُّ مَنْ تَشَاءُ (آل عمران-٢٦)

ಹೇಳಿರಿ- ಓ ಅಲ್ಲಾಹ್! ಸಕಲ ವಿಶ್ವ ಆಧಿಪತ್ಯದ ಒಡೆಯನೇ ನೀನು ನಿನಗಿಷ್ಟ ಬಂದವರಿಗೆ ಆಡಳಿತಾಧಿಕಾರವನ್ನು ನೀಡುವೆ ಮತ್ತು ನಿನಗಿಷ್ಟ ಬಂದವರಿಂದ ಅದನ್ನು ಕಸಿದು ಕೊಳ್ಳುವೆ. ನಿನಗಿಷ್ಟ ಬಂದವರಿಗೆ ಪ್ರತಿಷ್ಠೆಯನ್ನೂ ದಯಪಾಲಿಸುವೆ ಮತ್ತು ನಿನಗಿಷ್ಟ ಬಂದವರನ್ನು ಅವಮಾನಪಡಿಸುವೆ. (ಆಲಿ ಇಮ್ರಾನ್: 26)

فَتَعَالَى اللّٰهُ الْمَلِكُ الْحَقُّ ۚ لَا إِلٰهَ إِلَّا هُوَ رَبُّ الْعَرْشِ الْكَرِيمِ

(المؤمنون - ١١٦)

ಅಲ್ಲಾಹನು ಸರ್ವೋನ್ನತನು. ಯಥಾರ್ಥ ಸಾರ್ವಭೌಮನು. ಅವನ ಹೊರತು ಅನ್ಯ 'ಇಲಾಹ್' ಇಲ್ಲ. ಮಹಾ ವಿಶ್ವ ಸಿಂಹಾಸನದ ಒಡೆಯ. (ಅಲ್ ಮೂಮಿನೂನ್: 116)

قُلْ أَعُوذُ بِرَبِّ النَّاسِ ۝ مَلِكِ النَّاسِ ۝ إِلٰهِ النَّاسِ ۝ (الناس ١-٣)

ಹೇಳಿರಿ- ನಾನು ಅಭಯ ಯಾಚಿಸುತ್ತೇನೆ. ಮಾನವರ 'ರಬ್ಬ್'ನಿಂದ, ಮಾನವರ ಸಾಮ್ರಾಟನಿಂದ, ಮಾನವರ 'ಇಲಾಹ್'ನಿಂದ (ಅನ್ನಾಸ್: 1-3)

يَوْمَ هُم بَارِزُونَ ۖ لَا يَخْفَىٰ عَلَى اللّٰهِ مِنْهُمْ شَيْءٌ ۚ لِّمَنِ الْمُلْكُ الْيَوْمَ ۖ لِلّٰهِ الْوَاحِدِ الْقَهَّارِ ۝ (المؤمن - ١٦)

ಎಲ್ಲವೂ ಬಹಿರಂಗವಾಗಿ ಬಿಡುವ ಆ ದಿನ ಅವರ ಯಾವ ವಿಷಯವೂ ಅಲ್ಲಾಹನಿಂದ ಅಡಗಿರಲಾರದು. ಇಂದು ಆಧಿಪತ್ಯ ಯಾರದು ಎಂದು ಆ ದಿನ ಕೂಗಿ ಕೇಳಲಾಗುವುದು. ಏಕೈಕನೂ ಅಜೇಯನೂ ಆದ ಅಲ್ಲಾಹನದು ಎಂದಲ್ಲದೆ ಬೇರಾವ ಉತ್ತರವೂ ಇರಲಾರದು. (ಅಲ್ ಮೂಮಿನ್: 16)

ಈ ಆಯತ್‌ನ ಅತ್ಯುತ್ತಮ ವ್ಯಾಖ್ಯಾನ ಇಮಾಮ್ ಅಹ್ಮದ್ ಅವರು ಉದ್ಧರಿಸಿದ ಮತ್ತು ಹ. ಅಬ್ದುಲ್ಲಾ ಬಿನ್ ಉಮರ್(ರ) ವರದಿ ಮಾಡಿದ ಈ ಕೆಳಗಿನ ಹದೀಸ್ ಆಗಿದೆ:

ಪ್ರವಾದಿ(ಸ) ಖುತ್‌ಬಾ (ಪ್ರವಚನ) ನೀಡುತ್ತಾ ಹೇಳಿದರು: ಅಲ್ಲಾಹನು ಭೂಮಿ-ಆಕಾಶಗಳನ್ನು ತನ್ನ ಮುಷ್ಠಿಯಲ್ಲಿ ಹಿಡಿದು ಹೇಳುವನು: 'ನಾನು ಸಾಮ್ರಾಟನಾಗಿದ್ದೇನೆ. ನಾನು ಸರ್ವ ಸಮರ್ಥನಾಗಿದ್ದೇನೆ. ನಾನು ಅತ್ಯಂತ ಗರ್ವಿಯಾಗಿದ್ದೇನೆ. ಭೂಮಿಯಲ್ಲಿ ಸಾಮ್ರಾಟರಾಗಿ ಮೆರೆಯುತ್ತಿದ್ದವರು ಎಲ್ಲಿದ್ದಾರೆ? ಸರ್ವ ಸಮರ್ಥರೂ ಗರ್ವಿಷ್ಠರೂ ಆಗಿ ಮೆರೆಯುತ್ತಿದ್ದವರು ಎಲ್ಲಿದ್ದಾರೆ?" ಹ. ಅಬ್ದುಲ್ಲಾಹ್ ಬಿನ್ ಉಮರ್(ರ) ಹೇಳುತ್ತಾರೆ-ಪ್ರವಾದಿ(ಸ) ತಮ್ಮ ಪ್ರವಚನದಲ್ಲಿ ಈ ಪದಗಳನ್ನು ಹೇಳುವಾಗ ಅವರು ಎಷ್ಟೊಂದು ಕಂಪಿಸುತ್ತಿದ್ದರೆಂದರೆ ಅವರು ವೇದಿಕೆಯಿಂದ ಬಿದ್ದು ಬಿಡುವರೋ ಎಂದು ನಮಗೆ ಭಯವಾಗುತ್ತಿತ್ತು.

ರಬ್ಬ್

ಶಬ್ದ ಕೋಶಾರ್ಥ

ಈ ಪದದ ಮೂಲವು ر ب ب ಆಗಿದೆ. ಅದರ ಪ್ರಾಥಮಿಕ ಮತ್ತು ಮೂಲ ತಾತ್ಪರ್ಯ ಪರಿಪಾಲನೆ ಎಂದಾಗಿದೆ. ಅದರಿಂದಲೇ ಸ್ವಾಧೀನ, ಮೇಲ್ನೋಟ, ಸುಧಾರಣೆ ಮತ್ತು ಪೂರ್ಣಗೊಳಿಸುವಿಕೆ ಇತ್ಯಾದಿ ಅರ್ಥಗಳೂ ಉಂಟಾದುವು. ಈ ಆಧಾರದಲ್ಲೇ ಮೇಲ್ಮೆ, ನಾಯಕತ್ವ, ಒಡೆತನ ಮತ್ತು ಯಜಮಾನಿಕೆ ಎಂಬ ತಾತ್ಪರ್ಯಗಳೂ ಹುಟ್ಟಿಕೊಂಡುವು. ನಿಘಂಟಿನಲ್ಲಿ ಅದರ ಉಪಯೋಗದ ಕೆಲವು ಉದಾಹರಣೆಗಳು ಹೀಗಿವೆ:

1. ಪರಿಪಾಲಿಸುವುದು, ಪೋಷಣೆ ಮಾಡುವುದು, ಬೆಳೆಸುವುದು.

ಉದಾ: ربيب ಎಂದು ಘೋಷಿಸಲ್ಪಟ್ಟ ಹುಡುಗನಿಗೆ ಮತ್ತು ربيبة ಪೋಷಿಸಲ್ಪಟ್ಟ ಹುಡುಗಿಗೆ ಹೇಳುತ್ತಾರೆ. ಮಲ ತಂದೆಯ ಮನೆಯಲ್ಲಿ ಬೆಳೆದ ಮಗುವನ್ನು ಮತ್ತು ಸಾಕು ತಾಯಿಗೂ ربيبة ಎಂದು ಹೇಳುತ್ತಾರೆ. ಮಲತಾಯಿಯನ್ನು رابة ಎನ್ನುತ್ತಾರೆ. ಏಕೆಂದರೆ ಆಕೆ ತಾಯಿಯಾಗಿರುವುದಿಲ್ಲ. ಆದರೆ ಮಗುವನ್ನು ಸಾಕುತ್ತಾಳೆ. ಈ ಕಾರಣದಿಂದಲೇ ಮಲ ತಂದೆಗೆ راب ಎನ್ನುತ್ತಾರೆ. ಸುರಕ್ಷಿತವಾಗಿಟ್ಟಿರುವ ಔಷಧಿಯನ್ನು مرب ಅಥವಾ مربى ಎಂದು ಕರೆಯುತ್ತಾರೆ. ربّ يربّ ربًّا ಎಂಬುದರ ಅರ್ಥ ಹೆಚ್ಚಿಸು, ಬೆಳೆಸು ಮತ್ತು ಪರಿಪೂರ್ಣಗೊಳಿಸು ಎಂದಾಗಿದೆ. ربّ النعمة ಎಂದರೆ ಉಪಕಾರದಲ್ಲಿ ಹೆಚ್ಚಳ ಮಾಡಿದನು ಅಥವಾ ಅತ್ಯಧಿಕ ಉಪಕಾರ ಮಾಡಿದನು ಎಂದಾಗುತ್ತದೆ.

2. ಒಟ್ಟುಗೂಡಿಸುವುದು, ಶೇಖರಿಸುವುದು, ಒದಗಿಸುವುದು. ಉದಾ: فلان يربّ الناس ಎಂದರೆ ಒಬ್ಬ ವ್ಯಕ್ತಿ ಜನರನ್ನು ಒಟ್ಟುಗೂಡಿಸಿದನು ಅಥವಾ ಜನರು ಅವನಲ್ಲಿ ಒಟ್ಟುಗೂಡುತ್ತಾರೆ. ಒಟ್ಟುಗೂಡುವ ಸ್ಥಳವನ್ನು مرب ಎನ್ನುತ್ತಾರೆ. ಶೇಖರಿಸಲ್ಪಡುವುದನ್ನು ಮತ್ತು ಒದಗುವುದನ್ನು ಎನ್ನಲಾಗುತ್ತದೆ.

3. ಮೇಲ್ನೋಟ ಮಾಡುವುದು, ಸುಧಾರಣೆ ಮಾಡುವುದು, ಪರಿಪಾಲನೆ ಮತ್ತು ಪೋಷಣೆ ಮಾಡುವುದು. ಉದಾ: ربّ ضيعته ಎಂಬುದರ ಅರ್ಥ ಒಬ್ಬ ವ್ಯಕ್ತಿ ತನ್ನ ಸ್ವತ್ತಿನ ಪರಿಪಾಲನೆ ಮತ್ತು ಮೇಲ್ನೋಟ ಮಾಡಿದನು ಎಂದಾಗುತ್ತದೆ. ಸಫ್ವಾನ್ ಅಬೂ ಸುಫ್ಯಾನ್‌ಗೆ ಹೇಳಿದ್ದನು.

'لان يربني رجل من قريش أحب الى من ان يربني رجل من هوازن'

ಅರ್ಥಾತ್: ಕುರೈಶರ ಪೈಕಿ ಯಾರಾದರೂ ನನ್ನ ربوبيت ಪರಿಪಾಲನೆ ವಹಿಸುವುದು ಹವಾಝಿನ್‌ರ ಪೈಕಿ ಯಾರಾದರೂ ಹಾಗೆ ಮಾಡುವುದಕ್ಕಿಂತ ನನಗೆ ಹೆಚ್ಚು ಪ್ರಿಯವಾಗಿದೆ..

ಅಲ್‌ಕಮ ಬಿನ್ ಉಬೈದಃ ಅವರ ಒಂದು ಕವಿತೆಯ ಸ್ಲಾಲು ಹೀಗಿದೆ.

فكنت امرأ افضت اليك ربابتى

وقبلك ربتنى فضعت ربوب

ಅರ್ಥಾತ್: ನಿನಗಿಂತ ಮುಂಚೆ ನನ್ನ مربی (ಪರಿಪಾಲಕ) ಆಗಿದ್ದ ಧನಿಕನು ನನ್ನ ಮೇಲ್ನೋಟ ಮತ್ತು ಸುಧಾರಣೆಯನ್ನು ಮಾಡಲಿಲ್ಲ. ಕೊನೆಗೆ ಈಗ ನನ್ನ كفالت وربابت ಪೋಷಣೆ ಮತ್ತು ಪರಿಪಾಲನೆ ನಿನ್ನ ಕೈಗೆ ಬಂತು.

ಫರ್ಝದ ಹೀಗೆ ಹೇಳಿರುವನು:

كانوا كسائلة حمقاء اذا حقنت

سلاءها فى اديم غير مربوب

ಈ ಕವನದ اديم غير مربوب ಎಂದರೆ ಗಳಿಸಿರದ ಚರ್ಮ, ಹದಮಾಡಿ ಸರಿಪಡಿಸದ ಚರ್ಮ ಎಂದಾಗಿದೆ. فلان يرب صنعه عند فلان ಎಂಬುದರ ಅರ್ಥ ಒಬ್ಬ ವ್ಯಕ್ತಿ ಇನ್ನೊಬ್ಬನ ಬಳಿ ತನ್ನ ವೃತ್ತಿಯ ಕೆಲಸ ಮಾಡುತ್ತಾನೆ ಅಥವಾ ಅವನಿಂದ ವೃತ್ತಿಯ ತರಬೇತಿ ಪಡೆಯುತ್ತಾನೆ ಎಂದಾಗುತ್ತದೆ.

4. ಮೇಲ್ಮೆ, ಮೇಲುಗೈ, ನಾಯಕತ್ವ, ಅಧಿಕಾರ ಚಲಾಯಿಸುವುದು, ಉಪಯೋಗ ಮಾಡುವುದು. ಉದಾ: قدرب فلان قومه ಅರ್ಥಾತ್: ಒಬ್ಬನು ತನ್ನ ಜನಾಂಗವನ್ನು ತನ್ನ ಅಧೀನಗೊಳಿಸಿದನು. ربيت القوم ಅರ್ಥಾತ್: ನಾನು ಜನಾಂಗದ ಮೇಲೆ ಅಧಿಕಾರ ಚಲಾಯಿಸಿದೆ. ಮತ್ತು ಮೇಲುಗೈ ಸಾಧಿಸಿದೆ.

ಉಬೈದ್ ಬಿನ್ ರಬೀಅ ಹೀಗೆ ಹೇಳಿರುವನು:

واهلكن يوما رب كندة وابنه

ورب معد بين خبت وعرعر

ಇಲ್ಲಿ رب كندة ಎಂದರೆ ಕುಂದಾದ ಸರದಾರ. ಅರ್ಥಾತ್: ಯಾರ ಅಧಿಕಾರ ಆ ಗೋತ್ರದ ಮೇಲೆ ಇದೆಯೋ ಅವನು.

ನಾಬಿಗಾದೀಬಾನಿಯ ಕವನ ಹೀಗಿದೆ :

تخب الى النعمان حتى تنا له   فدى لك من رب تليدى وطارفى

5. ಒಡೆಯನಾಗಿರು. ಉದಾ: ಒಬ್ಬ ವ್ಯಕ್ತಿ ಪ್ರವಾದಿ(ಸ) ಅವರಲ್ಲಿ ಹೀಗೆ ವಿಚಾರಿಸಿದನೆಂದು ಹದೀಸ್‌ನಲ್ಲಿ ವರದಿಯಾಗಿದೆ: ارب غنم ام رب ابل؟ ನೀನು ಆಡುಗಳ ಒಡೆಯನೋ ಅಥವಾ ಒಂಟೆಗಳ ಒಡೆಯನೋ? ಈ ಅರ್ಥದಲ್ಲಿ ಮನೆಯ ಒಡೆಯನಿಗೆ

رب الدار ಒಂಟೆಯ ಒಡೆಯನಿಗೆ رب الناقة ಮತ್ತು ಸೊತ್ತಿನ ಒಡೆಯನಿಗೆ رب الضيعة ಎಂದು ಹೇಳುತ್ತಾರೆ.

رب ಎಂಬ ಪದವನ್ನು ಯಜಮಾನನ ಅರ್ಥದಲ್ಲಿ عبد ಎಂಬ ಪದಕ್ಕೆ (ಗುಲಾಮ) ವಿರೋಧ ಪದವಾಗಿಯೂ ಬಳಸಲಾಗುತ್ತದೆ. رب ಎಂಬ ಪದವನ್ನು ಕೇವಲ ಪರಿಪಾಲಕ ಎಂಬ ಅರ್ಥಕ್ಕೆ ತಪ್ಪಾಗಿ ಸೀಮಿತಗೊಳಿಸಲಾಗಿದೆ. ربوبية 'ರುಬೂಬಿಯತ್'ನ ವ್ಯಾಖ್ಯಾನದಲ್ಲಿ

هو انشاء الشيء حالا فحالا الى حد التمام

ಒಂದು ವಸ್ತುವನ್ನು ಹಂತ ಹಂತವಾಗಿ ಅಭಿವೃದ್ಧಿಗೊಳಿಸಿ ಪೂರ್ಣತೆಯ ಮಟ್ಟಕ್ಕೆ ತಲುಪಿಸುವುದು ಎಂಬ ಮಾತು ಚಾಲ್ತಿಯಲ್ಲಿದೆ. ಆದರೆ ಇದು ಆ ಶಬ್ದದ ವಿಶಾಲ ಅರ್ಥಗಳ ಪೈಕಿ ಕೇವಲ ಒಂದು ಅರ್ಥವಾಗಿದೆ. ಅದರ ಸಂಪೂರ್ಣ ವೈಶಾಲ್ಯವನ್ನು ಅವಲೋಕಿಸಿದಾಗ ಈ ಪದವು ಈ ಕೆಳಗಿನ ತಾತ್ಪರ್ಯಗಳನ್ನು ಹೊಂದಿದೆ ಎಂಬುದು ವ್ಯಕ್ತವಾಗುತ್ತದೆ:

1. ಪರಿಪಾಲನೆ ಮಾಡುವವನು, ಆವಶ್ಯಕತೆಗಳನ್ನು ಈಡೇರಿಸುವವನು, ತರಬೇತುಗೊಳಿಸುವವನು, ಬೆಳೆಸುವವನು.

2. ಪೋಷಣೆ ಮಾಡುವವನು, ಮೇಲ್ನೋಟ ವಹಿಸುವವನು, ಮೇಲ್ವಿಚಾರಣೆ ನಡೆಸುವವನು, ಸುಧಾರಣೆಯ ಹೊಣೆ ವಹಿಸಿದವನು.

3. ವಿಭಿನ್ನ ಜನರು ಒಟ್ಟುಗೂಡುವಂತಹ ಕೇಂದ್ರೀಯ ನೆಲೆಯುಳ್ಳವನು.

4. ಅನುಸರಿಸಲ್ಪಡುವವರಲ್ಲಿ ಅಗ್ರಗಣ್ಯನು, ಸರದಾರ, ಅಧಿಕಾರ ಉಳ್ಳವನು, ಯಾರ ಆಜ್ಞೆಯು ಜಾರಿಗೊಳ್ಳುತ್ತದೋ, ಯಾರ ಮೇಲ್ಮೆಯನ್ನು ಅಂಗೀಕರಿಸಲಾಗುತ್ತದೋ ಮತ್ತು ಯಾರಿಗೆ ಮನ ಬಂದಂತೆ ಹಸ್ತಕ್ಷೇಪಿಸುವ ಅಧಿಕಾರವಿದೆಯೋ ಅವನು.

5. ಒಡೆಯ, ಯಜಮಾನ

ಕುರ್‌ಆನ್‌ನಲ್ಲಿ 'ರಬ್ಬ್' ಎಂಬ ಪದದ ಬಳಕೆಗಳು

ಈ ಎಲ್ಲ ಅರ್ಥಗಳಲ್ಲಿಯೂ ಪವಿತ್ರ ಕುರ್‌ಆನ್‌ನಲ್ಲಿ ಈ ಪದವನ್ನು ಬಳಸಲಾಗಿದೆ. ಕೆಲವೆಡೆ ಅದರ ಒಂದೆರಡು ಅರ್ಥ ಉದ್ದೇಶವಾಗಿದ್ದರೆ ಕೆಲವೆಡೆ ಅದಕ್ಕಿಂತಲೂ ಹೆಚ್ಚಿನ ಅರ್ಥದಲ್ಲಿ ಅದನ್ನು ಬಳಸಲಾಗಿದೆ. ಕೆಲವೆಡೆ ಈ ಐದೂ ಅರ್ಥ ಅದರಲ್ಲಿ ಅಡಕವಾಗಿದೆ. ಈ ವಿಷಯವನ್ನು ಪವಿತ್ರ ಕುರ್‌ಆನ್‌ನ ಆಯತ್‌ಗಳಿಂದ ಬೇರೆ ಬೇರೆ ಉದಾಹರಣೆಗನ್ನು ನೀಡಿ ಸ್ಪಷ್ಟಪಡಿಸುವೆವು.

1. ಮೊದಲನೆಯ ಅರ್ಥದಲ್ಲಿ

قَالَ مَعَاذَ اللهِ إِنَّهُ رَبِّي أَحْسَنَ مَثْوَايَ (يوسف-٢٣)

ಆಗ ಯೂಸುಫರು 'ಅಲ್ಲಾಹನು ರಕ್ಷಿಸಲಿ. ಅವನು ನನ್ನ 'ರಬ್ಬ್'* ಆತನು ನನಗೆ ಉತ್ತಮ ಸ್ಥಾನವನ್ನು ದಯಪಾಲಿಸಿದ್ದಾನೆ. (ಸೂರಃ ಯೂಸುಫ್ : 23)

2. ಎರಡನೆಯ ಅರ್ಥದಲ್ಲಿ -ಆದರೆ ಅದರಲ್ಲಿ ಮೊದಲನೆಯ ಅರ್ಥದ ಕಲ್ಪನೆಯೂ ಸೇರಿಕೊಂಡಿದೆ

فَإِنَّهُمْ عَدُوٌّ لِّي إِلَّا رَبَّ الْعَالَمِينَ ۝ الَّذِي خَلَقَنِي فَهُوَ يَهْدِينِ ۝ وَالَّذِي
هُوَ يُطْعِمُنِي وَيَسْقِينِ ۝ وَإِذَا مَرِضْتُ فَهُوَ يَشْفِينِ ۝ (الشعراء ۷۷-۸۰)

ನಿಮ್ಮ ಈ ಆರಾಧ್ಯರುಗಳೆಲ್ಲವೂ ನನ್ನ ಶತ್ರುಗಳು. ಸರ್ವಲೋಕಗಳ 'ರಬ್ಬ್'ನ ಹೊರತು. ಅವನು ನನ್ನನ್ನು ಸೃಷ್ಟಿಸಿದನು ಮತ್ತು ಅವನೇ ನನಗೆ ಮಾರ್ಗದರ್ಶನ ನೀಡುತ್ತಾನೆ. ಅವನು ನನಗೆ ಉಣಿಸುತ್ತಾನೆ ಮತ್ತು ಕುಡಿಸುತ್ತಾನೆ. ನಾನು ಕಾಯಿಲೆ ಬಿದ್ದಾಗ ಅವನೇ ನನ್ನನ್ನು ಗುಣಪಡಿಸುತ್ತಾನೆ. (ಅಶ್ಶುಅರಾ: 77-80)

وَمَا بِكُم مِّن نِّعْمَةٍ فَمِنَ اللَّهِ ثُمَّ إِذَا مَسَّكُمُ الضُّرُّ فَإِلَيْهِ تَجْأَرُونَ ۝
ثُمَّ إِذَا كَشَفَ الضُّرَّ عَنكُمْ إِذَا فَرِيقٌ مِّنكُم بِرَبِّهِمْ يُشْرِكُونَ ۝

(النحل ۵۳-۵۴)

ನಿಮಗೆ ಒದಗಿರುವ ಎಲ್ಲ ಅನುಗ್ರಹಗಳು ಅಲ್ಲಾಹನ ಕಡೆಯಿಂದಲೇ ಆಗಿರುತ್ತವೆ. ನಿಮಗೆ ಹಾನಿ ತಟ್ಟಿದಾಗ ನೀವು ಅವನೊಡನೆಯೇ ಮೊರೆಯಿಡುತ್ತೀರಿ. ಆದರೆ ಅಲ್ಲಾಹನು ಆ ಸಂಕಷ್ಟವನ್ನು ನೀಗಿಸಿದಾಗ ತಟ್ಟನೆ ನಿಮ್ಮಲ್ಲೊಂದು ವಿಭಾಗ ತಮ್ಮ 'ರಬ್ಬ್'ನೊಂದಿಗೆ ಇತರರನ್ನು (ಆ ಅನುಗ್ರಹದ ಕೊಡುಗೆ ಮತ್ತು ಸಂಕಷ್ಟ ನಿವಾರಣೆಯಲ್ಲಿ) ಸಹಭಾಗಿಗಳನ್ನಾಗಿ ಮಾಡತೊಡಗುತ್ತದೆ. (ಅನ್ನಹ್ಲ್: 53-54)

قُلْ أَغَيْرَ اللَّهِ أَبْغِي رَبًّا وَهُوَ رَبُّ كُلِّ شَيْءٍ ط (انعام ۱۶۴)

ಹೇಳಿರಿ: ಅಲ್ಲಾಹನೇ ಸಕಲ ವಸ್ತುಗಳ 'ರಬ್ಬ್' ಆಗಿರುವಾಗ, ನಾನು ಅವನ ಹೊರತು ಇತರ 'ರಬ್ಬ್' ಅನ್ನು ಅರಸಬೇಕೇ? (ಅಲ್ ಅನ್‌ಆಮ್: 164)

رَّبُّ الْمَشْرِقِ وَالْمَغْرِبِ لَا إِلَٰهَ إِلَّا هُوَ فَاتَّخِذْهُ وَكِيلًا ۝ (المزمل ۹)

ಅವನು ಪೂರ್ವ ಪಶ್ಚಿಮಗಳ 'ರಬ್ಬ್' ಆಗಿರುವನು. ಅವನ ಹೊರತು ಇನ್ನಾವ ಆರಾಧ್ಯನೂ ಇಲ್ಲ. ಆದುದರಿಂದ ಅವನನ್ನೇ ನಿಮ್ಮ ಕಾರ್ಯಸಾಧಕನಾಗಿ ಮಾಡಿಕೊಳ್ಳಿರಿ. (ಅಲ್ ಮುಝ್ಝಮ್ಮಿಲ್:9)

3. ಮೂರನೆಯ ಅರ್ಥದಲ್ಲಿ

هُوَ رَبُّكُمْ وَإِلَيْهِ تُرْجَعُونَ ○ (هود-٣٤)

ಅವನೇ ನಿಮ್ಮ 'ರಬ್ಬ್' ಆಗಿರುವನು ಮತ್ತು ಅವನಲ್ಲಿಗೇ ನೀವು ಮರಳಲಿಕ್ಕಿದ್ದೀರಿ. (ಹೂದ್:34)

ثُمَّ إِلَىٰ رَبِّكُمْ مَرْجِعُكُمْ - (الزمر-٧)

ಕೊನೆಗೆ ನಿಮಗೆಲ್ಲರಿಗೂ ನಿಮ್ಮ 'ರಬ್ಬ್'ನ ಕಡೆಗೇ ಮರಳಲಿಕ್ಕಿದೆ. (ಅಝ್ಝುಮರ್:7)

قُلْ يَجْمَعُ بَيْنَنَا رَبُّنَا - (سبا-٢٦)

ಹೇಳಿರಿ- ನಮ್ಮ 'ರಬ್ಬ್' ನಮ್ಮನ್ನು ಒಟ್ಟುಗೂಡಿಸುವನು. (ಸಬಾ :26)

وَمَا مِنْ دَابَّةٍ فِي الْأَرْضِ وَلَا طَائِرٍ يَطِيرُ بِجَنَاحَيْهِ إِلَّا أُمَمٌ
أَمْثَالُكُمْ ۚ مَا فَرَّطْنَا فِي الْكِتَابِ مِنْ شَيْءٍ ثُمَّ إِلَىٰ رَبِّهِمْ يُحْشَرُونَ
(الانعام-٣٨)

ಭೂಮಿಯ ಮೇಲೆ ಚಲಿಸುವ ಪ್ರಾಣಿಗಳನ್ನೂ ಗಾಳಿಯಲ್ಲಿ ರೆಕ್ಕೆಗಳಿಂದ ಹಾರಾಡುವ ಪಕ್ಷಿಗಳನ್ನೂ ನೋಡಿಕೊಳ್ಳಿರಿ. ಇವೆಲ್ಲವೂ ನಿಮ್ಮಂತೆಯೇ ಇರುವ ವರ್ಗಗಳು. ನಾವು ಅವುಗಳ ವಿಧಿ ಲಿಖಿತದಲ್ಲೇನೂ ಲೋಪಗೊಳಿಸಲಿಲ್ಲ. ಅನಂತರ ಇವೆಲ್ಲ ತಮ್ಮ 'ರಬ್ಬ್'ನ ಕಡೆಗೆ ಒಟ್ಟುಗೂಡಿಸಲ್ಪಡುತ್ತವೆ. (ಅಲ್ ಅನ್‌ಆಮ್:38)

وَنُفِخَ فِي الصُّورِ فَإِذَا هُمْ مِنَ الْأَجْدَاثِ إِلَىٰ رَبِّهِمْ يَنْسِلُونَ ○
(يٰس-٥١)

ಅನಂತರ ಒಂದು ಕಹಳೆಯನ್ನೂದಲಾಗುವುದು. ಆಗ ಇವರು ಒಮ್ಮೆಲೆ ತಮ್ಮ 'ರಬ್ಬ್'ನ ಮುಂದೆ ಹಾಜರಾಗಲಿಕ್ಕಾಗಿ ತಮ್ಮ ಸಮಾಧಿಗಳಿಂದ ಹೊರಟು ಬರುವರು. (ಯಾಸೀನ್:51)

4. ನಾಲ್ಕನೆಯ ಅರ್ಥದಲ್ಲಿ -ಆದರೆ ಅದರಲ್ಲಿ ಮೂರನೆಯ ಅರ್ಥದ ಕಲ್ಪನೆಯೂ ಸೇರಿಕೊಂಡಿದೆ

اتَّخَذُوا أَحْبَارَهُمْ وَرُهْبَانَهُمْ أَرْبَابًا مِنْ دُونِ اللَّهِ -
(التوبة-٣١)

ಅವರು ಅಲ್ಲಾಹನ ಹೊರತು ತಮ್ಮ ವಿದ್ವಾಂಸರನ್ನೂ ಸಂತರನ್ನೂ ತಮ್ಮ 'ರಬ್ಬ್'ಗಳಾಗಿ ಮಾಡಿಕೊಂಡಿರುತ್ತಾರೆ. (ಅತ್ತೌಬಃ: 31)

وَلَا يَتَّخِذَ بَعْضُنَا بَعْضًا أَرْبَابًا مِّن دُونِ اللَّهِ - (آل عمران - ٦٤)

"ಮತ್ತು ನಮ್ಮ ಪೈಕಿ ಯಾರೂ ಅಲ್ಲಾಹನ ಹೊರತು ಇತರ ಯಾರನ್ನೂ ತನ್ನ 'ರಬ್ಬ್'ಗಳಾಗಿರಿಸದಿರೋಣ." (ಆಲಿ ಇಮ್ರಾನ್: 64)

ಈ ಎರಡೂ ಆಯತ್‌ಗಳಲ್ಲಿ 'ಅರ್‌ಬಾಬ್' ಎಂದರೆ ಜನಾಂಗಗಳು ಮತ್ತು ವರ್ಗಗಳು ಯಾರನ್ನಾದರೂ ತಮ್ಮ ನಿರಂಕುಶ ನಾಯಕರೆಂದು ಬಗೆದು ಅವರ ವಿಧಿ-ನಿಷೇಧಗಳನ್ನು, ನಿಯಮ ನಿಬಂಧನೆಗಳನ್ನು, ಹಲಾಲ್-ಹರಾಮ್‌ಗಳನ್ನು ಯಾವುದೇ ಅಧಿಕೃತ ಪುರಾವೆಯಿಲ್ಲದೆ ಒಪ್ಪಿಕೊಂಡು ಅವರಿಗೆ ಆದೇಶಿಸುವ ಮತ್ತು ತಡೆಯುವ ವೈಯಕ್ತಿಕ ಅಧಿಕಾರ ಇದೆ ಎಂದು ಪರಿಗಣಿಸುವುದಾಗಿದೆ.

أَمَّا أَحَدُكُمَا فَيَسْقِي رَبَّهُ خَمْرًا - (يوسف ٤١) وَقَالَ لِلَّذِي ظَنَّ
أَنَّهُ نَاجٍ مِّنْهُمَا اذْكُرْنِي عِندَ رَبِّكَ فَأَنسَاهُ الشَّيْطَانُ ذِكْرَ
رَبِّهِ - (يوسف - ٤٢)

ನಿಮ್ಮಲ್ಲೋರ್ವನು ತನ್ನ 'ರಬ್ಬ್'ಗೆ ಮದ್ಯ ಕುಡಿಸುವನು. ಅನಂತರ ಅವರ ಪೈಕಿ ಯಾರು ಬಿಡುಗಡೆಯಾಗುವನೆಂಬ ನಿರೀಕ್ಷೆಯಿತ್ತೋ ಅವನೊಡನೆ ಯೂಸುಫರು, "ನಿನ್ನ 'ರಬ್ಬ್'ನೊಡನೆ ನನ್ನ ಪ್ರಸ್ತಾಪವೆತ್ತಬೇಕು." ಎಂದು ಹೇಳಿದರು. ಆದರೆ ಶೈತಾನನು ಅವನಿಗೆ ಮರವೆಯನ್ನುಂಟು ಮಾಡಿಬಿಟ್ಟನು. ಅವನು ತನ್ನ 'ರಬ್ಬ್'ನೊಡನೆ ಯೂಸುಫರ ಪ್ರಸ್ತಾಪವೆತ್ತಲು ಮರೆತೇ ಬಿಟ್ಟನು. (ಯೂಸುಫ್: 41-42)

فَلَمَّا جَاءَهُ الرَّسُولُ قَالَ ارْجِعْ إِلَىٰ رَبِّكَ فَاسْأَلْهُ مَا بَالُ
النِّسْوَةِ اللَّاتِي قَطَّعْنَ أَيْدِيَهُنَّ ۚ إِنَّ رَبِّي بِكَيْدِهِنَّ عَلِيمٌ (يوسف ٥٠)

ಆದರೆ ರಾಜದೂತನು ಯೂಸುಫರ ಬಳಿಗೆ ಬಂದಾಗ ಅವರು ಹೀಗೆ ಹೇಳಿದರು: ನಿನ್ನ 'ರಬ್ಬ್'ನ ಬಳಿಗೆ ನೀನು ಹಿಂದಿರುಗು ಮತ್ತು ತಮ್ಮ ಕೈಗಳನ್ನು ಕೊಯ್ದುಕೊಂಡ ಸ್ತ್ರೀಯರ ಸಂಗತಿಯೇನೆಂದು ಅವನೊಡನೆ ಕೇಳು. ನನ್ನ 'ರಬ್ಬ್' ಅಂತು ಅವರ ಕುತಂತ್ರಗಳನ್ನು ತಿಳಿದೇ ಇದ್ದಾನೆ. (ಯೂಸುಫ್:50)

ಈ ಆಯತ್‌ಗಳಲ್ಲಿ ಹ. ಯೂಸುಫ್(ಅ) ಅವರು ಈಜಿಪ್ಟ್‌ನವರನ್ನುದ್ದೇಶಿಸಿ ಈಜಿಪ್ಟ್ ರಾಜನನ್ನು ಅನೇಕ ಸಲ ಅವರ 'ರಬ್ಬ್' ಎಂದು ಹೇಳಿರುವರು. ಏಕೆಂದರೆ ಅವರು ಅವನ

ಕೇಂದ್ರೀಯತೆ ಹಾಗೂ ಸಾರ್ವಭೌಮತೆಯನ್ನು ಒಪ್ಪಿ ಅವನನ್ನು ವಿಧಿ-ನಿಷೇಧಗಳ ಒಡೆಯನೆಂದು ಅಂಗೀಕರಿಸುತ್ತಿದ್ದರು. ಆದ್ದರಿಂದ ಅವನೇ ಅವರ 'ರಬ್ಬ್' ಆಗಿದ್ದನು. ಇದಕ್ಕೆ ವ್ಯತಿರಿಕ್ತವಾಗಿ ಹ. ಯೂಸುಫ್(ಅ) ಅವರು ತಮ್ಮ 'ರಬ್ಬ್' ಅಲ್ಲಾಹ್ ಆಗಿದ್ದಾನೆಂದು ಸಾರುತ್ತಿದ್ದರು. ಏಕೆಂದರೆ ಅವರು ರಾಜನನ್ನಲ್ಲ ಕೇವಲ ಅಲ್ಲಾಹನನ್ನು ಸಾರ್ವಭೌಮ ಮತ್ತು ವಿಧಿ-ನಿಷೇಧಗಳ ಒಡೆಯ ಎಂದು ನಂಬುತ್ತಿದ್ದರು.

5. ಐದನೆಯ ಅರ್ಥದಲ್ಲಿ

فَلْيَعْبُدُوا رَبَّ هٰذَا الْبَيْتِ الَّذِيْٓ اَطْعَمَهُمْ مِّنْ جُوْعٍ وَّاٰمَنَهُمْ مِّنْ خَوْفٍ - (قریش ۳-۴)

ಅವರು ಈ ಭವನದ 'ರಬ್ಬ್'ನ ಇಬಾದತ್ ಮಾಡಲಿ. ಅವನು ಅವರನ್ನು ಹಸಿವೆಯಿಂದ ಪಾರುಗೊಳಿಸಿ ಅವರಿಗೆ ಉಣಿಸಿದನು ಮತ್ತು ಭಯದಿಂದ ರಕ್ಷಿಸಿ ಅವರಿಗೆ ಶಾಂತಿ ದಯಪಾಲಿಸಿದನು. (ಕುರೈಶ್: 3-4)

سُبْحَانَ رَبِّكَ رَبِّ الْعِزَّةِ عَمَّا يَصِفُوْنَ - (صٰفٰت - ۱۸۰)

ನಿಮ್ಮ 'ರಬ್ಬ್' ಗೌರವಾನ್ವಿತ 'ರಬ್ಬ್'. ಇವರು ಸೃಷ್ಟಿಸುತ್ತಿರುವ ಎಲ್ಲ ಆರೋಪಗಳಿಂದ ಮುಕ್ತನಾಗಿರುವ ಪರಮ ಪಾವನನು. (ಅಸ್ಸಾಫಾತ್: 180)

فَسُبْحٰنَ اللّٰهِ رَبِّ الْعَرْشِ عَمَّا يَصِفُوْنَ - (انبیاء - ۲۲)

ಆದುದರಿಂದ ವಿಶ್ವ ಸಿಂಹಾಸನದ 'ರಬ್ಬ್' ಆಗಿರುವ ಅಲ್ಲಾಹನು ಇವರು ಹೊರಿಸುವ ಆರೋಪಗಳಿಂದ ಪರಿಶುದ್ಧನಾಗಿರುತ್ತಾನೆ. (ಅಲ್ ಅಂಬಿಯಾ: 22)

قُلْ مَنْ رَّبُّ السَّمٰوٰتِ السَّبْعِ وَرَبُّ الْعَرْشِ الْعَظِيْمِ (المؤمنون ۸۶)

ಸಪ್ತಗಗನಗಳ ಮತ್ತು ವಿಶ್ವಸಿಂಹಾಸನದ 'ರಬ್ಬ್' ಯಾರೆಂದು ಇವರನ್ನು ಕೇಳಿರಿ. (ಅಲ್ ಮೂಮಿನೂನ್: 86)

رَبُّ السَّمٰوٰتِ وَالْاَرْضِ وَمَا بَيْنَهُمَا وَرَبُّ الْمَشَارِقِ (الصٰفٰت ۵)

ಅವನು ಭೂಮಿ-ಆಕಾಶಗಳ ಹಾಗೂ ಅವುಗಳಲ್ಲಿರುವ ಸಕಲ ವಸ್ತುಗಳ 'ರಬ್ಬ್' ಮತ್ತು ಸಕಲ ಪೂರ್ವಗಳ 'ರಬ್ಬ್' ಆಗಿರುವನು. (ಅಸ್ಸಾಫಾತ್:5)

وَاَنَّهُ هُوَ رَبُّ الشِّعْرٰى ـ (النجم ـ ٤٩)

ಅವನೇ 'ಶಿಅ್ರಾ' ನಕ್ಷತ್ರದ 'ರಬ್ಬ್' ಆಗಿರುವನು. (ಅನ್ನಜ್ಮ್ : 49)

'ರಬ್ಬ್'ನ ಕುರಿತು ಪಥಭ್ರಷ್ಟ ಜನಾಂಗಗಳ ಕಲ್ಪನೆಗಳು

ಈ ದೃಷ್ಟಾಂತಗಳಿಂದ 'ರಬ್ಬ್' ಎಂಬ ಪದದ ಅರ್ಥವು ಸಂಶಯಾತೀತವಾಗಿ ಸ್ಪಷ್ಟವಾಗುತ್ತದೆ. 'ರಬ್ಬ್'ನ ಕುರಿತು ಪಥಭ್ರಷ್ಟ ಜನಾಂಗಗಳ ಯಾವ ಕಲ್ಪನೆಯನ್ನೂ ನಿರಾಕರಿಸಲಿಕ್ಕಾಗಿ ಕುರ್‌ಆನ್ ಬಂದಿದೆಯೋ ಆ ಕಲ್ಪನೆಯೇನು? ಮತ್ತು ಕುರ್‌ಆನ್ ಯಾವುದರ ಕಡೆಗೆ ಕರೆ ನೀಡುತ್ತದೋ ಅದು ಏನು? ಎಂಬುದನ್ನು ನೋಡೋಣ. ಈ ಕುರಿತು ಕುರ್‌ಆನ್‌ನಲ್ಲಿ ಯಾವ ಪಥಭ್ರಷ್ಟ ಜನಾಂಗಗಳ ಪ್ರಸ್ತಾಪ ಮಾಡಲಾಗಿದೆಯೋ ಅವುಗಳನ್ನು ಬೇರ ಬೇರೆಯಾಗಿ ತೆಗೆದು ಅವುಗಳ ವಿಚಾರಗಳ ಅಧ್ಯಯನ ನಡೆಸುವುದು ಸೂಕ್ತವೆನಿಸುತ್ತದೆ. ಇದರಿಂದ ವಿಷಯವು ಅತ್ಯಂತ ಸ್ಪಷ್ಟವಾಗಿ ಮನವರಿಕೆಯಾದೀತು.

ನೂಹ್‌ರ(ಅ) ಜನಾಂಗ:

ಕುರ್‌ಆನ್ ಪ್ರಸ್ತಾಪಿಸುವ ಮೊತ್ತ ಮೊದಲ ಜನಾಂಗ ನೂಹರ ಜನಾಂಗವಾಗಿದೆ. ಇವರು ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುತ್ತಿರಲಿಲ್ಲವೆಂದು ಕುರ್‌ಆನ್‌ನ ವಿವರಣೆಯಿಂದ ತಿಳಿಯುತ್ತದೆ. ಹ. ನೂಹರ(ಅ) ಆಹ್ವಾನಕ್ಕುತ್ತರವಾಗಿ ಅವರ ಜನಾಂಗ ಹೇಳಿದ ಮಾತನ್ನು ಕುರ್‌ಆನ್ ಹೀಗೆ ಉದ್ಧರಿಸಿದೆ:

مَا هٰذَآ اِلَّا بَشَرٌ مِّثْلُكُمْ يُرِيْدُ اَنْ يَّتَفَضَّلَ عَلَيْكُمْ ۭ وَلَوْ شَآءَ اللّٰهُ
لَاَنْزَلَ مَلٰۗئِكَةً ـ (المؤمنون ـ ٢٤)

"ಇವನು ನಿಮ್ಮಂತೆಯೇ ಇರುವ ಒಬ್ಬ ಮನುಷ್ಯನಲ್ಲದೆ ಇನ್ನೇನೂ ಅಲ್ಲ. ನಿಮ್ಮ ಮೇಲೆ ಹಿರಿಮೆಯನ್ನು ಗಳಿಸುವುದೇ ಇವನ ಉದ್ದೇಶ. ಅಲ್ಲಾಹನು ಕಳುಹಿಸಲಿಚ್ಛಿಸಿದರೆ ದೇವಚರರನ್ನು ಕಳುಹಿಸುತ್ತಿದ್ದನು." (ಅಲ್ ಮೂಮಿನೂನ್: 24)

ಅಲ್ಲಾಹನು ಸೃಷ್ಟಿಕರ್ತನಾಗಿದ್ದಾನೆಂಬುದನ್ನು ಹಾಗೂ ಪ್ರಥಮ ಮತ್ತು ದ್ವಿತೀಯ ಅರ್ಥದಲ್ಲಿ ಅವನು 'ರಬ್ಬ್' ಆಗಿದ್ದಾನೆಂಬುದನ್ನೂ ಅವರು ನಿರಾಕರಿಸುತ್ತಿರಲಿಲ್ಲ. ಆದ್ದರಿಂದ ಹ. ನೂಹ್(ಅ) ಅವರಲ್ಲಿ ಹೀಗೆ ಹೇಳಿದಾಗ:

هُوَ رَبُّكُمْ ۣ وَاِلَيْهِ تُرْجَعُوْنَ ۞ (هود ـ ٣٤)

"ಅವನೇ ನಿಮ್ಮ 'ರಬ್ಬ್' ಮತ್ತು ಅವನಲ್ಲಿಗೇ ನೀವು ಮರಳಲಿಕ್ಕಿದ್ದೀರಿ."
(ಹೂದ್: 34)

اِسْتَغْفِرُوْا رَبَّكُمْ اِنَّهٗ كَانَ غَفَّارًا ۔ (نوح ۔ ١٠)

"ನಿಮ್ಮ 'ರಬ್ಬ್'ನೊಡನೆ ಕ್ಷಮಾಯಾಚನೆ ಮಾಡಿರಿ. ಖಂಡಿತವಾಗಿಯೂ ಅವನು ಮಹಾ ಕ್ಷಮಾಶೀಲನಾಗಿದ್ದಾನೆ."
(ನೂಹ್: 10)

اَلَمْ تَرَوْا كَيْفَ خَلَقَ اللّٰهُ سَبْعَ سَمٰوٰتٍ طِبَاقًا ۝ وَّجَعَلَ الْقَمَرَ
فِيْهِنَّ نُوْرًا وَّجَعَلَ الشَّمْسَ سِرَاجًا ۝ وَاللّٰهُ اَنْۢبَتَكُمْ مِّنَ
الْاَرْضِ نَبَاتًا ۝ (نوح ۔ ١٥ ۔ ١٧)

"ನೀವು ನೋಡುತ್ತಿಲ್ಲವೇ? ಅಲ್ಲಾಹನು ಸಪ್ತ ಗಗನಗಳನ್ನು ಅಂತಸ್ತು, ಅಂತಸ್ತುಗಳಾಗಿ ಹೇಗೆ ಸೃಷ್ಟಿಸಿದನು ಎಂಬುದನ್ನು ಮತ್ತು ಅವುಗಳಲ್ಲಿ ಚಂದ್ರನನ್ನು ಬೆಳಕಾಗಿಯೂ ಸೂರ್ಯನನ್ನು ದೀಪವಾಗಿಯೂ ಮಾಡಿರುವನೆಂಬುದನ್ನು. ಅಲ್ಲಾಹನು ನಿಮ್ಮನ್ನು ಭೂಮಿಯಿಂದ ವಿಚಿತ್ರ ರೀತಿಯಲ್ಲಿ ಬೆಳೆಸಿದನು."
(ನೂಹ್: 15-17)

ಅವರಲ್ಲಿ ಯಾರೂ ಅಲ್ಲಾಹನು ನಮ್ಮ 'ರಬ್ಬ್' (ಪ್ರಭು) ಅಲ್ಲವೆಂದಾಗಲಿ, ಭೂಮಿ-ಆಕಾಶಗಳನ್ನೂ ನಮ್ಮನ್ನೂ ಅವನು ಸೃಷ್ಟಿಸಿಲ್ಲವೆಂದಾಗಲಿ, ಭೂಮಿ-ಆಕಾಶಗಳ ಈ ಎಲ್ಲ ವ್ಯವಸ್ಥೆಯನ್ನು ಅವನು ಮಾಡುತ್ತಿಲ್ಲ ಎಂದಾಗಲಿ ಹೇಳಿರಲಿಲ್ಲ.

ಅಲ್ಲಾಹನು ಅವರ 'ಇಲಾಹ್' ಆಗಿದ್ದಾನೆ ಎಂಬುದನ್ನು ಕೂಡಾ ಅವರು ನಿರಾಕರಿಸುತ್ತಿರಲಿಲ್ಲ. ಆದ್ದರಿಂದಲೇ ಹ.ನೂಹ್(ಅ) ಅವರ ಮುಂದೆ ತಮ್ಮ ಸಂದೇಶವನ್ನು ಈ ಪದಗಳಲ್ಲಿ ಇಟ್ಟರು:

مَا لَكُمْ مِّنْ اِلٰهٍ غَيْرُهٗ ۔ (الاعراف ۔ ٥٩)

ಅವನ ಹೊರತು ನಿಮ್ಮ 'ಇಲಾಹ್' (ಆರಾಧ್ಯ) ಯಾರೂ ಇಲ್ಲ.
(ಅಲ್ ಅಲ್‌ರಾಫ್: 59)

ಒಂದು ವೇಳೆ ಅವರು ಅಲ್ಲಾಹ್ ಆರಾಧ್ಯನಾಗಿದ್ದಾನೆ ಎಂಬುದನ್ನು ನಿರಾಕರಿಸುವವರಾಗಿದ್ದರೆ ಅವರ ಸಂದೇಶದ ಪದಗಳು ಹೀಗೆ ಇರಬೇಕಿತ್ತು: اِتَّخِذُوا اللّٰهَ اِلٰهًا

ಅಲ್ಲಾಹನನ್ನು 'ಇಲಾಹ್'(ಆರಾಧ್ಯ) ಆಗಿ ಮಾಡಿಕೊಳ್ಳಿರಿ.

ಅವರ ಮತ್ತು ಹ. ನೂಹ್(ಅ) ಅವರ ಮಧ್ಯೆ ಇದ್ದ ವಿವಾದವೇನಾಗಿತ್ತು ಎಂಬುದೇ ಈಗಿರುವ ಪ್ರಶ್ನೆ. ಪವಿತ್ರ ಕುರ್‌ಆನ್‌ನ ವಚನಗಳನ್ನು ಅವಲೋಕಿಸಿದಾಗ ವಿವಾದದ ವಿಷಯಗಳು ಎರಡಾಗಿದ್ದುವು ಎಂದು ತಿಳಿದು ಬರುತ್ತದೆ.

1. ಹ.ನೂಹ್(ಅ) ಅವರ ಶಿಕ್ಷಣ ಇದಾಗಿತ್ತು-

ಅಲ್ಲಾಹನು ಸರ್ವಲೋಕಗಳ 'ರಬ್ಬ್' (ಪರಿಪಾಲಕ- ಪ್ರಭು) ಆಗಿರುವನು. ಅದನ್ನು ನೀವೂ ಒಪ್ಪಿಕೊಳ್ಳುತ್ತೀರಿ. ನಿಮಗೂ ಸಮಸ್ತ ವಿಶ್ವಕ್ಕೂ ಅಸ್ತಿತ್ವ ನೀಡಿದವನು ಅವನೇ ಆಗಿದ್ದಾನೆ. ಅವನೇ ನಿಮ್ಮೆಲ್ಲ ಬೇಡಿಕೆಗಳನ್ನೂ ಈಡೇರಿಸುತ್ತಾನೆ. ಅವನು ಮಾತ್ರ ವಾಸ್ತವದಲ್ಲಿ ನಿಮ್ಮ ಇಲಾಹ್ (ಆರಾಧ್ಯ-ಅಧಿಪತಿ) ಆಗಿದ್ದಾನೆ. ಅವನಲ್ಲದೆ ಬೇರೆ 'ಇಲಾಹ್' ಇಲ್ಲ. ನಿಮ್ಮ ಬೇಡಿಕೆಗಳನ್ನು ಈಡೇರಿಸುವ, ಸಂಕಷ್ಟಗಳನ್ನು ನಿವಾರಿಸುವ, ಪ್ರಾರ್ಥನೆಗಳನ್ನು ಆಲಿಸುವ ಮತ್ತು ಸಹಾಯಕ್ಕೆ ಒದಗುವ ಬೇರಾವ ಅಸ್ತಿತ್ವವೂ ಇಲ್ಲ. ಆದ್ದರಿಂದ ನೀವು ಅವನ ಮುಂದೆಯೇ ಶಿರ ಬಾಗಬೇಕು.

يٰقَوْمِ اعْبُدُوا اللّٰهَ مَا لَكُمْ مِّنْ اِلٰهٍ غَيْرُهٗ .... وَلٰكِنِّيْ
رَسُوْلٌ مِّنْ رَّبِّ الْعٰلَمِيْنَ اُبَلِّغُكُمْ رِسٰلٰتِ رَبِّيْ ـ (الاعراف ۵۹ـ۶۲)

"ಓ ನನ್ನ ಜನಾಂಗ ಬಾಂಧವರೇ! ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ. ಅವನ ಹೊರತು ನಿಮ್ಮ ಆರಾಧ್ಯನಾರೂ ಇಲ್ಲ... ನಿಜವಾಗಿ ನಾನು ಸರ್ವಲೋಕ ಪಾಲಕನ ಸಂದೇಶವಾಹಕನಾಗಿರುತ್ತೇನೆ. ನಿಮಗೆ ನನ್ನ ಪ್ರಭುವಿನ ಸಂದೇಶಗಳನ್ನು ತಲುಪಿಸುತ್ತೇನೆ.
(ಅಲ್ ಅಅ್‌ರಾಫ್: 59-62)

ಇದಕ್ಕೆ ತದ್ವಿರುದ್ಧವಾಗಿ ಅವರು ಅಲ್ಲಾಹನು ಸರ್ವಲೋಕ ಪರಿಪಾಲಕನಂತೂ ಹೌದು. ಆದರೆ ಇತರರಿಗೂ ದೇವತ್ವದ ವ್ಯವಸ್ಥೆಯಲ್ಲಿ ಒಂದಿಷ್ಟು ಪ್ರಭಾವವಿದೆ. ಅವರೂ ನಮ್ಮ ಬಯಕೆಗಳನ್ನು ಈಡೇರಿಸಬಲ್ಲರು. ಆದ್ದರಿಂದ ಅಲ್ಲಾಹನ ಜತೆಯಲ್ಲಿ ಅವರನ್ನೂ ನಾವು ಇಲಾಹ್(ಆರಾಧ್ಯ) ಎಂದು ಪರಿಗಣಿಸುವೆವು.

وَقَالُوْا لَا تَذَرُنَّ اٰلِهَتَكُمْ وَلَا تَذَرُنَّ وَدًّا وَّلَا سُوَاعًا ۙ وَّلَا
يَغُوْثَ وَيَعُوْقَ وَنَسْرًا ـ (نوح ـ ۲۳)

"ಅವರ ಸರದಾರರು ಹೇಳಿದರು 'ಎಷ್ಟು ಮಾತ್ರಕ್ಕೂ ನಿಮ್ಮ ಆರಾಧ್ಯರನ್ನು ತ್ಯಜಿಸಬೇಡಿರಿ. ವದ್ದ್, ಸುವಾಅ್, ಯಗೂಸ್, ಯಊಕ್ ಮತ್ತು ನಸ್ರ್‌ಗಳನ್ನು ಬಿಡಬೇಡಿರಿ."
(ನೂಹ್: 23)

ಎರಡನೆಯದಾಗಿ ಅವರು ಅಲ್ಲಾಹನು ಅವರ ಸೃಷ್ಟಿಕರ್ತ, ಭೂಮಿ-ಆಕಾಶಗಳ ಒಡೆಯ, ವಿಶ್ವದ ಪ್ರಧಾನ ವ್ಯವಸ್ಥಾಪಕ ಎಂಬರ್ಥದಲ್ಲಿ ಮಾತ್ರ رب 'ರಬ್ಬ್' (ಪ್ರಭು) ಎಂದು ಪರಿಗಣಿಸುತ್ತಿದ್ದರು. ಆದರೆ ನೈತಿಕತೆ, ಸಾಮಾಜಿಕ ಜೀವನ, ಸಂಸ್ಕೃತಿ, ರಾಜಕೀಯ ಮತ್ತು ಜೀವನದ ಇತರೆಲ್ಲ ವ್ಯವಹಾರಗಳಲ್ಲಿ ಆಜ್ಞಾಧಿಕಾರ ಮತ್ತು ಸಾರ್ವಭೌಮತೆ ಅವನ ಹಕ್ಕಾಗಿದೆ. ಅವನೇ ಮಾರ್ಗದರ್ಶನ ಮಾಡುವವನು, ಕಾನೂನು ನಿರ್ಮಿಸುವವನು, ವಿಧಿಸುವವನು,

ನಿಷೇಧಿಸುವವನು. ಆದ್ದರಿಂದ ಅವನನ್ನು ಅನುಸರಿಸಬೇಕು ಎಂಬುದನ್ನು ಅವರು ಒಪ್ಪುತ್ತಿರಲಿಲ್ಲ. ಈ ಎಲ್ಲ ವಿಷಯಗಳಲ್ಲಿ ಅವರು ತಮ್ಮ ಸರದಾರರನ್ನು ಮತ್ತು ಪುರೋಹಿತರನ್ನು 'ರಬ್ಬ್' ಮಾಡಿಕೊಂಡಿದ್ದರು. ಇದಕ್ಕೆದುರಾಗಿ ಹ. ನೂಹ್(ಅ) ಅವರಿಗೆ ರುಬೂಬಿಯತ್ (ಪ್ರಭುತ್ವ)ವನ್ನು ವಿಭಜಿಸಬೇಡಿರಿ. ಎಲ್ಲ ಅರ್ಥದಲ್ಲೂ ಅಲ್ಲಾಹನನ್ನೇ ನಿಮ್ಮ ಪ್ರಭುವೆಂದು ಪರಿಗಣಿಸಿರಿ. ಅವನ ಪ್ರತಿನಿಧಿ ಎಂಬ ನೆಲೆಯಲ್ಲಿ ನಾನು ತಲುಪಿಸುತ್ತಿರುವ ಕಾನೂನು-ಕಟ್ಟಳೆಗಳನ್ನು ಅನುಸರಿಸಿರಿ.

إِنِّي لَكُمْ رَسُولٌ أَمِينٌ ۝ فَاتَّقُوا اللَّهَ وَأَطِيعُونِ ○

(الشعراء - ١٠٧-١٠٨)

"ನಾನು ನಿಮ್ಮ ಪಾಲಿಗೆ ಒಬ್ಬ ಪ್ರಾಮಾಣಿಕ ಸಂದೇಶವಾಹಕನಾಗಿದ್ದೇನೆ. ಆದುದರಿಂದ ನೀವು ಅಲ್ಲಾಹನನ್ನು ಭಯಪಡಿರಿ ಮತ್ತು ನನ್ನನ್ನು ಅನುಸರಿಸಿರಿ." (ಅಶ್ಶುಅರಾ: 107-108)

ಆದ್ ಜನಾಂಗ

ನೂಹರ ಜನಾಂಗದ ನಂತರ ಕುರ್‌ಆನ್ ಆದ್ ಜನಾಂಗದ ಕುರಿತು ಪ್ರಸ್ತಾಪಿಸಿದೆ. ಈ ಜನಾಂಗ ಕೂಡಾ ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುತ್ತಿರಲಿಲ್ಲ. ಯಾವ ಅರ್ಥದಲ್ಲಿ ನೂಹರ ಜನಾಂಗವು ಅಲ್ಲಾಹನನ್ನು 'ರಬ್ಬ್' ಎಂದು ಪರಿಗಣಿಸುತ್ತಿತ್ತೋ ಅದೇ ಅರ್ಥದಲ್ಲಿ ಆದ್ ಜನಾಂಗ ಕೂಡಾ ಅಲ್ಲಾಹನನ್ನು 'ರಬ್ಬ್' ಎಂದು ನಂಬುತ್ತಿತ್ತು. ಆದರೆ ನಾವು ಈ ಹಿಂದೆ ನೂಹರ ಜನಾಂಗದ ಕುರಿತು ಪ್ರಸ್ತಾಪಿಸಿದ ಎರಡು ವಿಷಯಗಳಲ್ಲೇ ಆದ್ ಜನಾಂಗಕ್ಕೂ ಭಿನ್ನಾಭಿಪ್ರಾಯವಿತ್ತು. ಪವಿತ್ರ ಕುರ್‌ಆನ್‌ನ ಈ ಕೆಳಗಿನ ವಾಕ್ಯಗಳು ಅದಕ್ಕೆ ಸ್ಪಷ್ಟ ನಿದರ್ಶನವಾಗಿದೆ:

وَإِلَىٰ عَادٍ أَخَاهُمْ هُودًا ۗ قَالَ يَا قَوْمِ اعْبُدُوا اللَّهَ مَا لَكُم مِّنْ إِلَٰهٍ
غَيْرُهُ ..... قَالُوا أَجِئْتَنَا لِنَعْبُدَ اللَّهَ وَحْدَهُ وَنَذَرَ مَا كَانَ
يَعْبُدُ آبَاؤُنَا - (الاعراف ٦٥-٧٠)

ನಾವು ಆದ್ ಜನಾಂಗದವರ ಕಡೆಗೆ ಅವರ ಸಹೋದರ 'ಹೂದ'ರನ್ನು ಕಳುಹಿಸಿದೆವು. ಅವರು ಹೇಳಿದರು: "ಓ ನನ್ನ ಜನಾಂಗ ಬಾಂಧವರೇ! ಅಲ್ಲಾಹನ ಇಬಾದತ್ ಮಾಡಿರಿ. ಅವನ ಹೊರತು ನಿಮ್ಮ 'ಇಲಾಹ್' ಯಾರೂ ಇಲ್ಲ."... ಅವರು ಹೇಳಿದರು: "ನಾವು ಏಕಮಾತ್ರ ಅಲ್ಲಾಹನ ಇಬಾದತ್ ಮಾಡಬೇಕೆಂದು ಮತ್ತು ನಮ್ಮ ಪೂರ್ವಿಕರು ಯಾರ ಇಬಾದತ್ ಮಾಡುತ್ತಿದ್ದರೋ ಅವರನ್ನು ಬಿಟ್ಟು ಬಿಡಬೇಕೆಂದು ನೀನು ನಮ್ಮ ಬಳಿಗೆ ಬಂದಿರುವೆಯಾ?" (ಅಲ್ ಅಲ್‌ರಾಫ್: 65-70)

قَالُوا لَوْ شَاءَ رَبُّنَا لَأَنزَلَ مَلَائِكَةً - (حم السجدة - ١٤)

ಅವರು ಹೇಳಿದರು: "ನಮ್ಮ ಪ್ರಭು ಇಚ್ಛಿಸುತ್ತಿದ್ದರೆ ಮಲಕ್‌ಗಳನ್ನು ಕಳುಹಿಸುತ್ತಿದ್ದನು."
(ಹಾಮೀಮ್ ಅಸ್ಸಜ್ದ : 14)

وَتِلْكَ عَادٌ جَحَدُوا بِآيَاتِ رَبِّهِمْ وَعَصَوْا رُسُلَهُ وَاتَّبَعُوا أَمْرَ
كُلِّ جَبَّارٍ عَنِيدٍ (هود - ٥٩)

ಇವರೇ ಆದ್ ಜನಾಂಗದವರು. ಇವರು ತಮ್ಮ ಪ್ರಭುವಿನ ನಿದರ್ಶನಗಳನ್ನು ನಿರಾಕರಿಸಿದರು. ಅವನ ಸಂದೇಶವಾಹಕರನ್ನು ಧಿಕ್ಕರಿಸಿದರು ಮತ್ತು ಪ್ರತಿಯೊಬ್ಬ ಮದೋನ್ಮತ್ತ ಸತ್ಯ ವಿರೋಧಿಯನ್ನು ಅನುಸರಿಸುತ್ತ ಸಾಗಿದರು. (ಹೂದ್: 59)

ಸಮೂದ್ ಜನಾಂಗ

ಆದ್ ಜನಾಂಗದ ನಂತರ ಅತಿ ದೊಡ್ಡ ವಿದ್ರೋಹಿ ಜನಾಂಗ ಸಮೂದ್ ಜನಾಂಗವಾಗಿತ್ತು. ತಾತ್ವಿಕವಾಗಿ ಅದರ ಪಥಭ್ರಷ್ಟತೆಯೂ ನೂಹರ ಜನಾಂಗ ಮತ್ತು ಆದ್ ಜನಾಂಗದ ಪಥಭ್ರಷ್ಟತೆಯಂತೆಯೇ ಇತ್ತು. ಅವರು ಅಲ್ಲಾಹನ ಅಸ್ತಿತ್ವವನ್ನಾಗಲೀ ಅವನು 'ಇಲಾಹ್' ಮತ್ತು 'ರಬ್ಬ್' ಆಗಿದ್ದನೆಂಬುದನ್ನಾಗಲೀ ನಿರಾಕರಿಸುತ್ತಿರಲಿಲ್ಲ. ಅವನ 'ಇಬಾದತ್' ಮಾಡಬೇಕೆಂಬುದನ್ನೂ ಅವರು ನಿರಾಕರಿಸುತ್ತಿರಲಿಲ್ಲ.

ಆದರೆ ಅಲ್ಲಾಹನೇ ಏಕೈಕ 'ಇಲಾಹ್' ಆಗಿದ್ದಾನೆಂಬುದನ್ನು ಅವರು ನಿರಾಕರಿಸುತ್ತಿದ್ದರು. ಅವನು ಮಾತ್ರ 'ಇಬಾದತ್'ಗೆ ಅರ್ಹನಾದವನು ಮತ್ತು ಎಲ್ಲ ಅರ್ಥಗಳಲ್ಲೂ ಅವನೇ 'ರಬ್ಬ್' ಆಗಿದ್ದಾನೆ ಎಂಬುದನ್ನು ಅವರು ಒಪ್ಪುತ್ತಿರಲಿಲ್ಲ. ಅವರು ಅಲ್ಲಾಹನ ಹೊರತು ಇತರರನ್ನು ಪ್ರಾರ್ಥನೆಗಳನ್ನು ಆಲಿಸುವವರು, ಸಂಕಷ್ಟಗಳನ್ನು ನಿವಾರಿಸುವವರು ಮತ್ತು ಇಷ್ಟಾರ್ಥಗಳನ್ನು ಸಿದ್ಧಿಸುವವರು ಎಂದು ನಂಬುತ್ತಿದ್ದರು. ತಮ್ಮ ನೈತಿಕ ಮತ್ತು ಸಾಂಸ್ಕೃತಿಕ ಜೀವನದಲ್ಲಿ ಅಲ್ಲಾಹನ ಹೊರತು ತಮ್ಮ ಸರದಾರರು ಮತ್ತು ನಾಯಕರನ್ನು ಅನುಸರಿಸುತ್ತಿದ್ದರು. ಅವರಿಂದಲೇ ತಮ್ಮ ಜೀವನದ ನಿಯಮಗಳನ್ನು ಪಡೆಯುತ್ತಿದ್ದರು. ಇದುವೇ ಕಟ್ಟಕಡೆಗೆ ಅವರನ್ನು ಒಂದು ವಿನಾಶಕಾರಿ ಜನಾಂಗವಾಗಿ ಮಾರ್ಪಡಿಸಿ ಅಲ್ಲಾಹನ ಶಿಕ್ಷೆಗೆ ಗುರಿಪಡಿಸಿತು. ಇದು ಈ ಕೆಳಗಿನ ಆಯತ್‌ಗಳಿಂದ ಸ್ಪಷ್ಟವಾಗುತ್ತದೆ:

فَإِنْ أَعْرَضُوا فَقُلْ أَنذَرْتُكُمْ صَاعِقَةً مِّثْلَ صَاعِقَةِ عَادٍ وَثَمُودَ ۝
إِذْ جَاءَتْهُمُ الرُّسُلُ مِن بَيْنِ أَيْدِيهِمْ وَمِنْ خَلْفِهِمْ أَلَّا تَعْبُدُوا
إِلَّا اللَّهَ قَالُوا لَوْ شَاءَ رَبُّنَا لَأَنزَلَ مَلَائِكَةً فَإِنَّا بِمَا أُرْسِلْتُم
بِهِ كَافِرُونَ ۝ (حم السجدة - ١٣-١٤)

ಅವರೀಗ ವಿಮುಖರಾಗುತ್ತಾರೆಂದಾದರೆ ಅವರೊಡನೆ ಹೇಳಿರಿ, "ನಾನು ನಿಮ್ಮನ್ನು, ಆದ್ ಮತ್ತು ಸಮೂದರ ಮೇಲೆ ಎರಗಿದ್ದಂತಹ, ಹಠಾತ್ತನೆ ಸಿಡಿದು ಬೀಳುವಂತಹ ಒಂದು ಯಾತನೆಯ ಬಗ್ಗೆ ಎಚ್ಚರಿಸುತ್ತೇನೆ. ದೇವ ಸಂದೇಶವಾಹಕರು ಅವರ ಮುಂದಿನಿಂದಲೂ ಹಿಂದಿನಿಂದಲೂ ಎಲ್ಲ ದಿಕ್ಕುಗಳಿಂದಲೂ ಅವರ ಬಳಿ ಬಂದು "ನೀವು ಅಲ್ಲಾಹನ ಹೊರತು ಇನ್ನಾರ ದಾಸ್ಯ-ಆರಾಧನೆಯನ್ನೂ ಮಾಡದಿರಿ" ಎಂದು ಹೇಳಿದಾಗ ಅವರು, "ನಮ್ಮ ಪ್ರಭು ಇಚ್ಛಿಸುತ್ತಿದ್ದರೆ ಮಲಕ್‌ಗಳನ್ನು ಕಳುಹಿಸುತ್ತಿದ್ದನು. ಆದುದರಿಂದ ನೀವು ಯಾವುದಕ್ಕಾಗಿ ಕಳುಹಿಸಲ್ಪಟ್ಟಿರುವಿರೋ ಅದನ್ನು ನಾವು ನಿರಾಕರಿಸುತ್ತೇವೆ" ಎಂದರು.

(ಹಾಮೀಮ್ ಅಸ್ಸಜ್ದಃ 13-14)

وَإِلَىٰ ثَمُودَ أَخَاهُمْ صَالِحًا ۚ قَالَ يَا قَوْمِ اعْبُدُوا اللَّهَ مَا لَكُم مِّنْ
إِلَٰهٍ غَيْرُهُ ... (٦١) قَالُوا يَا صَالِحُ قَدْ كُنتَ فِينَا مَرْجُوًّا قَبْلَ
هَٰذَا أَتَنْهَانَا أَن نَّعْبُدَ مَا يَعْبُدُ آبَاؤُنَا (هود ٦١-٦٢)

ನಾವು ಸಮೂದರ ಕಡೆಗೆ ಅವರ ಸಹೋದರ ಸಾಲಿಹರನ್ನು ಕಳುಹಿಸಿದೆವು. ಅವರು ಹೇಳಿದರು: "ಓ ನನ್ನ ಜನಾಂಗ ಬಾಂಧವರೇ! ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ. ಅವನ ಹೊರತು ಇನ್ನಾರೂ ನಿಮ್ಮ ಇಲಾಹ್ ಇಲ್ಲ. ಅವರು ಹೇಳಿದರು: "ಓ ಸಾಲಿಹ್! ಇದಕ್ಕಿಂತ ಮುಂಚೆ ನಾವು ನಿಮ್ಮಿಂದ ಬಹಳಷ್ಟು ನಿರೀಕ್ಷಿಸಿದ್ದೆವು. ನಮ್ಮ ಪೂರ್ವಿಕರು ಇಬಾದತ್ ಮಾಡುತ್ತಿದ್ದವುಗಳ ಇಬಾದತ್ ಮಾಡುವುದರಿಂದ ನೀವು ನಮ್ಮನ್ನು ತಡೆಯುತ್ತೀರಾ?

(ಹೂದ್ : 61-62)

إِذْ قَالَ لَهُمْ أَخُوهُمْ صَالِحٌ أَلَا تَتَّقُونَ ۝ إِنِّي لَكُمْ رَسُولٌ أَمِينٌ
فَاتَّقُوا اللَّهَ وَأَطِيعُونِ .... وَلَا تُطِيعُوا أَمْرَ الْمُسْرِفِينَ ۝
الَّذِينَ يُفْسِدُونَ فِي الْأَرْضِ وَلَا يُصْلِحُونَ -

(الشعراء - ١٤٢-١٤٤ و ١٥١-١٥٢)

ಅವರ ಸಹೋದರ ಸಾಲಿಹರು ಅವರೊಡನೆ ಹೇಳಿದ ಸಂದರ್ಭವನ್ನು ಸ್ಮರಿಸಿರಿ: "ನೀವು ಭಯಪಡುವುದಿಲ್ಲವೇ? ನಾನು ನಿಮ್ಮ ಪಾಲಿಗೆ ಒಬ್ಬ ಪ್ರಾಮಾಣಿಕ ಸಂದೇಶವಾಹಕನಾಗಿರುತ್ತೇನೆ. ಆದುದರಿಂದ ನೀವು ಅಲ್ಲಾಹನನ್ನು ಭಯಪಡಿರಿ ಮತ್ತು ನನ್ನನ್ನು ಅನುಸರಿಸಿರಿ. ಆ ಅತಿರೇಕಿಗಳನ್ನು ಅನುಸರಿಸಬೇಡಿರಿ. ಅವರು ಭೂಮಿಯಲ್ಲಿ ಗೊಂದಲವನ್ನುಂಟುಮಾಡುತ್ತಾರೆ. ಯಾವ ಸುಧಾರಣೆಯ ಕಾರ್ಯವನ್ನೂ ಮಾಡುವುದಿಲ್ಲ.

(ಅಶ್ಶುಅರಾ: 142-144 ಮತ್ತು 151-152)

ಇಬ್ರಾಹೀಮ್(ಅ) ಅವರ ಜನಾಂಗ

ಇದರ ನಂತರ ಇಬ್ರಾಹೀಮರ ಜನಾಂಗದ ಸರದಿ ಬರುತ್ತದೆ. ಅದರ ರಾಜನಾದ ನಮ್ರೂದನ ಬಗ್ಗೆ ಒಂದು ಸಾಮಾನ್ಯ ತಪ್ಪು ಕಲ್ಪನೆಯಿದೆ. ಅದು ಅವನು ಅಲ್ಲಾಹನನ್ನು ನಿರಾಕರಿಸಿ ತಾನೇ ದೇವನೆಂದು ಸಾರುತ್ತಿದ್ದ ಎಂಬುದೇ ಆಗಿದೆ. ಆದ್ದರಿಂದ ಈ ಜನಾಂಗದ ವಿಷಯವು ವಿಶೇಷ ಮಹತ್ವ ಪಡೆಯುತ್ತದೆ. ವಾಸ್ತವದಲ್ಲಿ ನಮ್ರೂದ್ ಅಲ್ಲಾಹನ ಅಸ್ತಿತ್ವವನ್ನು ಅಂಗೀಕರಿಸುತ್ತಿದ್ದ. ಅವನು ಸೃಷ್ಟಿಕರ್ತ ಮತ್ತು ವಿಶ್ವ ವ್ಯವಸ್ಥಾಪಕನಾಗಿದ್ದಾನೆಂಬುದನ್ನೂ ಒಪ್ಪುತ್ತಿದ್ದ. ಅವನು ಮೂರನೆಯ, ನಾಲ್ಕನೆಯ ಮತ್ತು ಐದನೆಯ ಅರ್ಥಗಳಲ್ಲಿ ಮಾತ್ರ ತನ್ನ ದೇವತ್ವವನ್ನು ಸಾರುತ್ತಿದ್ದ. ಈ ಜನಾಂಗವು ಅಲ್ಲಾಹನ ಬಗ್ಗೆ ತೀರಾ ಅಜ್ಞಾನಿಯಾಗಿತ್ತು. ಅದು ಅಲ್ಲಾಹನು 'ಇಲಾಹ್' ಮತ್ತು 'ರಬ್ಬ್' ಆಗಿದ್ದಾನೆ ಎಂಬುದನ್ನೂ ಒಪ್ಪುತ್ತಿರಲಿಲ್ಲ ಎಂಬುದೂ ಒಂದು ಸಾಮಾನ್ಯ ತಪ್ಪು ಕಲ್ಪನೆಯಾಗಿದೆ. ಆದರೆ ವಾಸ್ತವದಲ್ಲಿ ಈ ಜನಾಂಗದ ಅವಸ್ಥೆಯು ನೂಹರ ಜನಾಂಗ, ಆದ್ ಮತ್ತು ಸಮೂದ್ ಜನಾಂಗಗಳಿಗಿಂತ ಏನೇನೂ ಭಿನ್ನವಾಗಿರಲಿಲ್ಲ. ಅದು ಅಲ್ಲಾಹನ ಅಸ್ತಿತ್ವವನ್ನು ನಂಬುತ್ತಿತ್ತು. ಅವನೇ ರಬ್ಬ್ ಆಗಿದ್ದಾನೆ, ಭೂಮಿ-ಆಕಾಶಗಳ ಸೃಷ್ಟಿಕರ್ತ ಮತ್ತು ವಿಶ್ವದ ವ್ಯವಸ್ಥಾಪಕನಾಗಿದ್ದಾನೆಂಬುದು ಅದಕ್ಕೆ ತಿಳಿದಿತ್ತು. ಅವನ ಇಬಾದತ್ ಮಾಡಬೇಕೆಂಬುದನ್ನೂ ಅದು ನಿರಾಕರಿಸುತ್ತಿರಲಿಲ್ಲ. ಆದರೆ ಅದು ಪ್ರಥಮ ಮತ್ತು ಎರಡನೆಯ ಅರ್ಥದಲ್ಲಿ ಆಕಾಶ ಕಾಯಗಳನ್ನು ಕೂಡಾ ಪ್ರಭುತ್ವದಲ್ಲಿ ಭಾಗೀದಾರ ಎಂದು ಬಗೆದು ಅವುಗಳನ್ನು ಕೂಡಾ ಆರಾಧ್ಯ ವಸ್ತುಗಳೆಂದು ಸಾರುತ್ತಿತ್ತು. ಮೂರನೆಯ, ನಾಲ್ಕನೆಯ ಮತ್ತು ಐದನೆಯ ಅರ್ಥದಲ್ಲಿ ಅವರು ತಮ್ಮ ರಾಜನನ್ನೇ 'ರಬ್ಬ್' ಮಾಡಿಕೊಂಡಿದ್ದರು. ಇದುವೇ ಅವರ ಪಥಭ್ರಷ್ಟತೆಯಾಗಿತ್ತು. ಪವಿತ್ರ ಕುರ್‌ಆನ್‌ನಲ್ಲಿ ಈ ಬಗ್ಗೆ ಬಂದಿರುವ ವಿವರಣೆಗಳು ಬಹಳ ಸ್ಪಷ್ಟವಿದೆ. ಆದರೂ ಜನರು ಈ ಬಗ್ಗೆ ಸರಿಯಾದ ವಿಷಯವನ್ನು ಗ್ರಹಿಸದೇ ಹೋದುದು ಆಶ್ಚರ್ಯಕರವಾಗಿದೆ. ಮೊಟ್ಟ ಮೊದಲು ಹ. ಇಬ್ರಾಹೀಮ್(ಅ) ಅವರಿಗೆ ಜ್ಞಾನೋದಯವಾದ ಘಟನೆಯನ್ನು ನೋಡೋಣ. ಅದರಲ್ಲಿ ಅವರ ಸತ್ಯ ಶೋಧನೆಯ ಚಿತ್ರವನ್ನು ಬಿಡಿಸಲಾಗಿದೆ:

فَلَمَّا جَنَّ عَلَيْهِ اللَّيْلُ رَأَىٰ كَوْكَبًا ۖ قَالَ هَٰذَا رَبِّي ۖ فَلَمَّا أَفَلَ قَالَ
لَا أُحِبُّ الْآفِلِينَ ۝ فَلَمَّا رَأَى الْقَمَرَ بَازِغًا قَالَ هَٰذَا رَبِّي ۖ فَلَمَّا
أَفَلَ قَالَ لَئِن لَّمْ يَهْدِنِي رَبِّي لَأَكُونَنَّ مِنَ الْقَوْمِ الضَّالِّينَ ۝
فَلَمَّا رَأَى الشَّمْسَ بَازِغَةً قَالَ هَٰذَا رَبِّي هَٰذَا أَكْبَرُ ۖ فَلَمَّا أَفَلَتْ
قَالَ يَا قَوْمِ إِنِّي بَرِيءٌ مِّمَّا تُشْرِكُونَ ۝ إِنِّي وَجَّهْتُ وَجْهِيَ لِلَّذِي
فَطَرَ السَّمَاوَاتِ وَالْأَرْضَ حَنِيفًا ۖ وَمَا أَنَا مِنَ الْمُشْرِكِينَ ۝ (الانعام ٧٦-٧٩)

ಒಮ್ಮೆ ರಾತ್ರಿ ಕಾಲವು ಅವರನ್ನಾವರಿಸಿದಾಗ ಅವರೊಂದು ನಕ್ಷತ್ರವನ್ನು ಕಂಡರು. 'ಇದು ನನ್ನ ಪ್ರಭು' ಎಂದರು. ಆದರೆ ಅದು ಅಸ್ತಮಿಸಿದಾಗ 'ನಾನು ಅಸ್ತಮಿಸುವವರಿಗೆ ಮಾರು ಹೋಗುವುದಿಲ್ಲ' ಎಂದರು. ಅನಂತರ ಚಂದ್ರನು ಪ್ರಕಾಶಿಸುತ್ತಿರುವುದು ಕಂಡಾಗ, 'ಇದು ನನ್ನ ಪ್ರಭು' ಎಂದರು. ಆದರೆ ಅದೂ ಮುಳುಗಿದಾಗ, 'ನನ್ನ ಪ್ರಭು ನನಗೆ ಮಾರ್ಗದರ್ಶನ ಮಾಡದಿರುತ್ತಿದ್ದರೆ ನಾನೂ ಪಥಭ್ರಷ್ಟರಲ್ಲಾಗುತ್ತಿದ್ದೆ' ಎಂದರು. ತರುವಾಯ ಸೂರ್ಯನನ್ನು ಪ್ರಕಾಶಮಾನವಾಗಿ ಕಂಡು, 'ಇದೇ ನನ್ನ ಪ್ರಭು. ಇದು ಎಲ್ಲಕ್ಕಿಂತಲೂ ದೊಡ್ಡದಾಗಿದೆ' ಎಂದರು. ಆದರೆ ಅದೂ ಅಸ್ತಮಿಸಿದಾಗ ಇಬ್ರಾಹೀಮರು ಉದ್ಗರಿಸಿದರು: 'ಓ ನನ್ನ ಜನಾಂಗ ಬಾಂಧವರೇ! ನೀವು ದೇವನ ಸಹಭಾಗಿಯಾಗಿಸುವವುಗಳಿಂದೆಲ್ಲ ನಾನು ವಿರಕ್ತನು. ನಾನು ಏಕನಿಷ್ಠೆಯಿಂದ ನನ್ನ ಮುಖವನ್ನು ಭೂಮಿ-ಆಕಾಶಗಳನ್ನು ಸೃಷ್ಟಿಸಿದವನ ಕಡೆಗೆ ತಿರುಗಿಸಿದೆನು. ನಾನು ಎಷ್ಟು ಮಾತ್ರಕ್ಕೂ ಅಲ್ಲಾಹನೊಂದಿಗೆ ಸಹಭಾಗಿಗಳನ್ನಾಗಿ ಮಾಡುವವರಲ್ಲಿ ಸೇರಿದವನಲ್ಲ."

(ಅಲ್ ಅನ್‌ಆಮ್: 76-79)

ಯಾವ ಸಮಾಜದಲ್ಲಿ ಹ.ಇಬ್ರಾಹೀಮ್(ಅ) ಜನಿಸಿದ್ದರೋ ಅದರಲ್ಲಿ ಭೂಮಿ-ಆಕಾಶಗಳ ಸೃಷ್ಟಿಕರ್ತನ ಕಲ್ಪನೆ ಮತ್ತು ಅವನು 'ರಬ್ಬ್' ಆಗಿದ್ದಾನೆಂಬ ಕಲ್ಪನೆಯು ಆಕಾಶಕಾಯಗಳು 'ರಬ್ಬ್' ಆಗಿವೆಯೆಂಬ ಕಲ್ಪನೆಯಿಂದ ಭಿನ್ನವಾಗಿ ಅಸ್ತಿತ್ವದಲ್ಲಿತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇಬ್ರಾಹೀಮ್(ಅ) ಅವರ ಜನಾಂಗದ ಜನರು ಹ. ನೂಹ್(ಅ) ಅವರ ಮೇಲೆ ವಿಶ್ವಾಸವಿರಿಸಿದ್ದ ಮುಸ್ಲಿಮರ ಸಂತತಿಗಳೇ ಆಗಿದ್ದುದರಿಂದ ಈ ಕಲ್ಪನೆಯು ಅವರಿಗೆ ಅನ್ಯವಾಗಿರಲಿಲ್ಲ. ಅವರ ನಿಕಟ ಬಂಧುಗಳಾದ ನೆರೆಯ ಜನಾಂಗಗಳಲ್ಲಿ (ಆದ್ ಮತ್ತು ಸಮೂದ್) ನಿರಂತರ ಪ್ರವಾದಿಗಳ ಆಗಮನದಿಂದ ಇಸ್ಲಾಮ್ ಧರ್ಮದ ಪುನರುತ್ಥಾನವೂ ಆಗುತ್ತಿರುತ್ತಿತ್ತು.

(جَاءَتْهُمُ الرُّسُلُ مِنْ بَيْنِ أَيْدِيهِمْ وَمِنْ خَلْفِهِمْ)

ಆದ್ದರಿಂದ ಹ.ಇಬ್ರಾಹೀಮ್(ಅ) ಅವರಿಗೆ ಅಲ್ಲಾಹನು –

فَاطِرُ السَّمٰوٰتِ وَالْأَرْضِ

ಭೂಮಿ-ಆಕಾಶಗಳ ಸೃಷ್ಟಿಕರ್ತ ಮತ್ತು ಪ್ರಭು ಆಗಿದ್ದಾನೆಂಬ ಕಲ್ಪನೆ ತಮ್ಮ ಪರಿಸರದಲ್ಲೇ ಸಿಕ್ಕಿತ್ತು. ಆದರೆ ಅವರ ಮನದಲ್ಲಿ ಚುಚ್ಚುತ್ತಿದ್ದಂತಹ ಪ್ರಶ್ನೆಗಳೇನೆಂದರೆ ಅಲ್ಲಾಹನ ಜತೆಗೆ ಚಂದ್ರ, ಸೂರ್ಯ ಮತ್ತು ಆಕಾಶಕಾಯಗಳು ಕೂಡಾ ಅವನ ربوبیت ಅರ್ಥಾತ್ ಪ್ರಭುತ್ವದಲ್ಲಿ ಸಹಭಾಗಿಗಳಾಗಿವೆ ಎಂಬ ಅವರ ಜನಾಂಗದ ಕಲ್ಪನೆ ಮತ್ತು ಅದರ ಆಧಾರದಲ್ಲಿ 'ಇಬಾದತ್'ನಲ್ಲಿ ಕೂಡಾ ಅಲ್ಲಾಹನ ಜತೆ ಅವರನ್ನು ಸೇರಿಸುತ್ತಿದ್ದುದು ಎಲ್ಲಿಯ ತನಕ ವಾಸ್ತವಿಕತೆಗೆ*

---

*ಇಬ್ರಾಹೀಮ್(ಅ)ರ ನಾಡಾದ 'ಉರ್' ನಗರದ ಕುರಿತು ಪುರಾತತ್ವ ಸಂಸ್ಥೆಯ ಅಗೆತಗಳಿಂದ ತಿಳಿದು ಬಂದಿರುವಂತೆ ಅಲ್ಲಿ 'ಚಂದ್ರ' ದೇವತೆಯ ಪೂಜೆ ನಡೆಯುತ್ತಿತ್ತು. ಅದನ್ನು ಅವರ ಭಾಷೆಯಲ್ಲಿ

ಅನುಗುಣವಾಗಿದೆ ಎಂಬುದು.

ಆದ್ದರಿಂದ ಅವರು ಪ್ರವಾದಿತ್ವ ಲಭಿಸುವುದಕ್ಕೆ ಮುಂಚೆ ಅದರ ಬಗ್ಗೆಯೇ ಜಿಜ್ಞಾಸೆ ಪ್ರಕಟಿಸಿದರು. ಉದಯಾಸ್ತಮಾನಗಳ ವ್ಯವಸ್ಥೆಯೂ ಅವರಿಗೆ ಭೂಮಿ - ಆಕಾಶಗಳ ಸೃಷ್ಟಿಕರ್ತನ ಹೊರತು ಅನ್ಯ ಆರಾಧ್ಯನಿಲ್ಲ ಎಂಬ ವಸ್ತುಸ್ಥಿತಿಗೆ ತಲುಪುವ ಒಂದು ಮಾರ್ಗಸೂಚಿಯಾಯಿತು. ಆದ್ದರಿಂದಲೇ ಚಂದ್ರನು ಅಸ್ತಮಿಸುವುದನ್ನು ಕಂಡು ಅವರು: "ನನ್ನ ಪ್ರಭು ಅರ್ಥಾತ್ ಅಲ್ಲಾಹನು ನನ್ನ ಮಾರ್ಗದರ್ಶನ ಮಾಡದಿರುತ್ತಿದ್ದರೆ ನಾನು ವಾಸ್ತವಿಕತೆಯನ್ನು ತಲುಪುತ್ತಿರಲಿಲ್ಲ ಮತ್ತು ನನ್ನ ಸುತ್ತಮುತ್ತ ಸಹಸ್ರಾರು ಜನರು ವಂಚನೆಗೊಳಗಾಗಿರುವಂತೆ ನಾನೂ ಈ ದೃಶ್ಯಗಳಿಂದ ವಂಚನೆಗೊಳಗಾಗುತ್ತಿದ್ದೆ" ಎನ್ನುತ್ತಾರೆ.

ಅನಂತರ ಹ. ಇಬ್ರಾಹೀಮ್(ಅ) ಅವರಿಗೆ ಪ್ರವಾದಿತ್ವ ಲಭಿಸಿದಾಗ ಹಾಗೂ ಅವರು ಅಲ್ಲಾಹನೆಡೆಗೆ ಜನರನ್ನು ಕರೆಯುವ ಕೆಲಸ ಆರಂಭಿಸಿದಾಗ, ಅವರು ಜನರ ಮುಂದೆ ತಮ್ಮ ಸಂದೇಶವನ್ನು ಯಾವ ಪದಗಳಲ್ಲಿ ಇಟ್ಟರೋ ಅವುಗಳನ್ನು ಗಮನದಲ್ಲಿಟ್ಟು ಗ್ರಹಿಸಿದಾಗ ನಾವು ಮೇಲೆ ಹೇಳಿದ ಮಾತು ಇನ್ನಷ್ಟು ಸ್ಪಷ್ಟವಾಗುತ್ತದೆ. ಅವರು ಈ ರೀತಿ ಹೇಳುತ್ತಾರೆ:

وَكَيْفَ اَخَافُ مَآ اَشْرَكْتُمْ وَلَا تَخَافُوْنَ اَنَّكُمْ اَشْرَكْتُمْ بِاللّٰهِ
مَا لَمْ يُنَزِّلْ بِهٖ عَلَيْكُمْ سُلْطٰنًا (انعام- ٨١)

"ಅಲ್ಲಾಹನು ಯಾವ ಆಧಾರ ಪ್ರಮಾಣವನ್ನೂ ಇಳಿಸದ ವಸ್ತುಗಳನ್ನು ಅಲ್ಲಾಹನೊಂದಿಗೆ ದೇವತ್ವದಲ್ಲಿ ಸಹಭಾಗಿಗಳನ್ನಾಗಿ ಮಾಡಲು ನೀವು ಭಯಪಡುವುದಿಲ್ಲದಿರುವಾಗ ನೀವು ಅಲ್ಲಾಹನೊಂದಿಗೆ ಸಹಭಾಗಿಗಳನ್ನಾಗಿಸಿದವುಗಳನ್ನು ನಾನೇಕೆ ಭಯಪಡಲಿ?"

(ಅಲ್ ಅನ್ಆಮ್: 81)

وَاَعْتَزِلُكُمْ وَمَا تَدْعُوْنَ مِنْ دُوْنِ اللّٰهِ (مريم- ٤٨)

"ನಾನು ತಮ್ಮನ್ನೂ ತಾವೆಲ್ಲರೂ ಅಲ್ಲಾಹನನ್ನು ಬಿಟ್ಟು ಕೂಗಿ ಪ್ರಾರ್ಥಿಸುತ್ತಿರುವವುಗಳನ್ನೂ ಬಿಟ್ಟಗಲಿ ಹೋಗುತ್ತೇನೆ." (ಮರ್ಯಮ್: 48)

'ನಸಾರ್' ಎನ್ನಲಾಗುತ್ತಿತ್ತು. ಅದರ ನೆರೆಯ ಪ್ರದೇಶದಲ್ಲಿ - ಅದರ ರಾಜಧಾನಿ ಕುರ್ಸಾ ಆಗಿತ್ತು- ಸೂರ್ಯ ದೇವತೆಯ ಆರಾಧನೆ ನಡೆಯುತ್ತಿತ್ತು. ಅದನ್ನು ಅವರ ಭಾಷೆಯಲ್ಲಿ 'ಶಂಶಾಶ್' ಎನ್ನಲಾಗುತ್ತಿತ್ತು. ಈ ದೇಶದ ರಾಜ ಮನೆತನದ, ಮೂಲ ಪುರುಷ ಉರ್ನಮೂ ಆಗಿದ್ದನು. ಅದು ಅರೇಬಿಯದಲ್ಲಿ 'ನಮ್ರೂದ್' ಆಯಿತು. ಅವನ ಹೆಸರಿನಿಂದಲೇ ಅಲ್ಲಿಯ ರಾಜರನ್ನು 'ನಮ್ರೂದ್' ಎಂಬ ಬಿರುದಿನಿಂದ ಕರೆಯಲಾಯಿತು.

قَالَ بَلْ رَبُّكُمْ رَبُّ السَّمٰوٰتِ وَالْاَرْضِ الَّذِیْ فَطَرَهُنَّ ......
قَالَ اَفَتَعْبُدُوْنَ مِنْ دُوْنِ اللّٰهِ مَا لَا یَنْفَعُكُمْ شَیْئًا وَّلَا یَضُرُّكُمْ

(انبیاء - ۵٦ اور ٦٦)

ಅವರು ಹೇಳಿದರು: "ಇಲ್ಲ. ವಾಸ್ತವದಲ್ಲಿ ಭೂಮಿ-ಆಕಾಶಗಳನ್ನು ಸೃಷ್ಟಿಸಿದ ಪ್ರಭುವೇ ನಿಮ್ಮ ಪ್ರಭುವಾಗಿರುವನು."... ಆಗ ಇಬ್ರಾಹೀಮರು "ಹಾಗಾದರೆ ನೀವು ಅಲ್ಲಾಹನನ್ನು ಬಿಟ್ಟು ನಿಮಗೆ ಲಾಭವನ್ನಾಗಲೀ ನಷ್ಟವನ್ನಾಗಲೀ ಉಂಟು ಮಾಡಲು ಶಕ್ತರಲ್ಲದವರನ್ನು ಪೂಜಿಸುತ್ತೀರಾ?" ಎಂದರು. (ಅಲ್ ಅಂಬಿಯಾ: 56,66)

اِذْ قَالَ لِاَبِیْهِ وَقَوْمِهٖ مَاذَا تَعْبُدُوْنَ ۝ اَئِفْكًا اٰلِهَةً دُوْنَ اللّٰهِ
تُرِیْدُوْنَ ۝ فَمَا ظَنُّكُمْ بِرَبِّ الْعٰلَمِیْنَ ۝ (صٰفٰت - ۸۵ - ۸۷)

ಅವರು ತಮ್ಮ ತಂದೆ ಹಾಗೂ ಜನಾಂಗದವರೊಡನೆ ಕೇಳಿದರು: "ನೀವು ಇದೆಂತಹ ವಸ್ತುಗಳನ್ನು ಪೂಜಿಸುತ್ತಿರುವಿರಿ? ಅಲ್ಲಾಹನನ್ನು ಬಿಟ್ಟು ಮಿಥ್ಯ ಆರಾಧ್ಯರನ್ನು ಬಯಸುತ್ತೀರಾ? ಸರ್ವಲೋಕಗಳ ಪಾಲಕ ಪ್ರಭುವಿನ ಕುರಿತು ನಿಮ್ಮ ಕಲ್ಪನೆಯೇನು? (ಅಸ್ಸಾಫಾತ್: 85-87)

اِنَّا بُرَءٰٓؤُا مِنْكُمْ وَمِمَّا تَعْبُدُوْنَ مِنْ دُوْنِ اللّٰهِ كَفَرْنَا بِكُمْ
وَبَدَا بَیْنَنَا وَبَیْنَكُمُ الْعَدَاوَةُ وَالْبَغْضَآءُ اَبَدًا حَتّٰى تُؤْمِنُوْا
بِاللّٰهِ وَحْدَهٗ (الممتحنہ - ۴)

ಇಬ್ರಾಹೀಮ್ ಮತ್ತು ಅವರ ಸಂಗಾತಿಗಳು ತಮ್ಮ ಜನಾಂಗದೊಡನೆ ಸ್ಪಷ್ಟವಾಗಿ ಹೇಳಿದರು: ನಾವು ನಿಮ್ಮಿಂದ ಹಾಗೂ ನೀವು ಅಲ್ಲಾಹನನ್ನು ಬಿಟ್ಟು ಪೂಜಿಸುತ್ತಿರುವ ಈ ವಸ್ತುಗಳಿಂದ ಸಂಪೂರ್ಣ ಅಸಂತುಷ್ಟರಾಗಿದ್ದೇವೆ. ನಾವು ನಿಮ್ಮನ್ನು ಧಿಕ್ಕರಿಸಿದೆವು. ನೀವು ಏಕೈಕನಾದ ಅಲ್ಲಾಹನ ಮೇಲೆ ವಿಶ್ವಾಸವಿರಿಸುವವರೆಗೆ ನಮ್ಮ ನಿಮ್ಮೊಳಗೆ ಶಾಶ್ವತವಾಗಿ ದ್ವೇಷ ಮತ್ತು ವೈರತ್ವ ಉಂಟಾಯಿತು." (ಅಲ್ ಮುಮ್ತಹಿನ: 4)

ಹ. ಇಬ್ರಾಹೀಮ್(ಅ) ಅವರ ಈ ಎಲ್ಲ ಹೇಳಿಕೆಗಳನ್ನು ಪರಿಶೀಲಿಸಿದಾಗ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ, ಅವರ ಸಂಬೋಧಿತರು ಅಲ್ಲಾಹನ ಬಗ್ಗೆ ಸಂಪೂರ್ಣ ಅಜ್ಞಾನಿಗಳಾದ ಜನರಾಗಿರಲಿಲ್ಲ. ಅವನು ಸಕಲ ವಿಶ್ವಗಳ ಪ್ರಭು ಮತ್ತು ಆರಾಧ್ಯನಾಗಿದ್ದಾನೆ ಎಂಬುದನ್ನು ನಿರಾಕರಿಸುವವರಾಗಲಿ ಆ ಬಗ್ಗೆ ತಿಳಿವಳಿಕೆಯೇ ಇಲ್ಲದವರಾಗಲೀ ಆಗಿರಲಿಲ್ಲ. ಆದರೆ ಅವರು

ಅವನ 'ರುಬೂಬಿಯ್ಯತ್'(ಪ್ರಭುತ್ವ) ಮತ್ತು 'ಇಲಾಹಿಯ್ಯತ್' (ದೇವತ್ವ)ನಲ್ಲಿ ಇತರರನ್ನು ಪಾಲುದಾರರಾಗಿ ಮಾಡುತ್ತಿದ್ದರು. ಆದ್ದರಿಂದ ಕುರ್‌ಆನ್‌ನಲ್ಲಿ ಎಲ್ಲಿಯೂ ಹ. ಇಬ್ರಾಹೀಮ್(ಅ) ತಮ್ಮ ಜನಾಂಗಕ್ಕೆ ಅಲ್ಲಾಹನ ಅಸ್ತಿತ್ವದ ಮೇಲೆ ವಿಶ್ವಾಸವಿರಿಸಲು, ಅವನನ್ನು ಆರಾಧ್ಯ ಮತ್ತು ಪ್ರಭುವೆಂದು ಒಪ್ಪಿಕೊಳ್ಳಲು ಕರೆ ನೀಡಿರುವುದು ನಮಗೆ ಕಾಣಸಿಗುವುದಿಲ್ಲ. ಬದಲಾಗಿ ಎಲ್ಲ ಕಡೆಯೂ ಅವರು ಜನರನ್ನುದ್ದೇಶಿಸಿ "ಅಲ್ಲಾಹನೇ ಏಕೈಕ 'ರಬ್ಬ್' ಮತ್ತು 'ಇಲಾಹ್' ಆಗಿದ್ದಾನೆ" ಎಂಬ ಸಂದೇಶವನ್ನೇ ನೀಡಿರುವರು.

ನಮ್ರೂದ್‌ನ ಜನಾಂಗ

ಈಗ ನಮ್ರೂದ್‌ನ ವಿಷಯವನ್ನು ತೆಗೆದುಕೊಳ್ಳೋಣ. ಅವನೊಂದಿಗೆ ಹ. ಇಬ್ರಾಹೀಮ್(ಅ) ನಡೆಸಿದ ಸಂಭಾಷಣೆಯನ್ನು ಪವಿತ್ರ ಕುರ್‌ಆನ್ ಈ ರೀತಿ ಪ್ರಸ್ತಾಪಿಸಿದೆ:

أَلَمْ تَرَ إِلَى الَّذِي حَاجَّ إِبْرَاهِيمَ فِي رَبِّهِ أَنْ آتَاهُ اللَّهُ الْمُلْكَ
إِذْ قَالَ إِبْرَاهِيمُ رَبِّيَ الَّذِي يُحْيِي وَيُمِيتُ ۔ قَالَ أَنَا أُحْيِي وَأُمِيتُ
قَالَ إِبْرَاهِيمُ فَإِنَّ اللَّهَ يَأْتِي بِالشَّمْسِ مِنَ الْمَشْرِقِ فَأْتِ بِهَا
مِنَ الْمَغْرِبِ فَبُهِتَ الَّذِي كَفَرَ ۔ (بقرہ-۲۵۸)

ನೀವೇನು ಇಬ್ರಾಹೀಮರೊಂದಿಗೆ ತರ್ಕ ಮಾಡಿದ ವ್ಯಕ್ತಿಯ ಕುರಿತು ಗಮನಿಸಲಿಲ್ಲವೇ? ತರ್ಕವು ಇಬ್ರಾಹೀಮರ ಪ್ರಭು ಯಾರು ಎಂಬುದರ ಕುರಿತು ಮತ್ತು ಅಲ್ಲಾಹನು ಆ ವ್ಯಕ್ತಿಗೆ ಅಧಿಕಾರವನ್ನು ಕೊಟ್ಟಿದ್ದುದರ ಆಧಾರದಲ್ಲಿ. "ಜೀವನ ಮತ್ತು ಮರಣ ಯಾರ ಅಂಕೆಯಲ್ಲಿರುವುದೋ ಅವನು ನನ್ನ ಪ್ರಭು" ಎಂದು ಇಬ್ರಾಹೀಮರು ಹೇಳಿದಾಗ ಅವನು, "ಜೀವನ ಮತ್ತು ಮರಣ ನನ್ನ ಅಧಿಕಾರದಲ್ಲಿದೆ" ಎಂದನು. ಇಬ್ರಾಹೀಮರು, "ಸರಿ ಹಾಗಾದರೆ ಅಲ್ಲಾಹನು ಸೂರ್ಯನನ್ನು ಪೂರ್ವ ದಿಕ್ಕಿನಿಂದ ಮೂಡಿಸುತ್ತಾನೆ. ನೀನು ಅದನ್ನು ಪಶ್ಚಿಮ ದಿಕ್ಕಿನಿಂದ ಮೂಡಿಸು" ಎಂದರು. ಇದನ್ನು ಕೇಳಿ ಆ ಸತ್ಯನಿಷೇಧಿ ದಿಗ್ಭ್ರಮೆಗೊಂಡನು.
(ಅಲ್ ಬಕರಃ :258)

ಈ ಸಂಭಾಷಣೆಯಿಂದ ವ್ಯಕ್ತವಾಗುವುದೇನೆಂದರೆ ತರ್ಕ ಇದ್ದುದು ಅಲ್ಲಾಹನ ಅಸ್ತಿತ್ವದ ಕುರಿತಾಗಿರಲಿಲ್ಲ. ಇಬ್ರಾಹೀಮ್(ಅ) ಯಾರನ್ನು 'ರಬ್ಬ್' ಎಂದು ಅಂಗೀಕರಿಸುತ್ತಿದ್ದಾರೆಂಬುದೇ ತರ್ಕದ ವಿಷಯವಾಗಿತ್ತು. ನಮ್ರೂದ್ ಅಲ್ಲಾಹನ ಅಸ್ತಿತ್ವವನ್ನು ನಂಬುವ ಜನಾಂಗಕ್ಕೆ ಸೇರಿದವನಾಗಿದ್ದನು. ಅಲ್ಲದೆ ಅವನು ತೀರಾ ಹುಚ್ಚನಾಗಿ ಬಿಟ್ಟಾಗ ಹೊರತು ಭೂಮಿ-ಆಕಾಶಗಳನ್ನು ಸೃಷ್ಟಿಸಿದವನು ಮತ್ತು ಸೂರ್ಯ-ಚಂದ್ರರನ್ನು ತಿರುಗಿಸುತ್ತಿರುವವನು ತಾನೆಂಬ ತೀರಾ ಹುಚ್ಚುತನದ ಮಾತು ಆಡಲು ಸಾಧ್ಯವಿರಲಿಲ್ಲ. ಆದ್ದರಿಂದ ನಿಜವಾಗಿ ಅವನ ವಾದವು

ತಾನು ಭೂಮಿ-ಆಕಾಶಗಳ ಪ್ರಭುವಾಗಿದ್ದೇನೆ ಎಂಬುದಾಗಿರದೆ ಇಬ್ರಾಹೀಮರು ಇರುವ ಈ ಸಾಮ್ರಾಜ್ಯದ 'ರಬ್ಬ್' ನಾನಾಗಿರುವೆನು ಎಂದಾಗಿತ್ತು. ಈ 'ರಬ್ಬ್' ಆಗಿರುವೆನೆಂಬ ವಾದ ಕೂಡಾ ತಾನು ಪ್ರಥಮ ಮತ್ತು ಎರಡನೆಯ ಅರ್ಥದಲ್ಲಿ ಅದರ 'ರಬ್ಬ್' ಆಗಿರುವೆನು ಎಂದು ಆಗಿರಲಿಲ್ಲ. ಏಕೆಂದರೆ ಈ ಅರ್ಥಗಳಲ್ಲಿ ಚಂದ್ರ, ಸೂರ್ಯ ಮತ್ತು ಆಕಾಶಕಾಯಗಳು 'ರಬ್ಬ್' ಆಗಿವೆ ಎಂದು ಅವನು ನಂಬುತ್ತಿದ್ದನು. ಆದರೆ ಮೂರನೆ, ನಾಲ್ಕನೆಯ ಮತ್ತು ಐದನೆಯ ಅರ್ಥದಲ್ಲಿ ತನ್ನ ಸಾಮ್ರಾಜ್ಯದ 'ರಬ್ಬ್' ತಾನೇ ಆಗಿರುವೆನು ಎಂದು ಅವನು ವಾದಿಸುತ್ತಿದ್ದ. ಅರ್ಥಾತ್: ಈ ಸಾಮ್ರಾಜ್ಯದ ಒಡೆತನ ತನಗೆ ಸೇರಿದ್ದು. ಇದರ ಎಲ್ಲ ಪ್ರಜೆಗಳು ನನ್ನ ದಾಸರಾಗಿದ್ದಾರೆ. ನನ್ನ ಕೇಂದ್ರೀಯ ಅಧಿಪತ್ಯವೇ ಅವರ ಸಾಮೂಹಿಕತೆಯ ಬುನಾದಿಯಾಗಿದೆ. ನನ್ನ ಅಪ್ಪಣೆಯು ಅವರ ಪಾಲಿಗೆ ಕಾನೂನಾಗಿದೆ ಎಂಬುದು ಅವನ ವಾದವಾಗಿತ್ತು. (أَنَا رَبُّكُمُ الأَعْلَىٰ) ಎಂಬ ಪದಗಳು ಅವನ ಪ್ರಭುತ್ವದ ವಾದವು ದೊರೆತನದ ಅಹಂಭಾವವಾಗಿತ್ತೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ತನ್ನ ಸಾಮ್ರಾಜ್ಯದಲ್ಲಿರುವ ಇಬ್ರಾಹೀಮ್(ಅ) ಎಂಬ ಓರ್ವ ವ್ಯಕ್ತಿ ಚಂದ್ರನನ್ನಾಗಲೀ ಸೂರ್ಯನನ್ನಾಗಲೀ ನಕ್ಷತ್ರಗಳನ್ನಾಗಲೀ ತನ್ನ 'ರಬ್ಬ್' ಎಂದು ಪರಿಗಣಿಸುವುದಿಲ್ಲ. ಮಾತ್ರವಲ್ಲ ದೊರೆಯನ್ನು ಕೂಡಾ ತನ್ನ ರಾಜಕೀಯ ಮತ್ತು ಸಾಂಸ್ಕೃತಿಕ 'ರಬ್ಬ್' ಎಂದು ಅವನು ಅಂಗೀಕರಿಸುವುದಿಲ್ಲ ಎಂಬುದು ಅವನಿಗೆ ತಿಳಿದಾಗ ಅವನಿಗೆ ಆಶ್ಚರ್ಯವಾಯಿತು. ಅವನು ಇಬ್ರಾಹೀಮ್‌ರನ್ನು(ಅ) ಕರೆದು "ನೀವು ಯಾರನ್ನು 'ರಬ್ಬ್' ಎಂದು ಅಂಗೀಕರಿಸುತ್ತೀರಿ?" ಎಂದು ವಿಚಾರಿಸಿದನು. ಹ. ಇಬ್ರಾಹೀಮ್(ಅ) ಮೊದಲು ಹೀಗೆ ಉತ್ತರಿಸಿದರು. "ಜೀವನ, ಮರಣಗಳ ಅಧಿಕಾರವು ಯಾರ ಕೈಯಲ್ಲಿದೆಯೋ ಅವನೇ ನನ್ನ 'ರಬ್ಬ್' ಆಗಿರುವನು." ಆದರೆ ಈ ಉತ್ತರದಿಂದ ನಮ್ರೂದ್ ವಿಷಯವನ್ನು ಚೆನ್ನಾಗಿ ಗ್ರಹಿಸಲಿಲ್ಲ. "ಜೀವನ ಮರಣಗಳು ನನ್ನ ಅಧಿಕಾರದಲ್ಲಿವೆ. ನಾನು ಯಾರನ್ನು ಬಯಸುತ್ತೇನೋ ಸಾಯಿಸುತ್ತೇನೆ ಯಾರನ್ನು ಬಯಸುತ್ತೇನೋ ಅವರಿಗೆ ಜೀವದಾನ ಮಾಡಿ ಬಿಟ್ಟು ಬಿಡುತ್ತೇನೆ" ಎನ್ನುತ್ತಾ ಆತ ತನ್ನ ಪ್ರಭುತ್ವವನ್ನು ಸಾಬೀತು ಪಡಿಸಲು ಮುಂದಾಗುತ್ತಾನೆ. ಆಗ ಇಬ್ರಾಹೀಮ್(ಅ) ಅವರು, "ನಾನಂತೂ ಕೇವಲ ಅಲ್ಲಾಹನನ್ನು 'ರಬ್ಬ್' ಎಂದು ನಂಬುತ್ತೇನೆ. 'ರುಬೂಬಿಯತ್'ನ ಎಲ್ಲ ಅರ್ಥದಲ್ಲೂ ಕೇವಲ ಅಲ್ಲಾಹನೇ ನನ್ನ 'ರಬ್ಬ್' ಆಗಿರುವನು. ಈ ವಿಶ್ವ ವ್ಯವಸ್ಥೆಯಲ್ಲಿ ಇತರರ ಪ್ರಭುತ್ವಕ್ಕೆ ಅವಕಾಶವೇ ಇಲ್ಲ. ಸೂರ್ಯ-ಚಂದ್ರರ ಉದಯಾಸ್ತಮಾನದಲ್ಲಿ ನೀನು ಸ್ವಲ್ಪವೂ ಹಸ್ತಕ್ಷೇಪ ನಡೆಸುವಂತಿಲ್ಲ" ಎಂದಾಗ ಬುದ್ಧಿವಂತನಾದ ನಮ್ರೂದನಿಗೆ ಜ್ಞಾನೋದಯವಾಯಿತು. ಅಲ್ಲಾಹನ ಈ ಸಾಮ್ರಾಜ್ಯದಲ್ಲಿ ತನ್ನ ಪ್ರಭುತ್ವದ ಘೋಷಣೆಯು ಒಂದು ಪೊಳ್ಳು ಅಹಂಕಾರವಾಗಿದೆ ಎಂಬುದು ಅವನಿಗೆ ಮನವರಿಕೆಯಾಯಿತು. ಆದ್ದರಿಂದ ಅವನು ಮೌನ ವಹಿಸಿದ. ಆದರೆ ಸ್ವೇಚ್ಛೆಯ ದಾಸ್ಯ, ಸ್ವಾರ್ಥ ಮತ್ತು ಕೌಟುಂಬಿಕ ಹಿತಾಸಕ್ತಿಗಳು ಸತ್ಯವು ಪ್ರತ್ಯಕ್ಷವಾದರೂ ಸ್ವೇಚ್ಛಾಧಿಪತ್ಯವನ್ನು ಬಿಟ್ಟು ಅಲ್ಲಾಹ್ ಮತ್ತು ಅವನ ಪ್ರವಾದಿಯನ್ನು ಅನುಸರಿಸಲು ಅವನನ್ನು ಬಿಡಲಿಲ್ಲ. ಆದ್ದರಿಂದಲೇ ಈ ಸಂಭಾಷಣೆಯನ್ನು ಪ್ರಸ್ತಾಪಿಸಿದ ಬಳಿಕ "ಅಲ್ಲಾಹನು ಅಕ್ರಮಿಗಳಿಗೆ ಸನ್ಮಾರ್ಗದರ್ಶನ

ಮಾಡುವುದಿಲ್ಲ" ಎಂದು ಅಲ್ಲಾಹ್ ಹೇಳಿರುವನು (ಅಲ್ ಬಕರಃ: 258). ಸತ್ಯವು ಪ್ರತ್ಯಕ್ಷಗೊಂಡ ಬಳಿಕ ಅವನು ಯಾವ ನಿಲುವು ಸ್ವೀಕರಿಸಬೇಕಿತ್ತೋ ಅದನ್ನು ಸ್ವೀಕರಿಸದೆ ಇದ್ದಾಗ, ಅಕ್ರಮವಾಗಿ ಜನರ ಮೇಲೆ ಸ್ವೇಚ್ಛಾಧಿಪತ್ಯ ನಡೆಸಿ ಜನರ ಮೇಲೆ ಮತ್ತು ಸ್ವಯಂ ತನ್ನ ಮೇಲೆ ಅನ್ಯಾಯವೆಸಗಿದ್ದಾಗ, ಅಲ್ಲಾಹನು ಅವನಿಗೆ ಸನ್ಮಾರ್ಗದರ್ಶನದ ಬೆಳಕನ್ನು ನೀಡಲಿಲ್ಲ. ಏಕೆಂದರೆ ಯಾರು ಸ್ವಯಂ ಸನ್ಮಾರ್ಗದರ್ಶನವನ್ನು ಬಯಸುವುದಿಲ್ಲವೋ ಅವರಿಗೆ ಒತ್ತಾಯಪೂರ್ವಕ ಸನ್ಮಾರ್ಗದರ್ಶನ ಮಾಡಿಸುವುದು ಅಲ್ಲಾಹನ ಕ್ರಮವಲ್ಲ.

ಲೂತ್ ಜನಾಂಗ

ಇಬ್ರಾಹೀಮರ ಜನಾಂಗದ ಬಳಿಕ ನಮ್ಮ ಮುಂದೆ ಲೂತರ ಜನಾಂಗ ಬರುತ್ತದೆ. ಹ. ಲೂತ್(ಅ) ಅವರು ಪ್ರವಾದಿ ಇಬ್ರಾಹೀಮ್(ಅ) ಅವರ ಭ್ರಾತೃಜನಾಗಿದ್ದು ಲೂತ್ ಜನಾಂಗದ ಸುಧಾರಣೆಗಾಗಿ ನಿಯುಕ್ತರಾಗಿದ್ದರು. ಈ ಜನಾಂಗದ ಕುರಿತು ನಮಗೆ ಪವಿತ್ರ ಕುರ್‌ಆನ್‌ನಿಂದ ತಿಳಿದು ಬರುವಂತೆ ಅದು ದೇವನನ್ನು ನಿರಾಕರಿಸುವ ಜನಾಂಗವಾಗಿರಲಿಲ್ಲ. ಅಲ್ಲಾಹನು ಸೃಷ್ಟಿಕರ್ತನು ಮತ್ತು ಪರಿಪಾಲಕ ಪ್ರಭುವಾಗಿದ್ದಾನೆಂಬುದನ್ನು ಕೂಡಾ ಅವರು ನಿರಾಕರಿಸುತ್ತಿರಲಿಲ್ಲ. ಆದರೆ ಮೂರನೆಯ, ನಾಲ್ಕನೆಯ ಮತ್ತು ಐದನೆಯ ಅರ್ಥದಲ್ಲಿ ಅಲ್ಲಾಹನನ್ನು ರಬ್ಬ್ ಎಂದು ನಂಬಲು ಅವರು ನಿರಾಕರಿಸುತ್ತಿದ್ದರು. ಅವನ ನಿಯೋಜಿತ ಪ್ರತಿನಿಧಿ ಎಂಬ ನೆಲೆಯಲ್ಲಿ ಪ್ರವಾದಿಯ ಅಧಿಕಾರವನ್ನು ಅವರು ಮನ್ನಿಸುತ್ತಿರಲಿಲ್ಲ. ಅದು ತನ್ನ ಇಚ್ಛೆಗೆ ತಕ್ಕಂತೆ ವರ್ತಿಸಲು ಸ್ವತಂತ್ರವಾಗಿರಬಯಸುತ್ತಿತ್ತು. ಇದುವೇ ಅದರ ನೈಜ ಅಪರಾಧವಾಗಿತ್ತು. ಈ ಕಾರಣದಿಂದಲೇ ಅದು ದೇವಶಾಪಕ್ಕೆ ಗುರಿಯಾಯಿತು. ಪವಿತ್ರ ಕುರ್‌ಆನ್‌ನ ಈ ಕೆಳಗಿನ ವಿವರಣೆಗಳು ಅದಕ್ಕೆ ಸಾಕ್ಷಿಯಾಗಿವೆ:

إِذْ قَالَ لَهُمْ أَخُوهُمْ لُوطٌ أَلَا تَتَّقُونَ ۝ إِنِّي لَكُمْ رَسُولٌ
أَمِينٌ ۝ فَاتَّقُوا اللَّهَ وَأَطِيعُونِ ۝ وَمَا أَسْأَلُكُمْ عَلَيْهِ مِنْ
أَجْرٍ إِنْ أَجْرِيَ إِلَّا عَلَىٰ رَبِّ الْعَالَمِينَ ۝ أَتَأْتُونَ الذُّكْرَانَ
مِنَ الْعَالَمِينَ ۝ وَتَذَرُونَ مَا خَلَقَ لَكُمْ رَبُّكُمْ مِنْ أَزْوَاجِكُمْ
بَلْ أَنْتُمْ قَوْمٌ عَادُونَ (الشعراء ١٦١ - ١٦٦)

ಅವರ ಸಹೋದರ ಲೂತರು ಅವರೊಡನೆ ಹೇಳಿದ ಸಂದರ್ಭವನ್ನು ಸ್ಮರಿಸಿರಿ. 'ನೀವು ಭಯಪಡುವುದಿಲ್ಲವೇ?' ನಾನು ನಿಮ್ಮ ಪಾಲಿಗೆ ಓರ್ವ ಪ್ರಾಮಾಣಿಕ ಸಂದೇಶವಾಹಕನಾಗಿದ್ದೇನೆ. ಆದುದರಿಂದ ನೀವು ಅಲ್ಲಾಹನನ್ನು ಭಯಪಡಿರಿ ಮತ್ತು ನನ್ನನ್ನು ಅನುಸರಿಸಿರಿ. ಈ ಕಾರ್ಯಕ್ಕಾಗಿ ನಾನು ನಿಮ್ಮಿಂದ ಯಾವ ಪ್ರತಿಫಲವನ್ನು ಅಪೇಕ್ಷಿಸುವುದಿಲ್ಲ. ನನ್ನ ಪ್ರತಿಫಲವು

ಸರ್ವಲೋಕಪಾಲಕ ಪ್ರಭುವಿನ ಬಳಿಯಿದೆ. ನೀವು ಜಗತ್ತಿನ ಸೃಷ್ಟಿಗಳ ಪೈಕಿ ಪುರುಷರ ಬಳಿಗೇ ಹೋಗುತ್ತೀರಾ? ಮತ್ತು ನಿಮ್ಮ ಪತ್ನಿಯರಲ್ಲಿ ನಿಮ್ಮ ಪ್ರಭು ನಿಮಗಾಗಿ ಸೃಷ್ಟಿಸಿರುವುದನ್ನು ಬಿಟ್ಟು ಬಿಡುತ್ತೀರಾ? ವಾಸ್ತವದಲ್ಲಿ ನೀವು ಹದ ಮೀರಿದ ಜನಾಂಗವಾಗಿದ್ದೀರಿ.
(26: 161-166)

ಇದು ಅಲ್ಲಾಹನ ಅಸ್ತಿತ್ವವನ್ನು ನಂಬುವ ಅವನು ಸೃಷ್ಟಿಕರ್ತನೂ ಪಾಲಕ ಪ್ರಭುವೂ ಆಗಿದ್ದಾನೆಂದು ವಿಶ್ವಾಸವಿರಿಸುವ ಜನಾಂಗವನ್ನುದ್ದೇಶಿಸಿ ಹೇಳಿದ ಮಾತೆಂಬುದು ವ್ಯಕ್ತ. ಅವರು ತಮ್ಮ ಉತ್ತರದಲ್ಲೂ ಅದನ್ನೇ ಸಮರ್ಥಿಸುತ್ತಾರೆ. ಅಲ್ಲಾಹ್ ಎಂದರೇನು? ಸೃಷ್ಟಿಕರ್ತನು ಯಾರು? ಅವನೆಂತು ನಮಗೆ ಪಾಲಕ ಪ್ರಭುವಾದನು ಎಂಬಿತ್ಯಾದಿ ಯಾವ ಪ್ರಶ್ನೆಯನ್ನೂ ಅವರು ಕೇಳುವುದಿಲ್ಲ. ಅವರು ಈ ರೀತಿ ಹೇಳುತ್ತಾರೆ:

لَئِنْ لَّمْ تَنْتَهِ يٰلُوْطُ لَتَكُوْنَنَّ مِنَ الْمُخْرَجِيْنَ ○ (الشعراء ١٦٧)

ಓ ಲೂತ್! ನೀನು ನಿನ್ನ ಈ ಮಾತುಗಳನ್ನು ತೊರೆಯದಿದ್ದರೆ ನಿನ್ನನ್ನು ನಾವು ನಮ್ಮ ನಾಡಿನಿಂದ ಹೊರಕ್ಕಟ್ಟುವೆವು. (26: 167)

ಇನ್ನೊಂದೆಡೆ ಈ ಘಟನೆಯನ್ನು ಹೀಗೆ ವಿವರಿಸಲಾಗಿದೆ:

وَلُوْطًا اِذْ قَالَ لِقَوْمِهٖٓ اِنَّكُمْ لَتَاْتُوْنَ الْفَاحِشَةَ مَا سَبَقَكُمْ بِهَا
مِنْ اَحَدٍ مِّنَ الْعٰلَمِيْنَ ○ اَئِنَّكُمْ لَتَاْتُوْنَ الرِّجَالَ وَتَقْطَعُوْنَ السَّبِيْلَ
وَتَاْتُوْنَ فِيْ نَادِيْكُمُ الْمُنْكَرَ فَمَا كَانَ جَوَابَ قَوْمِهٖٓ اِلَّآ اَنْ قَالُوا
ائْتِنَا بِعَذَابِ اللّٰهِ اِنْ كُنْتَ مِنَ الصّٰدِقِيْنَ ○ (عنكبوت ٢٨ - ٢٩)

ನಾವು ಲೂತರನ್ನು ಕಳುಹಿಸಿದೆವು. ಅವರು ತಮ್ಮ ಜನಾಂಗದೊಡನೆ ಹೇಳಿದ ಆ ಸಂದರ್ಭವನ್ನು ಸ್ಮರಿಸಿರಿ. "ನಿಮಗಿಂತ ಮುಂಚೆ ಲೋಕವಾಸಿಗಳಲ್ಲಿ ಯಾರೂ ಮಾಡಿರದಂತಹ ಅಶ್ಲೀಲ ಕಾರ್ಯವನ್ನು ನೀವು ಮಾಡುತ್ತೀರಿ. ನೀವೇನು ಪುರುಷರ ಬಳಿಗೆ ಹೋಗುತ್ತೀರಾ? ದರೋಡೆ ಮಾಡುತ್ತೀರಾ? ಹಾಗೂ ನಿಮ್ಮ ಸಮಾರಂಭಗಳಲ್ಲಿ ದುಷ್ಕರ್ಮಗಳನ್ನೆಸಗುತ್ತೀರಾ? ಅದಕ್ಕೆ ನೀನು ಸತ್ಯವಾದಿಯಾಗಿದ್ದರೆ ಅಲ್ಲಾಹನ ಯಾತನೆಯನ್ನು ತಾ" ಎನ್ನುವ ಹೊರತು ಅವರ ಜನಾಂಗದ ಬಳಿ ಬೇರೆ ಉತ್ತರವಿರಲಿಲ್ಲ. (29: 28-29)

ಇದು ಅಲ್ಲಾಹನನ್ನು ನಿರಾಕರಿಸುವ ಒಂದು ಜನಾಂಗದ ಉತ್ತರವಾಗಿರಲು ಸಾಧ್ಯವೇ? ಇದರಿಂದ ತಿಳಿಯುವುದೇನೆಂದರೆ ಅವರ ನೈಜ ಅಪರಾಧ ಅಲ್ಲಾಹನ ದೇವತ್ವ ಮತ್ತು ಪರಿಪಾಲಕತ್ವದ ನಿರಾಕರಣೆಯಾಗಿರಲಿಲ್ಲ. ಆದರೆ ಅವರು ತಮ್ಮ ನೈತಿಕತೆ, ಸಂಸ್ಕೃತಿ ಮತ್ತು

ಸಾಮಾಜಿಕ ನಿಯಮಗಳಲ್ಲಿ ಅಲ್ಲಾಹನ ಅನುಸರಣೆ ಮತ್ತು ಅವನ ಕಾನೂನಿನ ಪಾಲನೆಯನ್ನು ನಿರಾಕರಿಸುತ್ತಿದ್ದರು. ಅವನ ಪ್ರವಾದಿಯ ಮಾರ್ಗದರ್ಶನದಂತೆ ನಡೆಯಲು ಅವರು ಸಿದ್ಧರಿರಲಿಲ್ಲ.

ಶುಐಬ್ ಜನಾಂಗ

ಈಗ ಮದ್‌ಯನ್‌ನವರ ಮತ್ತು ಐಕ ಜನಾಂಗದ ಕುರಿತು ಚರ್ಚಿಸೋಣ. ಅವರಲ್ಲಿ ಹ. ಶುಐಬ್(ಅ) ನೇಮಿಸಲ್ಪಟ್ಟಿದ್ದರು. ಇವರು ಹ. ಇಬ್ರಾಹೀಮ್(ಅ) ಅವರ ಸಂತತಿಯಲ್ಲಿ ಸೇರಿದವರೆಂಬುದು ನಮಗೆ ತಿಳಿದಿದೆ. ಆದ್ದರಿಂದ ಅಲ್ಲಾಹನ ಅಸ್ತಿತ್ವವನ್ನು ನಂಬುತ್ತಿದ್ದರೋ ಇಲ್ಲವೋ? ಅವನು 'ಇಲಾಹ್'ಮತ್ತು 'ರಬ್ಬ್' ಆಗಿದ್ದಾನೆಂಬುದನ್ನು ಒಪ್ಪುತ್ತಿದ್ದರೋ ಇಲ್ಲವೋ ಎಂಬ ಪ್ರಶ್ನೆಯೇ ಏಳುವುದಿಲ್ಲ. ಅವರೂ ಮೂಲತಃ ಒಂದು ಮುಸ್ಲಿಮ್ ಜನಾಂಗವಾಗಿದ್ದು ಅನಂತರ ಅವರಲ್ಲಿ ವಿಶ್ವಾಸ ಮತ್ತು ಆಚಾರಗಳ ಕೆಡುಕುಗಳು ಕಾಣಿಸಿಕೊಂಡುವು. ಈ ರೀತಿ ಅವರು ಅವನತಿಯತ್ತ ಸಾಗತೊಡಗಿದರು. ಕುರ್‌ಆನ್‌ನ ಪ್ರಕಾರ ಅವರು ತಾವು ಸತ್ಯವಿಶ್ವಾಸಿಗಳಾಗಿದ್ದೇವೆಂಬುದನ್ನು ಕೂಡಾ ಘೋಷಿಸುತ್ತಿದ್ದರು. ಆದ್ದರಿಂದ ಪ್ರವಾದಿ ಶುಐಬ್(ಅ) ಅವರು ಆ ಜನಾಂಗವನ್ನುದ್ದೇಶಿಸಿ, "ನೀವು ಸತ್ಯವಿಶ್ವಾಸಿಗಳಾಗಿದ್ದರೆ" ಈ ರೀತಿ ವರ್ತಿಸಬೇಕೆಂದು ಆಗಾಗ ಹೇಳುತ್ತಿದ್ದರು. ಹ. ಶುಐಬ್(ರ) ಅವರ ಉಪದೇಶಗಳನ್ನು ಮತ್ತು ಆ ಜನಾಂಗದ ಉತ್ತರಗಳನ್ನು ಅವಲೋಕಿಸಿದಾಗ ಸ್ಪಷ್ಟವಾಗಿ ತಿಳಿದುಬರುವುದೇನೆಂದರೆ ಅದು ಅಲ್ಲಾಹನ ಮೇಲೆ ವಿಶ್ವಾಸವಿರಿಸಿರುವ ಅವನನ್ನು ಆರಾಧ್ಯನೆಂದೂ ಪಾಲಕ ಪ್ರಭುವೆಂದೂ ನಂಬುವ ಜನಾಂಗವಾಗಿತ್ತು. ಆದರೆ ಆ ಜನಾಂಗವು ಎರಡು ರೀತಿಯ ಪಥಭ್ರಷ್ಟತೆಯಲ್ಲಿ ಸಿಲುಕಿತ್ತು. ಅದು ಅಲ್ಲಾಹನ ಜತೆ ಇತರರನ್ನೂ ಆರಾಧ್ಯ ಮತ್ತು ಪರಿಪಾಲಕ ಪ್ರಭು ಎಂದು ನಂಬುತ್ತಿತ್ತು. ಆದ್ದರಿಂದ ಅದರ ಆರಾಧನೆಗಳು ಕೇವಲ ಅಲ್ಲಾಹನಿಗೆ ಸೀಮಿತವಾಗಿರಲಿಲ್ಲ. ಇನ್ನೊಂದು ಪಥಭ್ರಷ್ಟತೆಯೇನೆಂದರೆ ಮನುಷ್ಯನ ನೈತಿಕ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ವ್ಯವಹಾರಗಳೊಂದಿಗೆ ಅಲ್ಲಾಹನ ಪ್ರಭುತ್ವಕ್ಕೆ ಯಾವ ಸಂಬಂಧವೂ ಇಲ್ಲ. ನಮ್ಮ ಸಾಮೂಹಿಕ ಜೀವನದಲ್ಲಿ ನಾವು ಸ್ವತಂತ್ರರಾಗಿದ್ದೇವೆ. ನಮ್ಮ ವ್ಯವಹಾರಗಳನ್ನು ನಮಗೆ ಇಷ್ಟಬಂದಂತೆ ನಡೆಸುತ್ತೇವೆ ಎಂದು ಅವರು ವಾದಿಸುತ್ತಿದ್ದರು. ಪವಿತ್ರ ಕುರ್‌ಆನ್‌ನ ಈ ಕೆಳಗಿನ ಆಯತ್‌ಗಳು ನಮ್ಮ ಈ ವಿವರಣೆಗಳನ್ನು ಸಮರ್ಥಿಸುತ್ತವೆ:

وَإِلَىٰ مَدْيَنَ أَخَاهُمْ شُعَيْبًا ۗ قَالَ يَا قَوْمِ اعْبُدُوا اللَّهَ مَا لَكُم
مِّنْ إِلَٰهٍ غَيْرُهُ ۖ قَدْ جَاءَتْكُم بَيِّنَةٌ مِّن رَّبِّكُمْ ۖ فَأَوْفُوا الْكَيْلَ
وَالْمِيزَانَ وَلَا تَبْخَسُوا النَّاسَ أَشْيَاءَهُمْ وَلَا تُفْسِدُوا فِي الْأَرْضِ
بَعْدَ إِصْلَاحِهَا ۚ ذَٰلِكُمْ خَيْرٌ لَّكُمْ إِن كُنتُم مُّؤْمِنِينَ ......
وَإِن كَانَ طَائِفَةٌ مِّنكُمْ آمَنُوا بِالَّذِي أُرْسِلْتُ بِهِ وَطَائِفَةٌ

لَمْ يُؤْمِنُوْا فَاصْبِرُوْا حَتّٰى يَحْكُمَ اللّٰهُ بَيْنَنَا وَهُوَ خَيْرُ الْحٰكِمِيْنَ
(اعراف ٨٥ اور ٨٧)

ಮದ್‌ಯನರ ಕಡೆಗೆ ನಾವು ಅವರ ಸಹೋದರ ಶುಐಬರನ್ನು ಕಳುಹಿಸಿದೆವು. ಅವರು ಹೇಳಿದರು, "ಓ ನನ್ನ ಜನಾಂಗ ಬಾಂಧವರೇ! ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ. ಅವನ ಹೊರತು ನಿಮ್ಮ ಆರಾಧ್ಯನಾರೂ ಇಲ್ಲ. ನಿಮ್ಮ ಬಳಿಗೆ ನಿಮ್ಮ ಪ್ರಭುವಿನ ಸುವ್ಯಕ್ತ ಮಾರ್ಗದರ್ಶನ ಬಂದಿರುತ್ತದೆ. ಆದುದರಿಂದ ಅಳತೆ ಮತ್ತು ತೂಕವನ್ನು ಸಂಪೂರ್ಣಗೊಳಿಸಿರಿ. ಜನರಿಗೆ ಅವರ ವಸ್ತುಗಳನ್ನು ಕಡಿತಗೊಳಿಸಿ ಕೊಡಬೇಡಿರಿ. ಮತ್ತು ಭೂಮಿಯಲ್ಲಿ ಸುಧಾರಣೆಯಾದ ಬಳಿಕ ಕ್ಷೋಭೆಯನ್ನುಂಟು ಮಾಡಬೇಡಿರಿ. ನೀವು ನಿಜಕ್ಕೂ ವಿಶ್ವಾಸಿಗಳಾಗಿದ್ದರೆ ಇದರಲ್ಲಿ ನಿಮಗೆ ಒಳಿತಿದೆ.... ಯಾವ ಶಿಕ್ಷಣದೊಂದಿಗೆ ನಾನು ಕಳುಹಿಸಲ್ಪಟ್ಟಿರುತ್ತೇನೋ ಅದರ ಮೇಲೆ ನಿಮ್ಮ ಪೈಕಿ ಒಂದು ಪಂಗಡವು ವಿಶ್ವಾಸವಿಡುತ್ತಲೂ ಇನ್ನೊಂದು ಪಂಗಡವು ವಿಶ್ವಾಸವಿಡದೆಯೂ ಇದ್ದರೆ ಅಲ್ಲಾಹನು ನಮ್ಮ ನಡುವೆ ಒಂದು ತೀರ್ಮಾನ ಮಾಡುವವರೆಗೂ ಸಹನೆಯೊಂದಿಗೆ ಕಾದುಕೊಂಡಿರಿ. ಮತ್ತು ಅವನೇ ಎಲ್ಲರಿಗಿಂತಲೂ ಉತ್ತಮ ತೀರ್ಮಾನ ಮಾಡುವವನಾಗಿರುತ್ತಾನೆ.
(7: 85-87)

وَيٰقَوْمِ اَوْفُوا الْمِكْيَالَ وَالْمِيْزَانَ بِالْقِسْطِ وَلَا تَبْخَسُوا النَّاسَ
اَشْيَآءَهُمْ وَلَا تَعْثَوْا فِى الْاَرْضِ مُفْسِدِيْنَ ۝ بَقِيَّتُ اللّٰهِ خَيْرٌ
لَّكُمْ اِنْ كُنْتُمْ مُّؤْمِنِيْنَ ۚ وَمَآ اَنَا عَلَيْكُمْ بِحَفِيْظٍ ۝ قَالُوْا يٰشُعَيْبُ
اَصَلٰوتُكَ تَاْمُرُكَ اَنْ نَّتْرُكَ مَا يَعْبُدُ اٰبَآؤُنَآ اَوْ اَنْ نَّفْعَلَ فِىْٓ
اَمْوَالِنَا مَا نَشٰٓؤُا ۭ اِنَّكَ لَاَنْتَ الْحَلِيْمُ الرَّشِيْدُ (هود - ٨٥ - ٨٧)

ಓ ನನ್ನ ಜನಾಂಗ ಬಾಂಧವರೇ! ನ್ಯಾಯದೊಂದಿಗೆ ಪೂರ್ತಿಯಾಗಿ ಅಳತೆ ಮತ್ತು ತೂಕ ಮಾಡಿ ಕೊಡಿರಿ. ಜನರಿಗೆ ಅವರ ವಸ್ತುಗಳನ್ನು ಕಡಿಮೆ ಮಾಡಿಕೊಡಬೇಡಿರಿ ಮತ್ತು ಭೂಮಿಯಲ್ಲಿ ಕ್ಷೋಭೆ ಹರಡುತ್ತ ನಡೆಯಬೇಡಿರಿ. ನೀವು ಸತ್ಯ ವಿಶ್ವಾಸಿ ಗಳಾಗಿರುವಿರಾದರೆ ಅಲ್ಲಾಹನು ನೀಡಿದ ಉಳಿತಾಯವೇ ನಿಮಗೆ ಉತ್ತಮ. ಅಂತು ನಾನೇನೂ ನಿಮ್ಮ ಮೇಲ್ನೋಟಗಾರನಲ್ಲ. ಅವರು ಉತ್ತರವಿತ್ತರು, "ಓ ಶುಐಬ್! ನಾವು ನಮ್ಮ ಪೂರ್ವಿಕರು ಆರಾಧಿಸುತ್ತಿದ್ದ ಆರಾಧ್ಯರನ್ನೆಲ್ಲಾ ತ್ಯಜಿಸಬೇಕೆಂದಾಗಲಿ, ನಮ್ಮ ಸೊತ್ತುಗಳನ್ನು ನಮಗೆ ಸರಿ ಕಂಡಂತೆ ಬಳಸುವ ಅಧಿಕಾರವಿಲ್ಲವೆಂದಾಗಲಿ ನಿನ್ನ ನಮಾಝ್ ನಿನಗೆ ಆಜ್ಞಾಪಿಸುತ್ತಿದೆಯೇ? ನೀನೊಬ್ಬನು ಮಾತ್ರ ಮಹಾ ಸೌಜನ್ಯಶೀಲನೂ ಸನ್ಮಾರ್ಗನಿಷ್ಠನೂ ಆಗಿ ಬಿಟ್ಟಿರುವೆ!
(ಪವಿತ್ರ ಕುರ್‌ಆನ್ 11: 85-87)

ರಬ್ಬ್ ಮತ್ತು ಇಲಾಹ್‌ನ ಕುರಿತು ಅವರ ನೈಜ ಪಥಭ್ರಷ್ಟತೆ ಏನಾಗಿತ್ತೆಂಬುದನ್ನು ಮುಖ್ಯವಾಗಿ ಕೊನೆಯ ವಾಕ್ಯವು ಸ್ಪಷ್ಟಪಡಿಸುತ್ತದೆ.

ಫಿರ್‌ಔನ್ ಮತ್ತು ಅವನ ಜನಾಂಗ

ಇನ್ನು ನಾವು ಫಿರ್‌ಔನ್ ಮತ್ತು ಅವನ ಜನಾಂಗದ ಕುರಿತು ಅವಲೋಕಿಸೋಣ. ಈ ಕುರಿತು ನಮ್ರೂದ್ ಮತ್ತು ಅವನ ಜನಾಂಗಕ್ಕಿಂತ ಹೆಚ್ಚಿನ ತಪ್ಪು ಕಲ್ಪನೆಗಳು ಪ್ರಚಲಿತವಿದೆ. ಫಿರ್‌ಔನ್ ದೇವನ ನಿರಾಕರಣೆ ಮಾಡುತ್ತಿದ್ದುದು ಮಾತ್ರವಲ್ಲ ಸ್ವಯಂ ದೇವನಾಗಿರುವೆನೆಂದು ಘೋಷಿಸುತ್ತಿದ್ದನೆಂಬುದು ಸಾಮಾನ್ಯ ಕಲ್ಪನೆಯಾಗಿದೆ. ಅಂದರೆ ನಾನು ಭೂಮಿ-ಆಕಾಶಗಳ ಸೃಷ್ಟಿಕರ್ತನೆಂದು ಘಂಟಾಘೋಷವಾಗಿ ಸಾರುವಷ್ಟು ಅವನ ತಲೆ ಕೆಟ್ಟು ಹೋಗಿತ್ತು ಮತ್ತು ಅವನ ಜನಾಂಗಕ್ಕೆ ಅದನ್ನು ಒಪ್ಪಿಕೊಳ್ಳುವಷ್ಟು ಹುಚ್ಚು ಹಿಡಿದಿತ್ತು. ಆದರೆ ಪವಿತ್ರ ಕುರ್‌ಆನ್ ಮತ್ತು ಇತಿಹಾಸದ ಅಧ್ಯಯನದಿಂದ ತಿಳಿದು ಬರುವಂತೆ 'ಇಲಾಹ್'-'ರಬ್ಬ್'ನ ಕುರಿತು ಅವನ ಪಥಭ್ರಷ್ಟತೆಯು ನಮ್ರೂದ್‌ನ ಪಥಭ್ರಷ್ಟತೆಗಿಂತ ಮತ್ತು ಅವನ ಜನಾಂಗದ ಪಥಭ್ರಷ್ಟತೆಯು ನಮ್ರೂದನ ಜನಾಂಗದ ಪಥಭ್ರಷ್ಟತೆಗಿಂತ ಹೆಚ್ಚೇನೂ ಭಿನ್ನವಾಗಿರಲಿಲ್ಲ. ವ್ಯತ್ಯಾಸವೇನೆಂದರೆ ಇಲ್ಲಿ ರಾಜಕೀಯ ಕಾರಣಗಳಿಗಾಗಿ ಬನೀ ಇಸ್ರಾಈಲ್ ಜನಾಂಗದ ಜತೆ ಒಂದು ರೀತಿಯ ಜನಾಂಗೀಯ ಪಕ್ಷಪಾತ ಮತ್ತು ಹಠ ಸಾಧನೆಯು ಜನ್ಮ ತಾಳಿತ್ತು. ಆದ್ದರಿಂದ ಕೇವಲ ಹಗೆತನದಿಂದಾಗಿ ಅಲ್ಲಾಹನನ್ನು 'ಇಲಾಹ್' ಮತ್ತು 'ರಬ್ಬ್' ಎಂದು ಒಪ್ಪಲು ನಿರಾಕರಿಸಲಾಗುತ್ತಿತ್ತು. ವಾಸ್ತವದಲ್ಲಿ ಇಂದಿನ ನಾಸ್ತಿಕರಂತೆಯೇ ಅವರ ಮನದಲ್ಲೂ ದೇವಾಸ್ತಿತ್ವದ ಅಂಗೀಕಾರವು ಅಡಗಿತ್ತು.

ವಾಸ್ತವಿಕತೆಯೇನೆಂದರೆ ಹ. ಯೂಸುಫ್(ಅ) ಅವರಿಗೆ ಈಜಿಪ್ಟ್‌ನಲ್ಲಿ ಅಧಿಕಾರ ಪ್ರಾಪ್ತವಾದಾಗ ಅವರು ಇಸ್ಲಾಮ್‌ನ ಬೋಧನೆಗಳ ಪ್ರಚಾರ ಮಾಡಲು ಶಕ್ತಿ ಮೀರಿ ಶ್ರಮಿಸಿದರು. ಅವರು ಈಜಿಪ್ಟ್‌ನಲ್ಲಿ ಬೀರಿದಂತಹ ಪ್ರಭಾವವನ್ನು ಶತಮಾನಗಳ ತನಕವೂ ಯಾರಿಂದಲೂ ಅಳಿಸಲು ಸಾಧ್ಯವಾಗಿರಲಿಲ್ಲ. ಆಗ ಈಜಿಪ್ಟ್‌ನ ಇಡೀ ಜನಾಂಗವು ಇಸ್ಲಾಮ್ ಸ್ವೀಕರಿಸಿರಲಿಲ್ಲವೆಂಬುದು ನಿಜ. ಆದರೆ ಅಲ್ಲಿ ಯಾರೂ ಅಲ್ಲಾಹನ ಕುರಿತು ಅಜ್ಞನಾಗಿ ಉಳಿಯುವುದು ಅಸಾಧ್ಯವಾಗಿತ್ತು. ಅಲ್ಲಾಹನೇ ಭೂಮಿ-ಆಕಾಶಗಳ ಸೃಷ್ಟಿಕರ್ತನೆಂಬುದು ಎಲ್ಲರಿಗೂ ತಿಳಿದಿತ್ತು. ಇಷ್ಟು ಮಾತ್ರವಲ್ಲ ಆ ಬೋಧನೆಗಳ ಫಲವಾಗಿ ಇಡೀ ಈಜಿಪ್ಟ್‌ನ ಜನಾಂಗವು ಅಲ್ಲಾಹನನ್ನು ಅತಿ ದೊಡ್ಡ ಆರಾಧ್ಯ ಮತ್ತು ಅತಿದೊಡ್ಡ ಪಾಲಕ ಪ್ರಭು ಎಂದು ಒಪ್ಪುತ್ತಿತ್ತು. ಯಾವ ವ್ಯಕ್ತಿಯೂ ಅಲ್ಲಾಹನು ಆರಾಧ್ಯನಾಗಿದ್ದಾನೆಂಬುದನ್ನು ನಿರಾಕರಿಸುತ್ತಿರಲಿಲ್ಲ. ಆದರೆ ಅವರ ಪೈಕಿ ಸತ್ಯನಿಷೇಧದಲ್ಲೇ ನೆಲೆ ನಿಂತವರು 'ಇಲಾಹ್' ಮತ್ತು 'ರಬ್ಬ್' ಆಗಿರುವುದರಲ್ಲಿ ಅಲ್ಲಾಹನ ಜತೆ ಇತರರನ್ನೂ ಭಾಗೀದಾರರಾಗಿ ಮಾಡುತ್ತಿದ್ದರು. ಈ ಪ್ರಭಾವವು ಹ. ಮೂಸಾ(ಅ) ಅವರ ನೇಮಕದ ತನಕ ಉಳಿದಿತ್ತು[1]. ಫಿರ್‌ಔನನ ಆಸ್ಥಾನದಲ್ಲಿ

---

1. ತೌರಾತ್‌ನ ಚಾರಿತ್ರಿಕ ವರದಿಯ ಪ್ರಕಾರ ಈಜಿಪ್ಟ್‌ನ ಜನಸಂಖ್ಯೆಯ $^1/_5$ ಭಾಗವು ಮುಸ್ಲಿಮ್ ಆಗಿತ್ತು. ತೌರಾತ್‌ನಲ್ಲಿ ಬನೀ ಇಸ್ರಾಈಲರ ಜನಗಣತಿಯ ಲೆಕ್ಕ ಇದೆ. ಅದರ ಪ್ರಕಾರ ಅವರು ಹ. ಮೂಸಾ(ಅ) ಅವರ ಜತೆಗೆ ಈಜಿಪ್ಟ್‌ನಿಂದ ಹೊರಟಾಗ 20 ಲಕ್ಷ ಇದ್ದರು. ಆಗ

ಅವನ ಜನಾಂಗದ ಓರ್ವ ಸರದಾರ ಮಾಡಿದ ಒಂದು ಭಾಷಣವು ಇದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ. ಫಿರ್‌ಔನನು ಮೂಸಾರನ್ನು(ಅ) ವಧಿಸುವ ಇಂಗಿತವನ್ನು ವ್ಯಕ್ತಪಡಿಸಿದಾಗ ಅವನ ಆಸ್ಥಾನದ ಓರ್ವ ಗಣ್ಯನು, ಆತ ಆಗಲೇ ಮುಸ್ಲಿಮ್ ಆಗಿದ್ದರೂ ತನ್ನ ಇಸ್ಲಾಮ್ ಸ್ವೀಕಾರವನ್ನು ಬಚ್ಚಿಟ್ಟಿದ್ದ-ಕಳವಳಗೊಂಡು ಹೀಗೆ ಹೇಳಿದನು:

أَتَقْتُلُونَ رَجُلًا أَنْ يَقُولَ رَبِّيَ اللَّهُ وَقَدْ جَاءَكُمْ بِالْبَيِّنَاتِ مِنْ
رَبِّكُمْ ۖ وَإِنْ يَكُ كَاذِبًا فَعَلَيْهِ كَذِبُهُ ۖ وَإِنْ يَكُ صَادِقًا يُصِبْكُمْ
بَعْضُ الَّذِي يَعِدُكُمْ ۖ إِنَّ اللَّهَ لَا يَهْدِي مَنْ هُوَ مُسْرِفٌ كَذَّابٌ
يَا قَوْمِ لَكُمُ الْمُلْكُ الْيَوْمَ ظَاهِرِينَ فِي الْأَرْضِ فَمَنْ يَنْصُرُنَا مِنْ بَأْسِ
اللَّهِ إِنْ جَاءَنَا ۚ ..... يَا قَوْمِ إِنِّي أَخَافُ عَلَيْكُمْ مِثْلَ يَوْمِ الْأَحْزَابِ
مِثْلَ دَأْبِ قَوْمِ نُوحٍ وَعَادٍ وَثَمُودَ وَالَّذِينَ مِنْ بَعْدِهِمْ ....
وَلَقَدْ جَاءَكُمْ يُوسُفُ مِنْ قَبْلُ بِالْبَيِّنَاتِ فَمَا زِلْتُمْ فِي شَكٍّ مِمَّا
جَاءَكُمْ بِهِ ۖ حَتَّىٰ إِذَا هَلَكَ قُلْتُمْ لَنْ يَبْعَثَ اللَّهُ مِنْ بَعْدِهِ رَسُولًا
...... وَيَا قَوْمِ مَا لِي أَدْعُوكُمْ إِلَى النَّجَاةِ وَتَدْعُونَنِي إِلَى النَّارِ
تَدْعُونَنِي لِأَكْفُرَ بِاللَّهِ وَأُشْرِكَ بِهِ مَا لَيْسَ لِي بِهِ عِلْمٌ وَأَنَا
أَدْعُوكُمْ إِلَى الْعَزِيزِ الْغَفَّارِ (المومن ۔ ۲۸ ۔ ۲۹ اور ۳۰ ۔ ۳۱ اور ۴۱ ۔ ۴۲)

"ನನ್ನ ಪ್ರಭು ಅಲ್ಲಾಹನಾಗಿರುತ್ತಾನೆಂದು ಹೇಳಿದುದಕ್ಕಾಗಿ ಮಾತ್ರ ನೀವು ಒಬ್ಬನನ್ನು

ಈಜಿಪ್ಟ್‌ನ ಜನಸಂಖ್ಯೆಯು ಒಂದು ಕೋಟಿಗಿಂತ ಹೆಚ್ಚಿರಲಿಲ್ಲ. ತೌರಾತ್‌ನಲ್ಲಿ ಅವರೆಲ್ಲರನ್ನೂ ಬನೀ ಇಸ್ರಾಈಲ್ ಎಂದೇ ಚಿತ್ರಿಸಲಾಗಿದೆ. ಆದರೆ ಹ. ಯಾಕೂಬ್(ಅ) ಅವರ 12 ಪುತ್ರರಿಂದ ಎರಡು ಶತಮಾನಗಳಲ್ಲಿ 20 ಲಕ್ಷ ಜನರಾಗುವುದು ಯಾವ ರೀತಿಯಿಂದಲೂ ಸಾಧ್ಯವಿಲ್ಲ. ಆದ್ದರಿಂದ ಈಜಿಪ್ಟ್‌ನ ಜನರ ಒಂದು ದೊಡ್ಡ ಸಂಖ್ಯೆಯು ಇಸ್ಲಾಮ್ ಸ್ವೀಕರಿಸಿ ಅವರ ಜತೆ ಸೇರಿಕೊಂಡಿರಬೇಕೆಂದೇ ಭಾವಿಸಬೇಕಾಗುತ್ತದೆ. ವಲಸೆಯ ಸಮಯದಲ್ಲೂ ಈಜಿಪ್ಟ್‌ನ ಈ ಮುಸ್ಲಿಮರು ಬನೀ ಇಸ್ರಾಈಲರ ಜತೆ ಸೇರಿಕೊಂಡಿರಬೇಕು. ಇದರಿಂದ ಹ. ಯೂಸುಫ್(ಅ) ಮತ್ತವರ ಸಂಗಾತಿಗಳ ಧರ್ಮಪ್ರಚಾರ ಕಾರ್ಯದ ಪ್ರಭಾವವನ್ನು ಊಹಿಸಬಹುದಾಗಿದೆ.

ವಧಿಸಿ ಬಿಡುವಿರಾ? ವಸ್ತುತಃ ಅವರು ನಿಮ್ಮ ಪ್ರಭುವಿನ ಕಡೆಯಿಂದ ನಿಮ್ಮ ಬಳಿಕೆ ಸುವ್ಯಕ್ತ ಪ್ರಮಾಣಗಳನ್ನು ತಂದಿದ್ದಾರೆ. ಅವರು ಸುಳ್ಳುಗಾರರಾಗಿದ್ದರೆ ಅವರ ಸುಳ್ಳು ಸ್ವಯಂ ಅವರ ಮೇಲೆಯೇ ತಿರುಗಿ ಬೀಳುವುದು. ಅವರು ಸತ್ಯವಾದಿಯಾಗಿದ್ದರೆ ಯಾವ ಭಯಾನಕ ದುಷ್ಪರಿಣಾಮಗಳ ಕುರಿತು ಅವರು ನಿಮ್ಮನ್ನು ಎಚ್ಚರಿಸುತ್ತಿರುವರೋ ಅವುಗಳಲ್ಲಿ ಕೆಲವಂತೂ ನಿಮ್ಮ ಮೇಲೆ ಖಂಡಿತವಾಗಿಯೂ ಬಂದು ಬಿಡುವುವು. ಮಿತಿ ಮೀರುವಾತನಿಗೆ ಮತ್ತು ಸುಳ್ಳುಗಾರನಿಗೆ ಅಲ್ಲಾಹನು ಸನ್ಮಾರ್ಗದರ್ಶನ ನೀಡುವುದಿಲ್ಲ. ನನ್ನ ಜನಾಂಗ ಬಾಂಧವರೇ! ಇಂದು ನಿಮಗೆ ಅಧಿಕಾರ ಪ್ರಾಪ್ತವಿದೆ ಮತ್ತು ಭೂಮಿಯಲ್ಲಿ ನೀವು ಮೇಲುಗೈಯುಳ್ಳವರಾಗಿದ್ದೀರಿ. ಆದರೆ ಅಲ್ಲಾಹನ ಯಾತನೆ ನಮ್ಮ ಮೇಲೆ ಬಂದು ಬಿಟ್ಟರೆ ಯಾರು ತಾನೇ ನಮಗೆ ನೆರವಾಗಬಲ್ಲರು?... ನನ್ನ ಜನಾಂಗದವರೇ! ಈ ಮುಂಚೆ ಅನೇಕ ಸಮೂಹಗಳ ಮೇಲೆ ಬಂದೆರಗಿದಂತಹ ದಿನವೇ ನಿಮ್ಮ ಮೇಲೂ ಬಂದು ಬಿಡುವುದೋ ಎಂಬ ಭಯ ನನಗಿದೆ. ಉದಾಹರಣೆಗಾಗಿ ನೂಹರ ಜನಾಂಗ, ಆದ್, ಸಮೂದ್ ಮತ್ತು ಅವರ ನಂತರದ ಜನಾಂಗಗಳ ಮೇಲೆ ಬಂದೆರಗಿದಂತಹ ದಿನ... ಇದಕ್ಕೆ ಮುಂಚೆ ಯೂಸುಫರು ನಿಮ್ಮ ಬಳಿಗೆ ಸುವ್ಯಕ್ತ ನಿದರ್ಶನಗಳನ್ನು ತಂದಿದ್ದರು. ಆದರೆ ನೀವು ಅವರು ತಂದ ಶಿಕ್ಷಣದ ಬಗ್ಗೆ ಸಂಶಯದಲ್ಲೇ ಬಿದ್ದು ಬಿಟ್ಟಿರಿ. ತರುವಾಯ ಅವರು ನಿಧನರಾದಾಗ ನೀವು ಇನ್ನು ಅವರ ಬಳಿಕ ಎಷ್ಟು ಮಾತ್ರಕ್ಕೂ ಅಲ್ಲಾಹನು ಸಂದೇಶವಾಹಕರನ್ನು ಕಳುಹಿಸಲಿಕ್ಕಿಲ್ಲ ಎಂದಿರಿ... ಓ ಜನಾಂಗ ಬಾಂಧವರೇ! ಇದೇನು, ನಾನಂತು ನಿಮ್ಮನ್ನು ವಿಮೋಚನೆಯ ಕಡೆಗೆ ಕರೆಯುತ್ತಿದ್ದೇನೆ ಮತ್ತು ನೀವಾದರೋ ನನ್ನನ್ನು ನರಕಾಗ್ನಿಯತ್ತ ಆಹ್ವಾನಿಸುತ್ತಿರುವಿರಿ! ನಾನು ಅಲ್ಲಾಹನನ್ನು ನಿರಾಕರಿಸಬೇಕೆಂದೂ ಅವನೊಂದಿಗೆ ನಾನರಿಯದಂತಹ ಅಸ್ತಿತ್ವಗಳನ್ನು ಸಹಭಾಗಿಗಳಾಗಿ ಮಾಡಬೇಕೆಂದೂ ನೀವು ನನಗೆ ಕರೆ ಕೊಡುತ್ತೀರಿ. ನಾನಾದರೋ ನಿಮ್ಮನ್ನು ಪ್ರಬಲನೂ ಮಹಾ ಕ್ಷಮಾದಾನಿಯೂ ಆಗಿರುವ ಆ ದೇವನ ಕಡೆಗೆ ಕರೆಯುತ್ತಿದ್ದೇನೆ."

(40: 28,29,30,31 ಮತ್ತು 41-42)

ಹ. ಯೂಸುಫ್(ಅ) ಅವರ ಮಹಾನ್ ವ್ಯಕ್ತಿತ್ವದ ಪ್ರಭಾವವು ಅನೇಕ ಶತಮಾನಗಳು ಕಳೆದ ಬಳಿಕ ಆಗಲೂ ಬಾಕಿಯುಳಿದಿತ್ತು. ಮತ್ತು ಆ ಮಹಾನ್ ಪ್ರವಾದಿಯ ಶಿಕ್ಷಣದ ಪ್ರಭಾವದಿಂದಾಗಿ ಈ ಜನಾಂಗವು ಅಲ್ಲಾಹನ ಅಸ್ತಿತ್ವವನ್ನೇ ಅರಿಯದಷ್ಟು ಅಥವಾ ಅಲ್ಲಾಹನು ಈ ಸಮಸ್ತ ವಿಶ್ವದ 'ಇಲಾಹ್' ಮತ್ತು 'ರಬ್ಬ್' ಆಗಿದ್ದಾನೆಂದೂ ಅವನ ಕ್ರೋಧವು ಭಯಪಡಬೇಕಾದ ವಸ್ತುವಾಗಿದೆಯೆಂದೂ ತಿಳಿಯದಷ್ಟು ಅಜ್ಞಾನಿ ಖಂಡಿತ ಆಗಿರಲಿಲ್ಲ. ಕೊನೆಯ ವಾಕ್ಯದಿಂದ ತಿಳಿದು ಬರುವಂತೆ ಆ ಜನಾಂಗವು ಅಲ್ಲಾಹನನ್ನು ರಬ್ಬ್ ಮತ್ತು ಇಲಾಹ್ ಎಂದು ಬಗೆಯುತ್ತಿತ್ತು. ಆದರೆ ಇತರ ಜನಾಂಗಗಳಂತೆ ಈ ಎರಡೂ ಗುಣಗಳಲ್ಲಿ ಇತರರನ್ನೂ ಸಹಭಾಗಿಗಳಾಗಿ ಮಾಡಿತ್ತು.

ಇಲ್ಲಿ ಸಂಶಯ ಉಂಟಾಗುವುದೇಕೆಂದರೆ ಹ. ಮೂಸಾ(ಅ) ಅವರ ಬಾಯಿಯಿಂದ إنا رسول رب العلمين "ನಾವು ರಬ್ಬುಲ್ ಆಲಮೀನ್‌ನ ಸಂದೇಶವಾಹಕರಾಗಿದ್ದೇವೆ"

ಎಂಬ ಮಾತನ್ನು ಕೇಳಿ ಫಿರ್‌ಔನನು وَمَا رَبُّ الْعَالَمِينَ 'ರಬ್ಬುಲ್ ಆಲಮೀನ್ ಎಂದರೇನು' ಎಂದು ಪ್ರಶ್ನಿಸುತ್ತಾನೆ. "ನನಗೊಂದು ಉನ್ನತ ಕಟ್ಟಡವನ್ನು ನಿರ್ಮಿಸಿ ಕೊಡು ನಾನು ಮೂಸಾನ 'ಇಲಾಹ್'ನನ್ನು ನೋಡಬೇಕಾಗಿದೆ." ಎಂದು ತನ್ನ ಮಂತ್ರಿಯಾದ ಹಾಮಾನ್‌ನಿಗೆ ಆದೇಶಿಸುತ್ತಾನೆ. "ನನ್ನ ಹೊರತು ಇನ್ನಾರನ್ನಾದರೂ ನೀವು 'ಇಲಾಹ್' ಮಾಡಿದರೆ ನಾನು ನಿಮ್ಮನ್ನು ಸೆರೆಮನೆಗೆ ತಳ್ಳುವೆನು. ನಾನೇ ನಿಮ್ಮ ದೊಡ್ಡ 'ಇಲಾಹ್' ಆಗಿದ್ದೇನೆಂದು ದೇಶದಾದ್ಯಂತ ಡಂಗುರ ಸಾರಿಸುತ್ತಾನೆ. "ನನ್ನ ಹೊರತು ಬೇರಾವುದೇ ಇಲಾಹ್ ನಿಮಗೆ ಇರುವರೆಂದು ನನಗೆ ತಿಳಿದಿಲ್ಲ" ಎಂದು ತನ್ನ ಆಸ್ಥಾನಿಕರನ್ನುದ್ದೇಶಿಸಿ ಹೇಳುತ್ತಾನೆ. ಇಂತಹ ವಾಕ್ಯಗಳನ್ನು ಕಂಡು ಪ್ರಾಯಶಃ ಅವನು ಅಲ್ಲಾಹನ ಅಸ್ತಿತ್ವವನ್ನೇ ನಿರಾಕರಿಸುವವನಾಗಿರಬೇಕೆಂದು ಜನರು ಬಗೆದರು. ಸರ್ವಲೋಕಗಳ ಪ್ರಭುವಿನ ಕಲ್ಪನೆಯೂ ಅವನಿಗೆ ಇರಲಿಲ್ಲ ಮತ್ತು ಆತ ತನ್ನನ್ನೇ ಏಕೈಕ ಆರಾಧ್ಯನೆಂದು ಬಗೆಯುತ್ತಿದ್ದ ಎಂಬ ಭಾವನೆಯೂ ಇದರಿಂದಲೇ ಹುಟ್ಟಿಕೊಂಡಿತು. ಆದರೆ ವಾಸ್ತವದಲ್ಲಿ ಅವನ ಈ ಎಲ್ಲ ಮಾತುಗಳು ಜನಾಂಗೀಯ ಮೇಲ್ಮೆಯ ಹಠದ ಕಾರಣದಿಂದಾಗಿತ್ತು. ಹ. ಯೂಸುಫ್(ಅ) ಅವರ ಕಾಲದಲ್ಲಿ ಅವರ ಅದ್ಭುತ ವ್ಯಕ್ತಿತ್ವದ ಪ್ರಭಾವದಿಂದ ಈಜಿಪ್ಟ್‌ನಲ್ಲಿ ಇಸ್ಲಾಮ್‌ನ ಶಿಕ್ಷಣ ಪ್ರಚಾರವಾದುದು ಮಾತ್ರವಲ್ಲ. ಅವರಿಗೆ ಆಡಳಿತದಲ್ಲಿ ಸಿಕ್ಕಿದ ಮಹತ್ವದ ಪಾತ್ರದಿಂದಾಗಿ ಬನೀ ಇಸ್ರಾಈಲರೂ ಈಜಿಪ್ಟ್‌ನಲ್ಲಿ ಪ್ರಭಾವಶಾಲಿಗಳಾಗಿದ್ದರು. ಮೂರು ನಾಲ್ಕು ಶತಮಾನಗಳ ತನಕ ಈ ಬನೀ ಇಸ್ರಾಈಲ್ ಆಡಳಿತವು ಈಜಿಪ್ಟ್‌ನಲ್ಲಿ ಜಾರಿಯಲ್ಲಿತ್ತು. ಅನಂತರ ಇಸ್ರಾಈಲರ ವಿರುದ್ಧ ಜನಾಂಗೀಯ ತಾರತಮ್ಯದ ಭಾವನೆ ಬೆಳೆಯತೊಡಗಿತು. ಕೊನೆಗೆ ಅವರ ಆಡಳಿತವನ್ನು ಕಿತ್ತೆಸೆಯಲಾಯಿತು. ಅನಂತರ ಈಜಿಪ್ಟ್‌ನ ರಾಷ್ಟ್ರವಾದೀ ಗೋತ್ರಗಳು ಒಂದರ ನಂತರ ಒಂದರಂತೆ ಅಲ್ಲಿನ ಆಡಳಿತ ವಹಿಸಿಕೊಂಡಿತು. ಈ ಹೊಸ ಆಡಳಿತಗಾರರು ಇಸ್ರಾಈಲಿಗಳನ್ನು ದಮನಿಸಿದ್ದು ಮಾತ್ರವಲ್ಲ ಯೂಸುಫ್(ಅ) ಅವರ ಕಾಲದ ಪ್ರತಿಯೊಂದು ಚಿಹ್ನೆಯನ್ನೂ ಅಳಿಸತೊಡಗಿದರು ಮತ್ತು ಆಸ್ಥಾನದಲ್ಲಿ ತಮ್ಮ ಪೂರ್ವಜರ ಧರ್ಮದ ಸಂಪ್ರದಾಯಗಳನ್ನು ಜಾರಿಗೆ ತಂದರು. ಇಂತಹ ಪರಿಸ್ಥಿತಿಯಲ್ಲಿ ಹ. ಮೂಸಾ(ಅ) ಆಗಮಿಸಿದರು. ಆಗ ಸಹಜವಾಗಿಯೇ ಅವರಿಗೆ ಅಧಿಕಾರವು ತಮ್ಮ ಕೈಯಿಂದ ತಪ್ಪಿ ಪುನಃ ಬನೀ ಇಸ್ರಾಈಲರ ಕೈಗೆ ಹೋಗಿ ಬಿಡುವುದೋ ಎಂಬ ಆಶಂಕೆ ಉಂಟಾಯಿತು. ಈ ಹಗೆತನ ಮತ್ತು ಹಠಮಾರಿತನದ ಮದದಲ್ಲೇ "ರಬ್ಬುಲ್ ಆಲಮೀನ್ ಎಂದರೇನು? ನನ್ನ ಹೊರತು ಬೇರೆ ಆರಾಧ್ಯರಿರುವುದು ಸಾಧ್ಯವೇ?" ಎಂದೆಲ್ಲಾ ಪ್ರಶ್ನಿಸತೊಡಗಿದನು. ವಸ್ತುತಃ ಅವನು ಸರ್ವಲೋಕಗಳ ಪ್ರಭುವಿನ ಕುರಿತು ಅಜ್ಞನಾಗಿರಲಿಲ್ಲ. ಅವನ ಮತ್ತು ಅವನ ಆಸ್ಥಾನಿಕರ ಮಧ್ಯೆ ನಡೆದ ಸಂಭಾಷಣೆಗಳು ಮತ್ತು ಹ. ಮೂಸಾ(ಅ) ಅವರ ಪ್ರವಚನಗಳು ಪವಿತ್ರ ಕುರ್‌ಆನ್‌ನಲ್ಲಿ ಉಲ್ಲೇಖಿಗೊಂಡಿವೆ. ಅವುಗಳಿಂದೆಲ್ಲಾ ಈ ವಾಸ್ತವಿಕತೆಯು ಬಹಳ ಸ್ಪಷ್ಟವಾಗುತ್ತದೆ. ಉದಾ: ಒಮ್ಮೆ ಮೂಸಾ(ಅ) ಅಲ್ಲಾಹನ ಪ್ರವಾದಿಯಲ್ಲ ಎಂದು ತನ್ನ ಜನಾಂಗಕ್ಕೆ ಮನಗಾಣಿಸಲಿಕ್ಕಾಗಿ

ಫಿರ್‌ಔನ್ ಈ ರೀತಿ ಹೇಳುತ್ತಾನೆ:

فَلَوْلَآ أُلْقِيَ عَلَيْهِ أَسْوِرَةٌ مِّن ذَهَبٍ أَوْ جَآءَ مَعَهُ ٱلْمَلَٰٓئِكَةُ مُقْتَرِنِينَ

(الزخرف - ٥٣)

ಇವನ ಮೇಲೆ ಬಂಗಾರದ ಕಂಕಣಗಳೇಕೆ ಇಳಿಸಲ್ಪಡಲಿಲ್ಲ? ಅಥವಾ ಇವನ ಅಂಗರಕ್ಷಕರಾಗಿ ದೇವಚರರ ತುಕಡಿಯೇಕೆ ಬಂದಿಲ್ಲ? (ಪವಿತ್ರ ಕುರ್‌ಆನ್ 43:53)

ಈ ಮಾತು ಅಲ್ಲಾಹ್ ಮತ್ತು ದೇವಚರರ ಕುರಿತು ತಿಳಿದೇ ಇಲ್ಲದ ಓರ್ವ ವ್ಯಕ್ತಿಯದ್ದಾಗಿರಲು ಸಾಧ್ಯವೇ?

ಇನ್ನೊಂದು ಸಂದರ್ಭದಲ್ಲಿ ಫಿರ್‌ಔನ್ ಮತ್ತು ಮೂಸಾರ(ಅ) ಮಧ್ಯೆ ಈ ರೀತಿಯ ಸಂಭಾಷಣೆಯಾಗುತ್ತದೆ.

ಫಿರ್‌ಜೌನನು:

فَقَالَ لَهُ فِرْعَوْنُ إِنِّي لَأَظُنُّكَ يَٰمُوسَىٰ مَسْحُورًا ۝ قَالَ لَقَدْ عَلِمْتَ
مَآ أَنزَلَ هَٰٓؤُلَآءِ إِلَّا رَبُّ ٱلسَّمَٰوَٰتِ وَٱلْأَرْضِ بَصَآئِرَ وَإِنِّي
لَأَظُنُّكَ يَٰفِرْعَوْنُ مَثْبُورًا (بنی اسرائیل - ۱۰۱ - ۱۰۲)

"ಓ ಮೂಸಾ! ಖಂಡಿತವಾಗಿಯೂ ನೀನೊಬ್ಬ ಮಾಟಬಾಧಿತ ವ್ಯಕ್ತಿಯಾಗಿರುತ್ತೀ ಎಂದು ನಾನು ಶಂಕಿಸುತ್ತೇನೆಂದೇ ಹೇಳಿದ್ದನಷ್ಟೇ? ಅದಕ್ಕುತ್ತರವಾಗಿ ಮೂಸಾ(ಅ) ಹೇಳಿದರು: ಪ್ರಬೋಧಪೂರ್ಣ ಪ್ರತ್ಯಕ್ಷ ಪ್ರಮಾಣಗಳನ್ನು ಆಕಾಶಗಳ ಮತ್ತು ಭೂಮಿಯ ಪ್ರಭುವಿನ ಹೊರತು ಇನ್ನಾರೂ ಅವತೀರ್ಣಗೊಳಿಸಿಲ್ಲವೆಂದು ನೀನು ಚೆನ್ನಾಗಿ ತಿಳಿದಿರುವೆ? ಓ ಫಿರ್‌ಜೌನ್! ನನ್ನ ಅಭಿಪ್ರಾಯ ಪ್ರಕಾರ ನೀನೊಬ್ಬ ಹತಭಾಗಿ ಆಗಿರುವೆ."

(ಪವಿತ್ರ ಕುರ್‌ಆನ್ 17:101-102)

ಮತ್ತೊಂದೆಡೆ ಅಲ್ಲಾಹನು ಫಿರ್‌ಜೌನ್ ಜನಾಂಗದ ಮಾನಸಿಕ ಸ್ಥಿತಿಯನ್ನು ಈ ರೀತಿ ವಿವರಿಸಿದ್ದಾನೆ—

فَلَمَّا جَآءَتْهُمْ ءَايَٰتُنَا مُبْصِرَةً قَالُوا۟ هَٰذَا سِحْرٌ مُّبِينٌ ۝ وَجَحَدُوا۟
بِهَا وَٱسْتَيْقَنَتْهَآ أَنفُسُهُمْ ظُلْمًا وَعُلُوًّا (النمل - ١٤)

ನಮ್ಮ ಸುವ್ಯಕ್ತ ನಿದರ್ಶನಗಳು ಅವರ ಮುಂದೆ ಬಂದಾಗ ಅವರು - ಇದು ಸ್ಪಷ್ಟ ಜಾದುವೆಂದು ಬಿಟ್ಟರು. ಅವರು ಸಂಪೂರ್ಣ ಅಕ್ರಮ ಹಾಗೂ ಅಹಂಕಾರದ ಮಾರ್ಗದಿಂದ ಆ ನಿದರ್ಶನಗಳನ್ನು ನಿಷೇಧಿಸಿದರು. (ಪವಿತ್ರ ಕುರ್‌ಆನ್ 27:14)

ಇನ್ನೊಂದು ಸನ್ನಿವೇಶವನ್ನು ಕುರ್‌ಆನ್ ಈ ರೀತಿ ವಿವರಿಸುತ್ತದೆ:

قَالَ لَهُمْ مُّوسَىٰ وَيْلَكُمْ لَا تَفْتَرُوا عَلَى اللَّهِ كَذِبًا فَيُسْحِتَكُم بِعَذَابٍ ۖ
وَقَدْ خَابَ مَنِ افْتَرَىٰ ○ فَتَنَازَعُوا أَمْرَهُم بَيْنَهُمْ وَأَسَرُّوا النَّجْوَىٰ
قَالُوا إِنْ هَٰذَانِ لَسَاحِرَانِ يُرِيدَانِ أَن يُخْرِجَاكُم مِّنْ أَرْضِكُم
بِسِحْرِهِمَا وَيَذْهَبَا بِطَرِيقَتِكُمُ الْمُثْلَىٰ ○ (طٰهٰ - ٦١ - ٦٣)

ಮೂಸಾರು(ಅ) ಅವರಿಗೆ ಹೀಗೆ ಹೇಳಿದರು: "ಹತಭಾಗಿಗಳೇ! ಅಲ್ಲಾಹನ ಮೇಲೆ ಸುಳ್ಳಾರೋಪಗಳನ್ನು ಹೊರಿಸಬೇಡಿರಿ. ಅನ್ಯಥಾ ಅವನೊಂದು ಘೋರ ಯಾತನೆಯ ಮೂಲಕ ನಿಮ್ಮನ್ನು ಸರ್ವನಾಶಗೊಳಿಸಿ ಬಿಡುವನು. ಮಿಥ್ಯಾರೋಪವನ್ನು ಯಾರೇ ಹೊರಿಸಲಿ ಅವನು ಭಗ್ನಾಶನಾದನು. ಇದನ್ನು ಕೇಳಿದಾಗ ಅವರೊಳಗೆ ಭಿನ್ನಾಭಿಪ್ರಾಯ ಉಂಟಾಯಿತು. ಅವರು ರಹಸ್ಯವಾಗಿ ಪರಸ್ಪರ ಸಮಾಲೋಚಿಸಲಾರಂಭಿಸಿದರು. ಕೊನೆಗೆ ಕೆಲವರು ಹೀಗೆ ಹೇಳಿದರು: "ಇವರಿಬ್ಬರೂ ಕೇವಲ ಜಾದೂಗಾರರು. ಇವರ ಉದ್ದೇಶವು ತಮ್ಮ ಜಾದೂವಿನ ಬಲದಿಂದ ನಿಮ್ಮನ್ನು ನಿಮ್ಮ ನಾಡಿನಿಂದ ಹೊರ ಹಾಕುವುದು ಮತ್ತು ಆದರ್ಶಪ್ರಾಯವಾದ ನಿಮ್ಮ ಜೀವನ ಕ್ರಮವನ್ನು ಕೊನೆಗೊಳಿಸಿ ಬಿಡುವುದಾಗಿದೆ. (ಪವಿತ್ರ ಕುರ್‌ಆನ್ 20: 61-63)

ಆ ಜನರ ಹೃದಯದಲ್ಲಿ ಸ್ವಲ್ಪಂಶವಾದರೂ ಅಲ್ಲಾಹನ ಮಹಾನತೆ ಮತ್ತು ಅವನ ಭಯವಿದ್ದುದರಿಂದಲೇ ಅಲ್ಲಾಹನ ಯಾತನೆಯ ಎಚ್ಚರಿಕೆ ಮತ್ತು ಸುಳ್ಳಾರೋಪದ ಪರಿಣಾಮದ ಕುರಿತು ಕೇಳಿದಾಗ ಅವರಲ್ಲಿ ಆತಂಕ ಮೂಡುತ್ತದೆ. ಆಗ ಅವರ ಜನಾಂಗೀಯವಾದಿ ಆಡಳಿತಗಾರರು ರಾಜಕೀಯ ಕ್ರಾಂತಿಯ ಅಪಾಯವನ್ನು ಮುಂದೊಡ್ಡಿದರು. ಮೂಸಾ ಮತ್ತು ಹಾರೂನ್(ಅ) ಮಾತು ಕೇಳುವುದರಿಂದ ಈಜಿಪ್ಟ್ ಜನಾಂಗದ ಮೇಲೆ ಬನೀ ಇಸ್ರಾಈಲ್ ಜನಾಂಗಕ್ಕೆ ಪ್ರಾಬಲ್ಯ ದೊರೆಯುವುದು ಎಂದು ಅವರನ್ನು ಎಚ್ಚರಿಸುತ್ತಾರೆ. ಆಗ ಅವರ ಹೃದಯಗಳು ಕಠಿಣವಾಗಿ ಎಲ್ಲರೂ ಒಟ್ಟಾಗಿ ಪ್ರವಾದಿಗಳನ್ನು ಎದುರಿಸಲು ಪಣತೊಟ್ಟರು.

ಈ ವಾಸ್ತವಿಕತೆಯನ್ನು ಸ್ಪಷ್ಟವಾಗಿ ತಿಳಿದುಕೊಂಡ ಬಳಿಕ ಹ. ಮೂಸಾ(ಅ) ಮತ್ತು ಫಿರ್‌ಔನ್‌ನ ಮಧ್ಯೆ ಜಗಳವಿದ್ದುದು ಯಾವ ವಿಷಯದಲ್ಲಿ ಎಂಬುದನ್ನು ಸುಲಭವಾಗಿ ಕಂಡು ಕೊಳ್ಳಬಹುದು. ಫಿರ್‌ಔನ್ ಮತ್ತು ಅವನ ಜನಾಂಗದ ನೈಜ ಪಥಭ್ರಷ್ಟತೆ ಯಾವ ರೀತಿ ಯದ್ದಾಗಿತ್ತು? ಫಿರ್‌ಔನ್ ಯಾವ ಅರ್ಥದಲ್ಲಿ ತನ್ನನ್ನು ಇಲಾಹ್ ಮತ್ತು ರಬ್ಬ್ ಎಂದು

ಘೋಷಿಸುತ್ತಿದ್ದ? ಎಂಬುದು ಕೂಡಾ ಆಗ ಸ್ಪಷ್ಟವಾಗಿ ತಿಳಿದು ಬರುವುದು. ಈ ಉದ್ದೇಶಕ್ಕಾಗಿ ಪವಿತ್ರ ಕುರ್‌ಆನ್‌ನ ಈ ಕೆಳಗಿನ ವಾಕ್ಯಗಳನ್ನು ಅನುಕ್ರಮವಾಗಿ ಗಮನಿಸಿ:

1) ಫಿರ್‌ಔನನ ಆಸ್ಥಾನಿಕರ ಪೈಕಿ ಹ. ಮೂಸಾ(ಅ) ಅವರ ಸಂದೇಶವನ್ನು ಅಳಿಸಿ ಹಾಕಬೇಕೆಂದು ಪ್ರತಿಪಾದಿಸುವವರು ಒಮ್ಮೆ ಫಿರ್‌ಔನನನ್ನು ಉದ್ದೇಶಿಸಿ ಹೀಗೆ ಹೇಳುತ್ತಾರೆ:

أَتَذَرُ مُوسَىٰ وَقَوْمَهُ لِيُفْسِدُوا فِي الْأَرْضِ وَيَذَرَكَ وَآلِهَتَكَ

(الاعراف-١٢٧)

"ನೀನು ಮೂಸಾ ಮತ್ತು ಅವನ ಜನಾಂಗವನ್ನು ದೇಶದಲ್ಲಿ ಗೊಂದಲಗಳನ್ನು ಹಬ್ಬಿಸುತ್ತಿರಲಿಕ್ಕೂ ನಿನ್ನ ಹಾಗೂ ನಿನ್ನ ಆರಾಧ್ಯರ ಆರಾಧನೆಯನ್ನು ತೊರೆದು ಬಿಟ್ಟಿರಲಿಕ್ಕೂ ಹೀಗೆಯೇ ಬಿಟ್ಟು ಬಿಡುವೆಯಾ?" (ಪವಿತ್ರ ಕುರ್‌ಆನ್ 7: 127)

ಇನ್ನೊಂದೆಡೆ ಆ ಆಸ್ಥಾನಿಗರ ಪೈಕಿಯೇ ಮೂಸಾರ(ಅ) ಮೇಲೆ ವಿಶ್ವಾಸ ತಂದವನು ಅವರನ್ನುದ್ದೇಶಿಸಿ ಹೀಗೆ ಹೇಳುತ್ತಾನೆ:

تَدْعُونَنِي لِأَكْفُرَ بِاللَّهِ وَأُشْرِكَ بِهِ مَا لَيْسَ لِي بِهِ عِلْمٌ (المومن-٤٢)

"ನಾನು ಅಲ್ಲಾಹನನ್ನು ನಿರಾಕರಿಸಬೇಕೆಂದೂ ಅವನೊಂದಿಗೆ ನಾನರಿಯದಂತಹ ಅಸ್ತಿತ್ವಗಳನ್ನು ಸಹಭಾಗಿಗಳಾಗಿ ಮಾಡಬೇಕೆಂದೂ ನೀವು ನನಗೆ ಕರೆ ಕೊಡುತ್ತಿದ್ದೀರಿ." (ಪವಿತ್ರ ಕುರ್‌ಆನ್ 40:42)

ಈ ಎರಡು ಆಯತ್‌ಗಳನ್ನು ಹಾಗೂ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರದ ಮೂಲಕ ಈಗ ಈಜಿಪ್ಟ್ ಜನರ ಬಗೆಗೆ ನಮಗೆ ದೊರೆತಿರುವ ಮಾಹಿತಿಯನ್ನು ಒಟ್ಟು ಸೇರಿಸಿ ನೋಡಿದಾಗ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಫಿರ್‌ಔನ್ ಮತ್ತು ಅವನ ಜನಾಂಗದವರು 'ರಬ್ಬ್'ನ ಪ್ರಥಮ ಮತ್ತು ದ್ವಿತೀಯ ಅರ್ಥದಲ್ಲಿ ಕೆಲವು ದೇವತೆಗಳನ್ನು ಅಲ್ಲಾಹನೊಂದಿಗೆ ಸಹಬಾಗಿಗಳಾಗಿ ಮಾಡಿ ಅವರನ್ನು ಆರಾಧಿಸುತ್ತಿದ್ದರು. ಒಂದು ವೇಳೆ ಫಿರ್‌ಔನನು ತಾನೇ ದೇವನೆಂದು ಸಾರಿದ್ದರೆ ಮತ್ತು ವಿಶ್ವದ ಕಾರ್ಯ ಕಾರಣಗಳ ಮೇಲೆ ತನ್ನ ನಿಯಂತ್ರಣವಿದೆ ಎಂದು ಅವನು ವಾದಿಸುತ್ತಿದ್ದರೆ ಅವನು ಇತರ ದೇವರನ್ನು ಪೂಜಿಸುವ ಪ್ರಮೇಯವೇ ಇರಲಿಲ್ಲ.[1]

---

1. 'ಫಿರ್‌ಔನ್' ತಾನೇ ಸರ್ವಲೋಕಗಳ ದೇವನಾಗಿರುವನೆಂಬ ವಾದವನ್ನು ಹೊಂದಿದ್ದ ಎಂಬ ಕಲ್ಪನೆಯಿಂದ ಸೂರಃ ಅಲ್ ಅಅ್‌ರಾಫ್‌ನ ಪ್ರಸ್ತುತ ಸೂಕ್ತದಲ್ಲಿ ಪದವನ್ನು 'ಇಲಾಹತಕ' ಎಂದು ಉಚ್ಚರಿಸುತ್ತಾರೆ. ಇಲಾಹತ್ ಎಂದರೆ ಆರಾಧನೆ ಎಂದು ಅವರು ಅರ್ಥೈಸುತ್ತಾರೆ. ಅವರ ಪ್ರಕಾರ ಆಯತ್‌ನ ಅನುವಾದವು 'ನಿಮ್ಮನ್ನು ಮತ್ತು ನಿಮ್ಮ ಆರಾಧನೆಯನ್ನು ತೊರೆಯುವುದು' ಎಂದಾಗುತ್ತದೆ.

2) ಕುರ್‌ಆನ್ ಉದ್ಧರಿಸಿದ ಫಿರ್‌ಔನ್‌ನ ಈ ಪದಗಳನ್ನು ಗಮನಿಸಿ:

يَٰٓأَيُّهَا ٱلۡمَلَأُ مَا عَلِمۡتُ لَكُم مِّنۡ إِلَٰهٍ غَيۡرِي - (القصص-٣٨)

ಆಸ್ಥಾನಿಕರೇ! ನನ್ನ ಹೊರತು ನಿಮ್ಮ ಇನ್ನಾವ ದೇವನನ್ನೂ ನಾನರಿಯೆನು.
(ಪವಿತ್ರ ಕುರ್‌ಆನ್ 28:38)

لَئِنِ ٱتَّخَذۡتَ إِلَٰهًا غَيۡرِي لَأَجۡعَلَنَّكَ مِنَ ٱلۡمَسۡجُونِينَ ۝ (الشعراء-٢٩)

"ಓ ಮೂಸಾ! ನೀನು ನನ್ನ ಹೊರತು ಇತರ ಯಾರನ್ನಾದರೂ ಆರಾಧ್ಯನಾಗಿ ಮಾಡಿಕೊಂಡರೆ ನಿನ್ನನ್ನೂ ಸೆರೆಮನೆಯಲ್ಲಿ ಕೊಳೆಯುತ್ತಿರುವವರೊಂದಿಗೆ ಸೇರಿಸಿ ಬಿಡುವೆನು."
(ಪವಿತ್ರ ಕುರ್‌ಆನ್ 26:29)

ಇದರರ್ಥ ಫಿರ್‌ಔನ್ ತನ್ನ ಹೊರತು ಇತರ ಎಲ್ಲ ದೇವರುಗಳನ್ನೂ ನಿರಾಕರಿಸುತ್ತಿದ್ದ ಎಂದಲ್ಲ. ಅದು ಮೂಸಾ(ಅ) ಅವರ ಕರೆಯನ್ನು ತಿರಸ್ಕರಿಸಲು ಹೇಳಿದ ಮಾತಾಗಿತ್ತು. ಹ. ಮೂಸಾ(ಅ) ಯಾವ ಅಲ್ಲಾಹನ ಕಡೆಗೆ ಕರೆ ನೀಡುತ್ತಿದ್ದರೋ ಅವನು ಕೇವಲ ಆರಾಧ್ಯ ಮಾತ್ರವಾಗಿರದೆ ರಾಜಕೀಯ ಮತ್ತು ಸಾಂಸ್ಕೃತಿಕ ಅರ್ಥದಲ್ಲೂ ಶಾಸನಕರ್ತ ಮತ್ತು ಸಾರ್ವಭೌಮತ್ವನಾಗಿದ್ದ. ಆದ್ದರಿಂದ ತನ್ನ ಹೊರತು ಅಂತಹ ಯಾವ ದೇವನೂ ಇಲ್ಲವೆಂದು ಫಿರ್‌ಔನ್ ತನ್ನ ಜನಾಂಗಕ್ಕೆ ಹೇಳುತ್ತಾನೆ. ಈ ಅರ್ಥದಲ್ಲಿ ತನ್ನ ಹೊರತು ಇತರ ಯಾರನ್ನಾದರೂ ದೇವನೆಂದು ಬಗೆದರೆ ಜೈಲಿನ ಕಂಬಿ ಎಣಿಸಬೇಕಾದೀತು ಎಂದು ಹ. ಮೂಸಾರನ್ನು(ಅ) ಎಚ್ಚರಿಸುತ್ತಾನೆ.

ಈಜಿಪ್ಟ್‌ನ ಫಿರ್‌ಔನ್ ರಾಜರು ಕೇವಲ ಸಂಪೂರ್ಣ ಸಾರ್ವಭೌಮತೆ (Absolute Sovereignty)ಯನ್ನು ಮಾತ್ರ ವಾದಿಸುತ್ತಿದ್ದುದಲ್ಲ. ದೇವತೆಗಳೊಂದಿಗೆ ತಮ್ಮ ಸಂಬಂಧವನ್ನು ಕಲ್ಪಿಸಿ ಒಂದು ರೀತಿಯ ದಿವ್ಯತೆಯನ್ನೂ ಪ್ರತಿಪಾದಿಸುತ್ತಿದ್ದರು ಎಂದು ಮೇಲಿನ ಆಯತ್‌ಗಳಿಂದ ಮತ್ತು ಇತಿಹಾಸ ಹಾಗೂ ಪುರಾತತ್ವ ಶಾಸ್ತ್ರದಿಂದ ತಿಳಿದು ಬರುತ್ತದೆ. ಇದು ಪ್ರಜೆಗಳ ಮನದಲ್ಲಿ ತಮ್ಮ ಹಿಡಿತವನ್ನು ಭದ್ರಗೊಳಿಸಲಿಕ್ಕಾಗಿ ಹೂಡಿದ ತಂತ್ರವಾಗಿತ್ತು. ಈ ವಿಷಯದಲ್ಲಿ

ಆದರೆ ಪ್ರಥಮತಃ ಇದು ಸಾಮಾನ್ಯ ಉಚ್ಚಾರಕ್ಕೆ ವಿರುದ್ಧವಾಗಿದೆ. ಎರಡನೆಯದಾಗಿ ಈ ಕಲ್ಪನೆಯೇ ಆಧಾರ ರಹಿತವಾಗಿದೆ. ಮೂರನೆಯದಾಗಿ 'ಇಲಾಹತ್'ನ ಅರ್ಥ ಆರಾಧನೆಯ ಹೊರತು ಆರಾಧ್ಯ ಅಥವಾ ದೇವಿ ಎಂದೂ ಆಗುತ್ತದೆ. ಸೂರ್ಯನಿಗೆ ಪುರಾತನ ಅರಬ್ ಸಾಹಿತ್ಯದಲ್ಲಿ ಇಲಾಹತ್ ಎಂಬ ಪದವೇ ಪ್ರಯೋಗವಾಗಿದೆ. ಈಜಿಪ್ಟ್‌ನ ದೊಡ್ಡ ದೇವತೆ ಸೂರ್ಯನಾಗಿದ್ದ. ಸೂರ್ಯನಿಗೆ ಈಜಿಪ್ಟ್‌ನ ಭಾಷೆಯಲ್ಲಿ 'ರಲ್' ಎನ್ನುತ್ತಾರೆ. ಫಿರ್‌ಔನ್ ಎಂದರೆ ಸೂರ್ಯನ ಸಂತತಿ ಅಥವಾ ಸೂರ್ಯನ ಅವತಾರ ಎಂದಾಗುತ್ತದೆ. ತಾನು ಸೂರ್ಯನ ಅವತಾರವೆಂಬುದೇ ಫಿರ್‌ಔನನ ವಾದವಾಗಿತ್ತು.

ಫಿರ್‌ಔನ್ ರಾಜರೇನೂ ಅಪರೂಪದ ನಿದರ್ಶನರಲ್ಲ. ಬದಲಾಗಿ ವಿಶ್ವದ ಅನೇಕ ಕಡೆಯ ರಾಜಂದಿರು ತಮ್ಮ ದಿವ್ಯತೆಯನ್ನು ಮೆರೆಯುತ್ತಿದ್ದುದನ್ನು ನಾವು ಕಾಣುತ್ತೇವೆ. ಪ್ರಜೆಗಳು ಅವರ ಮುಂದೆ ಪೂಜೆ-ಅರ್ಚನೆಗಳನ್ನು ಮಾಡುತ್ತಿದ್ದರು. ಇದು ಅವರ ಪಾಲಿಗೆ ಕಡ್ಡಾಯವಾಗಿತ್ತು. ಆದರೆ ಇದೊಂದು ಆಂಶಿಕ ವಿಷಯ ಮಾತ್ರವಾಗಿತ್ತು. ನೈಜ ಉದ್ದೇಶ ತಮ್ಮ ರಾಜಕೀಯ ಅಧಿಕಾರವನ್ನು ಭದ್ರಪಡಿಸುವುದಾಗಿತ್ತು. ಇದಕ್ಕಾಗಿ ದಿವ್ಯತೆಯ ಸೋಗು ಒಂದು ತಂತ್ರ ಮಾತ್ರವಾಗಿತ್ತು. ಆದ್ದರಿಂದಲೇ ಇಂತಹ ರಾಷ್ಟ್ರಗಳಲ್ಲಿ ಒಂದು ರಾಜ ಮನೆತನದ ಅವನತಿಯೊಂದಿಗೆ ಅದರ ದಿವ್ಯತೆಯೂ ಕೊನೆಗೊಳ್ಳುತ್ತಿತ್ತು. ಯಾರ ಕೈಯಲ್ಲಿ ಅಧಿಕಾರವಿರುತ್ತಿತ್ತೋ ದಿವ್ಯತೆಯೂ ಅವರಿಗೆ ವರ್ಗಾಯಿಸಲ್ಪಡುತ್ತಿತ್ತು.

3) ಫಿರ್‌ಔನ್‌ನ ಮೂಲ ವಾದವು ಅಭೌತಿಕ ದಿವ್ಯತ್ವದ್ದಾಗಿರದೆ ರಾಜಕೀಯ ದಿವ್ಯತ್ವದ್ದಾಗಿತ್ತು. ಅವನು ಮೂರು, ನಾಲ್ಕು ಮತ್ತು ಐದನೇ ಅರ್ಥದಲ್ಲಿ ನಾನು ಈಜಿಪ್ಟ್‌ನ ಪ್ರಜೆಗಳ ಮಹಾ ಪ್ರಭು (Lord) ಆಗಿರುವೆನೆಂದು ವಾದಿಸುತ್ತಿದ್ದನು. ಆ ದೇಶ ಮತ್ತು ಅದರೆಲ್ಲ ಸಂಪನ್ಮೂಲಗಳ ಒಡೆತನ ತನಗೆ ಸೇರಿದ್ದೆಂದು ವಾದಿಸುತ್ತಿದ್ದನು. ಆದ್ದರಿಂದ ಇಲ್ಲಿನ ಸಾರ್ವಭೌಮತೆಯು ತನ್ನ ಹಕ್ಕಾಗಿದೆಯೆಂದು ವಾದಿಸುತ್ತಿದ್ದನು. ದೇಶದ ಸಂಸ್ಕೃತಿ ಮತ್ತು ಸಾಮಾಜಿಕತೆಯ ಬುನಾದಿಯು ತನ್ನ ಕೇಂದ್ರೀಯ ವ್ಯಕ್ತಿತ್ವವಾಗಿದೆಯೆಂದೂ ನನ್ನ ಹೊರತು ಇಲ್ಲಿ ಬೇರಾರ ಕಾನೂನೂ ನಡೆಯದೆಂದೂ ವಾದಿಸುತ್ತಿದ್ದನು. ಕುರ್‌ಆನ್‌ನ ಪ್ರಕಾರ ಅವನ ವಾದದ ಆಧಾರ ಇದಾಗಿತ್ತು:

وَنَادَىٰ فِرْعَوْنُ فِي قَوْمِهِ قَالَ يَٰقَوْمِ أَلَيْسَ لِي مُلْكُ مِصْرَ وَهَٰذِهِ
الْأَنْهَارُ تَجْرِي مِن تَحْتِي أَفَلَا تُبْصِرُونَ ٥ (الزخرف-١٥)

ಒಂದು ದಿನ ಫಿರ್‌ಔನನು ತನ್ನ ಜನಾಂಗದವರ ನಡುವೆ ಕೂಗಿ ಹೇಳಿದನು: "ಜನರೇ! ಈಜಿಪ್ಟಿನ ಚಕ್ರಾಧಿಪತ್ಯ ನನ್ನದಲ್ಲವೇ? ಮತ್ತು ಈ ಕಾಲುವೆಗಳು ನನ್ನ ಅಧೀನದಲ್ಲಿ ಹರಿಯುತ್ತಿಲ್ಲವೇ? ನಿಮಗೇನು ಕಾಣುವುದಿಲ್ಲವೇ? (43: 51)

حَاجَّ إِبْرَاهِيمَ فِي رَبِّهِ أَنْ آتَاهُ اللَّهُ الْمُلْكَ (بقرہ-٢٥٨)

ನಮ್ರೂದನ ದಿವ್ಯತ್ವಕ್ಕೂ ಇದುವೇ ಆಧಾರವಾಗಿತ್ತು. "ನೀವೇನು ಇಬ್ರಾಹೀಮರೊಂದಿಗೆ ತರ್ಕ ಮಾಡಿದ ವ್ಯಕ್ತಿಯ ಕುರಿತು ಗಮನಿಸಲಿಲ್ಲವೇ? ತರ್ಕವು ಇಬ್ರಾಹೀಮರ ಪ್ರಭು ಯಾರು ಎಂಬುದರ ಕುರಿತಾಗಿತ್ತು ಮತ್ತು ಅಲ್ಲಾಹನು ಆ ವ್ಯಕ್ತಿಗೆ ಅಧಿಕಾರವನ್ನು ಕೊಟ್ಟಿದ್ದುದರ ಆಧಾರದಲ್ಲಾಗಿತ್ತು." (2: 258)

ಇದೇ ಆಧಾರದಲ್ಲಿ ಹ. ಯೂಸುಫ್‌ರ(ಅ) ಸಮಕಾಲೀನ ಫಿರ್‌ಔನ್ ಕೂಡಾ ತನ್ನ

ರಾಷ್ಟ್ರದ 'ರಬ್ಬ್' ಆಗಿ ಮೆರೆಯುತ್ತಿದ್ದ.

4) ವಿಶ್ವದೊಡೆಯನಾದ ಅಲ್ಲಾಹನ ಹೊರತು ಯಾವ ಅರ್ಥದಲ್ಲೂ ಬೇರೆ 'ಇಲಾಹ್' ಅಥವಾ 'ರಬ್ಬ್' ಇಲ್ಲ ಎಂಬ ಹ. ಮೂಸಾ(ಅ) ಅವರ ಆಹ್ವಾನವೇ ನಿಜವಾಗಿ ಅವರ ಮತ್ತು ಫಿರ್‌ಔನ್ ಹಾಗೂ ಆತನ ಜನಾಂಗದ ಮಧ್ಯೆ ಜಗಳಕ್ಕೆ ಕಾರಣವಾಗಿತ್ತು. ಅಲ್ಲಾಹನೇ ಅಭೌತಿಕ ಅರ್ಥದಲ್ಲೂ ರಾಜಕೀಯ ಮತ್ತು ಸಾಮಾಜಿಕ ಅರ್ಥದಲ್ಲೂ ಇಲಾಹ್ ಮತ್ತು ರಬ್ಬ್ ಆಗಿದ್ದಾನೆ. ಪೂಜೆಯೂ ಅವನಿಗೇ ಸಲ್ಲಬೇಕು. ದಾಸ್ಯ ಮತ್ತು ಅನುಸರಣೆಯೂ ಅವನಿಗೇ ಸಲ್ಲಬೇಕು. ಅವನ ಕಾನೂನನ್ನೇ ಅನುಸರಿಸಬೇಕು ಎಂದು ಕರೆ ನೀಡಲು ಅಲ್ಲಾಹನು ನನ್ನನ್ನು ಸುಸ್ಪಷ್ಟ ನಿದರ್ಶನಗಳ ಸಹಿತ ತನ್ನ ಪ್ರತಿನಿಧಿಯಾಗಿ ನೇಮಿಸಿ ಕಳುಹಿಸಿರುತ್ತಾನೆ ಎಂದು ಹ. ಮೂಸಾ(ಅ) ಪ್ರತಿಪಾದಿಸುತ್ತಿದ್ದರು. ನನ್ನ ಮೂಲಕ ಅಲ್ಲಾಹನು ತನ್ನ ವಿಧಿ-ನಿಷೇಧಗಳನ್ನು ಕೊಡುವನು. ಆದ್ದರಿಂದ ಪ್ರಜೆಗಳ ಆಧಿಪತ್ಯವು ನಿನ್ನ ಕೈಯಲ್ಲಿಲ್ಲ. ನನ್ನ ಕೈಯಲ್ಲಿ ಇರಬೇಕಾಗಿದೆ. ಇದೇ ಆಧಾರದಲ್ಲಿ ಫಿರ್‌ಔನ್ ಮತ್ತು ಆತನ ಆಸ್ಥಾನಿಕರು ಪದೇ ಪದೇ "ಈ ಇಬ್ಬರು ಸೋದರರು ನಮ್ಮನ್ನು ಅಧಿಕಾರದಿಂದ ಉಚ್ಚಾಟಿಸಿ ಸ್ವಯಂ ಆಡಳಿತ ವಹಿಸಬಯಸುತ್ತಾರೆ. ನಮ್ಮ ದೇಶದ ಸಂಸ್ಕೃತಿಯನ್ನು ಅಳಿಸಿ ತಮ್ಮ ಜೀವನ ವ್ಯವಸ್ಥೆಯನ್ನು ಸ್ಥಾಪಿಸಬಯಸುತ್ತಾರೆ" ಎಂದು ಹೇಳುತ್ತಿದ್ದರು.

وَلَقَدْ أَرْسَلْنَا مُوسَىٰ بِآيَاتِنَا وَسُلْطَانٍ مُّبِينٍ ۝ إِلَىٰ فِرْعَوْنَ وَمَلَئِهِ
فَاتَّبَعُوا أَمْرَ فِرْعَوْنَ ۖ وَمَا أَمْرُ فِرْعَوْنَ بِرَشِيدٍ (هود ٩٦-٩٧)

ನಾವು ಮೂಸಾರನ್ನು ನಮ್ಮ ನಿದರ್ಶನಗಳೊಂದಿಗೂ (ನೇಮಕದ) ಸುವ್ಯಕ್ತ ಆಧಾರಗಳೊಂದಿಗೆ ಕಳುಹಿಸಿದೆವು. ಫಿರ್‌ಔನ್ ಮತ್ತು ಅವನ ಆಸ್ಥಾನಿಕರ ಕಡೆಗೆ, ಆದರೆ ಆ ಜನರು ಫಿರ್‌ಔನ್‌ನ ಆಜ್ಞೆಯನ್ನು ಅನುಸರಿಸಿದರು. ವಸ್ತುತಃ ಫಿರ್‌ಔನ್‌ನ ಆಜ್ಞೆಯು ಸನ್ಮಾರ್ಗಪರವಾಗಿರಲಿಲ್ಲ. (ಪವಿತ್ರ ಕುರ್‌ಆನ್ 11: 96-97)

وَلَقَدْ فَتَنَّا قَبْلَهُمْ قَوْمَ فِرْعَوْنَ وَجَاءَهُمْ رَسُولٌ كَرِيمٌ ۝ أَنْ أَدُّوا
إِلَيَّ عِبَادَ اللَّهِ ۖ إِنِّي لَكُمْ رَسُولٌ أَمِينٌ ۝ وَأَن لَّا تَعْلُوا عَلَى اللَّهِ ۖ إِنِّي
آتِيكُم بِسُلْطَانٍ مُّبِينٍ ۝ (الدخان ١٧-١٩)

ನಾವು ಇವರಿಗಿಂತ ಮುಂಚೆ ಫಿರ್‌ಔನನ ಜನಾಂಗವನ್ನು ಇದೇ ಪರೀಕ್ಷೆಗೆ ಒಳಪಡಿಸಿದ್ದೆವು. ಅವರ ಬಳಿಗೆ ಓರ್ವ ಸನ್ಮಾನ್ಯ ಸಂದೇಶವಾಹಕರು ಬಂದು ಹೇಳಿದರು. "ಅಲ್ಲಾಹನ ದಾಸರನ್ನು ನನ್ನ ವಶಕ್ಕೆ ಒಪ್ಪಿಸಿ ಬಿಡಿರಿ. ನಾನು ನಿಮ್ಮ ಪಾಲಿಗೆ ಓರ್ವ ಪ್ರಾಮಾಣಿಕ ಸಂದೇಶವಾಹಕನಾಗಿದ್ದೇನೆ.

ಅಲ್ಲಾಹನ ವಿರುದ್ಧ ವಿದ್ರೋಹವೆಸಗಬೇಡಿರಿ. ನಾನು (ನನ್ನ ಪ್ರವಾದಿತ್ವದ ಬಗ್ಗೆ) ಸುಸ್ಪಷ್ಟ ಪುರಾವೆಯನ್ನು ನಿಮ್ಮ ಮುಂದಿಡುತ್ತೇನೆ." (ಪವಿತ್ರ ಕುರ್‌ಆನ್ 44: 17-19)

إِنَّا أَرْسَلْنَا إِلَيْكُمْ رَسُولًا شَاهِدًا عَلَيْكُمْ كَمَا أَرْسَلْنَا إِلَىٰ فِرْعَوْنَ
رَسُولًا ۝ فَعَصَىٰ فِرْعَوْنُ الرَّسُولَ فَأَخَذْنَاهُ أَخْذًا وَبِيلًا
(المزمل - ١٥ - ١٦)

ನಾವು ಫಿರ್‌ಔನನ ಕಡೆಗೆ ಒಬ್ಬ ಸಂದೇಶವಾಹಕರನ್ನು ಕಳುಹಿಸಿದ್ದಂತೆಯೇ ನಿಮ್ಮ ಮೇಲೆ ಸಾಕ್ಷಿಯಾಗಿ ಒಬ್ಬ ಸಂದೇಶವಾಹಕರನ್ನು ಕಳುಹಿಸಿರುತ್ತೇವೆ. ಫಿರ್‌ಔನನು ಆ ಸಂದೇಶವಾಹಕರ ಆಜ್ಞೋಲ್ಲಂಘನೆ ಮಾಡಿದಾಗ ನಾವು ಅವನನ್ನು ಅತ್ಯಂತ ಉಗ್ರವಾಗಿ ಹಿಡಿದು ಬಿಟ್ಟೆವು. (ಪವಿತ್ರ ಕುರ್‌ಆನ್ 73: 15-16)

قَالَ فَمَن رَّبُّكُمَا يَا مُوسَىٰ ۝ قَالَ رَبُّنَا الَّذِي أَعْطَىٰ كُلَّ شَيْءٍ خَلْقَهُ ثُمَّ
هَدَىٰ (طه - ٤٩ - ٥٠)

ಆಗ ಫಿರ್‌ಔನ್ ಹೀಗೆ ಹೇಳಿದನು: "ಸರಿ, ಹಾಗಾದರೆ ಮೂಸಾ! ನಿಮ್ಮಿಬ್ಬರ ಪ್ರಭು ಯಾರು?" ಮೂಸಾ(ಅ) ಉತ್ತರಿಸುತ್ತಾ "ಪ್ರತಿಯೊಂದು ವಸ್ತುವಿಗೆ ಅದರ ಆಕೃತಿಯನ್ನು ನೀಡಿ ಆ ಬಳಿಕ ಅದಕ್ಕೆ ದಾರಿ ತೋರಿದವನೇ ನಮ್ಮ ಪ್ರಭು" ಎಂದರು.
(ಪವಿತ್ರ ಕುರ್‌ಆನ್ 20: 49-50)

قَالَ فِرْعَوْنُ وَمَا رَبُّ الْعَالَمِينَ ۝ قَالَ رَبُّ السَّمَاوَاتِ وَالْأَرْضِ وَمَا
بَيْنَهُمَا إِن كُنتُم مُّوقِنِينَ ۝ قَالَ لِمَنْ حَوْلَهُ أَلَا تَسْتَمِعُونَ ۝ قَالَ
رَبُّكُمْ وَرَبُّ آبَائِكُمُ الْأَوَّلِينَ ۝ قَالَ إِنَّ رَسُولَكُمُ الَّذِي أُرْسِلَ
إِلَيْكُمْ لَمَجْنُونٌ ۝ قَالَ رَبُّ الْمَشْرِقِ وَالْمَغْرِبِ وَمَا بَيْنَهُمَا
إِن كُنتُمْ تَعْقِلُونَ ۝ قَالَ لَئِنِ اتَّخَذْتَ إِلَٰهًا غَيْرِي لَأَجْعَلَنَّكَ
مِنَ الْمَسْجُونِينَ ۝ (الشعراء - ٢٣ - ٢٩)

ಆಗ ಫಿರ್‌ಔನನು "ಈ ಸರ್ವಲೋಕಗಳ ಪ್ರಭು ಎಂದರೇನು?" ಎಂದು ಕೇಳಿದನು. (ಆಗ) ಮೂಸಾ "ಭೂಮಿ-ಆಕಾಶಗಳ ಪ್ರಭು ಮತ್ತು ಭೂಮಿ-ಆಕಾಶಗಳ ನಡುವೆ ಇರುವ ಸಕಲ ವಸ್ತುಗಳ ಪ್ರಭು - ನೀವು ದೃಢ ವಿಶ್ವಾಸವಿರಿಸುವವರಾಗಿದ್ದರೆ" - ಎಂದು ಹೇಳಿದರು. ಫಿರ್‌ಔನನು ತನ್ನ ಸುತ್ತಮುತ್ತಲಿದ್ದ ಜನರೊಡನೆ, "ಕೇಳಿದಿರಾ?" ಎಂದನು. (ಆಗ) ಮೂಸಾ - "ನಿಮ್ಮ ಪ್ರಭುವೂ ಗತಿಸಿ ಹೋಗಿರುವ ನಿಮ್ಮ ಪೂರ್ವಿಕರ ಪ್ರಭುವೂ" ಎಂದರು. ಫಿರ್‌ಔನನು

(ನೆರೆದಿದ್ದ ಜನರೊಡನೆ) - "ನಿಮ್ಮ ಕಡೆಗೆ ರವಾನಿಸಲ್ಪಟ್ಟಿರುವ ಈ ರಸೂಲರು ಸಂಪೂರ್ಣ ಹುಚ್ಚರಾಗಿರುವಂತೆ ತೋರುತ್ತದೆ" ಎಂದರು. (ಆಗ) ಮೂಸಾ "ಪೂರ್ವ-ಪಶ್ಚಿಮ ಮತ್ತು ಅವೆರಡರ ನಡುವೆ ಇರುವ ಎಲ್ಲವುಗಳ ಪ್ರಭು - ನೀವು ಒಂದಿಷ್ಟು ಬುದ್ಧಿಯುಳ್ಳವರಾಗಿದ್ದರೆ" ಎಂದರು. ಆಗ ಫಿರ್‌ಔನನು, "ನೀನು ನನ್ನ ಹೊರತು ಇತರ ಯಾರನ್ನಾದರೂ ಆರಾಧ್ಯನಾಗಿ ಒಪ್ಪಿಕೊಂಡರೆ ನಿನ್ನನ್ನೂ ಸೆರೆಮನೆಯಲ್ಲಿ ಕೊಳೆಯುತ್ತಿರುವವರೊಂದಿಗೆ ಸೇರಿಸಿ ಬಿಡುವೆನು" ಎಂದು ಹೇಳಿದನು. (ಪವಿತ್ರ ಕುರ್‌ಆನ್ 26: 23-29)

قَالَ اَجِئْتَنَا لِتُخْرِجَنَا مِنْ اَرْضِنَا بِسِحْرِكَ يٰمُوْسٰى (طٰهٰ - ٥٧)

"ಫಿರ್‌ಔನ್ ಹೇಳಿದನು - "ಓ ಮೂಸಾ! ನೀನು ನಿನ್ನ ಜಾದೂವಿನ ಬಲದಿಂದ ನಮ್ಮನ್ನು ನಮ್ಮ ದೇಶದಿಂದ ಹೊರಕ್ಕಟ್ಟಲಿಕ್ಕಾಗಿ ಬಂದಿರುವೆಯಾ?" (ಪವಿತ್ರ ಕುರ್‌ಆನ್ 20:57)

وَقَالَ فِرْعَوْنُ ذَرُوْنِىْٓ اَقْتُلْ مُوْسٰى وَلْيَدْعُ رَبَّهٗ ۚ اِنِّىْٓ اَخَافُ
اَنْ يُّبَدِّلَ دِيْنَكُمْ اَوْ اَنْ يُّظْهِرَ فِى الْاَرْضِ الْفَسَادَ (المؤمن - ٢٦)

ಒಂದು ದಿನ ಫಿರ್‌ಔನನು ತನ್ನ ಆಸ್ಥಾನದವರೊಡನೆ, "ನನ್ನನ್ನು ಬಿಟ್ಟು ಬಿಡಿರಿ, ನಾನು ಈ ಮೂಸಾನನ್ನು ವಧಿಸಿ ಬಿಡುತ್ತೇನೆ. ಇವನು ತನ್ನ ಪ್ರಭುವನ್ನು ಕರೆದು ನೋಡಲಿ. ಇವನು ನಿಮ್ಮ ಧರ್ಮವನ್ನು ಬದಲಿಸಿ ಬಿಡುವನು ಅಥವಾ ದೇಶದಲ್ಲಿ ಗೊಂದಲವನ್ನುಂಟು ಮಾಡುವನು ಎಂಬ ಭಯ ನನಗೆ ಉಂಟಾಗಿದೆ." (ಪವಿತ್ರ ಕುರ್‌ಆನ್ 40:26)

قَالُوْٓا اِنْ هٰذٰنِ لَسٰحِرٰنِ يُرِيْدٰنِ اَنْ يُّخْرِجٰكُمْ مِّنْ اَرْضِكُمْ
بِسِحْرِهِمَا وَيَذْهَبَا بِطَرِيْقَتِكُمُ الْمُثْلٰى (طٰهٰ - ٦٣)

ಕೊನೆಗೆ ಕೆಲವರು ಹೇಳಿದರು: "ಇವರಿಬ್ಬರೂ ಕೇವಲ ಜಾದೂಗಾರರು. ಇವರ ಉದ್ದೇಶವು ತಮ್ಮ ಜಾದೂವಿನ ಬಲದಿಂದ ನಿಮ್ಮನ್ನು ನಿಮ್ಮ ನಾಡಿನಿಂದ ಹೊರ ಹಾಕುವುದು ಮತ್ತು ಆದರ್ಶ ಪ್ರಾಯವಾದ ನಿಮ್ಮ ಜೀವನ ಕ್ರಮವನ್ನು ಕೊನೆಗೊಳಿಸಿ ಬಿಡುವುದಾಗಿದೆ. (ಪವಿತ್ರ ಕುರ್‌ಆನ್ : 20:63)

ಈ ಎಲ್ಲ ಆಯತ್‌ಗಳನ್ನು ಅನುಕ್ರಮವಾಗಿ ಗಮನಿಸುವುದರಿಂದ ರಬ್ಬ್‌ನ ಕುರಿತು ಲೋಕದ ಇತರೆಲ್ಲ ಜನಾಂಗಗಳು ಯಾವ ಪಥಭ್ರಷ್ಟತೆಯಲ್ಲಿ ಸಿಲುಕಿತ್ತೋ ಈಜಿಪ್ಟ್‌ನ ಜನಾಂಗ ಕೂಡಾ ಅದೇ ಪಥಭ್ರಷ್ಟತೆಯಲ್ಲಿ ಸಿಲುಕಿತ್ತು ಮತ್ತು ಎಲ್ಲ ಪ್ರವಾದಿಗಳು ನೀಡುತ್ತಾ

ಬಂದ ಅದೇ ಸಂದೇಶವನ್ನು ಮೂಸಾ ಮತ್ತು ಹಾರೂನ್(ಅ) ಕೂಡಾ ಅವರ ಮುಂದಿಟ್ಟಿದ್ದರು ಎಂದು ಸ್ಪಷ್ಟವಾಗಿ ತಿಳಿಯುತ್ತದೆ.

ಯಹೂದಿ ಮತ್ತು ಕ್ರೈಸ್ತ ಜನಾಂಗ

ಫಿರ್‌ಔನ್‌ನ ಜನಾಂಗದ ಬಳಿಕ ನಮ್ಮ ಮುಂದೆ ಬನೀ ಇಸ್ರಾಈಲ್ ಮತ್ತು ಯಹೂದಿ ಹಾಗೂ ಕ್ರೈಸ್ತ ಧರ್ಮ ಸ್ವೀಕರಿಸಿದ ಇತರ ಜನಾಂಗಗಳು ಬರುತ್ತವೆ. ಅವರು ಅಲ್ಲಾಹನ ಅಸ್ತಿತ್ವವನ್ನು ನಿರಾಕರಿಸುತ್ತಿದ್ದರೆಂದು ಅವರ ಕುರಿತು ಊಹಿಸುವುದು ಕೂಡಾ ಸಾಧ್ಯವಿಲ್ಲ. ಅವರು ಅಲ್ಲಾಹನನ್ನು ರಬ್ಬ್ ಮತ್ತು ಇಲಾಹ್ ಅಲ್ಲವೆಂದು ಪರಿಗಣಿಸುವ ಪ್ರಮೇಯವೇ ಇಲ್ಲ. ಆದ್ದರಿಂದ ಕುರ್‌ಆನ್ ಅವರನ್ನು ಗ್ರಂಥದವರು ಎಂದು ಕರೆದಿದೆ. ಹಾಗಿರುವಾಗ ರಬ್ಬ್‌ನ ಕುರಿತು ಅವರ ಯಾವ ವಿಶಿಷ್ಟ ತಪ್ಪಿನಿಂದಾಗಿ ಅವರನ್ನು ಪವಿತ್ರ ಕುರ್‌ಆನ್ ಪಥಭ್ರಷ್ಟರೆಂದು ಘೋಷಿಸುತ್ತದೆ ಎಂಬುದೇ ಈಗಿರುವ ಪ್ರಶ್ನೆ. ಅದಕ್ಕೆ ಪವಿತ್ರ ಕುರ್‌ಆನ್ ಸಂಕ್ಷಿಪ್ತವಾಗಿ ಹೀಗೆ ಉತ್ತರಿಸುತ್ತದೆ:

قُلْ يَا أَهْلَ الْكِتَابِ لَا تَغْلُوا فِي دِينِكُمْ غَيْرَ الْحَقِّ وَلَا تَتَّبِعُوا أَهْوَاءَ
قَوْمٍ قَدْ ضَلُّوا مِنْ قَبْلُ وَأَضَلُّوا كَثِيرًا وَضَلُّوا عَنْ سَوَاءِ السَّبِيلِ -
(المائدة - ٧٧)

ಹೇಳಿರಿ "ಓ ಗ್ರಂಥದವರೇ! ನಿಮ್ಮ ಧರ್ಮದಲ್ಲಿ ವೃಥಾ ಹದಮೀರಬೇಡಿರಿ ಮತ್ತು ನಿಮಗಿಂತ ಮುಂಚೆ ಪಥಭ್ರಷ್ಟರಾಗಿದ್ದ ಹಾಗೂ ಅನೇಕರನ್ನು ಪಥಭ್ರಷ್ಟರಾಗಿ ಮಾಡಿದ ಮತ್ತು ನೇರ ಮಾರ್ಗದಿಂದ ಭ್ರಷ್ಟರಾದವರ ವಿಚಾರಗಳನ್ನನುಸರಿಸಬೇಡಿರಿ."(ಪವಿತ್ರ ಕುರ್‌ಆನ್ 6:77)

ಆರಂಭದಲ್ಲೇ ಇತರ ಜನಾಂಗಗಳು ಯಾವ ಪಥಭ್ರಷ್ಟತೆಯಲ್ಲಿ ಬಿದ್ದಿದ್ದುವೋ ಅದೇ ಪಥಭ್ರಷ್ಟತೆಯಲ್ಲಿ ಯಹೂದಿಗಳು ಮತ್ತು ಕ್ರೈಸ್ತರೂ ಬಿದ್ದಿದ್ದರು ಎಂದು ಇದರಿಂದ ತಿಳಿಯುತ್ತದೆ. ಈ ಪಥಭ್ರಷ್ಟತೆಯು ಅವರಲ್ಲಿ ಧರ್ಮದ ವಿಷಯದಲ್ಲಿ ಅತಿರೇಕದಿಂದಾಗಿ ಬಂದಿದೆಯೆಂದೂ ಇದರಿಂದ ತಿಳಿಯುತ್ತದೆ. ಈ ವಿಷಯವನ್ನು ಕುರ್‌ಆನ್ ಹೇಗೆ ವಿವರಿಸಿ ಹೇಳುತ್ತದೆಂಬುದನ್ನು ನೋಡಿರಿ:

وَقَالَتِ الْيَهُودُ عُزَيْرٌ ابْنُ اللَّهِ وَقَالَتِ النَّصَارَى الْمَسِيحُ ابْنُ اللَّهِ
(التوبة - ٣٠)

ಉಝೈರ್ ದೇವಪುತ್ರನೆಂದು ಯಹೂದಿಯರು ಹೇಳುತ್ತಾರೆ. ಮಸೀಹ್ (ಈಸಾ) ದೇವಪುತ್ರನೆಂದು ಕ್ರೈಸ್ತರು ಹೇಳುತ್ತಾರೆ. (9 :30)

لَقَدْ كَفَرَ الَّذِينَ قَالُوا إِنَّ اللَّهَ هُوَ الْمَسِيحُ ابْنُ مَرْيَمَ ۖ وَقَالَ
الْمَسِيحُ يَا بَنِي إِسْرَائِيلَ اعْبُدُوا اللَّهَ رَبِّي وَرَبَّكُمْ (المائدہ - ٧٢)

ಮರ್ಯಮರ ಪುತ್ರ ಮಸೀಹರೇ ಅಲ್ಲಾಹನೆಂದು ಹೇಳಿದವರು ಖಂಡಿತವಾಗಿಯೂ 'ಕುಫ್ರ್' ಕೈಗೊಂಡರು. ವಸ್ತುತಃ ಮಸೀಹರು, "ಓ ಬನೀ ಇಸ್ರಾಈಲರೇ! ನನ್ನ ಪ್ರಭುವೂ ನಿಮ್ಮ ಪ್ರಭುವೂ ಆಗಿರುವ ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ" ಎಂದು ಹೇಳಿದ್ದರು. (5 :72)

لَقَدْ كَفَرَ الَّذِينَ قَالُوا إِنَّ اللَّهَ ثَالِثُ ثَلَاثَةٍ ۘ وَمَا مِنْ إِلَٰهٍ إِلَّا
إِلَٰهٌ وَاحِدٌ (المائدہ - ٧٣)

ಅಲ್ಲಾಹ್ ಮೂವರಲ್ಲೊಬ್ಬನೆಂದು ಹೇಳಿದವರು ನಿಶ್ಚಯವಾಗಿಯೂ ಕುಫ್ರ್ ಕೈಗೊಂಡರು. ವಾಸ್ತವದಲ್ಲಿ ಏಕದೇವನಲ್ಲದೆ ಅನ್ಯ ದೇವನಿಲ್ಲ. (5 :73)

وَإِذْ قَالَ اللَّهُ يَا عِيسَى ابْنَ مَرْيَمَ أَأَنْتَ قُلْتَ لِلنَّاسِ اتَّخِذُونِي وَأُمِّيَ
إِلَٰهَيْنِ مِنْ دُونِ اللَّهِ ۖ قَالَ سُبْحَانَكَ مَا يَكُونُ لِي أَنْ أَقُولَ مَا لَيْسَ
لِي بِحَقٍّ (المائدہ - ١١٦)

"ಓ ಮರ್ಯಮರ ಪುತ್ರ ಈಸಾ! ಅಲ್ಲಾಹನ ಹೊರತು ನನ್ನನ್ನೂ ನನ್ನ ಮಾತೆಯನ್ನೂ ದೇವರನ್ನಾಗಿ ಮಾಡಿಕೊಳ್ಳಿರಿ ಎಂದು ನೀವು ಜನರೊಡನೆ ಹೇಳಿದ್ದಿರಾ?" ಎಂದು ಅಲ್ಲಾಹನು ಕೇಳುವಾಗ ಅವರು ಉತ್ತರಿಸುವರು: "ನೀನು ಪರಮ ಪಾವನನು. ನನಗೆ ಹೇಳಲು ಹಕ್ಕಿಲ್ಲದಂತಹ ಮಾತನ್ನು ಹೇಳುವ ಕಾರ್ಯ ನನ್ನದಾಗಿರಲಿಲ್ಲ." (5 :116)

مَا كَانَ لِبَشَرٍ أَنْ يُؤْتِيَهُ اللَّهُ الْكِتَابَ وَالْحُكْمَ وَالنُّبُوَّةَ ثُمَّ يَقُولَ
لِلنَّاسِ كُونُوا عِبَادًا لِي مِنْ دُونِ اللَّهِ وَلَٰكِنْ كُونُوا رَبَّانِيِّينَ بِمَا
كُنْتُمْ تُعَلِّمُونَ الْكِتَابَ وَبِمَا كُنْتُمْ تَدْرُسُونَ ۝ وَلَا يَأْمُرَكُمْ أَنْ
تَتَّخِذُوا الْمَلَائِكَةَ وَالنَّبِيِّينَ أَرْبَابًا ۗ أَيَأْمُرُكُمْ بِالْكُفْرِ بَعْدَ إِذْ أَنْتُمْ
مُسْلِمُونَ (آل عمران - ٧٩ - ٨٠)

ಅಲ್ಲಾಹನು ತನಗೆ ಗ್ರಂಥವನ್ನೂ ನಿರ್ದೇಶವನ್ನೂ ಪ್ರವಾದಿತ್ವವನ್ನೂ ದಯಪಾಲಿಸಿರುವಾಗ ಅವನು ಜನರೊಡನೆ, ನೀವು ಅಲ್ಲಾಹನ ಬದಲಿಗೆ ನನ್ನ ದಾಸರಾಗಿರಿ ಎನ್ನುವುದು ಯಾವನೇ ಮಾನವನ ಕೆಲಸವಲ್ಲ. ಅವನಂತು, ನೀವು ಓದುತ್ತಿರುವ ಮತ್ತು ಓದಿಸುತ್ತಿರುವ ಗ್ರಂಥದ ಬೋಧನೆಯ ಬೇಡಿಕೆಯ ಪ್ರಕಾರ ಅಪ್ಪಟ ದೇವ ಭಕ್ತರಾಗಿರೆಂದೇ ಹೇಳುವನು. ನೀವು ದೇವಚರರನ್ನು ಅಥವಾ ದೇವಸಂದೇಶವಾಹಕರನ್ನು ನಿಮ್ಮ ಪ್ರಭುಗಳಾಗಿ ಮಾಡಿಕೊಳ್ಳಿರೆಂದು ಅವನೆಂದೂ ಹೇಳಲಾರ. ನೀವು ಓರ್ವ ಮುಸ್ಲಿಮ್ ಆಗಿರುವಾಗ ಓರ್ವ ಪ್ರವಾದಿಯು ನಿಮಗೆ ಅಧರ್ಮದ ಆದೇಶ ಕೊಡುವುದು ಸಾಧ್ಯವೇ? (3: 80)

ಈ ಆಯತ್‌ಗಳ ಪ್ರಕಾರ ಗ್ರಂಥದವರ ಪ್ರಥಮ ಪಥಭ್ರಷ್ಟತೆ ಏನಾಗಿತ್ತೆಂದರೆ ಅವರು ಮಹಾತ್ಮರಾದ ಪ್ರವಾದಿಗಳು, ಔಲಿಯಾಗಳು (ಸಂತರು) ದೇವಚರರು ಮುಂತಾದವರ ಧಾರ್ಮಿಕ ಸ್ಥಾನಮಾನವನ್ನು ಅತ್ಯಧಿಕ ಏರಿಸಿ ಅವರನ್ನು ದೇವತ್ವದ ಸ್ಥಾನಕ್ಕೆ ತಲುಪಿಸಿದರು. ಅಲ್ಲಾಹನ ವ್ಯವಹಾರಗಳಲ್ಲಿ ಅವರೂ ಪಾಲುದಾರರಾಗಿದ್ದಾರೆಂದು ಬಗೆದರು. ಅವರನ್ನು ಪೂಜಿಸಿದರು. ಅವರನ್ನು ಕರೆದು ಪ್ರಾರ್ಥಿಸಿದರು. ಅವರನ್ನು ಅಭೌತಿಕವಾಗಿ 'ರಬ್ಬ್' ಮತ್ತು 'ಇಲಾಹ್' ಎಂಬ ಗುಣಗಳಲ್ಲಿ ಪಾಲುದಾರರೆಂದು ಪರಿಗಣಿಸಿದರು. ಅವರು ಕ್ಷಮಿಸುವ, ಸಹಾಯ ಮಾಡುವ ಮತ್ತು ಸಂರಕ್ಷಿಸುವ ಅಧಿಕಾರ ಉಳ್ಳವರೆಂದು ಬಗೆದರು.

ಅವರ ಇನ್ನೊಂದು ಪಥಭ್ರಷ್ಟತೆಯನ್ನು ಕುರ್‌ಆನ್ ಹೀಗೆ ಹೇಳಿದೆ:

اِتَّخَذُوْٓا اَحْبَارَهُمْ وَرُهْبَانَهُمْ اَرْبَابًا مِّنْ دُوْنِ اللّٰهِ (التوبہ ٣١)

ಅವರು ಅಲ್ಲಾಹನನ್ನು ಬಿಟ್ಟು ತಮ್ಮ ವಿದ್ವಾಂಸರನ್ನೂ ಸಂತರನ್ನೂ ತಮ್ಮ ಪ್ರಭುಗಳಾಗಿ ಮಾಡಿಕೊಂಡಿರುತ್ತಾರೆ. (9: 31)

ಧರ್ಮದಲ್ಲಿ ಯಾರ ನೆಲೆಯು ಕೇವಲ ಅಲ್ಲಾಹನ ಆದೇಶಗಳನ್ನು ತಿಳಿಸುವುದು ಮತ್ತು ಅವನ ಇಚ್ಛೆಯ ಪ್ರಕಾರ ನೈತಿಕ ಸುಧಾರಣೆ ಮಾಡುವುದಾಗಿತ್ತೋ ಅವರಿಗೆ ತಮಗಿಷ್ಟ ಬಂದಂತೆ ಯಾವುದನ್ನಾದರೂ ಧರ್ಮಸಮ್ಮತಗೊಳಿಸುವ ಮತ್ತು ಯಾವುದನ್ನಾದರೂ ನಿಷೇಧಿಸುವ ಹಾಗೂ ಅಲ್ಲಾಹನ ಗ್ರಂಥದ ಆಧಾರವಿಲ್ಲದೆಯೋ ಯಾವುದೇ ಆಜ್ಞೆ ನೀಡುವ ಅಥವಾ ಯಾವುದರಿಂದ ಬೇಕಾದರೂ ತಡೆಯುವ ಹಾಗೂ ಯಾವ ಪದ್ಧತಿಯನ್ನು ಬೇಕಾದರೂ ಜಾರಿಗೊಳಿಸುವ ಅಧಿಕಾರವನ್ನು ಕೊಟ್ಟುಬಿಟ್ಟಿದ್ದರು. ಈ ರೀತಿ ಇವರು ಕೂಡಾ ನೂಹರ ಜನಾಂಗ, ಇಬ್ರಾಹೀಮರ ಜನಾಂಗ, ಆದ್, ಸಮೂದ್, ಮದ್‌ಯನ್‌ನವರು ಮತ್ತಿತರ ಜನಾಂಗಗಳು ಸಿಲುಕಿದ್ದ ಅದೇ ಎರಡು ಮಹಾ ಪಥಭ್ರಷ್ಟತೆಯಲ್ಲಿ ಸಿಲುಕಿದರು. ಅವರಂತೆಯೇ ಇವರೂ ಅಭೌತಿಕವಾಗಿ ರಬ್ಬ್‌ನ ಗುಣದಲ್ಲಿ ದೇವಚರರನ್ನು ಮತ್ತು ಮಹಾತ್ಮರನ್ನು ಅಲ್ಲಾಹನ ಭಾಗೀದಾರರಾಗಿ ಮಾಡಿದರು. ಅವರಂತೆಯೇ ಇವರೂ ತಮ್ಮ ಸಂಸ್ಕೃತಿ, ಸಾಮಾಜಿಕ ನಿಯಮ,

ನೈತಿಕ ಮತ್ತು ರಾಜಕೀಯ ತತ್ವಸಿದ್ಧಾಂತಗಳನ್ನು ಅಲ್ಲಾಹನ ಗ್ರಂಥದ ಆಧಾರವಿಲ್ಲದೆಯೇ ಜನರಿಂದ ಪಡೆಯತೊಡಗಿದರು. ಎಲ್ಲಿಯವರೆಗೆಂದರೆ:

أَلَمْ تَرَ إِلَى الَّذِينَ أُوتُوا نَصِيبًا مِنَ الْكِتَابِ يُؤْمِنُونَ بِالْجِبْتِ
وَالطَّاغُوتِ (النساء - ٥١)

ಗ್ರಂಥಜ್ಞಾನದಿಂದ ಒಂದಂಶ ನೀಡಲ್ಪಟ್ಟವರನ್ನು ನೀವು ನೋಡಲಿಲ್ಲವೇ? ಅವರು ಜಿಬ್ತ್ ಮತ್ತು ತಾಗೂತ್‌ಗಳನ್ನು ನಂಬುತ್ತಾರೆ. (ಪವಿತ್ರ ಕುರ್‌ಆನ್ 4:51)

قُلْ هَلْ أُنَبِّئُكُمْ بِشَرٍّ مِنْ ذَٰلِكَ مَثُوبَةً عِنْدَ اللَّهِ ۚ مَنْ لَعَنَهُ اللَّهُ
وَغَضِبَ عَلَيْهِ وَجَعَلَ مِنْهُمُ الْقِرَدَةَ وَالْخَنَازِيرَ وَعَبَدَ الطَّاغُوتَ ۚ
أُولَٰئِكَ شَرٌّ مَكَانًا وَأَضَلُّ عَنْ سَوَاءِ السَّبِيلِ (المائده - ٦٠)

ಹೇಳಿರಿ "ಅಲ್ಲಾಹನ ಬಳಿ ಫಾಸಿಕರಿಗಿಂತಲೂ ನಿಕೃಷ್ಟವಾದ ಅಂತಿಮ ಗತಿ ಹೊಂದುವವರನ್ನು ತೋರಿಸಿ ಕೊಡಲೇ? ಅಲ್ಲಾಹನ ಶಾಪ ಹಾಗೂ ಕೋಪಕ್ಕೊಳಗಾದವರು, ಕಪಿಗಳಾಗಿಯೂ ಹಂದಿಗಳಾಗಿಯೂ ಮಾರ್ಪಡಿಸಲ್ಪಟ್ಟವರು ಮತ್ತು ತಾಗೂತ್‌ನ ದಾಸ್ಯ ಕೈಗೊಂಡವರು. ಅವರ ಸ್ಥಾನವು ಇನ್ನೂ ಕೆಟ್ಟದಾಗಿರುತ್ತದೆ ಮತ್ತು ಅವರು ನೇರಮಾರ್ಗದಿಂದ ಅತಿ ಹೆಚ್ಚು ತಪ್ಪಿ ನಡೆದವರಾಗಿರುತ್ತಾರೆ. (ಪವಿತ್ರ ಕುರ್‌ಆನ್ 5:60)

ಜಿಬ್ತ್‌ನ ನಿಜವಾದ ಅರ್ಥ ಕ್ಷುದ್ರ ಮತ್ತು ನಿರರ್ಥಕ ವಿಷಯಗಳು ಎಂದಾಗಿದೆ. ಜ್ಯೋತಿಷ್ಯ, ಶಕುನ, ಅದೃಷ್ಟ ಪರೀಕ್ಷೆ, ಜಾದೂ-ಮಂತ್ರ, ಮುಹೂರ್ತ ಇತ್ಯಾದಿ ಭ್ರಾಮಕ ವಿಷಯಗಳು ಜಿಬ್ತ್‌ನಲ್ಲಿ ಸೇರಿವೆ. ತನ್ನ ನ್ಯಾಯಸಮ್ಮತ ಪರಿಧಿಯನ್ನು ಮೀರಿದ ಪ್ರತಿಯೊಬ್ಬ ವ್ಯಕ್ತಿ, ಗುಂಪು ಮತ್ತು ಸಂಸ್ಥೆಯನ್ನು 'ತಾಗೂತ್' ಎನ್ನಲಾಗುತ್ತದೆ. ದೇವನ ದಾಸ್ಯದ ಪರಿಧಿಯನ್ನು ಮೀರಿ ಸ್ವಂತಃ ದೇವತ್ವ ಮತ್ತು ಪ್ರಭುತ್ವವನ್ನು ವಾದಿಸುವವರು ಎಂದರ್ಥ. ಯಹೂದಿಗಳು ಮತ್ತು ಕ್ರೈಸ್ತರು ಮೇಲೆ ಪ್ರಸ್ತಾಪಿಸಿದ ಎರಡು ರೀತಿಯ ಪಥಭ್ರಷ್ಟತೆಯಲ್ಲಿ ಬಿದ್ದುಬಿಟ್ಟಾಗ ಮೊದಲನೆಯ ಪಥಭ್ರಷ್ಟತೆಯ ಫಲವಾಗಿ ಎಲ್ಲ ರೀತಿಯ ಭ್ರಾಮಕ ವಿಶ್ವಾಸಗಳು ಮತ್ತು ಮೂಢನಂಬಿಕೆಗಳು ಅವರ ಮನ-ಮಸ್ತಿಷ್ಕಗಳನ್ನು ಆವರಿಸಿದುವು. ಎರಡನೆಯ ಪಥಭ್ರಷ್ಟತೆಯು ಅವರನ್ನು ತಮ್ಮ ವಿದ್ವಾಂಸರು, ಮಹಾತ್ಮರು, ಸಂತರುಗಳ ದಾಸ್ಯದಿಂದಲೂ ಮುಂದುವರಿಸಿ ಅಲ್ಲಾಹನಿಗೆ ಪ್ರತ್ಯಕ್ಷ ವಿದ್ರೋಹವೆಸಗಿದ ಸರ್ವಾಧಿಕಾರಿಗಳು ಮತ್ತು ಅಕ್ರಮಿಗಳ ದಾಸ್ಯ-ಅನುಸರಣೆಯದ ವರೆಗೂ ತಲುಪಿಸಿತು.

ಅರಬ್ ಬಹುದೇವ ವಿಶ್ವಾಸಿಗಳ ಕಲ್ಪನೆಗಳು

ಅರೇಬಿಯದ ಬಹುದೇವವಿಶ್ವಾಸಿಗಳ ಕಡೆಗೆ ಪ್ರವಾದಿ ಮುಹಮ್ಮದ್(ಸ) ನೇಮಕಗೊಂಡಿದ್ದರು. ಪವಿತ್ರ ಕುರ್‌ಆನ್‌ನ ಪ್ರಥಮ ಸಂಬೋಧಿತರೂ ಅವರೇ ಆಗಿದ್ದರು. 'ರಬ್ಬ್'ನ ವಿಷಯದಲ್ಲಿ ಅವರ ಪಥಭ್ರಷ್ಟತೆಯು ಯಾವ ಸ್ವರೂಪದ್ದಾಗಿತ್ತು ಎಂಬುದನ್ನು ಈಗ ಅವಲೋಕಿಸಬೇಕಾಗಿದೆ. ಅವರು ಅಲ್ಲಾಹನನ್ನು 'ಇಲಾಹ್' ಮತ್ತು 'ರಬ್ಬ್' ಎಂದು ನಂಬುತ್ತಿರಲಿಲ್ಲವೇ? ಅಲ್ಲಾಹನು 'ಇಲಾಹ್' ಮತ್ತು 'ರಬ್ಬ್' ಆಗಿದ್ದಾನೆ ಎಂಬುದರ ಕರೆ ಅವರಿಗೆ ನೀಡಲಿಕ್ಕಾಗಿ ಪವಿತ್ರ ಕುರ್‌ಆನ್ ಅವತೀರ್ಣಗೊಂಡಿತ್ತೇ? ಅವರು 'ಲಾತ್', 'ಮನಾತ್', 'ಉಝ್ಝಾ' ಮತ್ತು 'ಹುಬಲ್' ಹಾಗೂ ಅವರ ಇತರ ಾರಾಧ್ಯರನ್ನೇ ವಿಶ್ವದ ಸೃಷ್ಟಿಕರ್ತ, ಒಡೆಯ, ಅನ್ನದಾತ ಮತ್ತು ವ್ಯವಸ್ಥಾಪಕ ಎಂದು ಬಗೆದಿದ್ದರೇ? ತಮ್ಮ ಆರಾಧ್ಯರನ್ನೇ ಅವರು ಶಾಸನಕರ್ತರು, ನೀತಿ ಮತ್ತು ಸಂಸ್ಕೃತಿಯ ವಿಷಯಗಳಲ್ಲಿ ಮಾರ್ಗದರ್ಶನ ಮಾಡುವವರು ಎಂದು ನಂಬಿದ್ದರೇ? ಈ ಪೈಕಿ ಪ್ರತಿಯೊಂದು ಪ್ರಶ್ನೆಗೆ ಪವಿತ್ರ ಕುರ್‌ಆನ್‌ನಲ್ಲಿ ನಕಾರಾತ್ಮಕ ಉತ್ತರವೇ ದೊರಕುತ್ತದೆ. ಅರೇಬಿಯದ ಬಹುದೇವ ವಿಶ್ವಾಸಿಗಳು ಅಲ್ಲಾಹನ ಅಸ್ತಿತ್ವವನ್ನು ನಂಬುವವರು ಮಾತ್ರವಾಗಿರಲಿಲ್ಲ. ಅವನನ್ನೇ ಸಮಸ್ತ ವಿಶ್ವದ ಮತ್ತು ತಮ್ಮ ಆರಾಧ್ಯರುಗಳ ಸೃಷ್ಟಿಕರ್ತ ಮತ್ತು ಅತ್ಯುನ್ನತ ಪ್ರಭು ಎಂದು ನಂಬುತ್ತಿದ್ದರು. ಅವನನ್ನು 'ರಬ್ಬ್' ಮತ್ತು ' ಇಲಾಹ್' ಎಂದೂ ಒಪ್ಪುತ್ತಿದ್ದರು. ವಿಪತ್ತು ಮತ್ತು ಸಂಕಷ್ಟಗಳಲ್ಲಿ ಅವರು ಕಟ್ಟಕಡೆಗೆ ಮೊರೆಯಿಡುವುದು ಅಲ್ಲಾಹನಲ್ಲೇ ಆಗಿತ್ತು. ಅಲ್ಲಾಹನ ಇಬಾದತ್ ಮತ್ತು ಆರಾಧನೆಯನ್ನೂ ಅವರು ನಿರಾಕರಿಸುತ್ತಿರಲಿಲ್ಲ. ಅವರು ತಮ್ಮ ದೇವತೆಗಳನ್ನು ಜಗತ್ತಿನ ಸೃಷ್ಟಿಕರ್ತ ಮತ್ತು ಅನ್ನದಾತ ಎಂದು ಬಗೆದಿಲ್ಲ. ಈ ಆರಾಧ್ಯರು ಜೀವನದ ನಾಗರಿಕ ಮತ್ತು ನೈತಿಕ ವಿಷಯಗಳಲ್ಲಿ ಮಾರ್ಗದರ್ಶನ ನೀಡುವವರೆಂದೂ ಅವರು ಬಗೆದಿರಲಿಲ್ಲ. ಈ ಕೆಳಗಿನ ಆಯತ್‌ಗಳು ಅದಕ್ಕೆ ಸಾಕ್ಷಿಯಾಗಿವೆ:

قُلْ لِمَنِ الْأَرْضُ وَمَنْ فِيهَا إِنْ كُنْتُمْ تَعْلَمُونَ ○ سَيَقُولُونَ لِلَّهِ ۚ
قُلْ أَفَلَا تَذَكَّرُونَ ○ قُلْ مَنْ رَبُّ السَّمٰوٰتِ السَّبْعِ وَرَبُّ الْعَرْشِ
الْعَظِيمِ ○ سَيَقُولُونَ لِلَّهِ قُلْ أَفَلَا تَتَّقُونَ ○ قُلْ مَنْ بِيَدِهِ مَلَكُوتُ
كُلِّ شَيْءٍ وَهُوَ يُجِيرُ وَلَا يُجَارُ عَلَيْهِ إِنْ كُنْتُمْ تَعْلَمُونَ ○ سَيَقُولُونَ
لِلَّهِ ۚ قُلْ فَأَنّٰى تُسْحَرُونَ ○ بَلْ أَتَيْنٰهُمْ بِالْحَقِّ وَإِنَّهُمْ لَكٰذِبُونَ ○

(المؤمنون ۸۴ - ۹۰)

"ಓ ಪೈಗಂಬರರೇ! ಇವರೊಡನೆ ಕೇಳಿರಿ 'ನೀವು ಬಲ್ಲವರಾಗಿದ್ದರೆ ಈ ಭೂಮಿ ಮತ್ತು ಇದರೊಳಗಿರುವುದೆಲ್ಲವೂ ಯಾರದೆಂದು ಹೇಳಿರಿ'. ಅವರು ಖಂಡಿತವಾಗಿಯೂ 'ಅಲ್ಲಾಹನದು'

ಎನ್ನುವರು. ಹಾಗಾದರೆ ನೀವು ಪ್ರಜ್ಞಾವಂತರಾಗುವುದಿಲ್ಲವೇ? ಎಂದು ಕೇಳಿರಿ. ಸಪ್ತ ಗಗನಗಳ ಮತ್ತು ಮಹಾ ಸಿಂಹಾಸನದ ಒಡೆಯನಾರೆಂದು ಇವರನ್ನು ಕೇಳಿರಿ. ಅವರು ಖಂಡಿತವಾಗಿಯೂ ಅಲ್ಲಾಹನೇ ಎನ್ನುವರು. ಹಾಗಾದರೆ ನೀವೇಕೆ ಭಯಪಡುವುದಿಲ್ಲವೆಂದು ಕೇಳಿರಿ. ಅವರೊಡನೆ ಕೇಳಿರಿ, ಸಕಲ ವಸ್ತುಗಳ ಮೇಲೆ ಯಾರ ಪ್ರಭುತ್ವವಿದೆ? ಎಲ್ಲರಿಗೂ ಆಶ್ರಯ ನೀಡುವವನೂ ಅವನ ವಿರುದ್ಧ ಆಶ್ರಯ ನೀಡಲು ಯಾರಿಗೂ ಸಾಧ್ಯವಿಲ್ಲದಂತಹವನೂ ಯಾರು? ನಿಮಗೆ ಗೊತ್ತಿದ್ದರೆ ಹೇಳಿರಿ. ಅವರು ಖಂಡಿತವಾಗಿಯೂ ' ಗುಣಗಳು ಅಲ್ಲಾಹನಿಗೇ ಇವೆ' ಎನ್ನುವರು. ಹಾಗಾದರೆ ನೀವು ಮೋಸ ಹೋಗುವುದು ಹೇಗೆ? ಎಂದು ಕೇಳಿರಿ. ಸತ್ಯವೇನಿದೆಯೋ ಅದನ್ನು ನಾವು ಅವರ ಮುಂದೆ ತಂದಿದ್ದೇವೆ. ಇವರು ಸುಳ್ಳುಗಾರರೆಂಬುದರಲ್ಲಿ ಏನೂ ಸಂಶಯವಿಲ್ಲ" (23: 84-90)

هُوَ الَّذِي يُسَيِّرُكُمْ فِي الْبَرِّ وَالْبَحْرِ حَتَّىٰ إِذَا كُنتُمْ فِي الْفُلْكِ وَجَرَيْنَ
بِهِم بِرِيحٍ طَيِّبَةٍ وَفَرِحُوا بِهَا جَاءَتْهَا رِيحٌ عَاصِفٌ وَجَاءَهُمُ الْمَوْجُ
مِن كُلِّ مَكَانٍ وَظَنُّوا أَنَّهُمْ أُحِيطَ بِهِمْ دَعَوُا اللَّهَ مُخْلِصِينَ لَهُ
الدِّينَ لَئِنْ أَنجَيْتَنَا مِنْ هَٰذِهِ لَنَكُونَنَّ مِنَ الشَّاكِرِينَ ○ فَلَمَّا
أَنجَاهُمْ إِذَا هُمْ يَبْغُونَ فِي الْأَرْضِ بِغَيْرِ الْحَقِّ (يونس-٢٢-٢٣)

ನೀವು ನೆಲ-ಜಲಗಳಲ್ಲಿ ಸಂಚರಿಸುವಂತೆ ಅಲ್ಲಾಹನೇ ಮಾಡಿರುತ್ತಾನೆ. ನೀವು ನಾವೆಗಳನ್ನೇರಿ ಅನುಕೂಲಕರ ಮಾರುತದೊಂದಿಗೆ ಆನಂದ ತುಂದಿಲರಾಗಿ ಪ್ರಯಾಣ ಮಾಡುತ್ತಿರುವಾಗ ಹಠಾತ್ತನೆ ಪ್ರತಿಕೂಲ ಮಾರುತವು ಬಲವಾಗಿ ಬೀಸಿ ಎಲ್ಲ ಕಡೆಗಳಿಂದಲೂ ತೆರೆಗಳು ಅಪ್ಪಳಿಸುತ್ತಿರುವಾಗ ಮತ್ತು ನಾವು ಚಂಡಮಾರುತದಿಂದ ಸುತ್ತುವರಿಯಲ್ಪಟ್ಟೆವೆಂದು ಪ್ರಯಾಣಿಕರು ಮನಗಾಣುತ್ತಿರುವಾಗ ಎಲ್ಲರೂ ತಮ್ಮ ಧರ್ಮವನ್ನು ಅಲ್ಲಾಹನಿಗೆ ಮಾತ್ರ ಮೀಸಲಾಗಿರಿಸಿಕೊಂಡು ಅವನೊಡನೆ, "ನೀನು ಈ ಗಂಡಾಂತರದಿಂದ ನಮ್ಮನ್ನು ಪಾರುಗಾಣಿಸಿದರೆ ನಾವು ಕೃತಜ್ಞ ದಾಸರಾಗುವೆವು" ಎಂದು ಪ್ರಾರ್ಥಿಸುತ್ತಾರೆ. ಆದರೆ, ಅವನು ಅವರನ್ನು ರಕ್ಷಿಸಿದಾಗ ಮತ್ತೆ ಅದೇ ಜನರು ಸತ್ಯದಿಂದ ವಿಮುಖರಾಗಿ ಭೂಮಿಯಲ್ಲಿ ಬಂಡಾಯವೇಳುತ್ತಾರೆ.(10:22-23)

وَإِذَا مَسَّكُمُ الضُّرُّ فِي الْبَحْرِ ضَلَّ مَن تَدْعُونَ إِلَّا إِيَّاهُ فَلَمَّا
نَجَّاكُمْ إِلَى الْبَرِّ أَعْرَضْتُمْ وَكَانَ الْإِنسَانُ كَفُورًا (بنی اسرائیل-٦٧)

ಸಮುದ್ರದಲ್ಲಿ ನಿಮ್ಮ ಮೇಲೆ ಗಂಡಾಂತರವೆರಗುವಾಗ ಅವನೊಬ್ಬನ ಹೊರತು ಇತರ ಯಾರು ಯಾರನ್ನೆಲ್ಲಾ ನೀವು ಕೂಗಿ ಪ್ರಾರ್ಥಿಸುತ್ತಿದ್ದಿರೋ ಅವರೆಲ್ಲ ಮಾಯವಾಗಿ ಬಿಡುತ್ತಾರೆ. ಆದರೆ ಅವನು ನಿಮ್ಮನ್ನು ರಕ್ಷಿಸಿ ದಡ ಸೇರಿಸಿದಾಗ ನೀವು ಅವನಿಂದ ವಿಮುಖರಾಗುತ್ತೀರಿ. ನಿಜಕ್ಕೂ ಮಾನವನು ಮಹಾ ಕೃತಘ್ನ. (17: 67)

ತಮ್ಮ ಆರಾಧ್ಯರ ಕುರಿತು ಅವರ ಕಲ್ಪನೆಗಳನ್ನು ಕುರ್‌ಆನ್ ಅವರದೇ ಭಾಷೆಯಲ್ಲಿ ಈ ರೀತಿ ಉಲ್ಲೇಖಿಸಿದೆ:

وَالَّذِينَ اتَّخَذُوا مِن دُونِهِ أَوْلِيَاءَ مَا نَعْبُدُهُمْ إِلَّا لِيُقَرِّبُونَا
إِلَى اللَّهِ زُلْفَىٰ ـ (الزمر ـ ٣)

"ಇನ್ನು ಅವನ ಹೊರತು ಇತರರನ್ನು ರಕ್ಷಕ ಮಿತ್ರರಾಗಿ ಮಾಡಿಕೊಂಡವರ ವಿಷಯ- ಅವರು ನಮ್ಮನ್ನು ಅಲ್ಲಾಹನಿಗೆ ನಿಕಟಗೊಳಿಸಲಿಕ್ಕಾಗಿ ಮಾತ್ರ ನಾವು ಅವರ ಆರಾಧನೆ ಮಾಡುತ್ತೇವೆ" ಎಂದು ಅವರು ಹೇಳುತ್ತಾರೆ. (39: 3)

وَيَقُولُونَ هَٰؤُلَاءِ شُفَعَاؤُنَا عِندَ اللَّهِ ـ (يونس ـ ١٨)

"ಇವರು ಅಲ್ಲಾಹನ ಬಳಿ ನಮ್ಮ ಶಿಫಾರಸ್ಸು ಮಾಡುವವರು" ಎಂದು ಹೇಳುತ್ತಾರೆ (10: 18)

ಜೀವನದ ಸಮಸ್ಯೆಗಳಲ್ಲಿ ಮಾರ್ಗದರ್ಶನ ಮಾಡಬಲ್ಲವರೆಂದು ಕೂಡಾ ಅವರು ತಮ್ಮ ಆರಾಧ್ಯರುಗಳ ಬಗ್ಗೆ ಭಾವಿಸುತ್ತಿರಲಿಲ್ಲ.

قُلْ هَلْ مِن شُرَكَائِكُم مَّن يَهْدِي إِلَى الْحَقِّ ـ (يونس ـ ٣٥)

"ನೀವಿರಿಸಿಕೊಂಡಿರುವ ಸಹಭಾಗಿಗಳ ಪೈಕಿ ಯಾರಾದರೂ ಸತ್ಯದ ಕಡೆಗೆ ಮಾರ್ಗದರ್ಶನ ನೀಡುವವನೂ ಇದ್ದಾನೆಯೇ?" ಎಂದು ಇವರೊಡನೆ ಕೇಳಿರಿ. (10: 35)

ಆದರೆ ಈ ಪ್ರಶ್ನೆ ಕೇಳುತ್ತಲೇ ಅವರು ಮೌನ ತಾಳುತ್ತಾರೆ. ಹೌದು ಲಾತ್, ಮನಾತ್, ಉಝ್ಝಾ ಅಥವಾ ಇತರ ಆರಾಧ್ಯರುಗಳು ನಮಗೆ ವಿಚಾರ-ಆಚಾರಗಳ ಸರಿದಾರಿಯನ್ನು ತೋರಿಸುತ್ತಾರೆ. ಅವರು ಲೋಕದ ಜೀವನದಲ್ಲಿ ನ್ಯಾಯ, ಶಾಂತಿ ಮತ್ತು ಸಮಾಧಾನದ ತತ್ವಗಳನ್ನು ನಮಗೆ ಕಲಿಸುತ್ತಾರೆ. ಅವರ ಜ್ಞಾನ ಭಂಡಾರದಿಂದ ನಮಗೆ ವಿಶ್ವದ ಮೂಲಭೂತ ವಾಸ್ತವಿಕತೆಗಳ ಅರಿವಾಗುತ್ತದೆ ಎಂದು ಯಾರೂ ಉತ್ತರಿಸುವುದಿಲ್ಲ. ಆಗ ಅಲ್ಲಾಹನು ತನ್ನ ಪ್ರವಾದಿಗೆ ಹೀಗೆ ಆದೇಶಿಸುತ್ತಾನೆ:

قُلِ اللَّهُ يَهْدِي لِلْحَقِّ ۗ أَفَمَن يَهْدِي إِلَى الْحَقِّ أَحَقُّ أَن يُتَّبَعَ أَمَّن
لَّا يَهِدِّي إِلَّا أَن يُهْدَىٰ ۖ فَمَا لَكُمْ كَيْفَ تَحْكُمُونَ ٥ (يونس ـ ٣٥)

ಹೇಳಿರಿ- "ಸತ್ಯದ ಕಡೆಗೆ ಮಾರ್ಗದರ್ಶನ ಮಾಡುವವನು ಕೇವಲ ಅಲ್ಲಾಹನೇ. ಹೀಗಿರುತ್ತ ಸತ್ಯದ ಕಡೆಗೆ ಮಾರ್ಗದರ್ಶನ ಮಾಡುವವನು ಅನುಸರಣೆಗೆ ಹೆಚ್ಚು ಅರ್ಹನೋ ಅಥವಾ ತಮಗೆ ಮಾರ್ಗದರ್ಶನ ಮಾಡಿಸದಿದ್ದರೆ ಸ್ವತಃ ಸನ್ಮಾರ್ಗ ಹೊಂದದವನು ಅನುಸರಣೆಗೆ ಹೆಚ್ಚು ಅರ್ಹನೋ? ನಿಮಗೇನಾಗಿ ಬಿಟ್ಟಿದೆ? ನೀವೆಂತಹ ತದ್ವಿರುದ್ಧ ತೀರ್ಮಾನ ಕೈಗೊಳ್ಳುತ್ತೀರಿ?" (10: 35)

ಈ ವಿವರಣೆಗಳ ನಂತರ ಒಂದು ವಿಷಯ ಬಾಕಿ ಉಳಿಯುತ್ತದೆ. ಅದೇನೆಂದರೆ 'ರಬ್ಬ್'ನ ಕಲ್ಪನೆಯ ಕುರಿತು ಅವರ ನೈಜ ಪಥಭ್ರಷ್ಟತೆ ಏನಾಗಿತ್ತು? ಯಾವ ಕಲ್ಪನೆಯ ಸುಧಾರಣೆಗಾಗಿ ಅಲ್ಲಾಹನು ತನ್ನ ಪ್ರವಾದಿಯನ್ನು ಕಳುಹಿಸಿದ್ದನು ಮತ್ತು ಗ್ರಂಥವನ್ನು ಇಳಿಸಿದ್ದನು? ಈ ಪ್ರಶ್ನೆಯ ಉತ್ತರಕ್ಕಾಗಿ ನಾವು ಕುರ್‌ಆನನ್ನು ಅಭ್ಯಸಿಸಿದಾಗ ಅವರ ವಿಚಾರ ಮತ್ತು ಆಚಾರಗಳಲ್ಲೂ ನಮಗೆ ಹಿಂದಿನೆಲ್ಲ ಪಥಭ್ರಷ್ಟ ಜನಾಂಗಗಳಲ್ಲಿದ್ದ ಅದೇ ಎರಡು ಮೂಲ ಪಥಭ್ರಷ್ಟತೆಯು ಕಾಣ ಸಿಗುತ್ತದೆ.

ಒಂದೆಡೆ ಅಭೌತಿಕವಾಗಿ 'ರಬ್ಬ್' ಮತ್ತು 'ಇಲಾಹ್' ಎಂಬ ಗುಣಗಳಲ್ಲಿ ಅಲ್ಲಾಹನ ಜತೆ ಇತರರನ್ನು ಅವರು ಸಹಭಾಗಿಗಳಾಗಿ ಮಾಡಿಕೊಂಡಿದ್ದರು. ಕಾರ್ಯಕಾರಣಗಳ ಮೇಲೆ ನಡೆಯುತ್ತಿರುವ ಪ್ರಭುತ್ವದಲ್ಲಿ ಅದರ ವ್ಯವಸ್ಥಾಪನೆ ಮತ್ತು ಅಧಿಕಾರಗಳಲ್ಲಿ ದೇವಚರರು, ಮಹಾತ್ಮರು, ನಕ್ಷತ್ರಗಳು ಇತ್ಯಾದಿಗಳು ಕೂಡಾ ಭಾಗಿಯಾಗಿವೆಯೆಂದು ಅವರು ನಂಬುತ್ತಿದ್ದರು. ಆದ್ದರಿಂದಲೇ ತಮ್ಮ ಪ್ರಾರ್ಥನೆ, ಸಹಾಯ ಯಾಚನೆ, ಆರಾಧನೆಗಳಲ್ಲಿ ಅಲ್ಲಾಹನ ಜತೆ ತಮ್ಮ ಕೃತಕ ದೇವರುಗಳನ್ನು ಸೇರಿಸಿಕೊಳ್ಳುತ್ತಿದ್ದರು.

ಇನ್ನೊಂದೆಡೆ ಸಾಂಸ್ಕೃತಿಕ ಮತ್ತು ರಾಜಕೀಯ ಪ್ರಭುತ್ವದ ನೆಲೆಯಲ್ಲಿ ಅಲ್ಲಾಹನು 'ರಬ್ಬ್' ಆಗಿದ್ದಾನೆಂಬ ಕಲ್ಪನೆಯೇ ಅವರಲ್ಲಿರಲಿಲ್ಲ. ಈ ಅರ್ಥದಲ್ಲಿ ಅವರು ತಮ್ಮ ಧಾರ್ಮಿಕ ನಾಯಕರನ್ನು, ತಮ್ಮ ಸರದಾರರನ್ನು ಮತ್ತು ತಮ್ಮ ಗೋತ್ರದ ಹಿರಿಯರನ್ನು ತಮ್ಮ 'ರಬ್ಬ್' ಎಂದು ಪರಿಗಣಿಸಿದ್ದರು ಮತ್ತು ಅವರಿಂದಲೇ ತಮ್ಮ ಜೀವನದ ನಿಯಮಗಳನ್ನು ಪಡೆಯುತ್ತಿದ್ದರು. ಅವರ ಪ್ರಥಮ ಪಥಭ್ರಷ್ಟತೆಯ ಬಗ್ಗೆ ಪವಿತ್ರ ಕುರ್‌ಆನ್ ಈ ರೀತಿ ಸಾಕ್ಷ್ಯ ವಹಿಸುತ್ತದೆ:

وَمِنَ النَّاسِ مَنْ يَّعْبُدُ اللّٰهَ عَلٰى حَرْفٍ ۚ فَاِنْ اَصَابَهٗ خَيْرُ ۨ اطْمَاَنَّ بِهٖ
وَاِنْ اَصَابَتْهُ فِتْنَةُ ۨ انْقَلَبَ عَلٰى وَجْهِهٖ ۚ خَسِرَ الدُّنْيَا وَالْاٰخِرَةَ
ذٰلِكَ هُوَ الْخُسْرَانُ الْمُبِيْنُ ۝ يَدْعُوْا مِنْ دُوْنِ اللّٰهِ مَا لَا
يَضُرُّهٗ وَمَا لَا يَنْفَعُهٗ ذٰلِكَ هُوَ الضَّلٰلُ الْبَعِيْدُ ۝ يَدْعُوْا لَمَنْ
ضَرُّهٗۤ اَقْرَبُ مِنْ نَّفْعِهٖ لَبِئْسَ الْمَوْلٰى وَلَبِئْسَ الْعَشِيْرُ (الحج - ۱۱-۱۳)

ಗಡಿಯಲ್ಲಿದ್ದುಕೊಂಡು ಅಲ್ಲಾಹನ ದಾಸ್ಯ-ಆರಾಧನೆ ಮಾಡುವವನೂ ಜನರಲ್ಲಿದ್ದಾನೆ. ಲಾಭವಾದರೆ ತೃಪ್ತನಾಗುತ್ತಾನೆ ಮತ್ತು ಏನಾದರೂ ಸಂಕಷ್ಟ ಬಂದರೆ ಹಿಂದಕ್ಕೆ ತಿರುಗಿ

ಬಿಡುತ್ತಾನೆ. ಅವನ ಪಾಲಿಗೆ ಇಹಲೋಕವೂ ನಷ್ಟವಾಯಿತು, ಪರಲೋಕವೂ ನಷ್ಟವಾಯಿತು. ಇದುವೇ ಸುಸ್ಪಷ್ಟ ನಷ್ಟ. ಅವನು ಅಲ್ಲಾಹನನ್ನು ಬಿಟ್ಟು ಅವನಿಗೆ ಹಾನಿಯನ್ನಾಗಲಿ ಲಾಭವನ್ನಾಗಲಿ ಒದಗಿಸಲಾಗದಂತಹವರನ್ನು ಪ್ರಾರ್ಥಿಸುತ್ತಾನೆ. ಇದುವೇ ಪಥಭ್ರಷ್ಟತೆಯ ಪರಮಾವಧಿ. ಯಾರ ಹಾನಿಯು ಅವರ ಲಾಭಕ್ಕಿಂತ ಸಮೀಪವಿದೆಯೋ ಅವರನ್ನು ಅವನು ಪ್ರಾರ್ಥಿಸುತ್ತಾನೆ. ಅವನ ಸಂರಕ್ಷಕನು ಅತ್ಯಂತ ನಿಕೃಷ್ಟನು ಮತ್ತು ಅವನ ಮಿತ್ರನು ಅತ್ಯಂತ ನಿಕೃಷ್ಟನು. (22: 11-13)

وَيَعْبُدُونَ مِنْ دُونِ اللّٰهِ مَا لَا يَضُرُّهُمْ وَلَا يَنْفَعُهُمْ وَيَقُولُونَ
هٰٓؤُلَآءِ شُفَعَآؤُنَا عِنْدَ اللّٰهِ ؕ قُلْ اَتُنَبِّـُٔوْنَ اللّٰهَ بِمَا لَا يَعْلَمُ
فِى السَّمٰوٰتِ وَلَا فِى الْاَرْضِ ؕ سُبْحٰنَهٗ وَتَعٰلٰى عَمَّا يُشْرِكُوْنَ ۝
(يونس - ١٨)

ಅವರು ಅಲ್ಲಾಹನನ್ನು ಬಿಟ್ಟು ಅವರಿಗೆ ನಷ್ಟವನ್ನಾಗಲಿ ಲಾಭವನ್ನಾಗಲಿ ಉಂಟು ಮಾಡದಂಥವರನ್ನು ಆರಾಧಿಸುತ್ತಾರೆ ಮತ್ತು "ಇವರು ಅಲ್ಲಾಹನ ಬಳಿ ನಮ್ಮ ಶಿಫಾರಸ್ಸು ಮಾಡುವವರು" ಎಂದು ಹೇಳುತ್ತಾರೆ. ಓ ಪೈಗಂಬರರೇ! ಇವರೊಡನೆ ಕೇಳಿರಿ, "ಅಲ್ಲಾಹನು ಆಕಾಶಗಳಲ್ಲಾಗಲಿ ಭೂಮಿಯಲ್ಲಾಗಲಿ ತಿಳಿಯದಂತಹ ಸುದ್ದಿಯನ್ನು ನೀವು ಅವನಿಗೆ ತಿಳಿಸುತ್ತೀರಾ? ಇವರು ಸಹಭಾಗಿಗಳಾಗಿ ಮಾಡುತ್ತಿರುವವುಗಳಿಂದೆಲ್ಲಾ ಅವನು ಅತಿ ಪಾವನನಾಗಿರುತ್ತಾನೆ." (10: 18)

قُلْ اَئِنَّكُمْ لَتَكْفُرُوْنَ بِالَّذِىْ خَلَقَ الْاَرْضَ فِىْ يَوْمَيْنِ وَتَجْعَلُوْنَ
لَهٗۤ اَنْدَادًا - (حٰمٓ السجدة - ٩)

ಸಂದೇಶವಾಹಕರೇ! ಇವರೊಡನೆ ಹೇಳಿರಿ, "ಭೂಮಿಯನ್ನು ಎರಡೇ ದಿನಗಳಲ್ಲಿ ಸೃಷ್ಟಿಸಿದಂತಹ ದೇವನನ್ನು ನೀವು ನಿರಾಕರಿಸುತ್ತೀರಾ? ಮತ್ತು ಇತರರನ್ನು ಅವನಿಗೆ ಸರಿ ಸಮಾನರಾಗಿ ಮಾಡುತ್ತೀರಾ?" (41:)

قُلْ اَتَعْبُدُوْنَ مِنْ دُوْنِ اللّٰهِ مَا لَا يَمْلِكُ لَكُمْ ضَرًّا وَّلَا نَفْعًا ؕ
وَاللّٰهُ هُوَ السَّمِيْعُ الْعَلِيْمُ (المائدة - ٧٦)

ಇವರೊಡನೆ ಹೇಳಿರಿ- "ನೀವು ಅಲ್ಲಾಹನನ್ನು ಬಿಟ್ಟು ನಿಮಗೆ ನಷ್ಟವನ್ನುಂಟು ಮಾಡಲಿಕ್ಕೂ ಲಾಭವನ್ನುಂಟು ಮಾಡಲಿಕ್ಕೂ ಅಧಿಕಾರವಿಲ್ಲದವರನ್ನು ಆರಾಧಿಸುತ್ತೀರಾ? ವಸ್ತುತಃ ಸಕಲವನ್ನೂ ಆಲಿಸುವವನೂ ಸರ್ವವನ್ನೂ ಅರಿಯುವವನೂ ಅಲ್ಲಾಹನೇ ಆಗಿರುತ್ತಾನೆ. (5: 76)

وَإِذَا مَسَّ الْإِنسَانَ ضُرٌّ دَعَا رَبَّهُ مُنِيبًا إِلَيْهِ ثُمَّ إِذَا خَوَّلَهُ
نِعْمَةً مِّنْهُ نَسِيَ مَا كَانَ يَدْعُو إِلَيْهِ مِن قَبْلُ وَجَعَلَ لِلَّهِ أَندَادًا
لِّيُضِلَّ عَن سَبِيلِهِ - (الزمر - ٨)

ಮನುಷ್ಯನಿಗೇನಾದರೂ ವಿಪತ್ತು ಬಂದೆರಗಿದಾಗ ಅವನು ತನ್ನ ಪ್ರಭುವಿನ ಕಡೆಗೆ ಮರಳಿ ಅವನನ್ನು ಪ್ರಾರ್ಥಿಸುತ್ತಾನೆ. ತರುವಾಯ ಅವನ ಪ್ರಭು ಅವನನ್ನು ತನ್ನ ಕೊಡುಗೆಯಿಂದ ಅನುಗ್ರಹಿಸಿದಾಗ ಅವನು ಹಿಂದೆ ತಾನು ಯಾವ ಸಂಕಷ್ಟದ ಬಗ್ಗೆ ಪ್ರಾರ್ಥಿಸಿದ್ದನೋ ಅದನ್ನು ಮರೆತು ಬಿಡುತ್ತಾನೆ ಮತ್ತು ಅಲ್ಲಾಹನ ಮಾರ್ಗದಿಂದ ಭ್ರಷ್ಟಗೊಳಿಸಲಿಕ್ಕಾಗಿ ಇತರರನ್ನು ಅವನ ಸಮಾನರೆಂದು ಪರಿಗಣಿಸುತ್ತಾನೆ. (39:8)

وَمَا بِكُم مِّن نِّعْمَةٍ فَمِنَ اللَّهِ ثُمَّ إِذَا مَسَّكُمُ الضُّرُّ فَإِلَيْهِ تَجْأَرُونَ
ثُمَّ إِذَا كَشَفَ الضُّرَّ عَنكُمْ إِذَا فَرِيقٌ مِّنكُم بِرَبِّهِمْ يُشْرِكُونَ ○
لِيَكْفُرُوا بِمَا آتَيْنَاهُمْ فَتَمَتَّعُوا فَسَوْفَ تَعْلَمُونَ ○ وَيَجْعَلُونَ
لِمَا لَا يَعْلَمُونَ نَصِيبًا مِّمَّا رَزَقْنَاهُمْ تَاللَّهِ لَتُسْأَلُنَّ عَمَّا كُنتُمْ
تَفْتَرُونَ ○ (النحل - ٥٣-٥٦)

ನಿಮಗೆ ಒದಗಿರುವ ಎಲ್ಲ ಅನುಗ್ರಹಗಳು ಅಲ್ಲಾಹನ ಕಡೆಯಿಂದಲೇ ಆಗಿರುತ್ತವೆ. ನಿಮಗೆ ಹಾನಿ ತಟ್ಟಿದಾಗ ನೀವು ಅವನೊಡನೆಯೇ ಮೊರೆಯಿಡುತ್ತೀರಿ. ಆದರೆ ಅಲ್ಲಾಹನು ಆ ಸಂಕಷ್ಟವನ್ನು ನೀಗಿಸಿದಾಗ ತಟ್ಟನೆ ನಿಮ್ಮಲ್ಲೊಂದು ವಿಭಾಗ ತನ್ನ ಪ್ರಭುವಿನೊಂದಿಗೆ ಇತರರನ್ನು (ಆ ಅನುಗ್ರಹದ ಕೃತಜ್ಞತೆಗಾಗಿ) ಸಹಭಾಗಿಗಳನ್ನಾಗಿ ಮಾಡ ತೊಡಗುತ್ತದೆ. ಇದು ಅಲ್ಲಾಹನ ಉಪಕಾರಕ್ಕೆ ಕೃತಘ್ನತೆ ತೋರಲಿಕ್ಕಾಗಿ. ಸರಿ, ಹಾಗಾದರೆ ಸುಖೋಪಭೋಗಗಳನ್ನು ಅನುಭವಿಸಿ ಕೊಳ್ಳಿರಿ. ಸದ್ಯವೇ ನಿಮಗೆ ತಿಳಿಯುವುದು. ಇವರು ಯಾರ ನಿಜಸ್ಥಿತಿಯನ್ನು ಅರಿತಿಲ್ಲವೋ ಅಂತಹವರ ಪಾಲನ್ನು ನಾವು ಕೊಟ್ಟಿರುವ ಜೀವನಾಧಾರದಿಂದ ನಿಶ್ಚಯಿಸುತ್ತಾರೆ. ಅಲ್ಲಾಹನಾಣೆ! ಈ ಸುಳ್ಳನ್ನು ನೀವು ಹೇಗೆ ಸೃಷ್ಟಿಸಿ ಕೊಂಡಿದ್ದಿರೆಂದು ನಿಮ್ಮೊಡನೆ ಖಂಡಿತವಾಗಿಯೂ ಕೇಳಲಾಗುವುದು. (16: 53-56)

ಇನ್ನು ಎರಡನೆಯ ಪಥಭ್ರಷ್ಟತೆಯ ವಿಷಯ. ಆ ಕುರಿತು ಕುರ್‌ಆನ್‌ನ ಸಾಕ್ಷ್ಯವು ಈ ರೀತಿಯಿದೆ:

وَكَذَٰلِكَ زَيَّنَ لِكَثِيرٍ مِّنَ الْمُشْرِكِينَ قَتْلَ أَوْلَادِهِمْ شُرَكَاؤُهُمْ
لِيُرْدُوهُمْ وَلِيَلْبِسُوا عَلَيْهِمْ دِينَهُمْ (انعام - ١٣٨)

"ಇದೇ ರೀತಿ ಅನೇಕ ಬಹುದೇವವಿಶ್ವಾಸಿಗಳಿಗೆ ಅವರ ಸಹಭಾಗಿಗಳು ತಮ್ಮ ಮಕ್ಕಳ ವಧೆಯನ್ನು ಮನೋಹರಗೊಳಿಸಿ ಬಿಟ್ಟಿದ್ದಾರೆ. ಇದು, ಅವರನ್ನು ವಿನಾಶಕ್ಕೊಳಪಡಿಸಲಿಕ್ಕಾಗಿ ಮತ್ತು ಅವರ ಪಾಲಿಗೆ ಅವರ ಧರ್ಮವನ್ನು ಸಂದೇಹಾಸ್ಪದಗೊಳಿಸಲಿಕ್ಕಾಗಿ. (6: 137)

ಇಲ್ಲಿ ಸಹಭಾಗಿಗಳೆಂದರೆ ವಿಗ್ರಹ ಅಥವಾ ದೇವತೆಗಳಲ್ಲವೆಂಬುದು ಸ್ಪಷ್ಟ. ಅರಬ್ ಜನರ ದೃಷ್ಟಿಯಲ್ಲಿ ಮಕ್ಕಳ ವಧೆಯನ್ನು ಒಂದು ಪುಣ್ಯ ಮತ್ತು ಉತ್ತಮ ಕಾರ್ಯವೆಂದು ಬಿಂಬಿಸಿದ ಅವರ ನಾಯಕರುಗಳೇ ಇಲ್ಲಿ ಉದ್ದೇಶ. ಅವರು ಹ. ಇಬ್ರಾಹೀಮ್(ಅ) ಅವರ ಧರ್ಮದಲ್ಲಿ ಈ ದುಷ್ಟ ಸಂಪ್ರದಾಯವನ್ನು ಜಾರಿಗೆ ತಂದರು. ಅರೇಬಿಯದ ಜನರು ಅಭೌತಿಕ ಪ್ರಭುತ್ವವನ್ನು ಹೊಂದಿದವರು ಎಂದು ಭಾವಿಸಿ ಅವರನ್ನು ಕೂಗಿ ಪ್ರಾರ್ಥಿಸುತ್ತಿದ್ದರು ಮತ್ತು ಅವರನ್ನು ಪೂಜಿಸುತ್ತಿದ್ದರು ಎಂಬರ್ಥದಲ್ಲಿ 'ಸಹಭಾಗಿ' ಎಂದು ಹೇಳಿರುವುದಲ್ಲ, ಬದಲಾಗಿ ನಾಗರಿಕ, ಸಾಮಾಜಿಕ, ನೈತಿಕ ಮತ್ತು ಇಲ್ಲಿ ಧಾರ್ಮಿಕ ವಿಷಯಗಳಲ್ಲಿ ತಮಗಿಷ್ಟ ಬಂದಂತೆ ಕಾನೂನನ್ನು ರಚಿಸುವ ಅಧಿಕಾರ ಅವರಿಗಿದೆ ಎಂದು ಪರಿಗಣಿಸಿದ ಕಾರಣಕ್ಕಾಗಿ ಅವರನ್ನು 'ರಬ್ಬ್' ಮತ್ತು 'ಇಲಾಹ್' ಎಂಬ ಗುಣಗಳಲ್ಲಿ 'ಸಹಭಾಗಿ'ಗಳಾಗಿ ಮಾಡಲಾಯಿತು ಎಂದು ಸಾರಲಾಗಿದೆ.

أَمْ لَهُمْ شُرَكَاءُ شَرَعُوا لَهُمْ مِنَ الدِّينِ مَا لَمْ يَأْذَنْ بِهِ اللَّهُ

(الشورى - ٢١)

ಇವರ ಬಳಿ, ಇವರಿಗಾಗಿ 'ದೀನ್'ನ ಸ್ವರೂಪದಲ್ಲಿರುವ ಮತ್ತು ಅಲ್ಲಾಹನು ಅನುಮತಿಸಿಲ್ಲದ ಜೀವನ ವಿಧಾನವೊಂದನ್ನು ನಿಶ್ಚಯಿಸಿ ಕೊಟ್ಟಂತಹ ದೇವ ಸಹಭಾಗಿಗಳು ಇದ್ದಾರೆಯೇ? (42: 21)

'ದೀನ್' ಎಂಬ ಪದದ ಅರ್ಥವನ್ನು ಮುಂದೆ ವಿವರಿಸಲಾಗುವುದು. ಆಗಲೇ ಆ ಆಯತ್‌ನ ವ್ಯಾಖ್ಯಾನದ ವ್ಯಾಪ್ತಿಯು ಪೂರ್ಣವಾಗಿ ಸ್ಪಷ್ಟವಾಗುವುದು. ಆದರೆ ಇಲ್ಲಿ ಒಂದು ವಿಷಯ ಸ್ಪಷ್ಟವಾಗಿ ತಿಳಿದು ಬರುತ್ತದೆ. ಅವರ ನಾಯಕರು ಮತ್ತು ಸರದಾರರು ಅಲ್ಲಾಹನ ಅನುಮತಿಯಿಲ್ಲದೆ 'ದೀನ್'ನ ಸ್ವರೂಪದ ಕಾಯಿದೆ ಮತ್ತು ನಿಯಮಗಳನ್ನು ರಚಿಸುವುದು ಹಾಗೂ ಅರಬರು ಅವುಗಳನ್ನು ಅನುಸರಣಾರ್ಹವೆಂದು ಪರಿಗಣಿಸುವುದನ್ನೇ ಇಲ್ಲಿ 'ರಬ್ಬ್' ಮತ್ತು 'ಇಲಾಹ್' ಎಂಬ ಗುಣಗಳಲ್ಲಿ ಅವರನ್ನು ಅಲ್ಲಾಹನ ಜತೆ ಸಹಭಾಗಿಗಳಾಗಿ ಮಾಡುವುದು ಎಂದು ಸಾರಲಾಗಿದೆ.

ಕುರ್‌ಆನ್‌ನ ಸಂದೇಶ

'ರಬ್ಬ್'ನ ಕುರಿತು ಪಥಭ್ರಷ್ಟ ಜನಾಂಗಗಳ ಕಲ್ಪನೆಗಳನ್ನು ಈ ಹಿಂದೆ ನಾವು ಅವಲೋಕಿಸಿದೆವು. ಅವುಗಳಿಂದ ವ್ಯಕ್ತವಾಗುವ ಒಂದು ವಾಸ್ತವಿಕತೆಯೇನೆಂದರೆ ಅತ್ಯಂತ ಪುರಾತನ ಕಾಲದಿಂದ ಪವಿತ್ರ ಕುರ್‌ಆನ್‌ನ ಅವತರಣದ ಕಾಲದ ತನಕ ಎಷ್ಟು ಜನಾಂಗಗಳನ್ನು

ಪವಿತ್ರ ಕುರ್‌ಆನ್ ಅಕ್ರಮಿ, ಕೆಟ್ಟ ವಿಶ್ವಾಸದವರು ಮತ್ತು ದಾರಿಗೆಟ್ಟವರೆಂದು ಬಣ್ಣಿಸಿದೆಯೋ ಆ ಪೈಕಿ ಯಾವ ಜನಾಂಗವೂ ದೇವನ ಅಸ್ತಿತ್ವವನ್ನು ನಿರಾಕರಿಸುತ್ತಿರಲಿಲ್ಲ. ಅಲ್ಲಾಹನು 'ರಬ್ಬ್' ಮತ್ತು 'ಇಲಾಹ್' ಆಗಿದ್ದಾನೆ ಎಂಬುದನ್ನು ಅವರು ನಿರಾಕರಿಸುತ್ತಿರಲಿಲ್ಲ. ನಾವು ಶಬ್ದಕೋಶ ಮತ್ತು ಕುರ್‌ಆನ್‌ನ ಆಧಾರದಲ್ಲಿ ಆರಂಭದಲ್ಲಿ 'ರಬ್ಬ್'ನ ಯಾವ ಐದು ತಾತ್ಪರ್ಯಗಳನ್ನು ವಿವರಿಸಿದ್ದೆವೋ ಅವುಗಳನ್ನು ಆ ಎಲ್ಲ ಜನಾಂಗಗಳು ಎರಡು ಭಾಗಗಳಾಗಿ ವಿಂಗಡಿಸಿದ್ದುವು. ಇದುವೇ ಅವರ ಮೂಲ ಮತ್ತು ಸಮಾನ ಪಥಭ್ರಷ್ಟತೆಯಾಗಿತ್ತು.

ಅಭೌತಿಕ ರೂಪದಲ್ಲಿ ತನ್ನ ಸೃಷ್ಟಿಗಳ ಪರಿಪಾಲನೆ, ಮೇಲ್ವಿಚಾರಣೆ, ಇಷ್ಟಾರ್ಥಸಿದ್ಧಿ ಮತ್ತು ಸಂರಕ್ಷಣೆ ಮಾಡುವವನು ಎಂಬ ಅರ್ಥಗಳಲ್ಲಿ ಅವರು ಅಲ್ಲಾಹನನ್ನೇ ಅತಿದೊಡ್ಡ 'ರಬ್ಬ್' ಎಂದು ಪರಿಗಣಿಸಿದರೂ ಅವನ ಜತೆ ದೇವಚರರು, ದೇವಿ-ದೇವತೆಗಳು, ಜಿನ್ನ್‌ಗಳು, ಅಗೋಚರ ಶಕ್ತಿಗಳು, ನಕ್ಷತ್ರಗಳು, ಗ್ರಹಗಳು ಹಾಗೂ ಪ್ರವಾದಿಗಳು, ಔಲಿಯಾಗಳು, ಆಧ್ಯಾತ್ಮಿಕ ನಾಯಕರನ್ನೂ ಅವರು 'ರಬ್ಬ್' ಎಂಬ ಗುಣದಲ್ಲಿ ಅಲ್ಲಾಹನ ಸಹಭಾಗಿಗಳಾಗಿ ಮಾಡುತ್ತಿದ್ದರು.

ವಿಧಿ-ನಿಷೇಧಗಳನ್ನು ರಚಿಸುವವನು, ಸಾರ್ವಭೌಮತೆಯ ಒಡೆಯ, ಮಾರ್ಗದರ್ಶನ ಮಾಡುವವನು, ಕಾನೂನು ನಿರ್ಮಾಣ ಮಾಡುವವನು, ರಾಷ್ಟ್ರದ ವಿಧಾತ ಎಂಬಿತ್ಯಾದಿ ಅರ್ಥಗಳಲ್ಲಿ ಅವರು ಅಲ್ಲಾಹನನ್ನು 'ರಬ್ಬ್' ಎಂದು ಪರಿಗಣಿಸುತ್ತಲೇ ಇರಲಿಲ್ಲ. ಒಂದು ವೇಳೆ ಪರಿಗಣಿಸಿದರೂ ಕೇವಲ ಸೈದ್ಧಾಂತಿಕವಾಗಿ ಮಾತ್ರ. ಕಾರ್ಯರೂಪದಲ್ಲಿ ಅವರು ಮನುಷ್ಯರನ್ನೇ ಈ ಅರ್ಥದಲ್ಲಿ 'ರಬ್ಬ್' ಎಂದು ಬಗೆಯುತ್ತಾರೆ ಮತ್ತು ನೈತಿಕ, ನಾಗರಿಕ ಹಾಗೂ ರಾಜಕೀಯ ವಿಷಯಗಳಲ್ಲಿ ಅವರಿಗೇ ವಿಧೇಯರಾಗುತ್ತಾರೆ.

ಈ ಪಥಭ್ರಷ್ಟತೆಯನ್ನು ನೀಗಿಸಲಿಕ್ಕಾಗಿಯೇ ಆರಂಭದಿಂದಲೂ ಪ್ರವಾದಿಗಳು ಬರುತ್ತಿದ್ದರು. ಇದಕ್ಕಾಗಿಯೇ ಅಂತಿಮವಾಗಿ ಪ್ರವಾದಿ ಮುಹಮ್ಮದ್(ಸ) ಅವರ ಆಗಮನವಾಯಿತು. ಈ ಎಲ್ಲ ಅರ್ಥಗಳಲ್ಲಿಯೂ 'ರಬ್ಬ್' ಒಬ್ಬನೇ ಆಗಿದ್ದಾನೆ. ಅವನೇ ಅಲ್ಲಾಹ್! 'ರಬ್ಬ್' ಎಂಬ ಗುಣವು ಅವಿಭಾಜ್ಯವಾಗಿದೆ. ಅದರ ಯಾವ ಭಾಗವು ಯಾವ ಅರ್ಥದಲ್ಲೂ ಇತರ ಯಾರಿಗೂ ಪ್ರಾಪ್ತವಿಲ್ಲ. ವಿಶ್ವದ ವ್ಯವಸ್ಥೆಯನ್ನು ಒಬ್ಬನೇ ಅಲ್ಲಾಹನು ಸೃಷ್ಟಿಸಿದ್ದಾನೆ. ಅದರ ಮೇಲೆ ಅವನೊಬ್ಬನ ಆಧಿಪತ್ಯವೇ ನಡೆಯುತ್ತಿದೆ. ಅದರ ಎಲ್ಲ ಆಧಿಪತ್ಯ ಮತ್ತು ಅಧಿಕಾರಗಳ ಒಡೆಯ ಒಬ್ಬ ಅಲ್ಲಾಹನೇ ಆಗಿದ್ದಾನೆ. ಈ ವಿಶ್ವದ ನಿರ್ಮಾಣದಲ್ಲಾಗಲೀ ಇದರ ವ್ಯವಸ್ಥಾಪನೆಯಲ್ಲಾಗಲೀ ಇದರ ಆಧಿಪತ್ಯದಲ್ಲಾಗಲೀ ಯಾರದೇ ಸಹಭಾಗಿತ್ವವಿಲ್ಲ. ಸಾರ್ವಭೌಮತೆಯ ಒಡೆಯನೆಂಬ ನೆಲೆಯಲ್ಲಿ ಅವನೊಬ್ಬನೇ ನಿಮ್ಮ ಅಭೌತಿಕ 'ರಬ್ಬ್' ಆಗಿದ್ದಾನೆ. ನೈತಿಕ, ನಾಗರಿಕ ಮತ್ತು ರಾಜಕೀಯವಾಗಿಯೂ ಅವನೇ ನಿಮ್ಮ 'ರಬ್ಬ್' ಆಗಿದ್ದಾನೆ. ನಿಮ್ಮ ಬಾಗುವಿಕೆ ಮತ್ತು ಸಾಷ್ಟಾಂಗಗಳಿಗೂ ಅವನೇ ಅರ್ಹನು. ನಿಮ್ಮ ಪೂಜೆ, ಪ್ರಾರ್ಥನೆಗಳಿಗೂ ಅವನೇ ಅರ್ಹನು. ನಿಮ್ಮ ಭರವಸೆ ಮತ್ತು ನಂಬಿಕೆಗಳಿಗೂ ಅವನೇ ಅರ್ಹನು. ನಿಮ್ಮ ಎಲ್ಲ ಬಯಕೆ-ಬೇಡಿಕೆಗಳ ಈಡೇರಿಸುವವನೂ ಅವನೇ ಆಗಿರುವನು.

ಹಾಗೆಯೇ ನಿಮ್ಮ ಯಥಾರ್ಥ ರಾಜ. ಅಧಿಪತ್ಯದ ಒಡೆಯ. ಕಾನೂನು ನಿರ್ಮಾತೃ, ವಿಧಿ-ನಿಷೇಧಗಳನ್ನು ನಿಶ್ಚಯಿಸುವವನು ಕೂಡಾ ಅವನೇ ಆಗಿರುವನು. 'ರಬ್ಬ್' ಎಂಬ ಗುಣದ ಈ ಎರಡು ವಿಧಗಳನ್ನು ಅಜ್ಞಾನದಿಂದಾಗಿ ನೀವು ವಿಂಗಡಿಸಿರುವಿರಿ. ಇವೆರಡೂ ದೇವತ್ವದ ಅನಿವಾರ್ಯ ಗುಣಗಳಾಗಿವೆ. ಅವುಗಳನ್ನು ಪರಸ್ಪರ ವಿಂಗಡಿಸುವುದಾಗಲಿ ಯಾವುದೇ ನೆಲೆಯಲ್ಲಿ ಸೃಷ್ಟಿಗಳನ್ನು ಸೃಷ್ಟಿಕರ್ತನ ಸಹಭಾಗಿಗಳಾಗಿ ಮಾಡುವುದಾಗಲಿ ಸಿಂಧುವಲ್ಲ.

ಈ ಸಂದೇಶವನ್ನು ಕುರ್‌ಆನ್ ಯಾವ ರೀತಿ ಮುಂದಿಡುತ್ತದೆಂಬುದನ್ನು ಅದರ ವಾಣಿಯಲ್ಲೇ ಕೇಳಿರಿ:

إِنَّ رَبَّكُمُ اللّٰهُ الَّذِي خَلَقَ السَّمٰوٰتِ وَالْأَرْضَ فِي سِتَّةِ أَيَّامٍ
ثُمَّ اسْتَوٰى عَلَى الْعَرْشِ يُغْشِي اللَّيْلَ النَّهَارَ يَطْلُبُهُ حَثِيثًا
وَّالشَّمْسَ وَالْقَمَرَ وَالنُّجُومَ مُسَخَّرَاتٍ بِأَمْرِهِ أَلَا لَهُ الْخَلْقُ وَالْأَمْرُ
تَبَارَكَ اللّٰهُ رَبُّ الْعٰلَمِينَ ۝ (اعراف-۵۴)

ವಾಸ್ತವದಲ್ಲಿ ನಿಮ್ಮ ಪ್ರಭು ಅಲ್ಲಾಹನೇ ಆಗಿರುತ್ತಾನೆ. ಅವನು ಭೂಮಿ-ಆಕಾಶಗಳನ್ನೂ ಆರು ದಿನಗಳಲ್ಲಿ ಸೃಷ್ಟಿಸಿದನು. ತರುವಾಯ ತನ್ನ ವಿಶ್ವ ಸಾಮ್ರಾಜ್ಯ ಪೀಠದಲ್ಲಿ ವಿರಾಜಮಾನನಾದನು. ಅವನು ಇರುಳನ್ನು ಹಗಲಿನ ಮೇಲೆ ಹರಡುತ್ತಾನೆ ಮತ್ತು ರಾತ್ರಿಯನ್ನು ಹಗಲು ಹಿಂಬಾಲಿಸಿಕೊಂಡು ಓಡಿ ಬರುತ್ತದೆ. ಅವನು ಸೂರ್ಯನನ್ನೂ ಚಂದ್ರನನ್ನೂ ನಕ್ಷತ್ರಗಳನ್ನೂ ಸೃಷ್ಟಿಸಿದನು. ಎಲ್ಲವೂ ಅವನ ಆಜ್ಞಾಧೀನವಾಗಿವೆ. ಎಚ್ಚರಿಕೆ! ಅವನದೇ ಸೃಷ್ಟಿ ಅವನದೇ ಅಪ್ಪಣೆ. ಸರ್ವಲೋಕಗಳ ಒಡೆಯನೂ ಪ್ರಭುವೂ ಆಗಿರುವ ಅಲ್ಲಾಹನು ಮಹಾ ಸಮೃದ್ಧನು. (7: 54)

قُلْ مَنْ يَّرْزُقُكُمْ مِّنَ السَّمَاءِ وَالْأَرْضِ أَمَّنْ يَّمْلِكُ السَّمْعَ وَالْأَبْصَارَ
وَمَنْ يُّخْرِجُ الْحَيَّ مِنَ الْمَيِّتِ وَيُخْرِجُ الْمَيِّتَ مِنَ الْحَيِّ وَمَنْ
يُّدَبِّرُ الْأَمْرَ فَسَيَقُولُونَ اللّٰهُ فَقُلْ أَفَلَا تَتَّقُونَ ۝ فَذٰلِكُمُ
اللّٰهُ رَبُّكُمُ الْحَقُّ فَمَاذَا بَعْدَ الْحَقِّ إِلَّا الضَّلٰلُ فَأَنّٰى تُصْرَفُونَ

(یونس-۳۱-۳۲)

ಅವರೊಡನೆ ಕೇಳಿರಿ - ನಿಮಗೆ ಆಕಾಶಗಳಿಂದಲೂ ಭೂಮಿಯಿಂದಲೂ ಜೀವನಾಧಾರ ನೀಡುತ್ತಿರುವವನಾರು? ಈ ಶ್ರವಣ ಮತ್ತು ದೃಕ್ಶಕ್ತಿಗಳು ಯಾರ ವಶದಲ್ಲಿವೆ? ನಿರ್ಜೀವಿಯಿಂದ ಸಜೀವಿಯನ್ನೂ ಸಜೀವಿಯಿಂದ ನಿರ್ಜೀವಿಯನ್ನೂ ಹೊರತರುವವನಾರು? ಈ ಜಗತ್ತಿನ ವ್ಯವಸ್ಥೆಯನ್ನು ಶಿಸ್ತುಬದ್ಧವಾಗಿ ನಡೆಸುತ್ತಿರುವವನಾರು? 'ಅಲ್ಲಾಹ್' ಎಂದೇ ಅವರು ಹೇಳುವರು.

ಹೇಳಿರಿ- 'ಹಾಗಿದ್ದರೂ ನೀವು (ಪರಮಾರ್ಥಕ್ಕೆ ವಿರುದ್ಧವಾಗಿ ನಡೆಯುವುದನ್ನು) ತೊರೆಯುವುದಿಲ್ಲವೇ? ನಿಜವಾಗಿ ಅಲ್ಲಾಹನೇ ನಿಮ್ಮ ಯಥಾರ್ಥ ಪ್ರಭು. ಇನ್ನು ಸತ್ಯದ ತರುವಾಯ ಪಥಭ್ರಷ್ಟತೆಯ ವಿನಾ ಬೇರೇನು ಉಳಿದಿದೆ? ನೀವೆತ್ತ ಅಲೆದಾಡಿಸಲ್ಪಡುತ್ತಿರುವಿರಿ?
(10: 31-32)

خَلَقَ السَّمٰوٰتِ وَالْاَرْضَ بِالْحَقِّ يُكَوِّرُ الَّيْلَ عَلَى النَّهَارِ وَيُكَوِّرُ النَّهَارَ
عَلَى الَّيْلِ وَسَخَّرَ الشَّمْسَ وَالْقَمَرَ كُلٌّ يَّجْرِيْ لِاَجَلٍ مُّسَمًّى......
ذٰلِكُمُ اللّٰهُ رَبُّكُمْ لَهُ الْمُلْكُ لَآ اِلٰهَ اِلَّا هُوَ فَاَنّٰى تُصْرَفُوْنَ۔(الزمر ۵-۶)

ಅವನು ಭೂಮಿ-ಆಕಾಶಗಳನ್ನು ಸತ್ಯಪೂರ್ಣವಾಗಿ ಸೃಷ್ಟಿಸಿರುವನು. ಅವನೇ ಹಗಲಿನ ಮೇಲೆ ಇರುಳನ್ನು ಇರುಳಿನ ಮೇಲೆ ಹಗಲನ್ನು ಸುತ್ತುತ್ತಾನೆ. ಅವನೇ ಸೂರ್ಯ ಮತ್ತು ಚಂದ್ರನನ್ನು ನಿಯಂತ್ರಿಸುತ್ತಾನೆ. ಅವುಗಳಲ್ಲಿ ಪ್ರತಿಯೊಂದೂ ಒಂದು ನಿಶ್ಚಿತ ಕಾಲದವರೆಗೆ ಚಲಿಸುತ್ತಿರುವುದು......... ಈ ಅಲ್ಲಾಹನೇ ನಿಮ್ಮ ಪ್ರಭು. ಪ್ರಭುತ್ವವು ಅವನಿಗೇ ಸೇರಿದೆ. ಅವನ ಹೊರತು ಯಾವ ಆರಾಧ್ಯನೂ ಇಲ್ಲ. ಹೀಗಿರುತ್ತ ನೀವು ಅದೆಲ್ಲಿಂದ ದಾರಿಗೆಡಿಸಲ್ಪಡುತ್ತಿರುವಿರಿ?
(39: 5-6)

اَللّٰهُ الَّذِيْ جَعَلَ لَكُمُ الَّيْلَ لِتَسْكُنُوْا فِيْهِ وَالنَّهَارَ مُبْصِرًا...ذٰلِكُمُ
اللّٰهُ رَبُّكُمْ خَالِقُ كُلِّ شَيْءٍ لَآ اِلٰهَ اِلَّا هُوَ فَاَنّٰى تُؤْفَكُوْنَ ○ (المومن ۶۱-۶۲)

ನೀವು ವಿಶ್ರಾಂತಿ ಪಡೆಯಲೆಂದು ನಿಮಗಾಗಿ ರಾತ್ರಿಯನ್ನುಂಟು ಮಾಡಿದವನೂ ಹಗಲನ್ನು ಪ್ರಕಾಶಮಾನವಾಗಿ ಮಾಡಿದವನೂ ಅಲ್ಲಾಹನೇ ತಾನೇ.... ಆ ಅಲ್ಲಾಹನೇ ನಿಮ್ಮ ಪ್ರಭು. ಸಕಲ ವಸ್ತುಗಳ ಕರ್ತೃ. ಅವನ ಹೊರತು ಇನ್ನಾರೂ ಆರಾಧ್ಯರಿಲ್ಲ. ಹೀಗಿರುತ್ತ ಎಲ್ಲಿಂದ ನೀವು ದಾರಿಗೆಡಿಸಲ್ಪಡುತ್ತಿರುವಿರಿ.
(40: 61-62)

اَللّٰهُ الَّذِيْ جَعَلَ لَكُمُ الْاَرْضَ قَرَارًا وَّالسَّمَآءَ بِنَآءً وَّصَوَّرَكُمْ
فَاَحْسَنَ صُوَرَكُمْ وَرَزَقَكُمْ مِّنَ الطَّيِّبٰتِ ذٰلِكُمُ اللّٰهُ رَبُّكُمْ
فَتَبٰرَكَ اللّٰهُ رَبُّ الْعٰلَمِيْنَ ○ (المومن - ۶۴)

ಅಲ್ಲಾಹನೇ ಭೂಮಿಯನ್ನು ನಿಮ್ಮ ಪಾಲಿಗೆ ವಾಸಸ್ಥಾನವಾಗಿ ಮಾಡಿದವನು ಮತ್ತು ಮೇಲೆ ಆಕಾಶದ ಗುಂಬಜವನ್ನು ಮಾಡಿದವನು. ಅವನು ನಿಮಗೆ ರೂಪಕೊಟ್ಟನು. ಬಹಳ ಸುಂದರ ರೂಪವನ್ನೇ ಕೊಟ್ಟನು. ಅವನು ನಿಮಗೆ ಶುದ್ಧ ವಸ್ತುಗಳಿಂದ ಆಹಾರ ನೀಡಿದನು. ಆ ಅಲ್ಲಾಹನೇ ನಿಮ್ಮ ಪ್ರಭು ಅಗಣಿತ ಸಮೃದ್ಧಿಯುಳ್ಳವನು. ಅವನು ಸಕಲ ಲೋಕಗಳ ಪ್ರಭು. (40: 64)

هُوَ الْحَيُّ لَا إِلٰهَ إِلَّا هُوَ فَادْعُوهُ مُخْلِصِينَ لَهُ الدِّينَ (المؤمن-٦٥)

ಅವನೇ ಚಿರಂತನನು. ಅವನ ಹೊರತು ಇನ್ನಾರೂ ಆರಾಧ್ಯರಿಲ್ಲ. ನಿಮ್ಮ ದೀನನ್ನು ಅವನಿಗಾಗಿಯೇ ಮೀಸಲಿಟ್ಟು ಅವನನ್ನೇ ಪ್ರಾರ್ಥಿಸಿರಿ. (40: 65)

وَاللّٰهُ خَلَقَكُمْ مِنْ تُرَابٍ ..... يُولِجُ اللَّيْلَ فِي النَّهَارِ وَيُولِجُ النَّهَارَ
فِي اللَّيْلِ وَسَخَّرَ الشَّمْسَ وَالْقَمَرَ كُلٌّ يَجْرِي لِأَجَلٍ مُسَمًّى ذٰلِكُمُ اللّٰهُ
رَبُّكُمْ لَهُ الْمُلْكُ وَالَّذِينَ تَدْعُونَ مِنْ دُونِهِ مَا يَمْلِكُونَ مِنْ
قِطْمِيرٍ إِنْ تَدْعُوهُمْ لَا يَسْمَعُوا دُعَاءَكُمْ وَلَوْ سَمِعُوا مَا
اسْتَجَابُوا لَكُمْ وَيَوْمَ الْقِيَامَةِ يَكْفُرُونَ بِشِرْكِكُمْ (فاطر-١١-١٤)

ಅಲ್ಲಾಹನು ನಿಮ್ಮನ್ನು ಮಣ್ಣಿನಿಂದ ಸೃಷ್ಟಿಸಿದನು... ಅವನು ಹಗಲಿನೊಳಗೆ ರಾತ್ರಿಯನ್ನೂ ರಾತ್ರಿಯೊಳಗೆ ಹಗಲನ್ನೂ ಪೋಣಿಸುತ್ತ ತರುತ್ತಾನೆ. ಸೂರ್ಯ-ಚಂದ್ರರನ್ನು ಅವನು ನಿಯಂತ್ರಿಸಿಟ್ಟಿದ್ದಾನೆ. ಇದೆಲ್ಲವೂ ಒಂದು ನಿಶ್ಚಿತ ಸಮಯದ ತನಕ ನಡೆಯುತ್ತ ಸಾಗುತ್ತದೆ. ಆ ಅಲ್ಲಾಹನೇ ನಿಮ್ಮ ಪ್ರಭು. ಸಾರ್ವಭೌಮತೆ ಅವನದೇ ಆಗಿರುತ್ತದೆ. ಅವನನ್ನು ಬಿಟ್ಟು ನೀವು ಇತರ ಯಾರನ್ನೆಲ್ಲ ಪ್ರಾರ್ಥಿಸುತ್ತಿರೋ ಅವರು ಒಂದು ಹುಲ್ಲು ಕಡ್ಡಿಯ ಒಡೆಯರೂ ಅಲ್ಲ. ನೀವು ಅವರನ್ನು ಪ್ರಾರ್ಥಿಸಿದರೆ ಅವರು ನಿಮ್ಮ ಪ್ರಾರ್ಥನೆಗಳನ್ನು ಕೇಳಲಾರರು ಮತ್ತು ಕೇಳಿದರೂ ಅವುಗಳಿಗೆ ಉತ್ತರಿಸಲಾರರು. ಪುನರುತ್ಥಾನ ದಿನ ಅವರು ನೀವೆಸಗಿದ ದೇವ ಸಹಭಾಗಿತ್ವವನ್ನು ನಿರಾಕರಿಸಿ ಬಿಡುವರು. (35: 11-14)

وَلَهُ مَنْ فِي السَّمٰوٰتِ وَالْأَرْضِ كُلٌّ لَهُ قَانِتُونَ ..... ضَرَبَ
لَكُمْ مَثَلًا مِنْ أَنْفُسِكُمْ هَلْ لَكُمْ مِنْ مَا مَلَكَتْ أَيْمَانُكُمْ مِنْ
شُرَكَاءَ فِي مَا رَزَقْنَاكُمْ فَأَنْتُمْ فِيهِ سَوَاءٌ تَخَافُونَهُمْ كَخِيفَتِكُمْ
أَنْفُسَكُمْ كَذٰلِكَ نُفَصِّلُ الْآيَاتِ لِقَوْمٍ يَعْقِلُونَ ○ بَلِ اتَّبَعَ
الَّذِينَ ظَلَمُوا أَهْوَاءَهُمْ بِغَيْرِ عِلْمٍ ... فَأَقِمْ وَجْهَكَ
لِلدِّينِ حَنِيفًا فِطْرَتَ اللّٰهِ الَّتِي فَطَرَ النَّاسَ عَلَيْهَا لَا تَبْدِيلَ
لِخَلْقِ اللّٰهِ ذٰلِكَ الدِّينُ الْقَيِّمُ وَلٰكِنَّ أَكْثَرَ النَّاسِ لَا
يَعْلَمُونَ ○ (الروم-٢٦-٣٠)

ಆಕಾಶಗಳಲ್ಲೂ ಭೂಮಿಯಲ್ಲೂ ಇರುವ ಎಲ್ಲರೂ ಅವನ ದಾಸರು. ಎಲ್ಲರೂ ಅವನ ಆಜ್ಞಾಧೀನರೇ ಆಗಿರುತ್ತಾರೆ... ಅವನು ನಿಮಗೆ ನಿಮ್ಮಿಂದಲೇ ಒಂದು ಉಪಮೆ ಕೊಡುತ್ತಾನೆ. ನಿಮ್ಮ ಸ್ವಾಧೀನವಿರುವ ನಿಮ್ಮ ಗುಲಾಮರಲ್ಲಿ ಕೆಲವರು ನಾವು ನಿಮಗೆ ನೀಡಿರುವ ಸಂಪತ್ತಿನಲ್ಲಿ ನಿಮ್ಮೊಂದಿಗೆ ಸರಿಸಮಾನ ಪಾಲುದಾರರಾಗಿದ್ದಾರೆಯೇ ಮತ್ತು ನೀವು ನಿಮ್ಮ ಸರಿಸಾಟಿಯಾಗಿರುವವರನ್ನು ಹೆದರುವಂತೆಯೇ ಅವರನ್ನೂ ಹೆದರುತ್ತೀರಾ? ಈ ರೀತಿಯಲ್ಲಿ ನಾವು ವಿವೇಕವನ್ನು ಬಳಸುವವರಿಗಾಗಿ ನಮ್ಮ ಸೂಕ್ತಗಳನ್ನು ವಿಶದವಾಗಿ ವಿವರಿಸುತ್ತೇವೆ. ಆದರೆ ಈ ಅಕ್ರಮಿಗಳು ಏನೂ ಅರ್ಥಮಾಡಿಕೊಳ್ಳದೆ ತಮ್ಮ ಊಹನೆಗಳನ್ನು ಅನುಸರಿಸುತ್ತಿದ್ದಾರೆ.... ಆದುದರಿಂದ ನೀವು ಏಕನಿಷ್ಠೆಯಿಂದ ನಿಮ್ಮ ಮುಖವನ್ನು ಈ ಧರ್ಮದ ಕಡೆ ಕೇಂದ್ರೀಕರಿಸಿರಿ. ಅಲ್ಲಾಹನು ಮಾನವನನ್ನು ಸೃಷ್ಟಿಸಿದ ಪ್ರಕೃತಿಯಲ್ಲೇ ಸ್ಥಿರವಾಗಿರಿ. ಅಲ್ಲಾಹನು ಮಾಡಿದ ರಚನೆಯನ್ನು ಬದಲಾಯಿಸಲಾಗದು. ಇದುವೇ ಸತ್ಯ ಮತ್ತು ಸರಿಯಾದ ಧರ್ಮವಾಗಿದೆ. ಆದರೆ ಹೆಚ್ಚಿನವರು ಅರಿಯುವುದಿಲ್ಲ. (30: 26-30)

وَمَا قَدَرُوا اللَّهَ حَقَّ قَدْرِهِ وَالْأَرْضُ جَمِيعًا قَبْضَتُهُ يَوْمَ الْقِيَامَةِ
وَالسَّمَاوَاتُ مَطْوِيَّاتٌ بِيَمِينِهِ سُبْحَانَهُ وَتَعَالَىٰ عَمَّا يُشْرِكُونَ ۝

(الزمر - ٦٧)

ಇವರು ಅಲ್ಲಾಹನನ್ನು ಗೌರವಿಸಬೇಕಾದ ರೀತಿಯಲ್ಲಿ ಗೌರವಿಸಲಿಲ್ಲ. ಪುನರುತ್ಥಾನ ದಿನ ಇಡೀ ಭೂಮಿಯು ಅವನ ಮುಷ್ಟಿಯಲ್ಲಿರುವುದು ಮತ್ತು ಆಕಾಶಗಳು ಅವನ ಬಲಗೈಯಲ್ಲಿ ಸುತ್ತಿಕೊಂಡಿರುವುವು. ಇವರು ಮಾಡುತ್ತಿರುವ ದೇವ ಸಹಭಾಗಿತ್ವದಿಂದ ಅವನು ಪಾವನನೂ ಅತ್ಯುನ್ನತನೂ ಆಗಿರುತ್ತಾನೆ. (39: 67)

فَلِلَّهِ الْحَمْدُ رَبِّ السَّمَاوَاتِ وَرَبِّ الْأَرْضِ رَبِّ الْعَالَمِينَ ۝ وَلَهُ
الْكِبْرِيَاءُ فِي السَّمَاوَاتِ وَالْأَرْضِ وَهُوَ الْعَزِيزُ الْحَكِيمُ ۝

(جاثیه: ٣٦، ٣٧)

ಆದುದರಿಂದ ಸರ್ವ ಪ್ರಶಂಸೆಯೂ ಭೂಮಿ-ಆಕಾಶಗಳ ಒಡೆಯನಾಗಿರುವ ಮತ್ತು ಸಕಲ ಲೋಕವಾಸಿಗಳ ಪಾಲಕ ಪ್ರಭುವಾಗಿರುವ ಅಲ್ಲಾಹನಿಗೇ ಮೀಸಲು. ಭೂಮಿ-ಆಕಾಶಗಳಲ್ಲಿ ಮಹಾನತೆಯು ಅವನಿಗೇ ಇದೆ ಮತ್ತು ಅವನೇ ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ. (45: 36-37)

رَبُّ السَّمَاوَاتِ وَالْأَرْضِ وَمَا بَيْنَهُمَا فَاعْبُدْهُ وَاصْطَبِرْ لِعِبَادَتِهِ
هَلْ تَعْلَمُ لَهُ سَمِيًّا - (مريم - ٦٥)

ಅವನು ಆಕಾಶಗಳ, ಭೂಮಿಯ ಮತ್ತು ಅವುಗಳ ನಡುವೆಯಿರುವ ಸರ್ವಸ್ವಗಳ ಪ್ರಭು. ಆದುದರಿಂದ ನೀವು ಅವನ ದಾಸ್ಯ-ಆರಾಧನೆ ಮಾಡಿರಿ ಮತ್ತು ಅವನ ದಾಸ್ಯ-ಆರಾಧನೆಯಲ್ಲೇ ಸ್ಥಿರವಾಗಿರಿ. ನಿಮ್ಮ ತಿಳುವಳಿಕೆಯಲ್ಲಿ ಅವನಿಗೆ ಸರಿಸಮಾನನಾದವನು ಯಾರಾದರೂ ಇದ್ದಾನೆಯೇ? (19: 65)

وَلِلّٰهِ غَيْبُ السَّمٰوٰتِ وَالْاَرْضِ وَاِلَيْهِ يُرْجَعُ الْاَمْرُ كُلُّهٗ فَاعْبُدْهُ
وَتَوَكَّلْ عَلَيْهِ ۔ (ہود۔ ۱۲۳)

ಆಕಾಶಗಳಲ್ಲೂ ಭೂಮಿಯಲ್ಲೂ ಅಡಗಿರುವುದೆಲ್ಲವೂ ಅಲ್ಲಾಹನ ಅಧೀನದಲ್ಲಿವೆ. ಸಕಲ ವ್ಯವಹಾರಗಳೂ ಆತನ ಕಡೆಗೇ ಮರಳಿಸಲ್ಪಡುತ್ತವೆ. ಆದುದರಿಂದ ಓ ಪೈಗಂಬರರೇ! ನೀವು ಅವನ ದಾಸ್ಯ-ಆರಾಧನೆ ಮಾಡಿರಿ. ಅವನ ಮೇಲೆಯೇ ಭರವಸೆಯನ್ನಿಡಿರಿ. (11: 123)

رَبُّ الْمَشْرِقِ وَالْمَغْرِبِ لَآ اِلٰهَ اِلَّا هُوَ فَاتَّخِذْهُ وَكِيْلًا ۔ (المزمل۔ ۹)

ಅವನು ಪೂರ್ವ ಪಶ್ಚಿಮಗಳ ಒಡೆಯನು. ಅವನ ಹೊರತು ಇನ್ನಾವ ಆರಾಧ್ಯನೂ ಇಲ್ಲ. ಆದುದರಿಂದ ಅವನನ್ನೇ ನಿಮ್ಮ ಕಾರ್ಯಸಾಧಕನಾಗಿ ಮಾಡಿಕೊಳ್ಳಿರಿ. (ಪವಿತ್ರ ಕುರ್‌ಆನ್ 73:9)

اِنَّ هٰذِهٖٓ اُمَّتُكُمْ اُمَّةً وَّاحِدَةً ۖ وَّاَنَا رَبُّكُمْ فَاعْبُدُوْنِ ۝ وَتَقَطَّعُوْٓا
اَمْرَهُمْ بَيْنَهُمْ ۖ كُلٌّ اِلَيْنَا رٰجِعُوْنَ ۔ (الانبیاء۔ ۹۲ ۔ ۹۳)

ಈ ನಿಮ್ಮ ಸಮುದಾಯವು ವಾಸ್ತವದಲ್ಲಿ ಒಂದೇ ಸಮುದಾಯವಾಗಿದೆ ಮತ್ತು ನಾನು ನಿಮ್ಮ ಪ್ರಭುವಾಗಿದ್ದೇನೆ. ಆದುದರಿಂದ ನೀವು ನನ್ನ ದಾಸ್ಯ-ಆರಾಧನೆ ಮಾಡಿರಿ. ಆದರೆ ಅವರು ಪರಸ್ಪರ ತಮ್ಮ ಧರ್ಮವನ್ನು ಛಿನ್ನ ವಿಚ್ಛಿನ್ನವಾಗಿ ಮಾಡಿಬಿಟ್ಟರು. ಎಲ್ಲರಿಗೂ ನಮ್ಮ ಕಡೆಗೇ ಮರಳಲಿಕ್ಕಿದೆ. (21: 93-94)

اِتَّبِعُوْا مَآ اُنْزِلَ اِلَيْكُمْ مِّنْ رَّبِّكُمْ وَلَا تَتَّبِعُوْا مِنْ دُوْنِهٖٓ اَوْلِيَآءَ
(اعراف۔ ۳)

ಜನರೇ! ನಿಮ್ಮ ಪ್ರಭುವಿನ ಕಡೆಯಿಂದ ಅವತೀರ್ಣಗೊಳಿಸಲ್ಪಟ್ಟಿರುವುದನ್ನೆಲ್ಲ ಅನುಸರಿಸಿರಿ ಮತ್ತು ನಿಮ್ಮ ಪಾಲಕ ಪ್ರಭುವನ್ನು ಬಿಟ್ಟು ಇತರ ಸಂರಕ್ಷಕರನ್ನು ಅನುಸರಿಸಬೇಡಿರಿ. (7:3)

قُلْ يٰٓاَهْلَ الْكِتٰبِ تَعَالَوْا اِلٰى كَلِمَةٍ سَوَآءٍۢ بَيْنَنَا وَبَيْنَكُمْ اَلَّا نَعْبُدَ
اِلَّا اللّٰهَ وَلَا نُشْرِكَ بِهٖ شَيْئًا وَّلَا يَتَّخِذَ بَعْضُنَا بَعْضًا اَرْبَابًا مِّنْ دُوْنِ
اللّٰهِ ۔ (آل عمران۔ ۶۴)

ಓ ಪೈಗಂಬರರೇ! ಹೇಳಿರಿ, "ಓ ಗ್ರಂಥದವರೇ! ನಿಮ್ಮ ಮತ್ತು ನಮ್ಮೊಳಗೆ ಸಮಾನವಾಗಿರುವ ವಿಷಯಗಳ ಕಡೆಗೆ ಬನ್ನಿರಿ. ಅದೆಂದರೆ - ನಾವು ಅಲ್ಲಾಹನ ಹೊರತು ಇತರ ಯಾರ ದಾಸ್ಯ-ಆರಾಧನೆಯನ್ನೂ ಮಾಡದಿರೋಣ. ಅವನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡದಿರೋಣ ಮತ್ತು ನಮ್ಮ ಪೈಕಿ ಯಾರೂ ಅಲ್ಲಾಹನ ಹೊರತು ಇತರ ಯಾರನ್ನೂ ತನ್ನ ಪ್ರಭುವಾಗಿರಿಸದಿರೋಣ." (3: 64)

قُلْ اَعُوْذُ بِرَبِّ النَّاسِ ۝ مَلِكِ النَّاسِ ۝ اِلٰهِ النَّاسِ ۝ (الناس ۱-۳)

ಹೇಳಿರಿ- ನಾನು ಅಭಯ ಯಾಚಿಸುತ್ತೇನೆ - ಮಾನವರ ಪ್ರಭುವಿನ. ಮಾನವರ ಸಾಮ್ರಾಟನ. ಮಾನವರ ನೈಜ ಆರಾಧ್ಯನ. (114: 1-3)

فَمَنْ كَانَ يَرْجُوْا لِقَآءَ رَبِّهٖ فَلْيَعْمَلْ عَمَلًا صَالِحًا وَّلَا يُشْرِكْ بِعِبَادَةِ رَبِّهٖۤ اَحَدًا ۝ (کہف ۱۱۰)

ಆದುದರಿಂದ ತನ್ನ ಪ್ರಭುವಿನ ಭೇಟಿಯನ್ನು ನಿರೀಕ್ಷಿಸುವವನು ಸತ್ಕರ್ಮಗಳನ್ನೆಸಗಲಿ ಮತ್ತು ಆರಾಧನೆಯಲ್ಲಿ ತನ್ನ ಪ್ರಭುವಿನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡದಿರಲಿ. (18: 110)

ಈ ಆಯತ್‌ಗಳನ್ನು ಅನುಕ್ರಮವಾಗಿ ಓದುವುದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಪವಿತ್ರ ಕುರ್‌ಆನ್ 'ರುಬೂಬಿಯತ್' ಅನ್ನು ಆಧಿಪತ್ಯ ಮತ್ತು ಸಾರ್ವಭೌಮತೆಗೆ(Sovereignty) ಸಮಾನವೆಂದು ಪ್ರತಿಪಾದಿಸುತ್ತದೆ. 'ರಬ್ಬ್' ಎಂಬುದಕ್ಕೆ ಸಮಸ್ತ ವಿಶ್ವದ ಏಕೈಕ ಸಾರ್ವಭೌಮ, ಏಕೈಕ ಒಡೆಯ ಮತ್ತು ಅಧಿಪತಿ ಎಂಬ ಕಲ್ಪನೆಯನ್ನೇ ಕುರ್‌ಆನ್‌ನ ಈ ಸೂಕ್ತಗಳು ನಮ್ಮ ಮುಂದಿರಿಸುತ್ತವೆ.

ಈ ನೆಲೆಯಲ್ಲೇ ಅವನು ನಮ್ಮ ಮತ್ತು ಸಕಲ ವಿಶ್ವದ ಪ್ರಭು, ಪರಿಪಾಲಕ ಮತ್ತು ಇಷ್ಟಾರ್ಥ ಸಿದ್ಧಿಸುವವನಾಗಿರುವನು. ಇದೇ ನೆಲೆಯಲ್ಲಿ ಅವನು ನಮ್ಮ ಪರಿಪಾಲಕ, ಮೇಲ್ವಿಚಾರಕ, ಕಾರ್ಯಸಾಧಕ ಮತ್ತು ಅವಲಂಬಿ ಆಗಿರುವನು. ಈ ನೆಲೆಯಲ್ಲಿ ಅವನ ನಿಷ್ಠೆಯೇ ನಮ್ಮ ಸಾಮೂಹಿಕ ಜೀವನದ ಸಹಜ ಬುನಾದಿಯಾಗಿದೆ. ಅದರ ಮೇಲೆಯೇ ನಮ್ಮ ಸಾಮಾಜಿಕ ಜೀವನದ ಸೌಧವು ಸರಿಯಾಗಿ ನೆಲೆನಿಲ್ಲಬಲ್ಲುದು. ಅವನ ಕೇಂದ್ರೀಯ ಅಸ್ತಿತ್ವವೇ ವಿಭಿನ್ನ ಜನರ ಮತ್ತು ವರ್ಗಗಳ ಮಧ್ಯೆ ಒಂದು ಸಮುದಾಯದ ಸಂಬಂಧವನ್ನು ಸ್ಥಾಪಿಸಬಲ್ಲುದು.

ಇದೇ ನೆಲೆಯಲ್ಲಿ ಅವನು ನಮ್ಮ ಮತ್ತು ಎಲ್ಲ ಸೃಷ್ಟಿಗಳ ದಾಸ್ಯ, ಅನುಸರಣೆ ಮತ್ತು ಆರಾಧನೆಗೆ ಅರ್ಹನಾಗಿರುವನು.

ಇದೇ ನೆಲೆಯಲ್ಲಿ ಅವನು ನಮ್ಮ ಮತ್ತು ಪ್ರತಿಯೊಂದು ವಸ್ತುವಿನ ಒಡೆಯ ಮತ್ತು ಅಧಿಪತಿಯಾಗಿದ್ದಾನೆ. ಅರೇಬಿಯದ ಜನರು ಮತ್ತು ಲೋಕದ ಎಲ್ಲ ಅಜ್ಞಾನಿ ವ್ಯಕ್ತಿಗಳು ಎಲ್ಲ

ಕಾಲಗಳಲ್ಲಿಯೂ ಒಂದು ತಪ್ಪನ್ನು ಎಸಗಿದರು. ಅವರು 'ರಬ್ಬ್'ನ ಸಮಗ್ರ ಗುಣವನ್ನು ಐದು ವಿಭಿನ್ನ ಪ್ರಭುತ್ವಗಳಾಗಿ ವಿಂಗಡಿಸಿದರು. ಬೇರೆ ಬೇರೆ ಪ್ರಭುತ್ವಗಳು ವಿಭಿನ್ನ ಅಸ್ತಿತ್ವಗಳಿಗೆ ಸಂಬಂಧಿಸಿದ್ದಾಗಿದೆ ಎಂದು ಕಲ್ಪಿಸಿಕೊಂಡರು. ಆದರೆ ಈ ವಿಶ್ವದ ಸಮಗ್ರ ವ್ಯವಸ್ಥೆಯಲ್ಲಿ ಸಾರ್ವಭೌಮತೆ ಯಾರ ಕೈಯಲ್ಲಿದೆಯೋ ಅವನ ಹೊರತು ಪ್ರಭುತ್ವದ ಯಾವ ಕಾರ್ಯವೂ ಯಾವ ಅಸ್ತಿತ್ವದಿಂದಲೂ ಸಾಧ್ಯವಿಲ್ಲವೆಂದು ಪವಿತ್ರ ಕುರ್‌ಆನ್ ಬಲವಾಗಿ ಪ್ರತಿಪಾದಿಸಿತು. ಈ ವ್ಯವಸ್ಥೆಯ ಕೇಂದ್ರೀಯತೆ ಅದಕ್ಕೆ ಸಾಕ್ಷಿಯಾಗಿದೆ. ಎಲ್ಲ ರೀತಿಯ ಪ್ರಭುತ್ವವು ಆ ಏಕ ಅಲ್ಲಾಹನಿಗೆ ಮೀಸಲಾಗಿದೆ. ಅವನು ಈ ವ್ಯವಸ್ಥೆಯನ್ನು ಅಸ್ತಿತ್ವಕ್ಕೆ ತಂದನು. ಈ ವ್ಯವಸ್ಥೆಯೊಳಗಿದ್ದುಕೊಂಡು ಪ್ರಭುತ್ವದ ಯಾವ ಅಂಶವನ್ನಾದರೂ ಅಲ್ಲಾಹನ ಹೊರತು ಇತರರಿಗೆ ಆರೋಪಿಸುವವರು ವಾಸ್ತವಿಕತೆಯೊಂದಿಗೆ ಯುದ್ಧ ಹೂಡುತ್ತಾರೆ. ಸತ್ಯದಿಂದ ವಿಮುಖರಾಗುತ್ತಾರೆ. ಸತ್ಯದ ವಿರುದ್ಧ ಬಂಡಾಯವೇಳುತ್ತಾರೆ. ವಸ್ತುಸ್ಥಿತಿಗೆ ವಿರುದ್ಧ ವರ್ತಿಸಿ ತನ್ನನ್ನು ನಾಶ-ನಷ್ಟಗಳಲ್ಲಿ ಸಿಲುಕಿಸುತ್ತಾರೆ.

ಇಬಾದತ್

ಶಬ್ದಕೋಶಾರ್ಥ

ಅರಬೀ ಭಾಷೆಯಲ್ಲಿ عُبُوْدَة، عُبُوْدِيَّة ಮತ್ತು عَبْدِيَّة ಗಳ ಮೂಲ ಅರ್ಥ ದೈನ್ಯತೆ ಮತ್ತು ವಿನಯವಾಗಿದೆ. ಅರ್ಥಾತ್: ವಿಧೇಯನಾಗು, ಶರಣಾಗು, ಪ್ರತಿಭಟನೆ, ವಿಮುಖತೆ ಅಥವಾ ವಿದ್ರೋಹವಿಲ್ಲದೆ ಒಬ್ಬನ ಮುಂದೆ ಆತ್ಮ ಸಮರ್ಪಣೆ ಮಾಡಿ ಅವನು ಹೇಗೆ ಬೇಕಾದರೂ ಸೇವೆ ಮಾಡಿಸಲು ಅನುವು ಮಾಡಿಕೊಡುವುದು. ಆದ್ದರಿಂದಲೇ ಸವಾರಿಗೆ ಪೂರ್ಣವಾಗಿ ಪಳಗಿದ ಒಂಟೆಯನ್ನು ಅರಬರು بعير مُعَبَّد ಎನ್ನುತ್ತಾರೆ. ನಿರಂತರ ಬಳಸಲ್ಪಟ್ಟು ಸಮತಟ್ಟಾದ ರಸ್ತೆಯನ್ನು طريق مُعَبَّد ಎನ್ನುತ್ತಾರೆ. ಇದೇ ಮೂಲದಿಂದ ಈ ಪದಕ್ಕೆ ದಾಸ್ಯ, ಅನುಸರಣೆ, ಪೂಜೆ, ನೌಕರಿ ಮತ್ತು ಸೆರೆ ಅಥವಾ ತಡೆ ಎಂಬ ಅರ್ಥಗಳೂ ಹುಟ್ಟಿಕೊಂಡಿವೆ. ಆದ್ದರಿಂದಲೇ ಅರಬೀ ನಿಘಂಟಿನ ಅತಿ ದೊಡ್ಡ ಗ್ರಂಥವಾದ 'ಲಿಸಾನುಲ್ ಅರಬ್'ನಲ್ಲಿ ಅದರ ವಿವರಣೆ ಹೀಗೆ ಮಾಡಲಾಗಿದೆ.

1) (١) اَلْعَبْد، المملوك خلاف الحر

ಅಬ್ದ್ ಎಂದರೆ ಯಾರದಾದರೂ ಒಡೆತನಕ್ಕೆ ಸೇರಿದ ದಾಸ ಮತ್ತು ಈ ಪದವೂ (ಸ್ವತಂತ್ರ) ಎಂಬ ಪದದ ವಿರೋಧ ಪದವಾಗಿದೆ. الرَّجُل ಎಂದರೆ ವ್ಯಕ್ತಿಯನ್ನು ಗುಲಾಮನಾಗಿ ಮಾಡಲಾಯಿತು ಅಥವಾ ಅವನೊಂದಿಗೆ ಗುಲಾಮನಂತೆ ವ್ಯವಹರಿಸಲಾಯಿತು ಎಂದರ್ಥ. ಇದೇ ಅರ್ಥ اعتبده ಮತ್ತು عبده، اعبده ಎಂಬ ಪದಗಳಿಗೂ ಇದೆ. ಹದೀಸ್‌ನಲ್ಲಿ ಈ ರೀತಿ ಬಂದಿದೆ:

ثلاثة انا خصمهم رجلٌ اعتبد محررًا وفي رواية اعبد محررًا

ಮೂವರು ವ್ಯಕ್ತಿಗಳ ಪರವಾಗಿ ಕಿಯಾಮತ್ ದಿನದಂದು ನಾನು ದಾವೆ ಹೂಡುವೆನು. ಅವರ ಪೈಕಿ ಒಬ್ಬನು ಸ್ವತಂತ್ರ ವ್ಯಕ್ತಿಯನ್ನು ಗುಲಾಮನಾಗಿಸಿದವನು ಅಥವಾ ಗುಲಾಮನನ್ನು ಸ್ವತಂತ್ರಗೊಳಿಸಿದ ಬಳಿಕ ಅವನೊಂದಿಗೆ ಗುಲಾಮನಂತೆ ವ್ಯವಹರಿಸಿದವನು. ಹ. ಮೂಸಾ(ಅ) ಫಿರ್‌ಔನನ್ನುದ್ದೇಶಿಸಿ ಹೀಗೆ ಹೇಳಿರುವರು:

وَتِلْكَ نِعْمَةٌ تَمُنُّهَا عَلَيَّ اَنْ عَبَّدْتَ بَنِيْ اِسْرَآئِيْلَ -

(الشعراء-٢٢)

ಇನ್ನು ನೀನು ನನ್ನ ಮೇಲೆ ಉಪಕಾರಭಾರವನ್ನಿರಿಸುತ್ತಿರುವ ವಿಷಯ. ಅದರ ವಾಸ್ತವಿಕತೆಯೇನೆಂದರೆ, ನೀನು ಬನೀ ಇಸ್ರಾಈಲರನ್ನು ಗುಲಾಮರನ್ನಾಗಿ ಮಾಡಿಕೊಂಡಿದ್ದೆ. (26: 22)

2) (٢) اَلْعِبَادَةُ الطَّاعَةُ مَعَ الْخُضُوْعِ

ಸಂಪೂರ್ಣ ವಿಧೇಯತೆಯೊಂದಿಗೆ ಮಾಡುವ ಅನುಸರಣೆಗೆ ಇಬಾದತ್ ಎನ್ನುವರು. عَبَدَ الطَّاغوت اي اطاعه 'ತಾಗೂತ್'ನ ಇಬಾದತ್ ಮಾಡಿದನು ಎಂದರೆ ಅವನಿಗೆ ವಿಧೇಯನಾದನು.

إِيَّاكَ نَعْبُدُ اى نطيع الطاعة الّتى نَخْضَعُ مَعَهَا

ನಾವು ನಿನ್ನ ಅನುಸರಣೆ ಮಾಡುತ್ತೇವೆ. ಅರ್ಥಾತ್: ನಾವು ನಿನ್ನನ್ನು ಪೂರ್ಣ ವಿಧೇಯತೆಯೊಂದಿಗೆ ಅನುಸರಿಸುತ್ತೇವೆ.

اُعْبُدُوْا رَبَّكُمْ اى اَطِيْعُوْا رَبَّكُمْ

ನಿಮ್ಮ ಪ್ರಭುವಿನ ಇಬಾದತ್ ಮಾಡಿರಿ ಅರ್ಥಾತ್: ಅವನನ್ನು ಅನುಸರಿಸಿರಿ.

قَوْمُهُمَا لَنَا عَابِدُوْنَ اى دَآئِبُوْنَ وَكُلّ مَنْ دان الْمُلْك
فَهُوَعَابِدٌ لَهٗ وَقَالَ ابن الانباري: فُلَانٌ عَابِدٌ وَهُوَالْخَاضِعُ
لِرَبِّهٖ المستلم المنقاد لِاَمْرِهٖ

ಅರ್ಥಾತ್: 'ಮೂಸಾ ಮತ್ತು ಹಾರೂನರ ಜನಾಂಗ ನಮ್ಮ 'ಆಬಿದ್' ಆಗಿದೆ ಎಂದು ಫಿರ್‌ಔನ್ ಹೇಳಿದುದರ ತಾತ್ಪರ್ಯವೇನೆಂದರೆ ಅದು ನಮಗೆ ವಿಧೇಯವಾಗಿದೆ. ಯಾರು ಒಬ್ಬ ರಾಜನಿಗೆ ವಿಧೇಯನಾಗುತ್ತಾನೋ ಅವನು ಆತನ 'ಆಬಿದ್' ಆಗುತ್ತಾನೆ. ಇಬ್ನುಲ್ ಅಂಬಾರಿ ಹೀಗೆ ಹೇಳಿರುವರು: فُلَانٌ عَابِدٌ ಎಂದರೆ ಆತ ತನ್ನ ಯಜಮಾನನ ವಿಧೇಯ ಮತ್ತು ಆತನ ಆಜ್ಞೆಯನ್ನು ಅನುಸರಿಸುವವನಾಗಿದ್ದಾನೆ.

3) (٣) " عبده عبادة ومعبدًا ومعبدة تألّه اللهٗ -

ಅವನ ಇಬಾದತ್ ಮಾಡಿದ, ಅರ್ಥಾತ್: ಅವನನ್ನು ಪೂಜಿಸಿದ —

التعبد النسك 'ತಅಬ್ಬುದ್' ಎಂದರೆ ಯಾರದಾದರೂ ಉಪಾಸಕನಾಗುವುದು ಪೂಜಾರಿಯಾಗುವುದು. ಕವಿ ಹೀಗೆ ಹೇಳುತ್ತಾನೆ... ارى المال عبد الباخلين معبد
ಜಿಪುಣರ ಬಳಿ ರೂಪಾಯಿಯು ಪೂಜಿಸಲ್ಪಡುವುದನ್ನು ನಾನು ಕಾಣುತ್ತೇನೆ.

(4) (٤) عبدہ وعبد بہ لزمہٗ فلم یفارقہ،

'ಅಬ್‌ದಹು' ಮತ್ತು 'ಅಬ್‌ದಬಿಹೀ' ಎನ್ನುವುದರ ಅರ್ಥ-ಅವನು ಆತನೊಂದಿಗೆ ಸೇರಿಕೊಂಡನು ಬೇರ್ಪಡಲಿಲ್ಲ. ಅವನನ್ನು ಬಿಗಿ ಹಿಡಿದನು ಬಿಡಲಿಲ್ಲ ಎಂದಾಗುತ್ತದೆ.

(5) (٥) ما عبدك غنی ای ما حبسك

ಒಬ್ಬನು ಯಾರದಾದರೂ ಬಳಿ ಬರುವುದರಿಂದ ತಡೆದು ನಿಂತರೆ ಹೀಗೆ ಹೇಳಲಾಗುವುದು. ಅರ್ಥಾತ್: ನಿನ್ನನ್ನು ನನ್ನ ಬಳಿ ಬರುವುದರಿಂದ ಯಾವ ವಸ್ತು ತಡೆಯಿತು.

ಈ ವಿವರಣೆಯಿಂದ ಸ್ಪಷ್ಟವಾಗುವುದೇನೆಂದರೆ عبد ಎಂಬ ಮೂಲದ ಮೂಲಭೂತ ಅರ್ಥವು ಯಾರದಾದರೂ ಹಿರಿತನವನ್ನು ಅಂಗೀಕರಿಸಿ ಅವನ ಮುಂದೆ ತನ್ನ ಸ್ವಾತಂತ್ರ್ಯ, ಸ್ವಾಯತ್ತತೆಗಳನ್ನು ತೊರೆಯುವುದು. ಪ್ರತಿಭಟನೆ ಮತ್ತು ವಿರೋಧವನ್ನು ತೊರೆದು ಅವನಿಗೆ ಶರಣಾಗುವುದು. ಇದುವೇ ದಾಸ್ಯ ಅಥವಾ ಗುಲಾಮಗಿರಿಯ ವಾಸ್ತವಿಕತೆಯಾಗಿದೆ. ಆದ್ದರಿಂದ ಈ ಪದದ ಮೂಲಕ ಓರ್ವ ಅರಬನ ಮನದಲ್ಲಿ ಮೂಡುವ ಪ್ರಥಮ ಕಲ್ಪನೆಯು ದಾಸ್ಯ ಮತ್ತು ಗುಲಾಮಗಿರಿಯ ಕಲ್ಪನೆಯೇ ಆಗಿದೆ. ದಾಸನ ನೈಜ ಕೆಲಸವು ತನ್ನ ಯಜಮಾನನ ಅನುಸರಣೆ ಮತ್ತು ವಿಧೇಯತೆಯಾದುದರಿಂದ ಅದರ ಜತೆಗೇ 'ಅನುಸರಣೆ'ಯ ಕಲ್ಪನೆಯೂ ಉಂಟಾಗುತ್ತದೆ. ಒಬ್ಬ ದಾಸನು ತನ್ನನ್ನು ತನ್ನ ಯಜಮಾನನ ದಾಸ್ಯ ಮತ್ತು ಅನುಸರಣೆಯಲ್ಲಿ ಅರ್ಪಿಸುವುದು ಮಾತ್ರವಲ್ಲ ಅವನ ದೊಡ್ಡಸ್ಥಿಕೆಯ ಮೇಲೆ ನಂಬಿಕೆಯಿರಿಸುತ್ತಾನೆ. ಅವನ ಹಿರಿತನವನ್ನು ಅಂಗೀಕರಿಸುತ್ತಾನೆ. ಅವನ ಉಪಕಾರಗಳಿಗೆ ಕೃತಜ್ಞತೆಯ ಭಾವನೆಯನ್ನೂ ಹೊಂದಿರುತ್ತಾನೆ. ಆದ್ದರಿಂದ ಅವನ ಗೌರವಾದರಗಳಲ್ಲಿ ಅತಿಶಯವೆಸಗುತ್ತಾನೆ. ವಿಭಿನ್ನ ರೀತಿಯಿಂದ ಅವನ ಅನುಗ್ರಹಗಳನ್ನು ಸ್ಮರಿಸುತ್ತಾನೆ. ವಿಧ ವಿಧವಾಗಿ ಅವನ ದಾಸ್ಯದ ಸಂಪ್ರದಾಯಗಳನ್ನು ಪಾಲಿಸುತ್ತಾನೆ. ಇದನ್ನೇ ಪೂಜೆ ಎನ್ನಲಾಗುತ್ತದೆ. ಇದು ದಾಸ್ಯದ ಕಲ್ಪನೆಯಲ್ಲಿ ಸೇರಬೇಕಾದರೆ ದಾಸನ ಶಿರ ಮಾತ್ರ ಯಜಮಾನನ ಮುಂದೆ ಬಾಗಿದರೆ ಸಾಲದು. ಅವನ ಮನಸ್ಸೂ ಅವನ ಮುಂದೆ ಬಾಗಿರಬೇಕು. ಉಳಿದೆರಡು ಕಲ್ಪನೆಗಳು ವಾಸ್ತವದಲ್ಲಿ ದಾಸ್ಯದ ಉಪಕಲ್ಪನೆಗಳಾಗಿವೆಯೇ ಹೊರತು ಮೂಲ ಮತ್ತು ಪ್ರಾಥಮಿಕ ಕಲ್ಪನೆಗಳಲ್ಲ.

ಕುರ್‌ಆನ್‌ನಲ್ಲಿ 'ಇಬಾದತ್' ಎಂಬ ಪದದ ಬಳಕೆ

ಶಬ್ದಕೋಶ ಅರ್ಥದ ಈ ವಿವರಣೆಯ ನಂತರ ನಾವು ಕುರ್‌ಆನ್‌ನ ಕಡೆಗೆ ಗಮನ ಹರಿಸೋಣ. ಅದರಿಂದ ನಮಗೆ ತಿಳಿದು ಬರುವುದೇನೆಂದರೆ ಪವಿತ್ರ ಕುರ್‌ಆನ್‌ನಲ್ಲಿ ಈ ಪದವು ಮೊದಲ ಮೂರು ಅರ್ಥಗಳಲ್ಲೇ ಬಳಕೆಯಾಗಿದೆ. ಕೆಲವೆಡೆ ಮೊದಲನೆಯ ಮತ್ತು ಎರಡನೆಯ ಅರ್ಥಗಳೆರಡೂ ಸೇರಿಕೊಂಡಿವೆ. ಕೆಲವೆಡೆ ಕೇವಲ ಎರಡನೆಯ ಅರ್ಥದಲ್ಲಿ ಆ ಪದವನ್ನು ಬಳಸಲಾಗಿದೆ ಮತ್ತು ಕೆಲವೆಡೆ ಕೇವಲ ಮೂರನೆಯ ಅರ್ಥದಲ್ಲಿ ಹಾಗೂ ಕೆಲವೆಡೆ ಈ ಮೂರು

ಅರ್ಥಗಳೂ ಆ ಪದದಲ್ಲಿ ಸೇರಿಕೊಂಡಿವೆ.

ಪ್ರಥಮ ಮತ್ತು ದ್ವಿತೀಯ ಅರ್ಥದ ಉದಾಹರಣೆಗಳು ಈ ಕೆಳಗಿನಂತಿವೆ:

ثُمَّ أَرْسَلْنَا مُوسَىٰ وَأَخَاهُ هَارُونَ بِآيَاتِنَا وَسُلْطَانٍ مُّبِينٍ ۝ إِلَىٰ
فِرْعَوْنَ وَمَلَئِهِ فَاسْتَكْبَرُوا وَكَانُوا قَوْمًا عَالِينَ ۝ فَقَالُوا
أَنُؤْمِنُ لِبَشَرَيْنِ مِثْلِنَا وَقَوْمُهُمَا لَنَا عَابِدُونَ (مومنون - ٤٥-٤٧)

ಅನಂತರ ನಾವು ಮೂಸಾ ಮತ್ತು ಅವರ ಸಹೋದರ ಹಾರೂನರನ್ನು ನಮ್ಮ ನಿದರ್ಶನಗಳೊಂದಿಗೆ ಹಾಗೂ ಸುವ್ಯಕ್ತ ಪ್ರಮಾಣ ಸಹಿತ ಫಿರ್‌ಔನ್ ಮತ್ತು ಅವನ ಆಸ್ಥಾನಿಕರ ಕಡೆಗೆ ಕಳುಹಿಸಿದೆವು. ಆದರೆ ಅವರು ಅಹಂಕಾರ ತೋರಿದರು. ಅವರೊಂದು ಉದ್ಧಟ ಜನಾಂಗವಾಗಿದ್ದರು. ಅವರು ಹೀಗೆಂದರು - "ನಾವು ನಮ್ಮಂತೆಯೇ ಇರುವ ಇಬ್ಬರ ಮೇಲೆ ವಿಶ್ವಾಸವಿರಿಸಬೇಕೆ? ಅದರಲ್ಲೂ ಅವರು ನಮ್ಮ ದಾಸ್ಯದಲ್ಲಿರುವ ಜನಾಂಗದವರು."
(23: 45-47)

وَتِلْكَ نِعْمَةٌ تَمُنُّهَا عَلَيَّ أَنْ عَبَّدتَّ بَنِي إِسْرَائِيلَ (الشعراء - ٢٢)

ಮೂಸಾ(ಅ) ಅವರನ್ನು ತಾನು ಬಾಲ್ಯದಿಂದ ಪೋಷಿಸಿದ್ದೇನೆ ಎಂದು ಫಿರ್‌ಔನ್ ಹೇಳಿದಾಗ ಮೂಸಾ(ಅ) ಹೀಗೆ ಹೇಳಿದರು: ಇನ್ನು ನೀನು ನನ್ನ ಮೇಲೆ ಉಪಕಾರ ಭಾರವನ್ನಿರಿಸುತ್ತಿರುವ ವಿಷಯ. ಅದರ ವಾಸ್ತವಿಕತೆಯೇನೆಂದರೆ, ನೀನು ಬನೀ ಇಸ್ರಾಈಲರನ್ನು ಗುಲಾಮರನ್ನಾಗಿ ಮಾಡಿಕೊಂಡಿದ್ದೆ. (26: 22)

ಎರಡು ಆಯತ್‌ಗಳಲ್ಲೂ 'ಇಬಾದತ್' ಎಂದರೆ ದಾಸ್ಯ, ಅನುಸರಣೆ ಮತ್ತು ವಿಧೇಯತೆಯಾಗಿದೆ. ಫಿರ್‌ಔನ್ ಹೇಳಿದನು. ಮೂಸಾ ಮತ್ತು ಹಾರೂನ್‌ರ ಜನಾಂಗ ನಮ್ಮ 'ಆಬಿದ್' ಆಗಿದೆ. ಅಂದರೆ ಅವರು ನಮ್ಮ ದಾಸರು. ನಮ್ಮ ಆಜ್ಞೆಗೆ ಅಧೀನರು. ಹ. ಮೂಸಾ(ಅ) ಹೇಳಿದರು: ನೀನು ಬನೀ ಇಸ್ರಾಈಲರನ್ನು ನಿನ್ನ 'ಅಬ್ದ್' ಅರ್ಥಾತ್: ಅವರನ್ನು ಗುಲಾಮರನ್ನಾಗಿ ಮಾಡಿ ಅವರಿಂದ ಬೇಕಾಬಿಟ್ಟಿ ಸೇವೆ ಮಾಡಿಸಿದ್ದೆ.

يَا أَيُّهَا الَّذِينَ آمَنُوا كُلُوا مِن طَيِّبَاتِ مَا رَزَقْنَاكُمْ وَاشْكُرُوا لِلَّهِ إِن
كُنتُمْ إِيَّاهُ تَعْبُدُونَ (البقرہ - ١٧٢)

ಓ ಸತ್ಯ ವಿಶ್ವಾಸಿಗಳೇ! ನೀವು ನಿಜವಾಗಿಯೂ ಅಲ್ಲಾಹನಿಗೆ ಮಾತ್ರ ಇಬಾದತ್ ಮಾಡುವವರಾಗಿದ್ದರೆ ನಾವು ನಿಮಗೆ ಒದಗಿಸಿರುವ ಶುದ್ಧವಾದ ವಸ್ತುಗಳನ್ನು ನಿರಾತಂಕವಾಗಿ ಉಣ್ಣಿರಿ ಮತ್ತು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿರಿ. (2: 173)

ಇಬಾದತ್:ದಾಸ್ಯ ಮತ್ತು ಅನುಸರಣೆ ಎಂಬ ಅರ್ಥದಲ್ಲಿ

ಈ ಆಯತ್ ಅವತೀರ್ಣಗೊಂಡ ಸಂದರ್ಭ ಯಾವುದೆಂದರೆ ಪ್ರವಾದಿ ಮುಹಮ್ಮದ್(ಸ) ಅವರ ಆಗಮನಕ್ಕಿಂತ ಮುಂಚೆ ಅರೇಬಿಯಾದ ಜನರು ತಮ್ಮ ಧಾರ್ಮಿಕ ನಾಯಕರ ಆದೇಶಗಳನ್ನು ಮತ್ತು ತಮ್ಮ ಪೂರ್ವಜರಲ್ಲಿದ್ದ ಮೂಢನಂಬಿಕೆಗಳನ್ನು ಅನುಸರಿಸುತ್ತಾ ತಿನ್ನುವ- ಕುಡಿಯುವ ವಸ್ತುಗಳ ಬಗೆಗೆ ತರತರದ ಕಟ್ಟುಪಾಡುಗಳನ್ನು ಪಾಲಿಸುತ್ತಿದ್ದರು. ಅವರು ಇಸ್ಲಾಮ್ ಧರ್ಮ ಸ್ವೀಕಾರ ಮಾಡಿದಾಗ ಅಲ್ಲಾಹನು ಅವರಿಗೆ ಈ ರೀತಿ ಆದೇಶಿಸಿದನು. ನೀವು ನಿಜವಾಗಿ ನನ್ನ 'ಇಬಾದತ್' ಮಾಡುವವರಾಗಿದ್ದರೆ ಈ ಎಲ್ಲ ಕಟ್ಟುಪಾಡುಗಳನ್ನು ಕೊನೆಗೊಳಿಸಿ ನಾನು ಧರ್ಮಸಮ್ಮತಗೊಳಿಸಿದ್ದನ್ನು ಧರ್ಮಸಮ್ಮತವೆಂದು ಬಗೆದು ನಿಸ್ಸಂಕೋಚವಾಗಿ ತಿನ್ನಿರಿ, ಕುಡಿಯಿರಿ. ಇದರ ಸ್ಪಷ್ಟ ತಾತ್ಪರ್ಯವೇನೆಂದರೆ ನೀವು ಪುರೋಹಿತರ ಮತ್ತು ಪೂರ್ವಜರ ದಾಸರಲ್ಲ. ನೀವು ನಮ್ಮ ದಾಸರಾಗಿರುವಿರಿ. ನೀವು ನಿಜವಾಗಿ ಅವರ ಅನುಸರಣೆ ಮತ್ತು ವಿಧೇಯತೆಯನ್ನು ತೊರೆದು ನಮ್ಮ ಅನುಸರಣೆ ಮತ್ತು ವಿಧೇಯತೆಯನ್ನು ಸ್ವೀಕರಿಸಿದ್ದರೆ ಧರ್ಮಸಮ್ಮತ-ನಿಷಿದ್ಧಗಳ ಬಗ್ಗೆ ಅವರು ಮಾಡಿದ ನಿಯಮಗಳನ್ನು ಬಿಟ್ಟು ನಮ್ಮ ನಿಯಮಗಳನ್ನು ಪಾಲಿಸಬೇಕು. ಆದ್ದರಿಂದ ಇಲ್ಲಿಯೂ 'ಇಬಾದತ್' ಎಂಬ ಪದವು ದಾಸ್ಯ ಮತ್ತು ಅನುಸರಣೆ ಎಂಬ ಅರ್ಥದಲ್ಲೇ ಬಳಕೆಯಾಗಿದೆ.

قُلْ هَلْ أُنَبِّئُكُمْ بِشَرٍّ مِنْ ذَٰلِكَ مَثُوبَةً عِنْدَ اللَّهِ ۚ مَنْ لَعَنَهُ اللَّهُ
وَغَضِبَ عَلَيْهِ وَجَعَلَ مِنْهُمُ الْقِرَدَةَ وَالْخَنَازِيرَ وَعَبَدَ الطَّاغُوتَ

(المائدة-٦٠)

ಹೇಳಿರಿ, "ಅಲ್ಲಾಹನ ಬಳಿ ಅವರಿಗಿಂತಲೂ ನಿಕೃಷ್ಟವಾದ ಅಂತಿಮ ಗತಿ ಹೊಂದುವವರನ್ನು ತೋರಿಸಿಕೊಡಲೇ? ಅಲ್ಲಾಹನ ಶಾಪ-ಕೋಪಗಳಿಗೊಳಗಾದವರು, ಕಪಿಗಳಾಗಿಯೂ ಹಂದಿಗಳಾಗಿಯೂ ಮಾರ್ಪಡಿಸಲ್ಪಟ್ಟವರು ಮತ್ತು 'ತಾಗೂತ್'ನ ದಾಸ್ಯ ಕೈಗೊಂಡವರು. (5: 60)

وَلَقَدْ بَعَثْنَا فِي كُلِّ أُمَّةٍ رَسُولًا أَنِ اعْبُدُوا اللَّهَ وَاجْتَنِبُوا الطَّاغُوتَ

(النحل-٣٦)

ನಾವು ಪ್ರತಿಯೊಂದು ಸಮುದಾಯದಲ್ಲಿ ಓರ್ವ ಸಂದೇಶವಾಹಕನನ್ನು ಕಳುಹಿಸಿದೆವು ಮತ್ತು ಅಲ್ಲಾಹನ ಇಬಾದತ್ ಮಾಡಿರಿ ಮತ್ತು ತಾಗೂತ್‌ನ ಇಬಾದತ್‌ನಿಂದ ದೂರವಿರಿ ಎಂದು ಅವರ ಮುಖಾಂತರ ಎಚ್ಚರಿಕೆ ನೀಡಿದೆವು. (16: 36)

وَالَّذِينَ اجْتَنَبُوا الطَّاغُوتَ أَنْ يَعْبُدُوهَا وَأَنَابُوا إِلَى اللَّهِ لَهُمُ
الْبُشْرَىٰ (الزمر-١٧)

ಇದಕ್ಕೆ ವ್ಯತಿರಿಕ್ತವಾಗಿ ತಾಗೂತ್‌ನ ಇಬಾದತ್‌ನಿಂದ ಮುಕ್ತರಾಗಿ ಅಲ್ಲಾಹನ ಕಡೆಗೆ ಮರಳುವವರಿಗೆ ಶುಭ ವಾರ್ತೆಯಿದೆ. (39: 17)

ಈ ಮೂರೂ ಆಯತ್‌ಗಳಲ್ಲಿ ತಾಗೂತ್‌ನ ಇಬಾದತ್ ಎಂದರೆ ತಾಗೂತ್‌ನ ದಾಸ್ಯ ಮತ್ತು ಅನುಸರಣೆಯಾಗಿದೆ. ಈ ಮೊದಲು ನಾವು ಸೂಚಿಸಿರುವಂತೆ ಕುರ್‌ಆನ್‌ನ ಪಾರಿಭಾಷಿಕದಲ್ಲಿ 'ತಾಗೂತ್' ಎಂದರೆ ಅಲ್ಲಾಹನ ವಿರುದ್ಧ ಬಂಡಾಯ ಹೂಡಿ ಭೂಮಿಯ ಮೇಲೆ ತನ್ನ ಅಧಿಕಾರ ಚಲಾಯಿಸುವ ಮತ್ತು ಅಲ್ಲಾಹನ ದಾಸರನ್ನು ಬಲವಂತವಾಗಿ, ಆಶೆ-ಆಮಿಷಗಳನ್ನೊಡ್ಡಿ ಅಥವಾ ದಾರಿಗೆಡಿಸುವ ಶಿಕ್ಷಣದ ಮೂಲಕ ತನ್ನ ಆಜ್ಞೆಗೆ ಅಧೀನಗೊಳಿಸುವ ಎಲ್ಲ ಸರಕಾರ, ಆಡಳಿತ ಮತ್ತು ನಾಯಕತ್ವವಾಗಿದೆ. ಇಂತಹ ಸರಕಾರ ಮತ್ತು ನಾಯಕತ್ವದ ಮುಂದೆ ಶರಣಾಗುವುದು ಮತ್ತು ಅದರ ದಾಸ್ಯವನ್ನು ಸ್ವೀಕರಿಸಿ ಅದನ್ನು ಅನುಸರಿಸುವುದು 'ತಾಗೂತ್'ನ ಇಬಾದತ್ ಆಗಿದೆ.

ಇಬಾದತ್ : ಅನುಸರಣೆ ಎಂಬ ಅರ್ಥದಲ್ಲಿ

ಇನ್ನು ಕೇವಲ ಅನುಸರಣೆ ಎಂಬ ಅರ್ಥದಲ್ಲಿ ಇಬಾದತ್ ಎಂಬ ಪದದ ಬಳಕೆಯಾಗಿರುವುದನ್ನು ನೋಡಿರಿ:

أَلَمْ أَعْهَدْ إِلَيْكُمْ يَا بَنِي آدَمَ أَنْ لَا تَعْبُدُوا الشَّيْطَانَ إِنَّهُ لَكُمْ
عَدُوٌّ مُبِينٌ ۔ (یٰس ۔ ٦٠)

'ಆದಮರ ಮಕ್ಕಳೇ! ನೀವು ಶೈತಾನನ ಇಬಾದತ್ ಮಾಡಬೇಡಿರಿ. ಅವನು ನಿಮ್ಮ ಪ್ರತ್ಯಕ್ಷ ಶತ್ರು' ಎಂದು ನಾನು ನಿಮಗೆ ಆದೇಶಿಸಲಿಲ್ಲವೇ? (ಪವಿತ್ರ ಕುರ್‌ಆನ್ 36:60)

ಶೈತಾನನನ್ನು ಲೋಕದಲ್ಲಿ ಯಾರೂ ಪೂಜಿಸುವುದಿಲ್ಲವೆಂಬುದು ವ್ಯಕ್ತ. ನಿಜವಾಗಿ ಎಲ್ಲರೂ ಅವನ ಮೇಲೆ ಶಾಪವನ್ನೇ ಹಾಕುತ್ತಾರೆ. ಆದ್ದರಿಂದ ಕಿಯಾಮತ್ ದಿನದಂದು ಆದ ಮರ ಸಂತತಿಗಳ ಮೇಲೆ ಹೊರಿಸಲಾಗುವ ಆರೋಪ ಪಟ್ಟಿಯು ಅವರು ಶೈತಾನರನ್ನು ಪೂಜಿಸಿದರು ಎಂದಾಗಿರದೆ ಅವರು ಶೈತಾನನು ಹೇಳಿದಂತೆ ನಡೆದರು. ಅವನ ಆದೇಶಗಳನ್ನು ಪಾಲಿಸಿದರು ಮತ್ತು ಅವನು ತೋರಿಸಿದ ದಾರಿಯಲ್ಲಿ ನಡೆಯುತ್ತಾ ಸಾಗಿದರು ಎಂದಾಗಿರುವುದು.

اُحْشُرُوا الَّذِينَ ظَلَمُوا وَأَزْوَاجَهُمْ وَمَا كَانُوا يَعْبُدُونَ ○ مِنْ
دُونِ اللّٰهِ فَاهْدُوهُمْ إِلَىٰ صِرَاطِ الْجَحِيمِ .... وَأَقْبَلَ بَعْضُهُمْ
عَلَىٰ بَعْضٍ يَتَسَاءَلُونَ ○ قَالُوا إِنَّكُمْ كُنْتُمْ تَأْتُونَنَا عَنِ الْيَمِينِ ○
قَالُوا بَلْ لَمْ تَكُونُوا مُؤْمِنِينَ ○ وَمَا كَانَ لَنَا عَلَيْكُمْ مِنْ
سُلْطَانٍ بَلْ كُنْتُمْ قَوْمًا طَاغِينَ ○ (الصّٰفّٰت ۔ ٢٢ ۔ ٣٠)

(ಕಿಯಾಮತ್ ಸಂಭವಿಸಿದಾಗ ಅಲ್ಲಾಹನು ಹೀಗೆ ಅಪ್ಪಣೆ ನೀಡುವನು): ಎಲ್ಲಾ ಅಕ್ರಮಿಗಳನ್ನೂ ಅವರ ಜತೆಗಾರರನ್ನೂ ಅವರು ಅಲ್ಲಾಹನನ್ನು ಬಿಟ್ಟು ಆರಾಧಿಸುತ್ತಿದ್ದ ಆರಾಧ್ಯರನ್ನು ಸುತ್ತು ವರಿದು ತನ್ನಿರಿ. ಅನಂತರ ಅವರೆಲ್ಲರಿಗೂ ನರಕದ ದಾರಿಯನ್ನು ತೋರಿಸಿರಿ."

... ಆ ಬಳಿಕ ಇವರು ಪರಸ್ಪರರ ಕಡೆಗೆ ತಿರುಗಿ ಪ್ರಶ್ನಿಸತೊಡಗುವರು. (ಅನುಯಾಯಿಗಳು ತಮ್ಮ ನಾಯಕರೊಡನೆ) ನೀವು ನಮ್ಮ ಬಳಿಗೆ ಬಲಬದಿಯಿಂದ ಬರುತ್ತಿದ್ದಿರಿ ಎನ್ನುವರು. ಆಗ ಅವರು ಹೇಳುವರು "ಅಲ್ಲ, ನಿಜವಾಗಿ ಸ್ವತಃ ನೀವೇ ಸತ್ಯವಿಶ್ವಾಸ ಸ್ವೀಕರಿಸುವವರಾಗಿರಲಿಲ್ಲ. ನಿಮ್ಮ ಮೇಲೆ ನಮ್ಮ ಪ್ರಭುತ್ವವೇನೂ ಇರಲಿಲ್ಲ. ಸ್ವತಃ ನೀವೇ ವಿದ್ರೋಹಿಗಳಾಗಿದ್ದಿರಿ."

(ಪವಿತ್ರ ಕುರ್‌ಆನ್ 37: 22-30)

ಈ ಆಯತ್‌ನಲ್ಲಿ 'ಆಬಿದ್' ಮತ್ತು 'ಮಅ್‌ಬೂದ್'ಗಳ ಮಧ್ಯೆ ನಡೆಯುವ ಸಂಭಾಷಣೆಯನ್ನು ಉದ್ಧರಿಸಲಾಗಿದೆ. ಇದನ್ನು ಅವಲೋಕಿಸುವಾಗ ಸ್ಪಷ್ಟವಾಗಿ ತಿಳಿದು ಬರುವುದೇನೆಂದರೆ ಇಲ್ಲಿ 'ಮಅ್‌ಬೂದ್' ಎಂದಿರುವುದು ಜನರು ಪೂಜಿಸುವ ಮೂರ್ತಿ ಅಥವಾ ದೇವತೆಗಳನ್ನಲ್ಲ. ಇಲ್ಲಿ ಮಅ್‌ಬೂದ್ ಎಂದಿರುವುದು ಜನರನ್ನು ತಮ್ಮ ವಂಚನೆಯ ಜಾಲ ದಲ್ಲಿ ಸಿಲುಕಿಸಿಟ್ಟಿರುವ ಪೂಜಾರಿಗಳು, ಅರ್ಚಕರು, ಪುರೋಹಿತರು ಮತ್ತು ಮಠಾಧೀಶರನ್ನಾಗಿದೆ. ಅವರು ಸುಧಾರಣೆಯ ಮತ್ತು ಹಿತಾಕಾಂಕ್ಷೆಯ ಡಂಗುರ ಸಾರಿ ಕೆಡುಕು ಮತ್ತು ಕ್ಷೋಭೆಯನ್ನು ಹರಡಿದರು. ಇಂತಹ ವ್ಯಕ್ತಿಗಳನ್ನು ಅಂಧವಾಗಿ ಅನುಸರಿಸುವುದು ಮತ್ತು ಅವರ ಆದೇಶಗಳನ್ನು ಚಾಚೂ ತಪ್ಪದೆ ಪಾಲಿಸುವುದನ್ನು ಇಲ್ಲಿ 'ಇಬಾದತ್' ಎನ್ನಲಾಗಿದೆ.

اِتَّخَذُوْٓا اَحْبَارَهُمْ وَرُهْبَانَهُمْ اَرْبَابًا مِّنْ دُوْنِ اللّٰهِ وَالْمَسِيْحَ
ابْنَ مَرْيَمَ وَمَآ اُمِرُوْٓا اِلَّا لِيَعْبُدُوْٓا اِلٰهًا وَّاحِدًا - (التوبة - ٣١)

ಅವರು ಅಲ್ಲಾಹನ ಹೊರತು ತಮ್ಮ ವಿದ್ವಾಂಸರನ್ನೂ ಸಂತರನ್ನೂ ತಮ್ಮ ಪ್ರಭುಗಳಾಗಿ ಮಾಡಿಕೊಂಡಿರುತ್ತಾರೆ. ಇದೇ ರೀತಿಯಲ್ಲಿ ಮರ್ಯಮರ ಪುತ್ರ ಮಸೀಹರನ್ನೂ (ಪ್ರಭುವಾಗಿ ಮಾಡಿಕೊಂಡಿದ್ದಾರೆ) ವಸ್ತುತಃ ಅವರಿಗೆ ಏಕದೇವನ ಹೊರತು ಇನ್ನಾರದೇ ದಾಸ್ಯ-ಆರಾಧನೆಯನ್ನು ಮಾಡಲು ಅಪ್ಪಣೆ ಕೊಡಲಾಗಿಲ್ಲ. (ಪವಿತ್ರ ಕುರ್‌ಆನ್ 9:31)

ಇಲ್ಲಿ ವಿದ್ವಾಂಸರನ್ನೂ ಸಂತರನ್ನೂ ರಬ್ಬ್(ಪ್ರಭು)ಗಳಾಗಿ ಮಾಡಿ ಅವರ ಇಬಾದತ್ ಮಾಡುವುದೆಂದರೆ ಅವರನ್ನು ಸ್ವತಂತ್ರ ಕಾನೂನು ನಿರ್ಮಾತೃ ಎಂದು ಬಗೆದು ಅಲ್ಲಾಹ್ ಮತ್ತು ಪ್ರವಾದಿಯ ಅಪ್ಪಣೆ ಇಲ್ಲದೆ ಅವರ ವಿಧಿ-ನಿಷೇಧಗಳನ್ನು ಅನುಸರಿಸುವುದಾಗಿದೆ. ಪ್ರಾಮಾಣಿಕ ಹದೀಸ್ ವರದಿಗಳ ಪ್ರಕಾರ ಪ್ರವಾದಿ(ಸ) ಅವರು ಈ ಆಯತನ್ನು ಹೀಗೆಯೇ ವ್ಯಾಖ್ಯಾನಿಸಿರುವರು. ನಾವು ನಮ್ಮ ವಿದ್ವಾಂಸರನ್ನೂ ಸಂತರನ್ನೂ ಎಂದೂ ಆರಾಧಿಸಿರಲಿಲ್ಲ ಎಂದು ಪ್ರವಾದಿ ವರ್ಯರಲ್ಲಿ(ಸ) ಹೇಳಲಾದಾಗ ಪ್ರವಾದಿ(ಸ) ಈ ರೀತಿ ಉತ್ತರಿಸಿದರು: "ಅವರು ಹಲಾಲ್ (ಧರ್ಮಸಮ್ಮತ) ಎಂದು ಹೇಳಿದ್ದನ್ನು ನೀವು ಧರ್ಮಸಮ್ಮತವೆಂದು ಪರಿಗಣಿಸಲಿಲ್ಲವೇ? ಮತ್ತು ಅವರು ನಿಷಿದ್ಧವೆಂದು ಸಾರಿದ್ದನ್ನು ನೀವು ನಿಷಿದ್ಧವೆಂದು ಬಗೆದಿರಲಿಲ್ಲವೇ?"

ಇಬಾದತ್: ಆರಾಧನೆಯೆಂಬ ಅರ್ಥದಲ್ಲಿ

ಈಗ ಮೂರನೆ ಅರ್ಥವನ್ನು ನೋಡಿ. ಈ ಬಗ್ಗೆ ಒಂದು ವಿಷಯವನ್ನು ಗಮನದಲ್ಲಿರಿಸಬೇಕು. ಕುರ್‌ಆನ್‌ನ ಪ್ರಕಾರ ಇಬಾದತ್ ಆರಾಧನೆಯೆಂಬರ್ಥದಲ್ಲಿ ಬರುವಾಗ ಅದರಲ್ಲಿ ಎರಡು ವಿಷಯಗಳು ಸೇರಿರುತ್ತವೆ.

(1) ಸಾಮಾನ್ಯವಾಗಿ ಆರಾಧನೆಗಾಗಿ ಮಾಡುವಂತಹ ಸುಜೂದ್ (ಸಾಷ್ಟಾಂಗ) ರುಕೂಲ್ (ಬಾಗುವಿಕೆ) ಕಿಯಾಮ್ (ಕೈ ಕಟ್ಟಿ ನಿಲ್ಲುವುದು) ತವಾಫ್ (ಪ್ರದಕ್ಷಿಣೆ) ಮಾಡುವುದು, ಪಾದ ಚುಂಬನ, ಹರಕೆ-ಕಾಣಿಕೆ ಸಲ್ಲಿಸುವುದು, ಪ್ರಾಣಿಬಲಿ ನೀಡುವುದು ಇತ್ಯಾದಿ. ಇದನ್ನು ಯಾರಿಗಾಗಿ ಮಾಡಲಾಗುತ್ತದೋ ಅವನನ್ನು ನೈಜ ಆರಾಧ್ಯನೆಂದು ಬಗೆದು ಮಾಡಿರಲಿ ಅಥವಾ ನೈಜ ಆರಾಧ್ಯನ ಸಾಮೀಪ್ಯ ಗಳಿಸಲಿಕ್ಕಾಗಿ ಮತ್ತು ಅವನ ಬಳಿ ಶಿಫಾರಸ್ಸು ಮಾಡಿಸಲಿಕ್ಕಾಗಿ ಹಾಗೆ ಮಾಡಿರಲಿ ಅಥವಾ ನೈಜ ಆರಾಧ್ಯನ ಕೈಕೆಳಗಿರುವ ಮತ್ತು ದೇವತ್ವದ ವ್ಯವಸ್ಥೆಯಲ್ಲಿ ಭಾಗೀದಾರನಾಗಿರುವನೆಂದು ಬಗೆದು ಮಾಡಿರಲಿ.

(2) ಯಾರನ್ನಾದರೂ ಕಾರ್ಯ-ಕಾರಣಗಳ ಕರ್ತೃ ಎಂದು ಭಾವಿಸಿ ತಮ್ಮ ಬೇಡಿಕೆಗಳನ್ನು ಅವನಿಂದ ಯಾಚಿಸುವುದು. ತಮ್ಮ ಸಂಕಷ್ಟ ಮತ್ತು ವಿಪತ್ತುಗಳಲ್ಲಿ ಅವನನ್ನು ಸಹಾಯಕ್ಕಾಗಿ ಕೂಗಿ ಕರೆಯುವುದು. ಅಪಾಯಗಳು ಮತ್ತು ನಷ್ಟಗಳಿಂದ ಪಾರಾಗಲಿಕ್ಕಾಗಿ ಅವನ ಅಭಯ ಯಾಚಿಸುವುದು.

ಈ ಎರಡೂ ವಿಧದ ಕೃತ್ಯಗಳು ಕುರ್‌ಆನ್‌ನ ದೃಷ್ಟಿಯಲ್ಲಿ ಸಮಾನ ಆರಾಧನೆಗಲಾಗಿವೆ. ಉದಾ:

قُلْ إِنِّي نُهِيتُ أَنْ أَعْبُدَ الَّذِينَ تَدْعُونَ مِنْ دُونِ اللَّهِ لَمَّا جَاءَنِيَ
الْبَيِّنَاتُ مِنْ رَبِّي (المؤمن - ٦٦)

ಸಂದೇಶವಾಹಕರೇ! ಇವರೊಡನೆ ಹೇಳಿರಿ- "ನೀವು ಅಲ್ಲಾಹನನ್ನು ಬಿಟ್ಟು ಯಾರನ್ನೆಲ್ಲಾ ಪ್ರಾರ್ಥಿಸುತ್ತಿರುವಿರೋ ಅವರ ಇಬಾದತ್ ಮಾಡುವುದರಿಂದ ನನ್ನನ್ನು ತಡೆಯಲಾಗಿದೆ. ನನ್ನ ಬಳಿಗೆ ನನ್ನ ಪ್ರಭುವಿನ ಕಡೆಯಿಂದ ಸುಸ್ಪಷ್ಟ ನಿದರ್ಶನಗಳು ಬಂದಿರುವಾಗ (ನಾನು ಈ ಕಾರ್ಯವೆಸಗುವುದಾದರೂ ಹೇಗೆ?) (ಪವಿತ್ರ ಕುರ್‌ಆನ್ 40:66)

وَأَعْتَزِلُكُمْ وَمَا تَدْعُونَ مِنْ دُونِ اللَّهِ وَأَدْعُو رَبِّي .... فَلَمَّا
اعْتَزَلَهُمْ وَمَا يَعْبُدُونَ مِنْ دُونِ اللَّهِ وَهَبْنَا لَهُ إِسْحَاقَ (مريم - ٤٨-٤٩)

(ಇಬ್ರಾಹೀಮ್ ಹೇಳಿದರು) ನಾನು ತಮ್ಮನ್ನೂ ತಾವೆಲ್ಲರೂ ಅಲ್ಲಾಹನನ್ನು ಬಿಟ್ಟು ಕೂಗಿ ಪ್ರಾರ್ಥಿಸುತ್ತಿರುವವುಗಳನ್ನೂ ಬಿಟ್ಟಗಲಿ ಹೋಗುತ್ತೇನೆ. ನಾನಂತೂ ನನ್ನ ಪ್ರಭುವನ್ನು ಮಾತ್ರ ಪ್ರಾರ್ಥಿಸುವೆನು.... ಆ ಪ್ರಕಾರ ಅವರು (ಇಬ್ರಾಹೀಮರು) ಅವರನ್ನೂ ಅಲ್ಲಾಹನ ಹೊರತು ಅವರು ಮಾಡಿದ್ದ ಆರಾಧ್ಯರನ್ನೂ ಬಿಟ್ಟಗಲಿದಾಗ ನಾವು ಅವರಿಗೆ ಇಸ್‌ಹಾಕ್ ಮತ್ತು ಯಾಕೂಬರಂತಹ ಸಂತತಿಯನ್ನು ದಯಪಾಲಿಸಿದೆವು. (ಪವಿತ್ರ ಕುರ್‌ಆನ್ 19:48-49)

وَمَنْ اَضَلُّ مِمَّنْ يَّدْعُوْا مِنْ دُوْنِ اللّٰهِ مَنْ لَّا يَسْتَجِيْبُ لَهٗۤ اِلٰى
يَوْمِ الْقِيٰمَةِ وَهُمْ عَنْ دُعَآئِهِمْ غٰفِلُوْنَ ۝ وَاِذَا حُشِرَ النَّاسُ كَانُوْا
لَهُمْ اَعْدَآءً وَّكَانُوْا بِعِبَادَتِهِمْ كٰفِرِيْنَ ـ (احقاف ـ ٥-٦)

ಅಲ್ಲಾಹನನ್ನು ಬಿಟ್ಟು, ಪುನರುತ್ಥಾನ ದಿನದವರೆಗೂ ಅವನಿಗೆ ಉತ್ತರ ಕೊಡಲಾಗದಂತಹವರನ್ನು ಪ್ರಾರ್ಥಿಸುವವನಿಗಿಂತಲೂ ಹೆಚ್ಚು ದಾರಿಗೆಟ್ಟವನು ಇನ್ನಾರಿರಬಹುದು? ಮಾತ್ರವಲ್ಲ, ಅವರಿಗಂತೂ ಪ್ರಾರ್ಥಿಸುವವರು ತಮ್ಮನ್ನು ಪ್ರಾರ್ಥಿಸುತ್ತಿದ್ದಾರೆಂಬ ಅರಿವು ಕೂಡಾ ಇಲ್ಲ. ಸಕಲ ಮಾನವರೂ ಒಟ್ಟುಗೂಡಿಸಲ್ಪಡುವಂದು ಅವರು ತಮ್ಮನ್ನು ಪ್ರಾರ್ಥಿಸುತ್ತಿದ್ದವರ ಶತ್ರುಗಳಾಗಿ ಬಿಡುವರು ಮತ್ತು ಅವರು ತಮ್ಮನ್ನು ಆರಾಧಿಸುತ್ತಿದ್ದರೆಂಬುದನ್ನೇ ನಿರಾಕರಿಸಿ ಬಿಡುವರು.[1] (ಪವಿತ್ರ ಕುರ್‌ಆನ್ 46: 5-6)

ಈ ಮೂರೂ ಆಯತ್‌ಗಳಲ್ಲಿ 'ಇಬಾದತ್' ಎಂದರೆ ಪ್ರಾರ್ಥನೆ ಮಾಡುವುದು ಮತ್ತು ಸಹಾಯಕ್ಕೆ ಕರೆಯುವುದಾಗಿದೆ ಎಂಬುದನ್ನೂ ಕುರ್‌ಆನ್ ಸ್ವಯಂ ಸ್ಪಷ್ಟಪಡಿಸಿದೆ.

بَلْ كَانُوْا يَعْبُدُوْنَ الْجِنَّ اَكْثَرُهُمْ بِهِمْ مُّؤْمِنُوْنَ ـ (سبا ـ ٤١)

ವಾಸ್ತವದಲ್ಲಿ ಇವರು ಜಿನ್ನ್‌ಗಳನ್ನು ಆರಾಧಿಸುತ್ತಿದ್ದರೇ ಹೊರತು ನಮ್ಮನ್ನಲ್ಲ.
(ಪವಿತ್ರ ಕುರ್‌ಆನ್ 34:41)

ಇಲ್ಲಿ ಜಿನ್ನ್‌ಗಳನ್ನು ಆರಾಧಿಸುವುದು ಮತ್ತು ಅವರ ಮೇಲೆ ವಿಶ್ವಾಸವಿಡುವುದು ಎಂಬುದರ ತಾತ್ಪರ್ಯವೇನೆಂಬುದನ್ನು ಸೂರಃ ಅಲ್ ಜಿನ್ನ್‌ನ ಈ ಆಯತ್ ವಿವರಿಸುತ್ತದೆ:

وَّاَنَّهٗ كَانَ رِجَالٌ مِّنَ الْاِنْسِ يَعُوْذُوْنَ بِرِجَالٍ مِّنَ الْجِنِّ (الجن ـ ٦)

---

1. ಈ ದೇವಚರರನ್ನೇ ಇತರ ಬಹುದೇವಾರಾಧಕ ಜನಾಂಗಳಲ್ಲಿ ದೇವತೆಗಳು (Gods) ಎಂದು ಸಾರಲಾಗಿದೆ.

ಅಲ್ಲದೆ ಮಾನವರ ಪೈಕಿ ಕೆಲವರು ಜಿನ್ನ್‌ಗಳ ಪೈಕಿ ಕೆಲವರ ಅಭಯ ಯಾಚಿಸುತ್ತಿದ್ದರು.
(ಪವಿತ್ರ ಕುರ್‌ಆನ್ 72:6)

ಜಿನ್ನ್‌ಗಳ ಇಬಾದತ್ ಎಂದರೆ ಅವರ ಅಭಯ ಯಾಚಿಸುವುದು ಹಾಗೂ ಅಪಾಯ-ನಷ್ಟಗಳ ವಿರುದ್ಧ ಅವರ ಸಂರಕ್ಷಣೆಯನ್ನು ಅರಸುವುದು, ಮತ್ತು ಅವರ ಮೇಲೆ ವಿಶ್ವಾಸವಿರಿಸುವುದೆಂದರೆ ಅವರು ಅಭಯ ನೀಡಲು ಮತ್ತು ಸಂರಕ್ಷಣೆ ಒದಗಿಸಲು ಶಕ್ತರು ಎಂದು ನಂಬುವುದಾಗಿದೆ ಎಂದು ಇದರಿಂದ ತಿಳಿದು ಬರುತ್ತದೆ.

ನಿಮ್ಮ ಪ್ರಭು ಇವರನ್ನೂ ಇಂದು ಇವರು ಅಲ್ಲಾಹನನ್ನು ಬಿಟ್ಟು ಪೂಜಿಸುತ್ತಿರುವ ಇವರ ಆರಾಧ್ಯರನ್ನೂ ಸುತ್ತುಗಟ್ಟಿ ತರುವ ದಿನ ಅದೇ ಆಗಿರುವುದು. ತರುವಾಯ ಅವರೊಡನೆ

وَيَوْمَ يَحْشُرُهُمْ وَمَا يَعْبُدُونَ مِنْ دُونِ اللّٰهِ فَيَقُولُ ءَأَنْتُمْ
أَضْلَلْتُمْ عِبَادِي هٰٓؤُلَآءِ أَمْ هُمْ ضَلُّوا السَّبِيلَ ۝ قَالُوا سُبْحٰنَكَ
مَا كَانَ يَنْبَغِي لَنَآ أَنْ نَتَّخِذَ مِنْ دُونِكَ مِنْ أَوْلِيَآءَ. (الفرقان - ١٧،١٨)

"ನಮ್ಮ ಈ ದಾಸರನ್ನು ಪಥಭ್ರಷ್ಟಗೊಳಿಸಿದವರು ನೀವೋ ಅಥವಾ ಇವರು ಸ್ವತಃ ಪಥಭ್ರಷ್ಟರಾಗಿದ್ದರೋ" ಎಂದು ಅವನು ಕೇಳುವನು. ಆಗ ಅವರು, 'ನೀನು ಪರಮ ಪಾವನನು. ನಿನ್ನ ಹೊರತು ಇತರರನ್ನು ನಮ್ಮ ರಕ್ಷಕ ಮಿತ್ರರಾಗಿ ಮಾಡುವುದು ನಮಗೆ ಭೂಷಣವಾಗಿರಲಿಲ್ಲ' ಎನ್ನುವರು. (ಪವಿತ್ರ ಕುರ್‌ಆನ್ 25:17-18)

ಇಲ್ಲಿ ಮಾತಿನ ಶೈಲಿಯಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ — ಆರಾಧ್ಯರೆಂದು ಹೇಳಿರುವುದು ಔಲಿಯಾ (ಸಂತರು), ಪ್ರವಾದಿಗಳು ಮತ್ತು ಸಜ್ಜನರ ಕುರಿತಾಗಿದೆ. ಅವರ ಇಬಾದತ್ ಮಾಡುವುದೆಂದರೆ ಅವರನ್ನು ದಾಸ್ಯದ ಗುಣಗಳಿಂದ ಉನ್ನತರು ಮತ್ತು ದೈವಿಕ ಗುಣಗಳನ್ನು ಹೊಂದಿದವರು ಎಂದು ಭಾವಿಸುವುದು. ಅವರು ಪರೋಕ್ಷವಾಗಿ ನೆರವಾಗಬಲ್ಲರು. ಸಂಕಷ್ಟ ನಿವಾರಣೆ ಮತ್ತು ಇಷ್ಟಾರ್ಥ ಸಿದ್ಧಿಯ ಸಾಮರ್ಥ್ಯ ಉಳ್ಳವರೆಂದು ಪರಿಗಣಿಸುವುದು. ಅವರ ಗೌರವಾರ್ಥವಾಗಿ ಆರಾಧನೆಯಂತಹ ವಿಧಿಗಳನ್ನು ನೆರವೇರಿಸುವುದಾಗಿದೆ.

ಅವನು ಸಕಲ ಮಾನವರನ್ನು ಒಟ್ಟು ಗೂಡಿಸುವ ದಿನ ದೇವಚರರೊಡನೆ-

وَيَوْمَ يَحْشُرُهُمْ جَمِيعًا ثُمَّ يَقُولُ لِلْمَلٰٓئِكَةِ أَهٰٓؤُلَآءِ إِيَّاكُمْ
كَانُوا يَعْبُدُونَ ۝ قَالُوا سُبْحٰنَكَ أَنْتَ وَلِيُّنَا مِنْ دُونِهِمْ (سبا ٤٠،٤١)

"ಇವರು ನಿಮ್ಮ ಆರಾಧನೆಯನ್ನೇ ಮಾಡುತ್ತಿದ್ದರೇ?" ಎಂದು ಕೇಳುವನು. ಆಗ ಅವರು "ನೀನು ಪರಮ ಪಾವನನು. ನಮ್ಮ ಸಂಬಂಧವು ನಿನ್ನೊಂದಿಗಿದೆ-ಇವರೊಂದಿಗಲ್ಲ." ಎಂದು ಉತ್ತರ ಕೊಡುವರು (ಪವಿತ್ರ ಕುರ್‌ಆನ್ 34:40-41)

ಇಲ್ಲಿ ದೇವಚರರ ಇಬಾದತ್ ಎಂದರೆ ಅವರ ಪೀಠ, ಸ್ಥಾನ ಮತ್ತು ಕಾಲ್ಪನಿಕ ವಿಗ್ರಹಗಳನ್ನು ಮಾಡಿ ನಡೆಸುವ ಅವರ ಆರಾಧನೆಯಾಗಿದೆ. ಇಲ್ಲಿ ಆರಾಧನೆಯ ಉದ್ದೇಶ ಅವರನ್ನು ಸಂತುಷ್ಟಗೊಳಿಸಿ ಅವರ ಅನುಗ್ರಹಗಳು ತನ್ನ ಮೇಲೆ ವರ್ಷಿಸುವಂತೆ ಮಾಡುವುದು ಮತ್ತು ತನ್ನ ಲೌಕಿಕ ವ್ಯವಹಾರಗಳಲ್ಲಿ ಅವರಿಂದ ಸಹಾಯ ಯಾಚಿಸುವುದಾಗಿದೆ.

وَيَعْبُدُونَ مِنْ دُونِ اللّٰهِ مَا لَا يَضُرُّهُمْ وَلَا يَنْفَعُهُمْ وَيَقُولُونَ
هٰؤُلَاءِ شُفَعَاؤُنَا عِنْدَ اللّٰهِ - (يونس-١٨)

ಅವರು ಅಲ್ಲಾಹನನ್ನು ಬಿಟ್ಟು, ಅವರಿಗೆ ನಷ್ಟವನ್ನಾಗಲಿ ಲಾಭವನ್ನಾಗಲಿ ಉಂಟು ಮಾಡದಂಥವರನ್ನು ಆರಾಧಿಸುತ್ತಾರೆ ಮತ್ತು 'ಇವರು ಅಲ್ಲಾಹನ ಬಳಿ ನಮ್ಮ ಶಿಫಾರಸ್ಸು ಮಾಡುವವರು' ಎನ್ನುತ್ತಾರೆ. (ಪವಿತ್ರ ಕುರ್‌ಆನ್ 10:18)

وَالَّذِينَ اتَّخَذُوا مِنْ دُونِهٖٓ أَوْلِيَاءَ مَا نَعْبُدُهُمْ إِلَّا لِيُقَرِّبُونَآ
إِلَى اللّٰهِ زُلْفٰى - (الزمر-٣)

ಇನ್ನು ಅವನ ಹೊರತು ಇತರರನ್ನು ರಕ್ಷಕ ಮಿತ್ರರಾಗಿ ಮಾಡಿಕೊಂಡವರ ವಿಷಯ- "ಅವರು ನಮ್ಮನ್ನು ಅಲ್ಲಾಹನಿಗೆ ನಿಕಟಗೊಳಿಸಲಿಕ್ಕಾಗಿ ಮಾತ್ರ ನಾವು ಅವರ ಆರಾಧನೆ ಮಾಡುತ್ತೇವೆ" ಎಂದು ಅವರು ವಾದಿಸುತ್ತಾರೆ. (39: 3)

ಇಲ್ಲಿಯೂ ಇಬಾದತ್‌ನ ಅರ್ಥ ಆರಾಧನೆಯೇ ಆಗಿದೆ. ಆರಾಧನೆ ಏಕೆ ಮಾಡುತ್ತಾರೆ ಎಂಬುದನ್ನು ಕೂಡಾ ಈ ಆಯತ್‌ಗಳಲ್ಲಿ ಸ್ಪಷ್ಟಪಡಿಸಲಾಗಿದೆ.

ಇಬಾದತ್ : ದಾಸ್ಯ- ಅನುಸರಣೆ ಮತ್ತು ಆರಾಧನೆ ಎಂಬರ್ಥದಲ್ಲಿ

ಮೇಲಿನ ಉದಾಹರಣೆಗಳಿಂದ ಸ್ಪಷ್ಟವಾಗುವುದೇನೆಂದರೆ ಕುರ್‌ಆನ್‌ನಲ್ಲಿ ಇಬಾದತ್ ಎಂಬ ಪದವು ಕೆಲವೆಡೆ ದಾಸ್ಯ ಮತ್ತು ಅನುಸರಣೆಯ ಅರ್ಥದಲ್ಲಿ ಬಳಕೆಯಾಗಿದೆ. ಕೆಲವೆಡೆ ಕೇವಲ ಅನುಸರಣೆಯ ಅರ್ಥದಲ್ಲಿ ಮತ್ತು ಕೆಲವೆಡೆ ಕೇವಲ ಆರಾಧನೆಯ ಅರ್ಥದಲ್ಲಿ ಬಳಕೆ ಯಾಗಿದೆ. ಇನ್ನು ನಾವು ಈ ಮೂರೂ ಅರ್ಥಗಳನ್ನು ಸಮಗ್ರವಾಗಿ ಒಳಗೊಂಡ ಅರ್ಥದಲ್ಲಿ ಇಬಾದತ್ ಎಂಬ ಪದದ ಬಳಕೆಯಾಗಿರುವುದರ ಉದಾಹರಣೆಗಳನ್ನು ಮುಂದಿಡುವೆವು. ಅದ ಕ್ಕಿಂತ ಮೊದಲು ಒಂದು ವಿಷಯವನ್ನು ಸರಿಯಾಗಿ ತಿಳಿದಿರಬೇಕಾದುದು ಅಗತ್ಯ.

ಮೇಲೆ ವಿವರಿಸಲಾಗಿರುವ ಉದಾಹರಣೆಗಳಲ್ಲಿ ಅಲ್ಲಾಹನ ಹೊರತು ಇತರರ 'ಇಬಾದತ್'ನ ಪ್ರಸ್ತಾಪವಿದೆ. 'ಇಬಾದತ್' ದಾಸ್ಯ ಮತ್ತು ಅನುಸರಣೆಯ ಅರ್ಥದಲ್ಲಿ ಬಳಕೆಯಾಗಿರುವ ಕಡೆ

ಮಲ್‌ಬೂದ್ (ಇಬಾದತ್ ಮಾಡಲ್ಪಡುವವರು) ಒಂದೋ ಶೈತಾನ್ ಆಗಿರುವನು ಇಲ್ಲವೇ ತಾಗೂತ್ ಆಗಿ ಅಲ್ಲಾಹನ ದಾಸರನ್ನು ಅಲ್ಲಾಹನ ಹೊರತು ತಮ್ಮ ದಾಸ್ಯ-ಅನುಸರಣೆ ಮಾಡಿಸುವ ವಿದ್ರೋಹಿ ಮನುಷ್ಯರಾಗಿರುವರು ಅಥವಾ ಅಲ್ಲಾಹನ ಗ್ರಂಥದಿಂದ ಮುಕ್ತರಾಗಿ ತಮ್ಮ ಸ್ವಯಂ ಕೃತ ಪದ್ಧತಿಯಂತೆ ಜನರನ್ನು ಮುನ್ನಡೆಸಿದಂತಹ ನಾಯಕರು ಮತ್ತು ಮುಖಂಡರಾಗಿರುವರು. 'ಇಬಾದತ್' ಆರಾಧನೆ ಎಂಬರ್ಥದಲ್ಲಿ ಬಳಕೆಯಾಗಿರುವ ಕಡೆ ಮಲ್‌ಬೂದ್ ಒಂದೋ ಸಂತರು, ಪ್ರವಾದಿಗಳು ಮತ್ತು ಸಜ್ಜನರಾಗಿರುವರು. ಅವರನ್ನು ಅವರ ಬೋಧನೆಗಳಿಗೆ ವಿರುದ್ಧವಾಗಿ 'ಮಲ್‌ಬೂದ್' ಆಗಿ ಮಾಡಲಾಗಿತ್ತು. ಇಲ್ಲವೇ ದೇವ ಚರರು ಮತ್ತು ಜಿನ್ನ್‌ಗಳಾಗಿರುವರು. ಅವರನ್ನು ಅಭೌತಿಕ ಪ್ರಭುತ್ವದಲ್ಲಿ ಅಲ್ಲಾಹನ ಸಹಭಾಗಿಗಳು ಎಂದು ತಪ್ಪಾಗಿ ಕಲ್ಪಿಸಿಕೊಳ್ಳಲಾಗಿತ್ತು ಅಥವಾ ಕಾಲ್ಪನಿಕ ಶಕ್ತಿಗಳ ವಿಗ್ರಹ ಮತ್ತು ಚಿತ್ರಗಳಾಗಿವೆ. ಅವುಗಳು ಕೇವಲ ಪೈಶಾಚಿಕ ವಂಚನೆಯಿಂದಾಗಿ ಆರಾಧನೆಯ ಕೇಂದ್ರಗಳಾಗಿವೆ. ಈ ಎಲ್ಲ ವಿಧದ ಮಲ್‌ಬೂದ್‌ಗಳನ್ನು ಕುರ್‌ಆನ್ ಮಿಥ್ಯವೆಂದು ಸಾರುತ್ತದೆ: ಅವುಗಳ 'ಇಬಾದತ್' ಮಾಡುವುದನ್ನು ತಪ್ಪೆನ್ನುತ್ತದೆ. ಅದು ಅವರ ದಾಸ್ಯವಾಗಿದ್ದರೂ ಅನುಸರಣೆಯಾಗಿದ್ದರೂ ಆರಾಧನೆಯಾಗಿದ್ದರೂ ಸರಿಯೆ. ನೀವು 'ಇಬಾದತ್' ಮಾಡುತ್ತಿರುವ ನಿಮ್ಮ ಈ ಎಲ್ಲ ಮಲ್‌ಬೂದ್‌ಗಳು ಅಲ್ಲಾಹನ ದಾಸರಾಗಿದ್ದಾರೆ. ಅವರಿಗೆ 'ಇಬಾದತ್' ಮಾಡಲ್ಪಡುವ ಅರ್ಹತೆಯಿಲ್ಲ. ಅವರ ಇಬಾದತ್‌ನ ಮೂಲಕ ನಿಮಗೆ ನಿರಾಶೆ ಮತ್ತು ನಿಂದ್ಯತೆಯ ಹೊರತು ಇನ್ನೇನೂ ದೊರೆಯದು. ನಿಜವಾಗಿ ಅವರ ಮತ್ತು ಸಕಲ ವಿಶ್ವದ ಒಡೆಯ ಅಲ್ಲಾಹನಾಗಿದ್ದಾನೆ. ಅವನ ಕೈಯಲ್ಲೇ ಎಲ್ಲ ಅಧಿಕಾರಗಳೂ ಕೇಂದ್ರೀಕೃತವಾಗಿವೆ. ಆದ್ದರಿಂದ 'ಇಬಾದತ್'ಗೆ ಅರ್ಹನು ಅಲ್ಲಾಹನ ಹೊರತು ಯಾರೂ ಇಲ್ಲ ಎಂದು ಕುರ್‌ಆನ್ ಸಾರುತ್ತದೆ.

إِنَّ الَّذِينَ تَدْعُونَ مِن دُونِ اللَّهِ عِبَادٌ أَمْثَالُكُمْ فَادْعُوهُمْ
فَلْيَسْتَجِيبُوا لَكُمْ إِن كُنتُمْ صَادِقِينَ .... وَالَّذِينَ تَدْعُونَ مِن
دُونِهِ لَا يَسْتَطِيعُونَ نَصْرَكُمْ وَلَا أَنفُسَهُمْ يَنصُرُونَ ٥

(الاعراف ۱۹۴ - ۱۹۷)

ನೀವು ಅಲ್ಲಾಹನನ್ನು ಬಿಟ್ಟು ಯಾರನ್ನು ಕೂಗಿ ಕರೆಯುತ್ತೀರೋ ಅವರೂ ನಿಮ್ಮಂತಿರುವ ದಾಸರೇ ಆಗಿದ್ದಾರೆ. ಅವರ ಬಗ್ಗೆ ನಿಮ್ಮ ವಿಚಾರಗಳು ಸರಿಯಾಗಿದ್ದರೆ ನೀವು ಅವರನ್ನೊಮ್ಮೆ ಪ್ರಾರ್ಥಿಸಿ ನಿಮ್ಮ ಪ್ರಾರ್ಥನೆಗೆ ಉತ್ತರ ಕೊಡುತ್ತಾರೋ ನೋಡಿರಿ[1]............ ಇದಕ್ಕೆ ವ್ಯತಿರಿಕ್ತವಾಗಿ ನೀವು ಅಲ್ಲಾಹನನ್ನು ಬಿಟ್ಟು ಯಾರನ್ನು ಕರೆಯುತ್ತೀರೋ ಅವರು ನಿಮಗೂ ಸಹಾಯವನ್ನು ಮಾಡಲಾರರು ಮತ್ತು ತಮಗೇ ಸ್ವಯಂ ಸಹಾಯ ಮಾಡಿಕೊಳ್ಳಲಿಕ್ಕೂ ಅವರು ಅಶಕ್ತರು. (ಪವಿತ್ರ ಕುರ್‌ಆನ್ 7: 194 ಮತ್ತು 197)

وَقَالُوا اتَّخَذَ الرَّحْمٰنُ وَلَدًا سُبْحَانَهُ بَلْ عِبَادٌ مُّكْرَمُونَ ۝ لَا يَسْبِقُونَهُ
بِالْقَوْلِ وَهُمْ بِأَمْرِهِ يَعْمَلُونَ ۝ يَعْلَمُ مَا بَيْنَ أَيْدِيهِمْ وَمَا خَلْفَهُمْ
وَلَا يَشْفَعُونَ إِلَّا لِمَنِ ارْتَضَىٰ وَهُمْ مِّنْ خَشْيَتِهِ مُشْفِقُونَ -

(انبیاء - ٢٦ - ٢٨)

ರಹ್ಮಾನನಿಗೆ ಮಕ್ಕಳಿದ್ದಾರೆಂದು ಇವರು ಹೇಳುತ್ತಾರೆ. ಅಲ್ಲಾಹ್ ಪರಮ ಪಾವನನು. ದೇವಚರರಂತು ಸನ್ಮಾನಿತ ದಾಸರಾಗಿರುತ್ತಾರೆ. ಅವರು ಅವನಿಗೆದುರು ಮಾತಾಡಲಾರರು ಮತ್ತು ಅವನ ಅಪ್ಪಣೆಯಂತೆ ಕಾರ್ಯವೆಸಗುತ್ತಾರೆ. ಅವರ ಮುಂದಿರುವುದನ್ನು ಅವರಿಗೆ ಮರೆಯಾಗಿರುವುದನ್ನೂ ಅವನು ಬಲ್ಲನು. ಯಾರ ಪರವಾಗಿ ಶಿಫಾರಸ್ಸನ್ನು ಕೇಳಲು ಅಲ್ಲಾಹನು ಸಮ್ಮತಿಸುವನೋ ಅವನ ಹೊರತು ಯಾರ ಬಗ್ಗೆಯೂ ಅವರು ಶಿಫಾರಸ್ಸು ಮಾಡುವುದಿಲ್ಲ ಮತ್ತು ಅವರು ಅವನ ಭಯದಿಂದ ಭೀತರಾಗಿರುತ್ತಾರೆ. (ಪವಿತ್ರ ಕುರ್‌ಆನ್ 21:26-28)

وَجَعَلُوا الْمَلَائِكَةَ الَّذِينَ هُمْ عِبَادُ الرَّحْمٰنِ إِنَاثًا - (زخرف - ١٩)

ಇವರು ರಹ್ಮಾನನ ಆಪ್ತ ದಾಸರಾಗಿರುವ ದೇವಚರರನ್ನು ಸ್ತ್ರೀಯರೆಂದು ಪರಿಗಣಿಸಿಕೊಂಡರು. (ಪವಿತ್ರ ಕುರ್‌ಆನ್ 43:19)

وَجَعَلُوا بَيْنَهُ وَبَيْنَ الْجِنَّةِ نَسَبًا وَلَقَدْ عَلِمَتِ الْجِنَّةُ إِنَّهُمْ لَمُحْضَرُونَ

(صٰفٰت - ١٥٨)

ಇವರು ಅಲ್ಲಾಹ್ ಮತ್ತು ದೇವಚರರ ನಡುವೆ ವಂಶ ಸಂಬಂಧವನ್ನು ಉಂಟು ಮಾಡಿಟ್ಟಿದ್ದಾರೆ. ವಸ್ತುತಃ ಇವರು ಅಪರಾಧಿಗಳೆಂಬ ನೆಲೆಯಲ್ಲಿ ಹಾಜರುಗೊಳಿಸಲ್ಪಡುವರು ಎಂಬುದು ದೇವಚರರಿಗೆ ಚೆನ್ನಾಗಿ ತಿಳಿದಿದೆ. (ಪವಿತ್ರ ಕುರ್‌ಆನ್ 37: 158)

لَنْ يَسْتَنْكِفَ الْمَسِيحُ أَنْ يَكُونَ عَبْدًا لِلّٰهِ وَلَا الْمَلَائِكَةُ الْمُقَرَّبُونَ وَ
مَنْ يَسْتَنْكِفْ عَنْ عِبَادَتِهِ وَيَسْتَكْبِرْ فَسَيَحْشُرُهُمْ إِلَيْهِ جَمِيعًا ۝

(النساء - ١٧٢)

ತಾನು ಅಲ್ಲಾಹನ ದಾಸನಾಗಿರುವ ಬಗೆಗೆ ಮಸೀಹರು ಎಂದೆಂದೂ ಸಂಕೋಚಪಡಲಿಲ್ಲ. ಅತ್ಯಂತ ನಿಕಟವರ್ತಿ ದೇವಚರರೂ ಈ ಬಗ್ಗೆ ಸಂಕೋಚಪಡುವುದಿಲ್ಲ. ಯಾವನಾದರೂ ಅಲ್ಲಾಹನ ದಾಸ್ಯದ ಬಗ್ಗೆ ಸಂಕೋಚಪಟ್ಟರೆ ಮತ್ತು ಅಹಂಭಾವ ತೋರಿದರೆ, ಅಲ್ಲಾಹನು ಎಲ್ಲರನ್ನೂ ಸುತ್ತುವರಿದು ತನ್ನ ಮುಂದೆ ಹಾಜರುಪಡಿಸುವ ಅದೊಂದು ದಿನ ಬರಲಿದೆ. (ಪವಿತ್ರ ಕುರ್‌ಆನ್ 4:172)

اَلشَّمْسُ وَالْقَمَرُ بِحُسْبَانٍ ۝ وَّالنَّجْمُ وَالشَّجَرُ يَسْجُدَانِ ۝ (الرحمٰن ۵-۶)

ಸೂರ್ಯಚಂದ್ರರು ಒಂದು ಗಣನೆಗೆ ಅಧೀನರಾಗಿದ್ದಾರೆ ಮತ್ತು ಎಲ್ಲ ನಕ್ಷತ್ರಗಳು ವೃಕ್ಷಗಳೂ ಸಾಷ್ಟಾಂಗವೆರಗುತ್ತಿವೆ. (ಪವಿತ್ರ ಕುರ್‌ಆನ್ 55:5-6)

تُسَبِّحُ لَهُ السَّمٰوٰتُ السَّبْعُ وَالْاَرْضُ وَمَنْ فِيْهِنَّ وَاِنْ مِّنْ شَيْءٍ
اِلَّا يُسَبِّحُ بِحَمْدِهٖ وَلٰكِنْ لَّا تَفْقَهُوْنَ تَسْبِيْحَهُمْ ـ (بنی اسرائیل-۴۴)

ಸಪ್ತಗಗನಗಳೂ ಭೂಮಿಯೂ ಅವುಗಳಲ್ಲಿರುವ ಸಕಲ ವಸ್ತುಗಳೂ ಅವನ ಪಾವಿತ್ರ್ಯವನ್ನೂ ಕೊಂಡಾಡುತ್ತಿವೆ. ಅವನ ಪ್ರಶಂಸೆಯೊಂದಿಗೆ ಅವನ ತಸ್ಬೀಹ್ ಮಾಡದ ಯಾವ ವಸ್ತುವೂ ಇಲ್ಲ. ಆದರೆ ನೀವು ಅವುಗಳ ತಸ್ಬೀಹನ್ನು ಗ್ರಹಿಸುವುದಿಲ್ಲ. (ಪವಿತ್ರ ಕುರ್‌ಆನ್ 17:44)

وَلَهٗ مَنْ فِي السَّمٰوٰتِ وَالْاَرْضِ كُلٌّ لَّهٗ قَانِتُوْنَ ـ (الروم-۲۶)

ಆಕಾಶಗಳಲ್ಲೂ ಭೂಮಿಯಲ್ಲೂ ಇರುವ ಎಲ್ಲರೂ ಅವನ ದಾಸರು. ಎಲ್ಲರೂ ಅವನ ಆಜ್ಞಾಧೀನರೇ ಆಗಿರುತ್ತಾರೆ. (ಪವಿತ್ರ ಕುರ್‌ಆನ್ 30:21)

مَا مِنْ دَآبَّةٍ اِلَّا هُوَ اٰخِذٌۢ بِنَاصِيَتِهَا ـ (ہود-۵۶)

ಅವನ ಕೈಯಲ್ಲಿ ಅದರ ಜುಟ್ಟಿಲ್ಲದ ಯಾವ ಜೀವಿಯೂ ಇಲ್ಲ.
(ಪವಿತ್ರ ಕುರ್‌ಆನ್ 11.56)

اِنْ كُلُّ مَنْ فِي السَّمٰوٰتِ وَالْاَرْضِ اِلَّآ اٰتِي الرَّحْمٰنِ عَبْدًا ۝ لَقَدْ
اَحْصٰىهُمْ وَعَدَّهُمْ عَدًّا ۝ وَكُلُّهُمْ اٰتِيْهِ يَوْمَ الْقِيٰمَةِ فَرْدًا ۝

(مریم-۹۳-۹۵)

ಭೂಮಿ-ಆಕಾಶಗಳಲ್ಲಿರುವವರೆಲ್ಲರೂ ಅಲ್ಲಾಹನ ಸನ್ನಿಧಿಯಲ್ಲಿ ದಾಸರ ನೆಲೆಯಲ್ಲಿ ಹಾಜರಾಗಲಿರುವರು. ಅವನು ಎಲ್ಲರನ್ನೂ ಆವರಿಸಿಕೊಂಡಿದ್ದಾನೆ. ಅವನು ಅವರನ್ನು ಎಣಿಕೆ ಮಾಡಿಟ್ಟಿರುತ್ತಾನೆ. ಪುನರುತ್ಥಾನದ ದಿನದಂದು ಎಲ್ಲರೂ ಅವನ ಮುಂದೆ ಒಬ್ಬೊಬ್ಬರಾಗಿ ಹಾಜರಾಗುವರು. (ಪವಿತ್ರ ಕುರ್‌ಆನ್ 19: 93-95)

قُلِ اللّٰهُمَّ مٰلِكَ الْمُلْكِ تُؤْتِي الْمُلْكَ مَنْ تَشَآءُ وَتَنْزِعُ الْمُلْكَ مِمَّنْ تَشَآءُ وَتُعِزُّ مَنْ تَشَآءُ وَتُذِلُّ مَنْ تَشَآءُ بِيَدِكَ الْخَيْرُ اِنَّكَ عَلٰى كُلِّ شَيْءٍ قَدِيْرٌ - (آل عمران-٢٦)

ಹೇಳಿರಿ- ಓ ಅಲ್ಲಾಹ್! ಸಕಲ ವಿಶ್ವಾಧಿಪತ್ಯದ ಒಡೆಯನೇ! ನೀನು ನಿನಗಿಷ್ಟ ಬಂದವರಿಗೆ ರಾಜ್ಯಾಧಿಕಾರ ನೀಡುವೆ ಮತ್ತು ನಿನಗಿಷ್ಟ ಬಂದವರಿಂದ ಕಸಿದುಕೊಳ್ಳುವೆ. ನಿನಗಿಷ್ಟ ಬಂದವರಿಗೆ ಪ್ರತಿಷ್ಠೆ ದಯಪಾಲಿಸುವೆ. ನಿನಗಿಷ್ಟ ಬಂದವರನ್ನು ಅವಮಾನ ಪಡಿಸುವೆ. ಒಳಿತುಗಳು ನಿನ್ನ ಅಧಿಕಾರ ಹಸ್ತದಲ್ಲಿವೆ. ನಿಶ್ಚಯವಾಗಿಯೂ ನೀನು ಸರ್ವಶಕ್ತನಾಗಿರುವೆ. (ಪವಿತ್ರ ಕುರ್‌ಆನ್ 3:26)

ಈ ರೀತಿ ಯಾವುದಾದರೂ ವಿಧದಲ್ಲಿ 'ಇಬಾದತ್' ಮಾಡಲ್ಪಟ್ಟ ಎಲ್ಲರನ್ನೂ ಅಲ್ಲಾಹನ ದಾಸರು ಮತ್ತು ಯಾವುದೇ ಅಧಿಕಾರ ಇಲ್ಲದವರು ಎಂದು ಸಾಬೀತು ಪಡಿಸಿದ ನಂತರ ಪವಿತ್ರ ಕುರ್‌ಆನ್ ಮಾನವ ಮತ್ತು ಜಿನ್ನ್ ವರ್ಗಕ್ಕೆ ಸೇರಿದ ಎಲ್ಲರಿಗೂ ಎಲ್ಲ ಅರ್ಥಗಳಲ್ಲಿಯೂ 'ಇಬಾದತ್' ಕೇವಲ ಅಲ್ಲಾಹನಿಗೆ ಮಾಡಬೇಕೆಂದು ಕರೆ ನೀಡುತ್ತದೆ. ದಾಸ್ಯವಾಗಲೀ, ಅನುಸರಣೆಯಾಗಲೀ, ಆರಾಧನೆಯಾಗಲೀ ಎಲ್ಲವೂ ಅಲ್ಲಾಹನಿಗೇ ಆಗಿರಬೇಕು. ಆ ಪೈಕಿ ಯಾವುದನ್ನೂ ಅಲ್ಲಾಹೇತರನಿಗೆ ಮಾಡಬಾರದು ಎಂದು ಬೋಧಿಸುತ್ತದೆ.

وَلَقَدْ بَعَثْنَا فِيْ كُلِّ اُمَّةٍ رَّسُوْلًا اَنِ اعْبُدُوا اللّٰهَ وَاجْتَنِبُوا الطَّاغُوْتَ -
(النحل-٣٦)

ನಾವು ಪ್ರತಿಯೊಂದು ಸಮುದಾಯದಲ್ಲಿ ಓರ್ವ ಸಂದೇಶವಾಹಕರನ್ನು ಕಳುಹಿಸಿದೆವು ಮತ್ತು "ಅಲ್ಲಾಹನ ಇಬಾದತ್ ಮಾಡಿರಿ ಮತ್ತು ತಾಗೂತ್‌ನ ಇಬಾದತ್‌ನಿಂದ ದೂರವಿರಿ" ಎಂದು ಅವರ ಮುಖಾಂತರ ಎಚ್ಚರಿಕೆ ನೀಡಿದೆವು. (ಪವಿತ್ರ ಕುರ್‌ಆನ್ 16:36)

وَالَّذِيْنَ اجْتَنَبُوا الطَّاغُوْتَ اَنْ يَّعْبُدُوْهَا وَاَنَابُوْا اِلَى اللّٰهِ لَهُمُ الْبُشْرٰى (الزمر-١٧)

ಇದಕ್ಕೆ ವ್ಯತಿರಿಕ್ತವಾಗಿ ತಾಗೂತ್‌ನ ಇಬಾದತ್‌ನಿಂದ ಮುಕ್ತರಾಗಿ ಅಲ್ಲಾಹನ ಕಡೆಗೆ ಮರಳುವವರಿಗೆ ಶುಭವಾರ್ತೆಯಿದೆ. (ಪವಿತ್ರ ಕುರ್‌ಆನ್ 39:17)

أَلَمْ أَعْهَدْ إِلَيْكُمْ يَا بَنِي آدَمَ أَنْ لَّا تَعْبُدُوا الشَّيْطٰنَ إِنَّهُ لَكُمْ
عَدُوٌّ مُّبِينٌ وَّأَنِ اعْبُدُوْنِي هٰذَا صِرَاطٌ مُّسْتَقِيمٌ (يٰس - ٦٠ - ٦١)

ಆದಮನ ಮಕ್ಕಳೇ! ನೀವು ಶೈತಾನನ ಇಬಾದತ್ ಮಾಡಬೇಡಿರಿ, ಅವನು ನಿಮ್ಮ ಪ್ರತ್ಯಕ್ಷ ಶತ್ರು ಮತ್ತು ನನಗೆ ಮಾತ್ರ ಇಬಾದತ್ ಮಾಡಿರಿ. ಇದು ನೇರಮಾರ್ಗವಾಗಿರುತ್ತದೆ ಎಂದು ನಾನು ನಿಮಗೆ ಆದೇಶಿಸಲಿಲ್ಲವೇ? (ಪವಿತ್ರ ಕುರ್‌ಆನ್ 36: 60-61)

اِتَّخَذُوْا اَحْبَارَهُمْ وَرُهْبَانَهُمْ اَرْبَابًا مِّنْ دُوْنِ اللّٰهِ ......
وَمَا اُمِرُوْا اِلَّا لِيَعْبُدُوْا اِلٰهًا وَّاحِدًا (التوبہ - ٣١)

ಅವರು ಅಲ್ಲಾಹನನ್ನು ಹೊರತು ತಮ್ಮ ವಿದ್ವಾಂಸರನ್ನೂ ಸಂತರನ್ನೂ ತಮ್ಮ ಪ್ರಭುಗಳಾಗಿ ಮಾಡಿಕೊಂಡಿರುತ್ತಾರೆ..... ವಸ್ತುತಃ ಅವರಿಗೆ ಏಕ ದೇವನನ್ನು ಹೊರತು ಇನ್ನಾರದೇ ಇಬಾದತನ್ನು ಮಾಡಲು ಅಪ್ಪಣೆ ಕೊಡಲಾಗಿಲ್ಲ. (ಪವಿತ್ರ ಕುರ್‌ಆನ್ 9:31)

يٰاَيُّهَا الَّذِيْنَ اٰمَنُوْا كُلُوْا مِنْ طَيِّبٰتِ مَا رَزَقْنٰكُمْ وَاشْكُرُوْا لِلّٰهِ اِنْ
كُنْتُمْ اِيَّاهُ تَعْبُدُوْنَ (بقره - ١٧٢)

ಓ ಸತ್ಯವಿಶ್ವಾಸಿಗಳೇ! ನೀವು ನಿಜವಾಗಿಯೂ ಅಲ್ಲಾಹನಿಗೆ ಮಾತ್ರ ಇಬಾದತ್ ಮಾಡುವವರಾಗಿದ್ದರೆ ನಾವು ನಿಮಗೆ ಒದಗಿಸಿರುವ ಶುದ್ಧವಾದ ವಸ್ತುಗಳನ್ನು ನಿರಾತಂಕವಾಗಿ ಉಣ್ಣಿರಿ ಮತ್ತು ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸಿರಿ. (ಪವಿತ್ರ ಕುರ್‌ಆನ್ 2:172)

ದಾಸ್ಯ ಮತ್ತು ಅನುಸರಣೆಯ ಅರ್ಥದಲ್ಲಿರುವ ಇಬಾದತನ್ನು ಇಲ್ಲಿ ಕೇವಲ ಅಲ್ಲಾಹನಿಗೆ ಮೀಸಲಾಗಿರಿಸಲು ಆದೇಶಿಸಲಾಗಿದೆ. ತಾಗೂತ್, ಶೈತಾನ್, ವಿದ್ವಾಂಸರು, ಸಂತರು ಹಾಗೂ ಪೂರ್ವಜರ ದಾಸ್ಯ ಮತ್ತು ಅನುಸರಣೆಯನ್ನು ಬಿಟ್ಟು ಅಲ್ಲಾಹನ ದಾಸ್ಯ ಮತ್ತು ಅನುಸರಣೆಗೆ ಆದೇಶಿಸಿರುವುದೇ ಅದರ ಸ್ಪಷ್ಟ ಸೂಚನೆಯಾಗಿದೆ.

قُلْ اِنِّيْ نُهِيْتُ اَنْ اَعْبُدَ الَّذِيْنَ تَدْعُوْنَ مِنْ دُوْنِ اللّٰهِ لَمَّا جَآءَنِيَ
الْبَيِّنٰتُ مِنْ رَّبِّيْ وَاُمِرْتُ اَنْ اُسْلِمَ لِرَبِّ الْعٰلَمِيْنَ (المومن - ٦٦)

ಸಂದೇಶವಾಹಕರೇ! ಇವರೊಡನೆ ಹೇಳಿರಿ. ನೀವು ಅಲ್ಲಾಹನನ್ನು ಬಿಟ್ಟು ಯಾರನ್ನೆಲ್ಲಾ ಪ್ರಾರ್ಥಿಸುತ್ತಿರುವಿರೋ ಅವರ ಇಬಾದತ್ ಮಾಡುವುದರಿಂದ ನನ್ನನ್ನು ತಡೆಯಲಾಗಿದೆ. ನನ್ನ ಬಳಿಗೆ ನನ್ನ ಪ್ರಭುವಿನ ಕಡೆಯಿಂದ ಸುಸ್ಪಷ್ಟ ನಿದರ್ಶನಗಳು ಬಂದಿರುವಾಗ (ನಾನು ಈ ಕಾರ್ಯವೆಸಗುವುದಾದರೂ ಹೇಗೆ?) ನಾನು ಸಕಲ ಲೋಕಪಾಲಕನ ಮುಂದೆ ಶರಣಾಗಬೇಕೆಂದು ನನಗೆ ಅಪ್ಪಣೆ ಕೊಡಲಾಗಿದೆ. (ಪವಿತ್ರ ಕುರ್‌ಆನ್ 40:66)

وَقَالَ رَبُّكُمُ ادْعُوْنِيْٓ اَسْتَجِبْ لَكُمْ اِنَّ الَّذِيْنَ يَسْتَكْبِرُوْنَ عَنْ
عِبَادَتِيْ سَيَدْخُلُوْنَ جَهَنَّمَ دَاخِرِيْنَ ۝ (المومن-٦٠)

ನಿಮ್ಮ ಪ್ರಭು ಹೀಗೆ ಹೇಳುತ್ತಾನೆ: ನನ್ನನ್ನು ಪ್ರಾರ್ಥಿಸಿರಿ. ನಾನು ನಿಮ್ಮ ಪ್ರಾರ್ಥನೆಗಳನ್ನು ಸ್ವೀಕರಿಸುವೆನು. ಅಹಂಕಾರ ಪಟ್ಟು ನನ್ನ ಇಬಾದತ್‌ನಿಂದ ವಿಮುಖರಾಗುವವರು ಖಂಡಿತವಾಗಿಯೂ ಅಪಮಾನಿತರಾಗಿ ನರಕದಲ್ಲಿ ಪ್ರವೇಶಿಸುವರು. (ಪವಿತ್ರ ಕುರ್‌ಆನ್ 40:60)

ذٰلِكُمُ اللّٰهُ رَبُّكُمْ لَهُ الْمُلْكُ وَالَّذِيْنَ تَدْعُوْنَ مِنْ دُوْنِهٖ مَا يَمْلِكُوْنَ
مِنْ قِطْمِيْرٍ ۝ اِنْ تَدْعُوْهُمْ لَا يَسْمَعُوْا دُعَآءَكُمْ وَلَوْ سَمِعُوْا
مَا اسْتَجَابُوْا لَكُمْ وَيَوْمَ الْقِيَامَةِ يَكْفُرُوْنَ بِشِرْكِكُمْ ۔ (فاطر-١٣،١٤)

ಆ ಅಲ್ಲಾಹನೇ ನಿಮ್ಮ ಪ್ರಭು, ಸಾರ್ವಭೌಮತೆ ಅವನದೇ ಆಗಿರುತ್ತದೆ. ಅವನನ್ನು ಬಿಟ್ಟು ಇತರ ಯಾರನ್ನೆಲ್ಲಾ ಪ್ರಾರ್ಥಿಸುತ್ತೀರೋ ಅವರು ಒಂದು ಹುಲು ಕಡ್ಡಿಯ ಒಡೆಯರೂ ಅಲ್ಲ. ನೀವು ಅವರನ್ನು ಪ್ರಾರ್ಥಿಸಿದರೆ ಅವರು ನಿಮ್ಮ ಪ್ರಾರ್ಥನೆಗಳನ್ನು ಕೇಳಲಾರರು ಮತ್ತು ಕೇಳಿದರೂ ಅವುಗಳ ಉತ್ತರವನ್ನು ನಿಮಗೆ ಕೊಡಲಾರರು. ಪುನರುತ್ಥಾನ ದಿನ ಅವರು ನೀವೆಸಗಿದ ದೇವ ಸಹಭಾಗಿತ್ವವನ್ನು ನಿರಾಕರಿಸಿ ಬಿಡುವರು. (ಪವಿತ್ರ ಕುರ್‌ಆನ್ 35: 13-14)

قُلْ اَتَعْبُدُوْنَ مِنْ دُوْنِ اللّٰهِ مَا لَا يَمْلِكُ لَكُمْ ضَرًّا وَّلَا نَفْعًا ۔ وَاللّٰهُ
هُوَ السَّمِيْعُ الْعَلِيْمُ (المائدہ-٧٦)

ಇವರೊಡನೆ ಹೇಳಿರಿ- ನೀವು ಅಲ್ಲಾಹನನ್ನು ಬಿಟ್ಟು ನಿಮಗೆ ನಷ್ಟವನ್ನುಂಟು ಮಾಡಲಿಕ್ಕೂ ಲಾಭವನ್ನುಂಟು ಮಾಡಲಿಕ್ಕೂ ಅಧಿಕಾರವಿಲ್ಲದವರನ್ನು ಆರಾಧಿಸುತ್ತೀರಾ? ವಸ್ತುತಃ ಸಕಲವನ್ನೂ ಆಲಿಸುವವನೂ ಸರ್ವವನ್ನೂ ಅರಿಯುವವನೂ ಅಲ್ಲಾಹನೇ ಆಗಿರುತ್ತಾನೆ.

(ಪವಿತ್ರ ಕುರ್‌ಆನ್ 5:76)

ಈ ಆಯತ್‌ಗಳಲ್ಲಿ ಆರಾಧನೆ ಎಂಬರ್ಥದಲ್ಲಿರುವ ಇಬಾದತನ್ನು ಅಲ್ಲಾಹನಿಗೆ ಮೀಸಲಾಗಿರಿಸಲು ಆದೇಶಿಸಲಾಗಿದೆ. ಇಲ್ಲಿ ಇಬಾದತನ್ನು ದುಆದ ಸಮಾನಾರ್ಥದಲ್ಲಿ ಬಳಸಲಾಗಿರುವುದು ಇದರ ಸ್ಪಷ್ಟ ಸೂಚನೆಯಾಗಿದೆ. ಅಭೌತಿಕ ಪ್ರಭುತ್ವದಲ್ಲಿ ಅಲ್ಲಾಹನ ಸಹಭಾಗಿಯೆಂದು ಬಗೆದು ಜನರು ಆರಾಧಿಸುತ್ತಿದ್ದಂತಹ 'ಮಲ್‌ಬೂದ್'ಗಳ ಪ್ರಸ್ತಾಪವು ಇದರ ಹಿಂದಿನ ಮತ್ತು ಮುಂದಿನ ಆಯತ್‌ಗಳಲ್ಲಿವೆ.

ಕುರ್‌ಆನ್‌ನಲ್ಲಿ ಎಲ್ಲೆಲ್ಲ ಅಲ್ಲಾಹನ ಇಬಾದತ್‌ನ ಪ್ರಸ್ತಾಪವಿದೆಯೋ ಮತ್ತು ಅದರ ಹತ್ತಿರದ ಆಯತ್‌ಗಳಲ್ಲಿ ಆ ಇಬಾದತನ್ನು ಅದರ ವಿಭಿನ್ನ ಅರ್ಥಗಳ ಪೈಕಿ ಯಾವುದಾದರೂ ಒಂದು ಅರ್ಥಕ್ಕೆ ಸೀಮಿತಗೊಳಿಸಲು ಪರ್ಯಾಪ್ತವಾದ ಸೂಚನೆಗಳಿಲ್ಲವೋ ಅಲ್ಲೆಲ್ಲ ಇಬಾದತ್‌ನ ಅರ್ಥ ವ್ಯಾಪ್ತಿಯಲ್ಲಿ ದಾಸ್ಯ, ಅನುಸರಣೆ ಮತ್ತು ಆರಾಧನೆ ಎಂಬ ಮೂರು ಅರ್ಥಗಳು ಸೇರಿಕೊಂಡಿವೆ. ಉದಾಹರಣೆಗಾಗಿ ಈ ಕೆಳಗಿನ ಆಯತ್‌ಗಳನ್ನು ನೋಡಿರಿ:

إِنَّنِيٓ أَنَا ٱللَّهُ لَآ إِلَٰهَ إِلَّآ أَنَا۠ فَٱعْبُدْنِى - (طٰہٰ - ۱۴)

ನಿಶ್ಚಯವಾಗಿಯೂ ನಾನೇ ಅಲ್ಲಾಹ್, ನನ್ನ ಹೊರತು ಇನ್ನಾವ ದೇವನೂ ಇಲ್ಲ. ಆದುದರಿಂದ ನೀವು ನನಗೇ 'ಇಬಾದತ್' ಮಾಡಿರಿ. (ಪವಿತ್ರ ಕುರ್‌ಆನ್ 20:14)

ذَٰلِكُمُ ٱللَّهُ رَبُّكُمْ لَآ إِلَٰهَ إِلَّا هُوَ خَٰلِقُ كُلِّ شَىْءٍ فَٱعْبُدُوهُ وَهُوَ عَلَىٰ
كُلِّ شَىْءٍ وَكِيلٌ (انعام - ۱۰۲)

ಅವನೇ ಅಲ್ಲಾಹ್. ನಿಮ್ಮ ಪ್ರಭು. ಅವನ ಹೊರತು ಅನ್ಯ ಆರಾಧ್ಯನಿಲ್ಲ, ಸಕಲ ವಸ್ತುಗಳ ಕರ್ತೃ. ಆದುದರಿಂದ ನೀವು ಅವನ ಇಬಾದತನ್ನೇ ಮಾಡಿರಿ. ಅವನು ಸಕಲ ವಸ್ತುಗಳ ಹೊಣೆಗಾರನು. (ಪವಿತ್ರ ಕುರ್‌ಆನ್ 6:102)

قُلْ يَٰٓأَيُّهَا ٱلنَّاسُ إِن كُنتُمْ فِى شَكٍّ مِّن دِينِى فَلَآ أَعْبُدُ ٱلَّذِينَ تَعْبُدُونَ
مِن دُونِ ٱللَّهِ وَلَٰكِنْ أَعْبُدُ ٱللَّهَ ٱلَّذِى يَتَوَفَّىٰكُمْ وَأُمِرْتُ أَنْ أَكُونَ
مِنَ ٱلْمُؤْمِنِينَ - (يونس - ۱۰۴)

ಓ ಪೈಗಂಬರರೇ! ಹೇಳಿರಿ, "ಓ ಜನರೇ! ನೀವು ನನ್ನ ಧರ್ಮದ ಬಗ್ಗೆ ಇನ್ನೂ ಸಂಶಯ ಗ್ರಸ್ತರಾಗಿದ್ದರೆ ಇತ್ತ ಕೇಳಿರಿ! ನೀವು ಅಲ್ಲಾಹನ ಹೊರತು ಯಾರ ಇಬಾದತ್ ಮಾಡುತ್ತೀರೋ ಅವನ ಇಬಾದತನ್ನು ನಾನು ಮಾಡುವುದಿಲ್ಲ. ಬದಲಾಗಿ ಯಾರ ವಶದಲ್ಲಿ ನಿಮ್ಮ ಮೃತ್ಯುವಿದೆಯೋ

ಆ ಅಲ್ಲಾಹನ ಇಬಾದತನ್ನು ಮಾತ್ರ ನಾನು ಮಾಡುತ್ತೇನೆ. ನಾನು ಸತ್ಯ ವಿಶ್ವಾಸಿಗಳಲ್ಲಾಗಿರಬೇಕೆಂದು ಆಜ್ಞಾಪಿಸಲ್ಪಟ್ಟಿರುತ್ತೇನೆ." (ಪವಿತ್ರ ಕುರ್‌ಆನ್ 10:104)

مَا تَعْبُدُونَ مِنْ دُونِهِ إِلَّا أَسْمَاءً سَمَّيْتُمُوهَا أَنْتُمْ وَآبَاؤُكُمْ
مَا أَنْزَلَ اللَّهُ بِهَا مِنْ سُلْطَانٍ إِنِ الْحُكْمُ إِلَّا لِلَّهِ أَمَرَ أَلَّا تَعْبُدُوا
إِلَّا إِيَّاهُ ذَٰلِكَ الدِّينُ الْقَيِّمُ (يوسف-٤٠)

ಅವನನ್ನು ಬಿಟ್ಟು ನೀವು ಯಾರ ಇಬಾದತ್ ಮಾಡುತ್ತಿರುವಿರೋ ಅವರೆಲ್ಲಾ ನೀವೂ ನಿಮ್ಮ ಪೂರ್ವಿಕರೂ ಇರಿಸಿಕೊಂಡಿರುವ ಕೆಲವು ಹೆಸರುಗಳ ಹೊರತು ಇನ್ನೇನೂ ಅಲ್ಲ. ಅಲ್ಲಾಹನು ಅವುಗಳ ಬಗ್ಗೆ ಯಾವ ಪ್ರಮಾಣವನ್ನು ಇಳಿಸಿರುವುದಿಲ್ಲ. ಆಜ್ಞಾಧಿಕಾರವು ಅಲ್ಲಾಹನ ಹೊರತು ಇನ್ನಾರಿಗೂ ಇಲ್ಲ. ಅವನ ಹೊರತು ನೀವು ಯಾರ ಇಬಾದತನ್ನೂ ಮಾಡಬಾರದೆಂದು ಅವನ ಕಟ್ಟಪ್ಪಣೆ ಇದೆ. (ಪವಿತ್ರ ಕುರ್‌ಆನ್ 12:40)

وَلِلَّهِ غَيْبُ السَّمَاوَاتِ وَالْأَرْضِ وَإِلَيْهِ يُرْجَعُ الْأَمْرُ كُلُّهُ فَاعْبُدْهُ
وَتَوَكَّلْ عَلَيْهِ (هود-١٢٣)

ಆಕಾಶಗಳಲ್ಲೂ ಭೂಮಿಯಲ್ಲೂ ಅಡಗಿರುವುದೆಲ್ಲವೂ ಅಲ್ಲಾಹನ ಅಧೀನದಲ್ಲಿವೆ. ಸಕಲ ವ್ಯವಹಾರಗಳು ಆತನ ಕಡೆಗೇ ಮರಳಿಸಲ್ಪಡುತ್ತವೆ. ಆದುದರಿಂದ ನೀವು ಅವನ ಇಬಾದತ್ ಮಾಡಿರಿ. ಅವನ ಮೇಲೆಯೇ ಭರವಸೆಯನ್ನಿಡಿರಿ. (ಪವಿತ್ರ ಕುರ್‌ಆನ್ 11: 123)

لَهُ مَا بَيْنَ أَيْدِينَا وَمَا خَلْفَنَا وَمَا بَيْنَ ذَٰلِكَ وَمَا كَانَ رَبُّكَ نَسِيًّا ۝
رَبُّ السَّمَاوَاتِ وَالْأَرْضِ وَمَا بَيْنَهُمَا فَاعْبُدْهُ وَاصْطَبِرْ لِعِبَادَتِهِ
(مريم-٦٤-٦٥)

ನಮ್ಮ ಮುಂದೆ, ನಮ್ಮ ಹಿಂದೆ ಮತ್ತು ಅವುಗಳ ನಡುವೆ ಏನೆಲ್ಲ ಇರುವುದೋ ಅವೆಲ್ಲವುಗಳ ಒಡೆಯನು ಅವನೇ ಆಗಿದ್ದಾನೆ ಮತ್ತು ನಿಮ್ಮ ಪ್ರಭು ಮರೆತು ಬಿಡುವವನಲ್ಲ. ಅವನು ಆಕಾಶಗಳ, ಭೂಮಿಯ ಮತ್ತು ಅವುಗಳ ನಡುವೆಯಿರುವ ಸರ್ವಸ್ವಗಳ ಪಾಲಕ ಪ್ರಭು. ಆದುದರಿಂದ ನೀವು ಅವನ ಇಬಾದತ್ ಮಾಡಿರಿ ಮತ್ತು ಅವನ ಇಬಾದತ್‌ನಲ್ಲೇ ಸ್ಥಿರವಾಗಿರಿ. (ಪವಿತ್ರ ಕುರ್‌ಆನ್ 19: 64-65)

فَمَنْ كَانَ يَرْجُو لِقَاءَ رَبِّهِ فَلْيَعْمَلْ عَمَلًا صَالِحًا وَلَا يُشْرِكْ بِعِبَادَةِ
رَبِّهِ أَحَدًا (كهف-١١٠)

ಆದುದರಿಂದ ತನ್ನ ಪ್ರಭುವಿನ ಭೇಟಿಯನ್ನು ನಿರೀಕ್ಷಿಸುವವನು ಸತ್ಕರ್ಮಗಳನ್ನೆಸಗಲಿ ಮತ್ತು ಇಬಾದತ್‌ನಲ್ಲಿ ತನ್ನ ಪ್ರಭುವಿನ ಜತೆ ಯಾರನ್ನೂ ಸಹಭಾಗಿಯಾಗಿ ಮಾಡದಿರಲಿ.
(ಪವಿತ್ರ ಕುರ್‌ಆನ್ 18:110)

ಈ ಆಯತ್‌ಗಳಲ್ಲಿ ಮತ್ತು ಇಂತಹುದೇ ಇತರ ಆಯತ್‌ಗಳಲ್ಲಿ 'ಇಬಾದತ್' ಎಂಬ ಪದವನ್ನು ಕೇವಲ ಆರಾಧನೆ, ದಾಸ್ಯ ಅಥವಾ ಅನುಸರಣೆ ಎಂಬ ಅರ್ಥಕ್ಕೆ ಮಾತ್ರ ಸೀಮಿತಗೊಳಿಸುವುದಕ್ಕೆ ಯಾವುದೇ ಆಧಾರವಿಲ್ಲ. ಇಂತಹ ಆಯತ್‌ಗಳಲ್ಲಿ ನಿಜವಾಗಿ ಕುರ್‌ಆನ್ ತನ್ನ ಸಂಪೂರ್ಣ ಸಂದೇಶವನ್ನು ಮುಂದಿಡುತ್ತದೆ. ಕುರ್‌ಆನ್‌ನ ಸಂದೇಶವು ದಾಸ್ಯ, ಅನುಸರಣೆ ಮತ್ತು ಆರಾಧನೆಯು ಸರ್ವಸಂಪೂರ್ಣವಾಗಿ ಅಲ್ಲಾಹನಿಗೇ ಆಗಿರಬೇಕೆಂದಾಗಿದೆ. ಆದುದರಿಂದ ಈ ಆಯತ್‌ಗಳಲ್ಲಿ 'ಇಬಾದತ್' ಎಂಬ ಪದದ ಅರ್ಥವನ್ನು ಯಾವುದಾದರೂ ಒಂದು ವಿಷಯಕ್ಕೆ ಸೀಮಿತಗೊಳಿಸಿದರೆ ಅದು ವಾಸ್ತವದಲ್ಲಿ ಕುರ್‌ಆನ್‌ನ ಕರೆಯನ್ನೇ ಸೀಮಿತಗೊಳಿಸಿದಂತಾಗುತ್ತದೆ. ಇದರ ಪರಿಣಾಮವಾಗಿ ಕುರ್‌ಆನ್‌ನ ಕರೆಯ ಒಂದು ಸೀಮಿತ ಕಲ್ಪನೆಯ ಮೇಲೆ ವಿಶ್ವಾಸವಿರಿಸಿದವರು ಅದನ್ನು ಅರೆಬರೆಯಾಗಿಯೇ ಅನುಸರಿಸುವುದು ಅನಿವಾರ್ಯವಾಗುತ್ತದೆ.

ದೀನ್

ಶಬ್ದ ಕೋಶಾರ್ಥ

ಅರಬಿ ಭಾಷೆಯಲ್ಲಿ 'ದೀನ್' ಎಂಬ ಪದವು ವಿಭಿನ್ನ ಅರ್ಥಗಳಲ್ಲಿ ಬಳಕೆಯಾಗುತ್ತದೆ.

(1) ಪ್ರಾಬಲ್ಯ ಮತ್ತು ಆಧಿಪತ್ಯ, ಆಡಳಿತ ಮತ್ತು ಆಜ್ಞಾಧಿಕಾರ, ಇತರರನ್ನು ವಿಧೇಯತೆಗೆ ಒತ್ತಾಯಿಸುವುದು, ಅವರ ಮೇಲೆ ತನ್ನ ಸಾರ್ವಭೌಮತೆ (Sovereignty)ಯನ್ನು ಪ್ರಯೋಗಿಸುವುದು ಅವರನ್ನು ತನ್ನ ಗುಲಾಮರಾಗಿ ಮತ್ತು ಆಜ್ಞಾಧೀನರಾಗಿ ಮಾಡುವುದು. ಉದಾಹರಣೆಗೆ ಹೀಗೆ ಹೇಳುತ್ತಾರೆ:

دان الناس، اى قهرهم على الطاعة

ಅರ್ಥಾತ್: ಜನರನ್ನು ಅನುಸರಣೆ ಮಾಡುವಂತೆ ಒತ್ತಾಯಿಸುವುದು.

دنتهم فدانوا، اى قهرتهم فاطاعوا

ಅರ್ಥಾತ್: ನಾನು ಅವರನ್ನು ಪರಾಭವಗೊಳಿಸಿದೆ ಮತ್ತು ಅವರು ವಿಧೇಯರಾದರು.

دنت القوم اذللتهم واستعبدتهم

ಅರ್ಥಾತ್: ನಾನು ಆ ಜನಾಂಗವನ್ನು ಮಣಿಸಿದೆ ಮತ್ತು ಗುಲಾಮರಾಗಿ ಮಾಡಿದೆ.

دان الرجل اذا عز ಅರ್ಥಾತ್: ಆ ವ್ಯಕ್ತಿ ಪ್ರತಿಷ್ಠಿತ ಮತ್ತು ಶಕ್ತಿವಂತನಾದನು.

دنت الرجل حملته على ما يكره

ಅರ್ಥಾತ್: ನಾನು ಅವನನ್ನು ಅವನು ಸಿದ್ಧವಿಲ್ಲದ ಕೆಲಸ ಮಾಡುವಂತೆ ಒತ್ತಾಯಪಡಿಸಿದೆ.

دين فلان اذا حمل على مكروه

ಅರ್ಥಾತ್: ಆ ವ್ಯಕ್ತಿಯನ್ನು ಈ ಕೆಲಸ ಮಾಡಲು ಬಲವಂತಪಡಿಸಲಾಯಿತು.

دنته اي سسته وملكته

ಅರ್ಥಾತ್: ನಾನು ಅವನ ಮೇಲೆ ಆಧಿಪತ್ಯ ನಡೆಸಿದೆ ಮತ್ತು ಆಜ್ಞಾಧಿಕಾರ ಚಲಾಯಿಸಿದೆ.

دينة القوم وليته سياستهم

ಅರ್ಥಾತ್: ನಾನು ಜನಾಂಗದ ರಾಜಕೀಯ ಮತ್ತು ಆಡಳಿತವನ್ನು ಆ ವ್ಯಕ್ತಿಗೆ ವಹಿಸಿಕೊಟ್ಟೆ. ಇದೇ ಅರ್ಥದಲ್ಲಿ ಹತಿಯ್ಯ ತನ್ನ ತಾಯಿಯನ್ನುದ್ದೇಶಿಸಿ ಹೀಗೆ ಹೇಳಿರುವನು:

لقد دينت امر بنيك حتى ... تركتهم ادق من الطحين

ಅರ್ಥಾತ್: ನೀನು ನಿನ್ನ ಮಕ್ಕಳ ವ್ಯವಹಾರಗಳ ಮೇಲ್ವಿಚಾರಕಳಾಗಿ ಮಾಡಲ್ಪಟ್ಟಿದ್ದಿ-ಕೊನೆಗೆ ನೀನು ಅವರನ್ನು ಹಿಟ್ಟಿಗಿಂತಲೂ ನಯವಾಗಿ ಮಾಡಿಬಿಟ್ಟೆ.

ಹದೀಸ್‌ನಲ್ಲಿ ಈ ರೀತಿ ಬಂದಿದೆ-

الكيس من دان نفسه وعدل لما بعد الموت

ಅರ್ಥಾತ್: ತನ್ನ ಚಿತ್ತವನ್ನು ಮಣಿಸಿದವನು ಮತ್ತು ಪರಲೋಕದಲ್ಲಿ ಫಲಕಾರಿಯಾಗುವಂತಹ ಕೆಲಸ ಮಾಡಿದವನು ಬುದ್ಧಿವಂತನು. ಇದೇ ಅರ್ಥದ ಪ್ರಕಾರ ಯಾವುದಾದರೂ ರಾಷ್ಟ್ರ, ಜನಾಂಗ ಅಥವಾ ಗೋತ್ರದ ಪ್ರಾಬಲ್ಯ ಮತ್ತು ಶಕ್ತಿ ಹೊಂದಿ ಅದರ ಮೇಲೆ ಆಧಿಪತ್ಯ ನಡೆಸುವವನಿಗೆ ديان (ದಯ್ಯಾನ್) ಎನ್ನುತ್ತಾರೆ. ಅಲ್‌ಶೀ ಅಲ್ ಹುರ್‌ಮಾಝೀ ಪ್ರವಾದಿವರ್ಯರನ್ನುದ್ದೇಶಿಸಿ ಹೀಗೆ ಹೇಳಿರುವನು:

يا سيد الناس وديان العرب

ಅರ್ಥಾತ್: ಓ ಮಾನವಕುಲದ ನಾಯಕ ಮತ್ತು ಅರಬರ ಅಧಿಪತಿ ಮತ್ತು ಇದೇ ಪ್ರಕಾರ مدين ಅರ್ಥ ದಾಸನೆಂದೂ مدينة ಅರ್ಥ ದಾಸಿಯೆಂದೂ ابن مدينه ಅರ್ಥ ದಾಸಿಯ ಪುತ್ರನೆಂದೂ ಆಗಿದೆ. ಅಖ್ತಲ್ ಈ ರೀತಿ ಹೇಳಿರುವನು:

ربت وربانى حجرها ابن مدينه

ಕುರ್‌ಆನ್‌ನಲ್ಲಿ ಈ ರೀತಿ ಹೇಳಲಾಗಿದೆ:

فَلَوْلَا إِن كُنتُمْ غَيْرَ مَدِينِينَ ○ تَرْجِعُونَهَا إِن كُنتُمْ صَادِقِينَ ○
(الواقعہ ۸۶ - ۸۷)

ನೀವು ಪರಾಧೀನರಲ್ಲದಿದ್ದರೆ ಮತ್ತು ನಿಮ್ಮ ಭಾವನೆಯಲ್ಲಿ ನೀವು ಸತ್ಯವಾದಿಗಳಾಗಿದ್ದರೆ ಅವನು ಸಾಯುತ್ತಿರುವುದನ್ನು ನೀವು ಕಣ್ಣಾರೆ ಕಾಣುತ್ತಿರುವಾಗ ಹೊರಟು ಹೋಗುತ್ತಿರುವ ಅವನ ಪ್ರಾಣವನ್ನು ಮರಳಿ ತರುವುದಿಲ್ಲವೇಕೆ? (56: 86-87)

(2) ಅನುಸರಣೆ, ದಾಸ್ಯ, ಸೇವೆ, ಯಾರಿಗಾದರೂ ಶರಣಾಗುವುದು, ಯಾರಿಗಾದರೂ

ವಿಧೇಯನಾಗುವುದು, ಯಾರದಾದರೂ ಪ್ರಾಬಲ್ಯ ಮತ್ತು ಶಕ್ತಿಯೆದುರು ಮಣಿದು ಅವನ ಮುಂದೆ ಸಣ್ಣವನಾಗುವುದು. ಈ ಅರ್ಥಗಳ ಪ್ರಕಾರ ಹೀಗೆ ಹೇಳುತ್ತಾರೆ:

دنتهم فدانوا، اى قهرتهم فاطاعوا

ಅರ್ಥಾತ್: ನಾನು ಅವರನ್ನು ಪರಾಭವಗೊಳಿಸಿದೆ ಮತ್ತು ಅವರು ವಿಧೇಯರಾದರು.

دنت الرجل - اي خدمته

ಅರ್ಥಾತ್: ನಾನು ಆ ವ್ಯಕ್ತಿಯ ಸೇವೆ ಮಾಡಿದೆ.

ಪ್ರವಾದಿ(ಸ) ಈ ರೀತಿ ಹೇಳಿರುವರು:

اريد من قريش كلمة تدين لهم بها العرب،
اى تطيعهم وتخضع لهم

ಅರ್ಥಾತ್: ನಾನು ಕುರೈಶರನ್ನು ಒಂದು ವಚನದ ಅನುಯಾಯಿಗಳಾಗಿ ಮಾಡಬಯಸುತ್ತೇನೆ. ಅವರು ಅದನ್ನು ಒಪ್ಪಿಕೊಂಡರೆ ಎಲ್ಲ ಅರಬರು ಅವರಿಗೆ ಅಧೀನರಾಗುವರು ಮತ್ತು ಅವರ ಮುಂದೆ ಬಾಗುವರು. ಇದೇ ಅರ್ಥದಲ್ಲಿ ವಿಧೇಯ ಜನಾಂಗವನ್ನು قوم دين ಎನ್ನುತ್ತಾರೆ. ಇದೇ ಅರ್ಥದಲ್ಲಿ ದೀನ್ ಎಂಬ ಪದವನ್ನು ಖವಾರಿಜ್‌ಗಳ ಕುರಿತ ಹದೀಸ್‌ನಲ್ಲಿ ಬಳಸಲಾಗಿದೆ.[1]

يمرقون من الدين مروق السهم من الرمية

(3) ಶರೀಅತ್, ಕಾನೂನು, ಕ್ರಮ, ಸಮುದಾಯ, ಪದ್ಧತಿ-ಸಂಪ್ರದಾಯ. ಉದಾ: ಹೀಗೆ ಹೇಳುತ್ತಾರೆ. ما زال ذالك ديني وديدني

ಅರ್ಥಾತ್: ಇದು ಯಾವಾಗಲೂ ನನ್ನ ಪದ್ಧತಿಯಾಗಿದೆ.

....يقال دان اذا اعتاد خيرا وشرا

1. ಖವಾರಿಜ್‌ಗಳು ಸಮುದಾಯ ಎಂಬ ಅರ್ಥದಲ್ಲಿ ದೀನ್‌ನಿಂದ ಹೊರ ಹೋಗುವರು ಎಂದು ಇದರರ್ಥವಲ್ಲ. ಏಕೆಂದರೆ ಹ. ಅಲೀ(ರ) ಅವರಲ್ಲಿ ಖವಾರಿಜ್‌ಗಳ ಕುರಿತು 'ಅವರು ಕಾಫಿರ್‌ಗಳೇ?' ಎಂದು ಕೇಳಿದಾಗ "ಕುಫ್ರ್‌ನಿಂದಲೇ ಅವರು ಓಡಿ ಹೋಗಿರುವುದು" ಎಂದು ಹೇಳಿದರು. ಆಗ ಪುನಃ ಕೇಳಲಾಯಿತು. 'ಅವರು ಮುನಾಫಿಕ್‌ಗಳೇ?' ಆಗ ಹ. ಅಲೀ(ರ) ಹೇಳಿದರು 'ಮುನಾಫಿಕರು ಅಲ್ಲಾಹನನ್ನು ಸ್ಮರಿಸುವುದೇ ಇಲ್ಲ. ಇವರಂತೂ ರಾತ್ರಿ-ಹಗಲು ಅಲ್ಲಾಹನನ್ನು ಸ್ಮರಿಸುತ್ತಿರುತ್ತಾರೆ. ಆದ್ದರಿಂದ ಈ ಹದೀಸ್‌ನಲ್ಲಿ ದೀನ್ ಎಂದರೆ ಇಮಾಮರ ಅನುಸರಣೆಯಾಗಿದೆ. ಇಬ್ನು ಅಸೀರ್ ಅವರು ನಿಹಾಯಃದಲ್ಲಿ ಇದೇ ಅರ್ಥವನ್ನು ವಿವರಿಸಿದ್ದಾರೆ.

- أراد بالدين الطاعة اى انهم يخرجون من
طاعة الامام المفترض الطاعة وينسلخون (ج ٢ صفحه ١٤١-١٤٢)

ಅರ್ಥಾತ್: ವ್ಯಕ್ತಿಯು ಒಳ್ಳೆಯ ಕ್ರಮವನ್ನು ಪಾಲಿಸುತ್ತಿರಲಿ ಅಥವಾ ಕೆಟ್ಟ ಕ್ರಮವನ್ನು ಪಾಲಿಸುತ್ತಿರಲಿ. ಎರಡೂ ಸ್ಥಿತಿಗಳಲ್ಲಿ ಯಾವ ಕ್ರಮವನ್ನು ಅವನು ಪಾಲಿಸುತ್ತಾನೋ ಅದನ್ನು ದೀನ್ ಎನ್ನಲಾಗುವುದು. ಹದೀಸ್‌ನಲ್ಲಿ ಈ ರೀತಿಯಿದೆ:

كانت قريش ومن دان بدينهم

ಅರ್ಥಾತ್: ಕುರೈಶರು ಮತ್ತು ಅವರ ಕ್ರಮವನ್ನು ಅನುಸರಿಸುವವರು. ಹದೀಸ್‌ನಲ್ಲಿ ಹೀಗೂ ಇದೆ:

إِنَّهُ عَلَيْهِ السَّلَامُ كَانَ عَلَىٰ دِيْنِ قَوْمِهِ

ಪ್ರವಾದಿ(ಸ) ಪ್ರವಾದಿತ್ವಕ್ಕಿಂತ ಮುಂಚೆ ತಮ್ಮ ಜನಾಂಗದ 'ದೀನ್'ನಲ್ಲಿದ್ದರು. ಅರ್ಥಾತ್ ನಿಕಾಹ್, ತಲಾಕ್, ವಾರೀಸು ಹಕ್ಕು ಮತ್ತಿತರ ನಾಗರಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಪ್ರವಾದಿ(ಸ) ಅವರು ತಮ್ಮ ಜನಾಂಗದಲ್ಲಿ ಪ್ರಚಲಿತವಿದ್ದ ಪದ್ಧತಿ ಮತ್ತು ನಿಯಮಗಳನ್ನು ಅನುಸರಿಸುತ್ತಿದ್ದರು.

(4) ಕರ್ಮಫಲ, ಪ್ರತಿಫಲ, ಬದಲು, ತೀರ್ಮಾನ, ವಿಚಾರಣೆ, ಅರಬೀಯಲ್ಲಿ ನಾಣ್ಣುಡಿಯಿದೆ. كَمَا تَدِيْنُ تُدَانُ ಅರ್ಥಾತ್: ನೀನು ಮಾಡಿದ್ದನ್ನು ಉಣ್ಣುವೆ. ಕುರ್‌ಆನ್‌ನಲ್ಲಿ ಸತ್ಯನಿಷೇಧಿಗಳ ಈ ಮಾತನ್ನು ಉಲ್ಲೇಖಿಸಲಾಗಿದೆ. أَإِنَّا لَمَدِيْنُوْنَ ಮರಣದ ನಂತರ ನಮ್ಮ ವಿಚಾರಣೆ ನಡೆಯುವುದೇ? ನಮಗೆ ಪ್ರತಿಫಲ ಸಿಗುವುದೇ? ಅಬ್ದುಲ್ಲಾ ಬಿನ್ ಉಮರ್(ರ) ಅವರ ಒಂದು ಹದೀಸ್‌ನಲ್ಲಿ ಹೀಗಿದೆ–

لَا تَسُبُّوا السلطان فان كان لا بد فقولوا اللّٰهُمَّ كما يدينون

ನಿಮ್ಮ ಆಡಳಿತಗಾರರನ್ನು ನಿಂದಿಸಬೇಡಿರಿ. ಒಂದು ವೇಳೆ ಹೇಳಲೇಬೇಕಾಗಿದ್ದರೆ "ಇವರು ನಮ್ಮ ಜತೆ ವರ್ತಿಸಿದಂತೆ ನೀನು ಇವರ ಜತೆಯೂ ವರ್ತಿಸು" ಎಂದು ಹೇಳಿರಿ. ಈ ಅರ್ಥದಲ್ಲಿ ديان ಎಂಬ ಪದವು ನ್ಯಾಯಾಧೀಶನೆಂಬ ಅರ್ಥದಲ್ಲಿ ಬರುತ್ತದೆ. ಹ. ಅಲೀ(ರ) ಅವರ ಕುರಿತು ಓರ್ವ ಮಹಾತ್ಮರಲ್ಲಿ ಪ್ರಶ್ನಿಸಲಾಯಿತು. ಆಗ ಅವರು

كان ديان هٰذه الامة بعد نبيها،

ಅರ್ಥಾತ್: "ಇವರು ಪ್ರವಾದಿಯ ನಂತರ ಸಮುದಾಯದ ಅತಿದೊಡ್ಡ ನ್ಯಾಯಾಧೀಶರಾಗಿರುವರು" ಎಂದರು.

ಕುರ್‌ಆನ್‌ನಲ್ಲಿ 'ದೀನ್' ಪದದ ಬಳಕೆ

ಈ ವಿವರಣೆಗಳಿಂದ ವ್ಯಕ್ತವಾಗುವುದೇನೆಂದರೆ دين 'ದೀನ್' ಎಂಬ ಪದಕ್ಕೆ

ಮೂಲದಲ್ಲಿ ನಾಲ್ಕು ಕಲ್ಪನೆಗಳಿವೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ ಈ ಪದವು ಅರಬೀ ವಿಚಾರದ ನಾಲ್ಕು ಮೂಲಭೂತ ಕಲ್ಪನೆಗಳನ್ನು ವಿವರಿಸುತ್ತದೆ.

(1) ಒಂದು ಆಡಳಿತದ ಕಡೆಯಿಂದ ಪ್ರಾಬಲ್ಯ.

(2) ಆಡಳಿತಗಾರನ ಮುಂದೆ ಬಾಗುವವನ ಕಡೆಯಿಂದ ಅನುಸರಣೆ ಮತ್ತು ದಾಸ್ಯ.

(3) ಪಾಲಿಸಲ್ಪಡುವ ನಿಯಮ-ನಿಬಂಧನೆ ಮತ್ತು ಕ್ರಮ.

(4) ವಿಚಾರಣೆ, ತೀರ್ಮಾನ ಮತ್ತು ಪುರಸ್ಕಾರ ಹಾಗೂ ಶಿಕ್ಷೆ.

ಅರಬರು ಈ ಪದವನ್ನು ಈ ಪೈಕಿ ಯಾವುದಾದರೊಂದು ಕಲ್ಪನೆಗೆ ವಿಭಿನ್ನ ಸಂದರ್ಭಗಳಲ್ಲಿ ಬಳಸುತ್ತಿದ್ದರು. ಈ ನಾಲ್ಕೂ ವಿಷಯಗಳ ಬಗ್ಗೆ ಅರಬರ ಕಲ್ಪನೆಗಳು ಸಂಪೂರ್ಣ ಸ್ಪಷ್ಟವಾಗಿರಲಿಲ್ಲ. ಹೆಚ್ಚು ಉನ್ನತವೂ ಆಗಿರಲಿಲ್ಲ. ಆದ್ದರಿಂದ ಈ ಪದದ ಬಳಕೆಯಲ್ಲಿ ಅಸ್ಪಷ್ಟತೆ ಗೋಚರಿಸುತ್ತಿತ್ತು. ಇದು ಯಾವುದಾದರೊಂದು ವಿಚಾರಧಾರೆಯ ಪಾರಿಭಾಷಿಕ ಪದ ಆಗಲಿಲ್ಲ. ಪವಿತ್ರ ಕುರ್‌ಆನ್ ಅವತೀರ್ಣಗೊಂಡಾಗ ಅದು ತನ್ನ ಇಂಗಿತಕ್ಕೆ ಈ ಪದವನ್ನು ಸೂಕ್ತವೆಂದು ಪರಿಗಣಿಸಿತು. ಅದು ಈ ಪದವನ್ನು ಸ್ಪಷ್ಟ ಮತ್ತು ನಿರ್ದಿಷ್ಟ ತಾತ್ಪರ್ಯಗಳಿಗಾಗಿ ಉಪಯೋಗಿಸಿತು. ಅದನ್ನು ತನ್ನ ವಿಶಿಷ್ಟ ಪಾರಿಭಾಷಿಕವಾಗಿ ಮಾಡಿಕೊಂಡಿತು. ಪವಿತ್ರ ಕುರ್‌ಆನ್‌ನ ಭಾಷೆಯಲ್ಲಿ 'ದೀನ್' ಎಂಬ ಪದವು ಒಂದು ಸಂಪೂರ್ಣ ಜೀವನ ವ್ಯವಸ್ಥೆಯನ್ನು ಸೂಚಿಸುತ್ತದೆ. ಅದು ನಾಲ್ಕು ಅಂಶಗಳಿಂದ ಕೂಡಿದೆ:

(1) ಆಜ್ಞಾಧಿಕಾರ ಮತ್ತು ಸಾರ್ವಭೌಮತೆ

(2) ಈ ಆಜ್ಞಾಧಿಕಾರದ ಮುಂದೆ ವಿಧೇಯತೆ ಮತ್ತು ಅದರ ಅನುಸರಣೆ.

(3) ಈ ಆಜ್ಞಾಧಿಕಾರದ ಅಧೀನದಲ್ಲಿರುವ ವಿಚಾರ-ಆಚಾರಗಳ ಪದ್ಧತಿ.

(4) ಸಾರ್ವಭೌಮನ ಕಡೆಯಿಂದ ಈ ಜೀವನ ವ್ಯವಸ್ಥೆಯ ನಿಷ್ಠೆ ಮತ್ತು ಅನುಸರಣೆ ಅಥವಾ ವಿದ್ರೋಹ ಮತ್ತು ಬಂಡಾಯಕ್ಕೆ ನೀಡಲ್ಪಡುವ ಪ್ರತಿಫಲ.

ಪವಿತ್ರ ಕುರ್‌ಆನ್ ಕೆಲವೆಡೆ ದೀನ್ ಎಂಬ ಪದವನ್ನು ಪ್ರಥಮ ಮತ್ತು ದ್ವಿತೀಯ ಅರ್ಥದಲ್ಲಿ ಬಳಸಿದೆ. ಕೆಲವೆಡೆ ಮೂರನೆಯ ಅರ್ಥದಲ್ಲಿ ಮತ್ತು ಇನ್ನು ಕೆಲವೆಡೆ ನಾಲ್ಕನೆಯ ಅರ್ಥದಲ್ಲಿ ಈ ಪದವನ್ನು ಉಪಯೋಗಿಸಿದೆ. ಕೆಲವೆಡೆ 'ಅದ್ದೀನ್' ಎನ್ನುತ್ತಾ ಈ ನಾಲ್ಕೂ ಅಂಶಗಳನ್ನು ಒಳಗೊಳ್ಳುವ ಸಮಗ್ರ ಅರ್ಥದಲ್ಲಿ ಪರಿಪೂರ್ಣ ಜೀವನ ವ್ಯವಸ್ಥೆಯನ್ನು ಸೂಚಿಸಲು ಈ ಪದವನ್ನು ಬಳಸುತ್ತದೆ. ಇದರ ವಿವರಣೆಗಾಗಿ ಪವಿತ್ರ ಕುರ್‌ಆನ್‌ನ ಈ ಕೆಳಗಿನ ಆಯತ್‌ಗಳನ್ನು ನೋಡಿರಿ:

ಪ್ರಥಮ ಮತ್ತು ದ್ವಿತೀಯ ಅರ್ಥದಲ್ಲಿ

اللہ الذی جعل لکم الارض قرارا والسماء بناء وصورکم
فاحسن صورکم ورزقکم من الطیبت ذلکم اللہ ربکم

فَتَبٰرَكَ اللّٰهُ رَبُّ الْعٰلَمِيْنَ ۝ هُوَ الْحَيُّ لَآ اِلٰهَ اِلَّا هُوَ فَادْعُوْهُ مُخْلِصِيْنَ
لَهُ الدِّيْنَ اَلْحَمْدُ لِلّٰهِ رَبِّ الْعٰلَمِيْنَ ـ (المومن ـ ٦٤ ـ ٦٥)

ಅಲ್ಲಾಹನೇ ನಮ್ಮ ಪಾಲಿಗೆ ಭೂಮಿಯನ್ನು ವಾಸಸ್ಥಾನವಾಗಿ ಮಾಡಿದವನು ಮತ್ತು ಮೇಲೆ ಆಕಾಶದ ಗುಂಬಜವನ್ನು ಮಾಡಿದವನು. ಅವನು ನಿಮಗೆ ರೂಪಕೊಟ್ಟನು. ಬಹಳ ಸುಂದರ ರೂಪವನ್ನೇ ಕೊಟ್ಟನು. ಅವನು ನಿಮಗೆ ಶುದ್ಧ ವಸ್ತುಗಳಿಂದ ಆಹಾರ ಒದಗಿಸಿದನು. ಈ ಅಲ್ಲಾಹನೇ ನಿಮ್ಮ ಪ್ರಭು. ಅಪರಿಮಿತ ಸಮೃದ್ಧಿಯುಳ್ಳವನು. ಅವನು ಸಕಲ ಲೋಕಗಳ ಪ್ರಭು. ಅವನೇ ಚಿರಂತನನು. ಅವನ ಹೊರತು ಇನ್ನಾರೂ ಆರಾಧ್ಯರಿಲ್ಲ. ನಿಮ್ಮ 'ದೀನ'ನ್ನು ಅವನಿಗಾಗಿಯೇ ಮೀಸಲಾಗಿಟ್ಟು ಅವನನ್ನೇ ಪ್ರಾರ್ಥಿಸಿರಿ. ಸಕಲ ಪ್ರಶಂಸೆಗಳೂ ಸಕಲ ಲೋಕಗಳ ಪಾಲಕ ಪ್ರಭುವಾದ ಅಲ್ಲಾಹನಿಗೆ ಮೀಸಲು. (ಪವಿತ್ರ ಕುರ್‌ಆನ್ 4: 64-65)

قُلْ اِنِّيْٓ اُمِرْتُ اَنْ اَعْبُدَ اللّٰهَ مُخْلِصًا لَّهُ الدِّيْنَ وَاُمِرْتُ لِاَنْ اَكُوْنَ
اَوَّلَ الْمُسْلِمِيْنَ .... قُلِ اللّٰهَ اَعْبُدُ مُخْلِصًا لَّهُ دِيْنِيْ فَاعْبُدُوْا
مَا شِئْتُمْ مِّنْ دُوْنِهٖ .... وَالَّذِيْنَ اجْتَنَبُوا الطَّاغُوْتَ اَنْ يَّعْبُدُوْهَا
وَاَنَابُوْٓا اِلَى اللّٰهِ لَهُمُ الْبُشْرٰى (الزمر ـ ١١ ـ ١٧)

ಮತ್ತು ಎಲ್ಲರಿಗಿಂತಲೂ ಮೊದಲು ನಾನು ಸ್ವತಃ ಮುಸ್ಲಿಮನಾಗಬೇಕೆಂದು ನನಗೆ ಆಜ್ಞಾಪಿಸಲಾಗಿದೆ..... ಹೇಳಿರಿ, ನಾನಂತು ನನ್ನ 'ದೀನ'ನ್ನು ನಿಷ್ಕಳಂಕವಾಗಿ ಅಲ್ಲಾಹನಿಗೆ ಮೀಸಲಾಗಿಟ್ಟು ಅವನದೇ ದಾಸ್ಯ ಮಾಡುವೆನು. ನೀವು ಅವನ ಹೊರತು ಯಾರೆಲ್ಲರ ದಾಸ್ಯ-ಆರಾಧನೆ ಮಾಡಬಯಸುತ್ತೀರೋ ಮಾಡುತ್ತಲಿರಿ..... ಇದಕ್ಕೆ ವ್ಯತಿರಿಕ್ತವಾಗಿ ತಾಗೂತ್‌ನ ದಾಸ್ಯದಿಂದ ಮುಕ್ತರಾಗಿ ಅಲ್ಲಾಹನ ಕಡೆಗೆ ಮರಳುವವರಿಗೆ ಶುಭವಾರ್ತೆಯಿದೆ.

(ಪವಿತ್ರ ಕುರ್‌ಆನ್ 39: 11-17)

اِنَّآ اَنْزَلْنَآ اِلَيْكَ الْكِتٰبَ بِالْحَقِّ فَاعْبُدِ اللّٰهَ مُخْلِصًا لَّهُ الدِّيْنَ
اَلَا لِلّٰهِ الدِّيْنُ الْخَالِصُ (الزمر ـ ٢ ـ ٣)

ಈ ಗ್ರಂಥವನ್ನು ನಾವು ನಿಮ್ಮ ಕಡೆಗೆ ಪರಮ ಸತ್ಯವಾಗಿ ಅವತೀರ್ಣಗೊಳಿಸಿರುತ್ತೇವೆ. ಆದುದರಿಂದ ನೀವು 'ದೀನ'ನ್ನು ಅಲ್ಲಾಹನಿಗಾಗಿಯೇ ಮೀಸಲಿರಿಸುತ್ತಾ ಅವನ ದಾಸ್ಯವನ್ನೇ ಮಾಡಿರಿ. ಎಚ್ಚರಿಕೆ! 'ದೀನ್' ನಿಷ್ಕಳಂಕವಾಗಿ ಕೇವಲ ಅಲ್ಲಾಹನ ಹಕ್ಕಾಗಿದೆ.

(ಪವಿತ್ರ ಕುರ್‌ಆನ್ 39: 2-3)

وَلَهُ مَا فِي السَّمٰوٰتِ وَالْاَرْضِ وَلَهُ الدِّيْنُ وَاصِبًا ـ اَفَغَيْرَ اللّٰهِ تَتَّقُوْنَ
(النحل ـ ٥٢)

ಆಕಾಶಗಳಲ್ಲೂ ಭೂಮಿಯಲ್ಲೂ ಇರುವ ಸಕಲವೂ ಅವನದೇ. ಅವನ 'ದೀನೇ' (ಇಡೀ ವಿಶ್ವದಲ್ಲಿ) ಸಂಪೂರ್ಣವಾಗಿ ಜಾರಿಯಲ್ಲಿದೆ. ಹೀಗಿರುತ್ತ ನೀವು ಅಲ್ಲಾಹನನ್ನು ಬಿಟ್ಟು ಇನ್ನಾರನ್ನಾದರೂ ಭಯಪಡುವಿರಾ? (ಪವಿತ್ರ ಕುರ್‌ಆನ್ 16: 52)

أَفَغَيْرَ دِيْنِ اللّٰهِ يَبْغُوْنَ وَلَهٗٓ أَسْلَمَ مَنْ فِي السَّمٰوٰتِ وَالْأَرْضِ طَوْعًا
وَّكَرْهًا وَّإِلَيْهِ يُرْجَعُوْنَ (آل عمران-٨٣)

ಇವರೇನು ಅಲ್ಲಾಹನ ದೀನನ್ನು ತ್ಯಜಿಸಿ ಬೇರೆ ಯಾವುದಾದರೂ ರೀತಿಯನ್ನನುಸರಿಸಲು ಇಷ್ಟಪಡುತ್ತಾರೆಯೇ? ವಸ್ತುತಃ ಆಕಾಶಗಳ ಮತ್ತು ಭೂಮಿಯ ಸಕಲ ವಸ್ತುಗಳು ಬಯಸಿಯೋ ಬಯಸದೆಯೋ ಅಲ್ಲಾಹನ ಆಜ್ಞೆ ಪಾಲನೆ ಮಾಡುತ್ತಿವೆ ಮತ್ತು ಎಲ್ಲರಿಗೂ ಅವನ ಕಡೆಗೇ ಮರಳಲಿಕ್ಕಿದೆ. (ಪವಿತ್ರ ಕುರ್‌ಆನ್ 3: 83)

وَمَآ أُمِرُوْٓا إِلَّا لِيَعْبُدُوا اللّٰهَ مُخْلِصِيْنَ لَهُ الدِّيْنَ حُنَفَآءَ (البيّنة-٥)

ಅವರಿಗೆ ನೀಡಲಾಗಿದ್ದ ಆದೇಶವು- ಅವರು ತಮ್ಮ ದೀನನ್ನು ನಿಷ್ಕಳಂಕವಾಗಿ ಅಲ್ಲಾಹನಿಗೆ ಮಾತ್ರ ಮೀಸಲಾಗಿಟ್ಟು ಏಕನಿಷ್ಠೆಯಿಂದ ಅವನ ದಾಸ್ಯ ಮಾಡಬೇಕೆಂದೇ ಹೊರತು ಬೇರೇನೂ ಆಗಿರಲಿಲ್ಲ. (ಪವಿತ್ರ ಕುರ್‌ಆನ್ 98:5)

ಈ ಎಲ್ಲ ಆಯತ್‌ಗಳಲ್ಲಿ 'ದೀನ್' ಎಂಬ ಪದವು ಸಾರ್ವಭೌಮತೆ ಮತ್ತು ಆ ಸಾರ್ವಭೌಮತೆಯನ್ನು ಅಂಗೀಕರಿಸಿ ಅದರ ದಾಸ್ಯ ಮತ್ತು ಅನುಸರಣೆಯನ್ನು ಸ್ವೀಕರಿಸುವ ಅರ್ಥದಲ್ಲಿ ಬಳಸಲ್ಪಟ್ಟಿದೆ. ಅಲ್ಲಾಹನಿಗೆ ದೀನನ್ನು ನಿಷ್ಕಳಂಕಗೊಳಿಸುವುದರ ಅರ್ಥವು ವ್ಯಕ್ತಿಯು ಆಜ್ಞಾಧಿಕಾರಿಯಾಗಿ, ಅಧಿಪತಿಯಾಗಿ ಅಲ್ಲಾಹನ ಹೊರತು ಯಾರನ್ನೂ ಅಂಗೀಕರಿಸದಿರುವುದು. ತನ್ನ ದಾಸ್ಯ ಮತ್ತು ಅನುಸರಣೆಯನ್ನು ಅಲ್ಲಾಹನಿಗೆ ಮೀಸಲಾಗಿಸುವುದು. ಇನ್ನಾರ ಸ್ವತಂತ್ರ ಅನುಸರಣೆ ಮತ್ತು ದಾಸ್ಯವನ್ನು ಅಲ್ಲಾಹನ ಜತೆಗೆ ಸೇರಿಸದಿರುವುದು.[1]

---

1. ಅರ್ಥಾತ್ ಅಲ್ಲಾಹನ ಹೊರತು ಯಾರ ಅನುಸರಣೆ ಮಾಡುವುದಿದ್ದರೂ ಅದು ಅಲ್ಲಾಹನ ಅನುಸರಣೆಗೆ ಅಧೀನ ಮತ್ತು ಅವನು ನಿರ್ಧರಿಸಿದ ಮೇರೆಗಳೊಳಗೆ ಆಗಿರಬೇಕು. ಮಗನು ತಂದೆಯನ್ನು ಅನುಸರಿಸುವುದು, ಪತ್ನಿ-ಪತಿಯನ್ನು ಅನುಸರಿಸುವುದು. ಸೇವಕ-ಯಜಮಾನನನ್ನು ಅನುಸರಿಸುವುದು ಮತ್ತು ಇಂತಹುದೇ ಇತರ ಅನುಸರಣೆಗಳು ಅಲ್ಲಾಹನ ಆಜ್ಞೆಯ ಪ್ರಕಾರವಾಗಿದ್ದರೆ ಮತ್ತು ಅಲ್ಲಾಹನು ನಿರ್ಣಯಿಸಿದ ಮೇರೆಯೊಳಗಿದ್ದರೆ ಅವು ನಿಜವಾಗಿ ಅಲ್ಲಾಹನ ಅನುಸರಣೆಯೇ ಆಗಿವೆ. ಅದು ಅದರಿಂದ ಮುಕ್ತವಾಗಿದ್ದರೆ ಅಥವಾ ಬೇರೆ ಮಾತಿನಲ್ಲಿ ಸ್ವತಂತ್ರ ಅನುಸರಣೆಗಳಾಗಿದ್ದರೆ ಇದುವೇ ನಿಜವಾದ ವಿದ್ರೋಹವಾಗಿದೆ. ಆಡಳಿತವು ಅಲ್ಲಾಹನ ಕಾನೂನಿಗೆ ಬದ್ಧವಾಗಿದ್ದರೆ ಮತ್ತು ಅವನ ಆಜ್ಞೆಗಳನ್ನು ಜಾರಿಗೊಳಿಸುವಂತಹದ್ದಾಗಿದ್ದರೆ ಅದನ್ನು ಅನುಸರಿಸುವುದು ಕಡ್ಡಾಯವಾಗಿದೆ. ಹಾಗಲ್ಲದಿದ್ದರೆ ಅದರ ಅನುಸರಣೆಯು ಅಪರಾಧವಾಗಿದೆ.

'ದೀನ್' ಜೀವನ ವ್ಯವಸ್ಥೆಯೆಂಬರ್ಥದಲ್ಲಿ

قُلْ يَٰٓأَيُّهَا ٱلنَّاسُ إِن كُنتُمْ فِى شَكٍّ مِّن دِينِى فَلَآ أَعْبُدُ ٱلَّذِينَ
تَعْبُدُونَ مِن دُونِ ٱللَّهِ وَلَٰكِنْ أَعْبُدُ ٱللَّهَ ٱلَّذِى يَتَوَفَّىٰكُمْ وَأُمِرْتُ
أَنْ أَكُونَ مِنَ ٱلْمُؤْمِنِينَ ۝ وَأَنْ أَقِمْ وَجْهَكَ لِلدِّينِ حَنِيفًا وَلَا
تَكُونَنَّ مِنَ ٱلْمُشْرِكِينَ - (يونس - ١٠٤ - ١٠٥)

ಹೇಳಿರಿ, "ಓ ಜನರೇ! ನೀವು ನನ್ನ 'ದೀನ್'ನ ಬಗೆಗೆ ಇನ್ನೂ ಸಂಶಯಗ್ರಸ್ತರಾಗಿದ್ದರೆ ಇತ್ತ ಕೇಳಿರಿ! ನೀವು ಅಲ್ಲಾಹನ ಹೊರತು ಯಾರ ದಾಸ್ಯ-ಆರಾಧನೆ ಮಾಡುತ್ತೀರೋ ಅವರ ದಾಸ್ಯ-ಆರಾಧನೆಯನ್ನು ನಾನು ಮಾಡುವುದಿಲ್ಲ. ಬದಲಾಗಿ ಯಾರ ವಶದಲ್ಲಿ ನಿಮ್ಮ ಮೃತ್ಯುವಿದೆಯೋ ಆ ಅಲ್ಲಾಹನ ದಾಸ್ಯ-ಆರಾಧನೆಯನ್ನು ಮಾತ್ರ ನಾನು ಮಾಡುತ್ತೇನೆ. ನಾನು ಸತ್ಯ ವಿಶ್ವಾಸಿಗಳಲ್ಲಾಗಿರಬೇಕೆಂದು ಆಜ್ಞಾಪಿಸಲ್ಪಟ್ಟಿರುತ್ತೇನೆ ಮತ್ತು ಏಕಾಗ್ರಚಿತ್ತನಾಗಿ ನನ್ನನ್ನು 'ದೀನ್'ನಲ್ಲಿ ಸರಿಯಾಗಿ ನೆಲೆಗೊಳಿಸಬೇಕೆಂದೂ ಎಷ್ಟು ಮಾತ್ರಕ್ಕೂ ಮುಶ್ರಿಕರಲ್ಲಾಗಬಾರದೆಂದೂ ನನ್ನೊಡನೆ ಹೇಳಲಾಗಿರುತ್ತದೆ. (ಪವಿತ್ರ ಕುರ್‌ಆನ್ 10: 104-105)

إِنِ ٱلْحُكْمُ إِلَّا لِلَّهِ أَمَرَ أَلَّا تَعْبُدُوٓا۟ إِلَّآ إِيَّاهُ ذَٰلِكَ ٱلدِّينُ ٱلْقَيِّمُ
(يوسف - ٤٠)

ಆಜ್ಞಾಧಿಕಾರವು ಅಲ್ಲಾಹನ ಹೊರತು ಇನ್ನಾರಿಗೂ ಇಲ್ಲ. ಅವನ ಹೊರತು ನೀವು ಯಾರದೇ ದಾಸ್ಯ-ಆರಾಧನೆ ಮಾಡಬಾರದೆಂದು ಅವನ ಕಟ್ಟಪ್ಪಣೆ ಇದೆ. ಇದೇ ಅಪ್ಪಟ ಋಜು ದೀನ್ (ಜೀವನ ಮಾರ್ಗ) ಆಗಿದೆ. (ಪವಿತ್ರ ಕುರ್‌ಆನ್ 12: 40)

وَلَهُۥ مَن فِى ٱلسَّمَٰوَٰتِ وَٱلْأَرْضِ كُلٌّ لَّهُۥ قَٰنِتُونَ ..... ضَرَبَ لَكُم
مَّثَلًا مِّنْ أَنفُسِكُمْ هَل لَّكُم مِّن مَّا مَلَكَتْ أَيْمَٰنُكُم مِّن شُرَكَآءَ
فِى مَا رَزَقْنَٰكُمْ فَأَنتُمْ فِيهِ سَوَآءٌ تَخَافُونَهُمْ كَخِيفَتِكُمْ أَنفُسَكُمْ ....
بَلِ ٱتَّبَعَ ٱلَّذِينَ ظَلَمُوٓا۟ أَهْوَآءَهُم بِغَيْرِ عِلْمٍ .... فَأَقِمْ وَجْهَكَ
لِلدِّينِ حَنِيفًا فِطْرَتَ ٱللَّهِ ٱلَّتِى فَطَرَ ٱلنَّاسَ عَلَيْهَا لَا تَبْدِيلَ لِخَلْقِ
ٱللَّهِ ذَٰلِكَ ٱلدِّينُ ٱلْقَيِّمُ وَلَٰكِنَّ أَكْثَرَ ٱلنَّاسِ لَا يَعْلَمُونَ ۝
(الروم - ٢٦ - ٣٠)

ಆಕಾಶಗಳಲ್ಲೂ ಭೂಮಿಯಲ್ಲೂ ಇರುವವರೆಲ್ಲರೂ ಅವನ ದಾಸರು. ಎಲ್ಲರೂ ಅವನ ಆಜ್ಞಾಧೀನರೇ ಆಗಿರುತ್ತಾರೆ. ಅವನು ನಿಮಗೆ ನಿಮ್ಮಿಂದಲೇ ಒಂದು ಉಪಮೆ ಕೊಡುತ್ತಾನೆ. ನಿಮ್ಮ ಸ್ವಾಧೀನವಿರುವ ನಿಮ್ಮ ಗುಲಾಮರಲ್ಲಿ ಕೆಲವರು ನಾವು ನಿಮಗೆ ನೀಡಿರುವ ಸಂಪತ್ತಿನಲ್ಲಿ ನಿಮ್ಮೊಂದಿಗೆ ಸರಿಸಮಾನ ಪಾಲುದಾರರಾಗಿದ್ದಾರೆಯೇ ಮತ್ತು ನೀವು ನಿಮ್ಮ ಸರಿಸಾಟಿಯಾಗಿರುವವರನ್ನು ಹೆದರುವಂತೆಯೇ ಅವರನ್ನು ಹೆದರುತ್ತೀರಾ? .... ಆದರೆ ಈ ಅಕ್ರಮಿಗಳು ಏನೂ ಅರ್ಥಮಾಡಿಕೊಳ್ಳದೆ ತಮ್ಮ ಊಹನೆಗಳನ್ನು ಅನುಸರಿಸುತ್ತಿದ್ದಾರೆ..... ಆದುದರಿಂದ ನೀವು ಏಕನಿಷ್ಠೆಯಿಂದ ನಿಮ್ಮ ಮುಖವನ್ನು ಈ ದೀನ್‌ನ ಕಡೆ ಕೇಂದ್ರೀಕರಿಸಿರಿ. ಅಲ್ಲಾಹನು ಮಾನವನನ್ನು ಸೃಷ್ಟಿಸಿದ ಪ್ರಕೃತಿಯಲ್ಲೇ ಸ್ಥಿರವಾಗಿರಿ.[1] ಅಲ್ಲಾಹನು ಮಾಡಿದ ರಚನೆಯನ್ನು ಬದಲಾಯಿಸಲಾಗದು. ಇದುವೇ ಸತ್ಯ ಮತ್ತು ಸರಿಯಾದ 'ದೀನ್' ಆಗಿದೆ. ಆದರೆ ಹೆಚ್ಚಿನವರು ಅರಿಯುವುದಿಲ್ಲ. (ಪವಿತ್ರ ಕುರ್‌ಆನ್ 30: 26-30)

اَلزَّانِيَةُ وَالزَّانِىْ فَاجْلِدُوْا كُلَّ وَاحِدٍ مِّنْهُمَا مِائَةَ جَلْدَةٍ وَّلَا تَاْخُذْكُمْ بِهِمَا رَاْفَةٌ فِىْ دِيْنِ اللّٰهِ (النور-٢)

ವ್ಯಭಿಚಾರಿಣಿ ಮತ್ತು ವ್ಯಭಿಚಾರಿ ಇವರಿಬ್ಬರಲ್ಲಿ ಪ್ರತಿಯೊಬ್ಬರಿಗೂ ನೂರು ಛಡಿಯೇಟು ಕೊಡಿರಿ. ನೀವು ಅಲ್ಲಾಹನ ಹಾಗೂ ಅಂತಿಮ ದಿವಸದ ಮೇಲೆ ವಿಶ್ವಾಸವಿರಿಸುತ್ತೀರಾದರೆ ಅಲ್ಲಾಹನ 'ದೀನ್'ನ ವಿಷಯದಲ್ಲಿ ಅವರ ಮೇಲಿನ ಕನಿಕರವು ನಿಮ್ಮನ್ನು ತಡೆಯದಿರಲಿ. (ಪವಿತ್ರ ಕುರ್‌ಆನ್ 24:2)

اِنَّ عِدَّةَ الشُّهُوْرِ عِنْدَ اللّٰهِ اثْنَا عَشَرَ شَهْرًا فِىْ كِتٰبِ اللّٰهِ يَوْمَ خَلَقَ السَّمٰوٰتِ وَالْاَرْضَ مِنْهَا اَرْبَعَةٌ حُرُمٌ ذٰلِكَ الدِّيْنُ الْقَيِّمُ (التوبة-٣٦)

ನಿಶ್ಚಯವಾಗಿಯೂ ಅಲ್ಲಾಹನು ಭೂಮಿ-ಆಕಾಶಗಳನ್ನು ಸೃಷ್ಟಿಸಿದಂದಿನಿಂದಲೂ ಅಲ್ಲಾಹನ ಲಿಖಿತದಲ್ಲಿ ತಿಂಗಳುಗಳ ಸಂಖ್ಯೆ ಹನ್ನೆರಡೇ ಇದೆ. ಅವುಗಳ ಪೈಕಿ ನಾಲ್ಕು ತಿಂಗಳುಗಳು ನಿಷಿದ್ಧವಾಗಿವೆ. ಇದೇ ಸರಿಯಾದ 'ದೀನ್'. (ಪವಿತ್ರ ಕುರ್‌ಆನ್ 9: 36)

كَذٰلِكَ كِدْنَا لِيُوْسُفَ مَا كَانَ لِيَاْخُذَ اَخَاهُ فِىْ دِيْنِ الْمَلِكِ (يوسف-٧٦)

---

1. ಅರ್ಥಾತ್: ಯಾವ ಪ್ರಕೃತಿಯಲ್ಲಿ ಅಲ್ಲಾಹನು ಮಾನವನನ್ನು ಸೃಷ್ಟಿಸಿರುವನೋ ಅದು ಮನುಷ್ಯನನ್ನು ಸೃಷ್ಟಿಸುವುದರಲ್ಲಿ, ಅವನಿಗೆ ಆಹಾರ ಒದಗಿಸುವುದರಲ್ಲಿ, ಅವನ ಪರಿಪಾಲನೆಯಲ್ಲಿ ಅಲ್ಲಾಹನ ಹೊರತು ಬೇರೆ ಯಾರೂ ಭಾಗಿಯಾಗಿಲ್ಲ. ಅಲ್ಲಾಹನ ಹೊರತು ಅವನಿಗೆ ಯಾರೂ ದೇವರಿಲ್ಲ, ಒಡೆಯರಿಲ್ಲ ಮತ್ತು ಬೇಷರತ್ ಅನುಸರಣೆಗೆ ಯೋಗ್ಯರಿಲ್ಲ ಎಂಬುದೇ ಆಗಿದೆ. ಆದ್ದರಿಂದ ಅಪ್ಪಟ ಪ್ರಾಕೃತಿಕ ವಿಧಾನವು ಮನುಷ್ಯನು ಕೇವಲ ಅಲ್ಲಾಹನ ದಾಸನಾಗುವುದು ಮತ್ತು ಇತರ ಯಾರ ದಾಸನೂ ಆಗದಿರುವುದಾಗಿದೆ.

ಹೀಗೆ ನಾವು ನಮ್ಮ ಯುಕ್ತಿಯಿಂದ ಯೂಸುಫರನ್ನು ಸಮರ್ಥಿಸಿದೆವು. ರಾಜನ ದೀನ್‌ನ ಪ್ರಕಾರ ತನ್ನ ತಮ್ಮನನ್ನು ಹಿಡಿಯುವುದು ಅವರಿಗೆ ಯೋಗ್ಯವಾಗಿರಲಿಲ್ಲ. (12: 76)

وَكَذَٰلِكَ زَيَّنَ لِكَثِيرٍ مِّنَ الْمُشْرِكِينَ قَتْلَ أَوْلَادِهِمْ شُرَكَاؤُهُمْ لِيُرْدُوهُمْ
وَلِيَلْبِسُوا عَلَيْهِمْ دِينَهُمْ ـ (انعام ـ ١٣٧)

ಇದೇ ರೀತಿಯಲ್ಲಿ ಅನೇಕ ಬಹುದೇವ ವಿಶ್ವಾಸಿಗಳಿಗೆ ಅವರ ಸಹಭಾಗಿಗಳು[1] ತಮ್ಮ ಮಕ್ಕಳ ಹತ್ಯೆಯನ್ನು ಮನೋಹರಗೊಳಿಸಿ ಬಿಟ್ಟಿದ್ದಾರೆ. ಇದು ಅವರನ್ನು ವಿನಾಶಕ್ಕೊಳಪಡಿಸಲಿಕ್ಕಾಗಿ ಮತ್ತು ಅವರ ಪಾಲಿಗೆ ಅವರ 'ದೀನ'ನ್ನು ಸಂದೇಹಾಸ್ಪದಗೊಳಿಸಲಿಕ್ಕಾಗಿ.[2] (6: 137)

أَمْ لَهُمْ شُرَكَاءُ شَرَعُوا لَهُم مِّنَ الدِّينِ مَا لَمْ يَأْذَن بِهِ اللَّهُ ـ
(الشورى ـ ٢١)

ಇವರ ಬಳಿ ಇವರಿಗಾಗಿ 'ದೀನ್'ನ ಸ್ವರೂಪದಲ್ಲಿರುವ ಮತ್ತು ಅಲ್ಲಾಹನು ಅನುಮತಿಸಿಲ್ಲದ ಜೀವನ ವಿಧಾನವೊಂದನ್ನು ನಿಶ್ಚಯಿಸಿಕೊಟ್ಟಂತಹ ದೇವ ಸಹಭಾಗಿಗಳು ಇದ್ದಾರೆಯೇ? (ಪವಿತ್ರ ಕುರ್‌ಆನ್ 42:21)

لَكُمْ دِينُكُمْ وَلِيَ دِينِ ـ (الكافرون ـ ٦)

ನಿಮಗೆ ನಿಮ್ಮ 'ದೀನ್' ಮತ್ತು ನನಗೆ ನನ್ನ 'ದೀನ್'(ಪವಿತ್ರ ಕುರ್‌ಆನ್ 109:6)

ಈ ಆಯತ್‌ಗಳಲ್ಲೆಲ್ಲಾ 'ದೀನ್' ಎಂದರೆ ಕಾನೂನು, ನಿಯಮ, ಜೀವನ ಸಂಹಿತೆ, ಕ್ರಮ ಮತ್ತು ಮನುಷ್ಯನು ತನ್ನ ಜೀವನವನ್ನು ಸಾಗಿಸುವಂತಹ ವಿಚಾರ-ಆಚಾರಗಳ ಪದ್ಧತಿ ಯಾಗಿದೆ. ಒಂದು ನಿಯಮ ಮತ್ತು ವ್ಯವಸ್ಥೆಯನ್ನು ಪಾಲಿಸುವಾಗ ಒಬ್ಬ ವ್ಯಕ್ತಿಯು ಯಾವ ಆಧಿಪತ್ಯದ ಅನುಸರಣೆಯಲ್ಲಿ ಅದನ್ನು ಮಾಡುತ್ತಾನೋ ಅದು ಅಲ್ಲಾಹನ ಆಧಿಪತ್ಯ ವಾಗಿದ್ದರೆ ಆ ವ್ಯಕ್ತಿ ಅಲ್ಲಾಹನ 'ದೀನ್'ನಲ್ಲಿರುತ್ತಾನೆ. ಅದು ಒಬ್ಬ ಅರಸನ ಆಧಿಪತ್ಯ ವಾಗಿದ್ದರೆ ಆ ವ್ಯಕ್ತಿಯು ರಾಜನ 'ದೀನ್'ನಲ್ಲಿರುತ್ತಾನೆ. ಅದು ಪುರೋಹಿತ ವರ್ಗದ ಆಧಿಪತ್ಯ ವಾಗಿದ್ದರೆ ಆ ವ್ಯಕ್ತಿಯು ಅವರ 'ದೀನ್'ನಲ್ಲಿರುತ್ತಾನೆ. ಅದು ಕುಟುಂಬ, ಜಾತಿ ಅಥವಾ ಜನಾಂಗದ ಬಹುಸಂಖ್ಯಾತ ಜನರ ಆಧಿಪತ್ಯವಾಗಿದ್ದರೆ ಆ ವ್ಯಕ್ತಿಯು ಅವರ 'ದೀನ್'ನಲ್ಲಿರುತ್ತಾನೆ. ಒಟ್ಟಿನಲ್ಲಿ ಯಾರ ಮಾತನ್ನು ಅಂತಿಮ ತೀರ್ಮಾನವೆಂದು ಬಗೆದು ಅದನ್ನು ಪಾಲಿಸಲಾಗುತ್ತದೋ ವ್ಯಕ್ತಿಯು ಅದೇ 'ದೀನ್'ನ ಅನುಯಾಯಿಯಾಗಿರುತ್ತಾನೆ.

---

1. ಸಹಭಾಗಿಗಳೆಂದರೆ ದೇವತ್ವ, ಆಧಿಪತ್ಯ ಮತ್ತು ಕಾನೂನು ರಚನೆಯಲ್ಲಿ ಅಲ್ಲಾಹನ ಸಹಭಾಗಿ ಎಂದಾಗಿದೆ.

2.ಧರ್ಮವನ್ನು ಸಂದೇಹಾಸ್ಪದಗೊಳಿಸುವುದೆಂದರೆ ಮಿಥ್ಯ ಧರ್ಮಶಾಸ್ತ್ರ ಕರ್ತೃಗಳು ಈ ಅಪರಾಧವನ್ನು ಎಷ್ಟು ಸುಂದರ ಮಾಡಿ ತೋರಿಸುತ್ತಾರೆಂದರೆ ಅದರಿಂದ ಅರೇಬಿಯದ ಜನರು ಹ. ಇಬ್ರಾಹೀಮ್(ಅ) ಮತ್ತು ಇಸ್ಮಾಈಲ್(ಅ) ರಿಂದ ದೊರೆತ ಅದೇ ಧರ್ಮದ ಒಂದಂಶವಾಗಿರಬಹುದೆಂಬ ಸಂಶಯದಲ್ಲಿ ಸಿಲುಕಿ ಬಿಟ್ಟರು.

ಪ್ರತಿಫಲದ ದಿನ ಎಂಬರ್ಥದಲ್ಲಿ

إِنَّمَا تُوعَدُونَ لَصَادِقٌ ۝ وَإِنَّ الدِّينَ لَوَاقِعٌ (الذاريات - ٥-٦)

ವಾಸ್ತವದಲ್ಲಿ ಯಾವುದರ ಕುರಿತು ನಿಮ್ಮನ್ನು ಎಚ್ಚರಿಸಲಾಗುತ್ತದೆಯೋ ಅದು ಸತ್ಯವಾಗಿದೆ. ಖಂಡಿತವಾಗಿಯೂ 'ದೀನ್' ಮುಂದೆ ಬರಲಿಕ್ಕಿದೆ. (ಪವಿತ್ರ ಕುರ್‌ಆನ್ 51: 5-6)

أَرَأَيْتَ الَّذِي يُكَذِّبُ بِالدِّينِ ۝ فَذَٰلِكَ الَّذِي يَدُعُّ الْيَتِيمَ ۝
وَلَا يَحُضُّ عَلَىٰ طَعَامِ الْمِسْكِينِ (الماعون ١-٣)

'ದೀನ್'ನ್ನು ನಿರಾಕರಿಸುವವನನ್ನು ನೀವು ಕಂಡಿರಾ? ಅವನೇ ತಾನೆ ಅನಾಥನನ್ನು ದೂರ ದಬ್ಬುವವನು ಮತ್ತು ದರಿದ್ರನಿಗೆ ಊಟ ಕೊಡಲು ಪ್ರೇರೇಪಿಸದವನು! (107: 1-3)

وَمَا أَدْرَاكَ مَا يَوْمُ الدِّينِ ۝ ثُمَّ مَا أَدْرَاكَ مَا يَوْمُ الدِّينِ ۝ يَوْمَ
لَا تَمْلِكُ نَفْسٌ لِّنَفْسٍ شَيْئًا ۖ وَالْأَمْرُ يَوْمَئِذٍ لِّلَّهِ (الانفطار - ١٧-١٩)

ಆ 'ದೀನ್'ನ ದಿನ ಏನೆಂಬುದು ನಿಮಗೇನು ಗೊತ್ತು? ಹೌದು, ಆ 'ದೀನ್'ನ ದಿನ ಏನೆಂಬುದು ನಿಮಗೇನು ಗೊತ್ತು? ಅದು ಯಾರೂ ಯಾರಿಗೂ ಏನನ್ನೂ ಮಾಡಲು ಸಾಧ್ಯವಾಗದ ದಿನ. ಅಂದು ತೀರ್ಮಾನವೆಲ್ಲವೂ ಸರ್ವಸಂಪೂರ್ಣವಾಗಿ ಅಲ್ಲಾಹನ ಅಧಿಕಾರದಲ್ಲಿರುವುದು. (ಪವಿತ್ರ ಕುರ್‌ಆನ್ 82: 17-19)

ಈ ಆಯತ್‌ಗಳಲ್ಲಿ 'ದೀನ್' ಎಂಬ ಪದವು ವಿಚಾರಣೆ, ತೀರ್ಮಾನ ಮತ್ತು ಕರ್ಮಗಳ ಪ್ರತಿಫಲ ಎಂಬರ್ಥದಲ್ಲಿ ಪ್ರಯೋಗವಾಗಿದೆ.

'ದೀನ್': ಒಂದು ಸಮಗ್ರ ಪಾರಿಭಾಷಿಕ

ಅರಬರು ತಮ್ಮ ಮಾತುಕತೆಯಲ್ಲಿ 'ದೀನ್' ಎಂಬ ಪದವನ್ನು ಯಾವ ಅರ್ಥಗಳಲ್ಲಿ ಬಳಸುತ್ತಿದ್ದರೋ ಹೆಚ್ಚು ಕಡಿಮೆ ಅದೇ ಅರ್ಥದಲ್ಲಿ ಈ ಪದವನ್ನು ಪವಿತ್ರ ಕುರ್‌ಆನ್ ಈ ತನಕ ಉದ್ಧರಿಸಿದ ವಾಕ್ಯಗಳಲ್ಲಿ ಬಳಸಿದೆ. ಆದರೆ ಅದು 'ದೀನ್' ಎಂಬ ಪದವನ್ನು ಒಂದು ಸಮಗ್ರ ಪಾರಿಭಾಷಿಕದ ರೂಪದಲ್ಲೂ ಬಳಸಿದೆ. ಅದರ ತಾತ್ಪರ್ಯ ಒಂದು ಜೀವನ ವ್ಯವಸ್ಥೆಯಾಗಿದೆ. ಅದರಲ್ಲಿ ಮನುಷ್ಯನು ಯಾರದಾದರೂ ಸಾರ್ವಭೌಮತೆಯನ್ನು ಅಂಗೀಕರಿಸಿ ಅವನ ಅನುಸರಣೆ ಮತ್ತು ವಿಧೇಯತೆಯನ್ನು ಕೈಗೊಳ್ಳುವುದು. ಅವನ ನಿಯಮ-ನಿಬಂಧನೆ ಮತ್ತು ಕಾನೂನುಗಳಿಗೆ ಅನ್ವಯವಾಗಿ ಜೀವನ ಸಾಗಿಸುವುದು. ಅವನ ಅನುಸರಣೆಯಲ್ಲೇ ಗೌರವ, ಪ್ರಗತಿ ಮತ್ತು ಪುರಸ್ಕಾರವಿದೆ ಎಂಬ ನಂಬಿಕೆಯನ್ನಿಡುವುದು. ಅವನ ಆಜ್ಞೋಲ್ಲಂಘನೆಯಲ್ಲಿ ಅಪಮಾನ, ನಿಂದ್ಯತೆ ಮತ್ತು ಶಿಕ್ಷೆಯಿದೆ ಎಂದು ಭಯಪಡುವುದು. ಪ್ರಾಯಶಃ ಜಗತ್ತಿನ ಯಾವುದೇ ಭಾಷೆಯಲ್ಲಿ ಈ ಎಲ್ಲ ಅರ್ಥಗಳನ್ನು ಸಮಗ್ರವಾಗಿ ಒಳಗೊಂಡಂತಹ ಒಂದು

ಪದವಿರಲಾರದು. 'ಸ್ಟೇಟ್' (State) ಎಂಬ ಆಧುನಿಕ ಪದವು ಸ್ವಲ್ಪ ಮಟ್ಟಿಗೆ ಈ ಅರ್ಥಕ್ಕೆ ಸಮೀಪ ಬಂದಿದೆ. ಆದರೆ ಅದು ಇನ್ನೂ 'ದೀನ್'ನ ಎಲ್ಲ ಅರ್ಥ ವೈಶಾಲ್ಯಗಳನ್ನು ಒಳಗೊಂಡಿಲ್ಲ.

ಈ ಕೆಳಗಿನ ಆಯತ್‌ಗಳಲ್ಲಿ 'ದೀನ್' ಎಂಬ ಪದವು ಈ ಸಮಗ್ರ ಪಾರಿಭಾಷಿಕದ ರೂಪದಲ್ಲಿ ಪ್ರಯೋಗವಾಗಿದೆ –

قَاتِلُوا الَّذِينَ لَا يُؤْمِنُونَ بِاللهِ وَلَا بِالْيَوْمِ الْآخِرِ وَلَا يُحَرِّمُونَ
مَا حَرَّمَ اللهُ وَرَسُولُهُ وَلَا يَدِينُونَ دِينَ الْحَقِّ مِنَ الَّذِينَ أُوتُوا
الْكِتَابَ حَتَّى يُعْطُوا الْجِزْيَةَ عَنْ يَدٍ وَهُمْ صَاغِرُونَ ۝ (توبہ-٢٩)

ಅಲ್ಲಾಹ್ ಹಾಗೂ ಅಂತಿಮ ದಿವಸದ ಮೇಲೆ ವಿಶ್ವಾಸವಿರಿಸದ, ಅಲ್ಲಾಹ್ ಹಾಗೂ ಅವನ ಸಂದೇಶವಾಹಕರು ನಿಷಿದ್ಧವೆಂದು ಸಾರಿರುವುದನ್ನು ನಿಷಿದ್ಧ ಮಾಡಿಕೊಳ್ಳದ ಮತ್ತು ಸತ್ಯ 'ದೀನ'ನ್ನು ತಮ್ಮ ದೀನಾಗಿ ಮಾಡಿಕೊಳ್ಳದ ಗ್ರಂಥದವರು ತಮ್ಮ ಕೈಯಿಂದಲೇ ಜಿಝಿಯಾ (ರಕ್ಷಣಾ ಕರ) ಕೊಟ್ಟು ಅಧೀನರಾಗುವವರೆಗೂ ಅವರೊಡನೆ ಹೋರಾಡಿರಿ.

(ಪವಿತ್ರ ಕುರ್‌ಆನ್ 9: 29)

ಈ ಆಯತ್‌ನಲ್ಲಿ 'ಸತ್ಯ ದೀನ' ಎಂಬುದು ಪಾರಿಭಾಷಿಕ ಪದವಾಗಿದೆ. ಅದರ ಅರ್ಥ ಮತ್ತು ತಾತ್ಪರ್ಯವನ್ನು ಅಲ್ಲಾಹನೇ ಹಿಂದಿನ ಮೂರು ಮಾತುಗಳಲ್ಲಿ ಸ್ಪಷ್ಟವಾಗಿ ಮಾಡಿರುವನು. ಈ ಆಯತ್‌ನಲ್ಲಿ ಅಲ್ಲಾಹನ ಮೇಲೆ ವಿಶ್ವಾಸವಿರಿಸುವುದೆಂದರೆ ಅವನನ್ನು ಏಕೈಕ ಸಾರ್ವಭೌಮನೆಂದು ಅಂಗೀಕರಿಸುವುದಾಗಿದೆ. ಅಂತಿಮ ದಿನದ ಮೇಲೆ ವಿಶ್ವಾಸವಿರಿಸುವುದೆಂದರೆ ವಿಚಾರಣೆ ಮತ್ತು ಪ್ರತಿಫಲದ ದಿನದ ಮೇಲೆ ವಿಶ್ವಾಸವಿರಿಸುವುದಾಗಿದೆ. 'ದೀನ್'ನ ನಾಲ್ಕು ತಾತ್ಪರ್ಯಗಳನ್ನು ಈ ವಚನದಲ್ಲಿ ವಿವರಿಸಲಾಗಿದೆ. ಮತ್ತು ಅದನ್ನೇ ಸಮಗ್ರವಾಗಿ 'دین حق' 'ಸತ್ಯದೀನ್' ಎಂದು ಹೇಳಲಾಗಿದೆ.

وَقَالَ فِرْعَوْنُ ذَرُونِي أَقْتُلْ مُوسَىٰ وَلْيَدْعُ رَبَّهُ إِنِّي أَخَافُ أَنْ يُبَدِّلَ
دِينَكُمْ أَوْ أَنْ يُظْهِرَ فِي الْأَرْضِ الْفَسَادَ ۝ (المومن-٢٦)

ಒಂದು ದಿನ ಫಿರ್‌ಔನನು ತನ್ನ ಆಸ್ಥಾನದವರೊಡನೆ, "ನನ್ನನ್ನು ಬಿಟ್ಟು ಬಿಡಿ, ನಾನು ಈ ಮೂಸಾನನ್ನು ವಧಿಸಿ ಬಿಡುತ್ತೇನೆ. ಇವನು ತನ್ನ ಪ್ರಭುವನ್ನು ಕರೆದು ನೋಡಲಿ. ಇವನು ನಿಮ್ಮ ದೀನನ್ನು ಬದಲಿಸಿ ಬಿಡುವನು ಅಥವಾ ದೇಶದಲ್ಲಿ ಗೊಂದಲವನ್ನುಂಟು ಮಾಡುವನು ಎಂಬ ಭಯ ನನಗೆ ಉಂಟಾಗಿದೆ" ಎಂದನು. (ಪವಿತ್ರ ಕುರ್‌ಆನ್ 40: 26)

ಫಿರ್‌ಔನ್ ಮತ್ತು ಮೂಸಾ(ಅ) ಅವರ ಚರಿತ್ರೆಯ ಎಷ್ಟು ವಿವರಗಳು ಪವಿತ್ರ

ಕುರ್‌ಆನ್‌ನಲ್ಲಿ ಬಂದಿವೆಯೋ ಅವುಗಳನ್ನು ಗಮನಿಸಿದರೆ ಇಲ್ಲಿ 'ದೀನ್' ಎಂಬ ಪದವು ಕೇವಲ ಧರ್ಮ ಎಂಬ ಅರ್ಥದಲ್ಲಿ ಪ್ರಯೋಗವಾಗಿಲ್ಲ ಎಂದು ಸ್ಪಷ್ಟವಾಗುತ್ತದೆ. ಆ ಪದವು ಇಲ್ಲಿ ರಾಷ್ಟ್ರ ಮತ್ತು ನಾಗರಿಕ ವ್ಯವಸ್ಥೆ ಎಂಬರ್ಥದಲ್ಲಿ ಬಂದಿದೆ. ಫಿರ್‌ಔನ್ ಹೇಳಿದ್ದೇನೆಂದರೆ ಮೂಸಾ(ಅ) ತಮ್ಮ ಉದ್ದೇಶದಲ್ಲಿ ಸಫಲರಾದರೆ 'ಸ್ಟೇಟ್' (State) ಬದಲಾಗಿ ಬಿಡುವುದು. ಈಗ ಫಿರ್‌ಔನ್‌ನ ಆಡಳಿತ ಮತ್ತು ಪ್ರಚಲಿತ ಕಾನೂನು ಕಟ್ಟಲೆಗಳ ಬುನಾದಿಯಲ್ಲಿ ನಡೆಯುತ್ತಿರುವ ಜೀವನ ವ್ಯವಸ್ಥೆಯು ಬೇರು ಸಹಿತ ಕಿತ್ತೆಸೆಯಲ್ಪಡುವುದು. ಅದರ ಸ್ಥಾನದಲ್ಲಿ ಒಂದೋ ಬೇರೆ ವ್ಯವಸ್ಥೆಯು ಬೇರೆಯೇ ಬುನಾದಿಗಳ ಮೇಲೆ ಸ್ಥಾಪನೆಯಾಗುವುದು. ಇಲ್ಲವೇ ಯಾವುದೇ ವ್ಯವಸ್ಥೆಯೂ ಸ್ಥಾಪನೆಯಾಗದೆ ಇಡೀ ದೇಶದಲ್ಲಿ ಅರಾಜಕತೆ ವ್ಯಾಪಿಸುವುದು.

ಈಗ ಈ ಕೆಳಗಿನ ಆಯತ್‌ಗಳನ್ನು ನೋಡಿರಿ –

إِنَّ الدِّيْنَ عِنْدَ اللهِ الْإِسْلَامُ (آل عمران - ١٩)

(1) ಅಲ್ಲಾಹನ ಬಳಿ 'ದೀನ್' ಇಸ್ಲಾಮ್ ಮಾತ್ರವಾಗಿದೆ. (ಪವಿತ್ರ ಕುರ್‌ಆನ್ 3:19)

وَمَنْ يَّبْتَغِ غَيْرَ الْإِسْلَامِ دِيْنًا فَلَنْ يُّقْبَلَ مِنْهُ (آل عمران - ٨٥)

(2) ಯಾರಾದರೂ ಈ 'ಇಸ್ಲಾಮ್'ನ ಹೊರತು ಯಾವುದಾದರೂ ಇತರ ಪದ್ಧತಿಯನ್ನು ಸ್ವೀಕರಿಸಲಿಚ್ಛಿಸಿದರೆ ಅವನ ಆ ಪದ್ಧತಿಯನ್ನು ಎಷ್ಟು ಮಾತ್ರಕ್ಕೂ ಮಾನ್ಯ ಮಾಡಲಾಗದು. (ಪವಿತ್ರ ಕುರ್‌ಆನ್ 3:85)

هُوَ الَّذِيْٓ أَرْسَلَ رَسُوْلَهٗ بِالْهُدٰى وَدِيْنِ الْحَقِّ لِيُظْهِرَهٗ عَلَى الدِّيْنِ كُلِّهٖ وَلَوْ كَرِهَ الْمُشْرِكُوْنَ (التوبہ - ٣٣)

(3) ತನ್ನ ರಸೂಲರನ್ನು ಸನ್ಮಾರ್ಗ ಮತ್ತು ಸತ್ಯದೀನ್‌ನೊಂದಿಗೆ ಕಳುಹಿಸಿದಾತನು ಅಲ್ಲಾಹನೇ ಆಗಿದ್ದಾನೆ. ಅದನ್ನು ಸಕಲ ದೀನ್‌ಗಳ ಮೇಲೆ ಉತ್ಥಾನಗೊಳಿಸಲಿಕ್ಕಾಗಿ! ಬಹುದೇವಾರಾಧಕರಿಗೆ ಇದು ಎಷ್ಟೇ ಅಪ್ರಿಯವಾಗಿರಲಿ. (ಪವಿತ್ರ ಕುರ್‌ಆನ್ 9:33)

وَقَاتِلُوْهُمْ حَتّٰى لَا تَكُوْنَ فِتْنَةٌ وَّيَكُوْنَ الدِّيْنُ كُلُّهٗ لِلّٰهِ (الانفال - ٣٩)

(4) ಕ್ಷೋಭೆ ಅಳಿದು ಹೋಗುವವರೆಗೂ 'ದೀನ್' ಸರ್ವ ಸಂಪೂರ್ಣವಾಗಿ ಅಲ್ಲಾಹನಿಗಾಗಿ ಆಗುವವರೆಗೂ ಈ ಸತ್ಯನಿಷೇಧಿಗಳೊಡನೆ ಹೋರಾಡಿರಿ. (ಪವಿತ್ರ ಕುರ್‌ಆನ್ 8:39)

إِذَا جَآءَ نَصْرُ اللّٰهِ وَالْفَتْحُ ۝ وَرَاَيْتَ النَّاسَ يَدْخُلُوْنَ فِىْ دِيْنِ
اللّٰهِ اَفْوَاجًا ۝ فَسَبِّحْ بِحَمْدِ رَبِّكَ وَاسْتَغْفِرْهُ ۚ اِنَّهٗ كَانَ تَوَّابًا (النصر)

(5) ಅಲ್ಲಾಹನ ಸಹಾಯ ಬಂದು ಬಿಟ್ಟಾಗ ಮತ್ತು ವಿಜಯ ಪ್ರಾಪ್ತವಾದಾಗ ಮತ್ತು ಜನರು ತಂಡೋಪದಂಡವಾಗಿ ಅಲ್ಲಾಹನ ದೀನ್‌ನಲ್ಲಿ ಪ್ರವೇಶಿಸುತ್ತಿರುವುದನ್ನು ನೀವು ಕಂಡಾಗ ನಿಮ್ಮ ಪ್ರಭುವಿನ ಪ್ರಶಂಸೆಯೊಂದಿಗೆ ಅವನ ಕೀರ್ತನೆ ಮಾಡಿರಿ ಮತ್ತು ಅವನೊಡನೆ ಕ್ಷಮೆ ಯಾಚಿಸಿರಿ. ನಿಸ್ಸಂದೇಹವಾಗಿಯೂ ಅವನು ಅತ್ಯಧಿಕ ಪಶ್ಚಾತ್ತಾಪ ಸ್ವೀಕರಿಸುವವನಾಗಿರುತ್ತಾನೆ.

(ಪವಿತ್ರ ಕುರ್‌ಆನ್ 110:1-3)

ಈ ಆಯತ್‌ಗಳಲ್ಲೆಲ್ಲಾ 'ದೀನ್' ಎಂಬ ಪದವು ಎಲ್ಲ ಶ್ರದ್ಧಾತ್ಮಕ, ವೈಚಾರಿಕ, ನೈತಿಕ ಮತ್ತು ವ್ಯಾವಹಾರಿಕ ವಿಷಯಗಳನ್ನೊಳಗೊಂಡ ಸಮಗ್ರ ಜೀವವ ವ್ಯವಸ್ಥೆಯ ಅರ್ಥದಲ್ಲಿ ಬಳಸಲ್ಪಟ್ಟಿದೆ.

ಮೊದಲ ಎರಡು ಆಯತ್‌ಗಳಲ್ಲಿ ಅಲ್ಲಾಹನ ಬಳಿ ಮನುಷ್ಯನಿಗಾಗಿ ಇರುವ ಸರಿಯಾದ ಜೀವನ ವ್ಯವಸ್ಥೆ ಕೇವಲ ಅಲ್ಲಾಹನ ಅನುಸರಣೆ ಮತ್ತು ದಾಸ್ಯವಾಗಿದೆ (ಇಸ್ಲಾಮ್) ಇದರ ಹೊರತು ಇತರ ಯಾವುದಾದರೂ ವ್ಯವಸ್ಥೆಯು ಕಾಲ್ಪನಿಕ ಸಾರ್ವಭೌಮತೆಯ ಅನುಸರಣೆಯ ಬುನಾದಿಯಲ್ಲಿದ್ದರೆ ಅದು ಸರ್ವಲೋಕ ಪ್ರಭುವಿನ ಬಳಿ ಸ್ವೀಕಾರಾರ್ಹವಲ್ಲ. ನೈಸರ್ಗಿಕವಾಗಿ ಹಾಗೆ ಆಗಲು ಸಾಧ್ಯವೂ ಇಲ್ಲ. ಏಕೆಂದರೆ ಮನುಷ್ಯನು ಯಾರ ಸೃಷ್ಟಿಯಾಗಿರುವನೋ ಯಾರ ಒಡೆತನ ಮತ್ತು ಪರಿಪಾಲನೆಯಲ್ಲಿರುವನೋ ಯಾರ ಸಾಮ್ರಾಜ್ಯದಲ್ಲಿ ಪ್ರಜೆಯಾಗಿ ಬಾಳುತ್ತಿರುವನೋ ಅವನು ಮನುಷ್ಯನು ತನ್ನ ಹೊರತು ಇತರರ ದಾಸ್ಯ ಮತ್ತು ಅನುಸರಣೆ ಮಾಡುವುದನ್ನು ಎಂದೂ ಸ್ವೀಕರಿಸಲಾರನು.

ಮೂರನೆಯ ಆಯತ್‌ನಲ್ಲಿ, ಅಲ್ಲಾಹನು ತನ್ನ ಪ್ರವಾದಿಯನ್ನು ಇಸ್ಲಾಮ್ ಎಂಬ ಸತ್ಯ ಜೀವನ ಕ್ರಮದೊಂದಿಗೆ ಕಳುಹಿಸಿರುವನು ಮತ್ತು ಅವರ ಉದ್ದೇಶವೇನೆಂದರೆ ಈ ಜೀವನ ವ್ಯವಸ್ಥೆಯನ್ನು ಇತರೆಲ್ಲ ವ್ಯವಸ್ಥೆಗಳ ಮೇಲೆ ಪ್ರಬಲಗೊಳಿಸಬೇಕು ಎಂದು ಹೇಳಲಾಗಿದೆ.

ನಾಲ್ಕನೆಯ ಆಯತ್‌ನಲ್ಲಿ 'ಇಸ್ಲಾಮ್ ದೀನ್'ನ ಅನುಯಾಯಿಗಳಿಗೆ ಈ ಲೋಕದಲ್ಲಿ ಅಲ್ಲಾಹನ ವಿದ್ರೋಹದ ಮೇಲೆ ನಿಂತಿರುವಂತಹ ಎಲ್ಲ ವ್ಯವಸ್ಥೆಗಳನ್ನು ಅಳಿಸಿ ಅಲ್ಲಾಹನ ದಾಸ್ಯ ಮತ್ತು ಅನುಸರಣೆಯ ಮೇಲೆ ಆಧಾರಿತವಾಗಿರುವ ಜೀವನ ವ್ಯವಸ್ಥೆಯನ್ನು ಸ್ಥಾಪಿಸುವತನಕವೂ ವಿಶ್ರಾಂತಿ ಪಡೆಯದೆ ನಿರಂತರ ಹೋರಾಡುತ್ತಿರಬೇಕೆಂದು ಆಜ್ಞಾಪಿಸಲಾಗಿದೆ.

ಐದನೆಯ ಆಯತ್‌ನಲ್ಲಿ ಪ್ರವಾದಿ(ಸ) ಅವರನ್ನು ಅವರು ತಮ್ಮ ಪ್ರವಾದಿತ್ವದ 23 ವರ್ಷಗಳ ನಿರಂತರ ಹೋರಾಟದಿಂದ ಕ್ರಾಂತಿಯನ್ನು ತಂದ ಬಳಿಕ ಉದ್ದೇಶಿಸಿ ಹೇಳಲಾಗಿತ್ತು.

ಆಗ ಇಸ್ಲಾಮ್ ತನ್ನ ಪೂರ್ಣರೂಪದಲ್ಲಿ ಒಂದು ಶ್ರದ್ಧಾತ್ಮಕ ಮತ್ತು ವೈಚಾರಿಕ, ನೈತಿಕ ಮತ್ತು ಶೈಕ್ಷಣಿಕ, ನಾಗರಿಕ ಮತ್ತು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯ ರೂಪದಲ್ಲಿ ಸ್ಥಾಪನೆಯಾಗಿತ್ತು. ಅರೇಬಿಯದ ಮೂಲೆ ಮೂಲೆಗಳಿಂದ ತಂಡೋಪತಂಡವಾಗಿ ಜನರು ಬಂದು ಈ ವ್ಯವಸ್ಥೆಯಲ್ಲಿ ಶಾಮೀಲಾಗುತ್ತಿದ್ದರು. ಈ ರೀತಿ ಪ್ರವಾದಿ(ಸ) ನೇಮಿಸಲ್ಪಟ್ಟಂತಹ ಕಾರ್ಯವು ಪೂರ್ಣಗೊಂಡಾಗ ಇದನ್ನು ತಮ್ಮ ಸಾಧನೆಯೆಂದು ಬಗೆದು ಗರ್ವಪಡಬೇಡಿರಿ. ಕುಂದು ಕೊರತೆಗಳಿಂದ ಅತೀತವಾದ ನಿಷ್ಕಳಂಕ ಮತ್ತು ಪರಿಪೂರ್ಣ ಅಸ್ತಿತ್ವ ನಿಮ್ಮ ಪ್ರಭುವಿನದ್ದು ಮಾತ್ರ. ಆದ್ದರಿಂದ ಈ ಮಹತ್ಕಾರ್ಯವನ್ನು ಪೂರ್ಣಗೊಳಿಸಿದ್ದಕ್ಕಾಗಿ ಅವನ ಸ್ತುತಿ ಸ್ತೋತ್ರ ಗಳನ್ನು ಮಾಡಿರಿ. 23 ವರ್ಷಗಳ ಕಾಲದ ಈ ಕರ್ತವ್ಯ ನಿರ್ವಹಣೆಯಲ್ಲಿ ಆಗಿರುವ ಕುಂದು ಕೊರತೆ ಮತ್ತು ಲೋಪ ದೋಷಗಳನ್ನು ಮನ್ನಿಸುವಂತೆ ಅವನಲ್ಲಿ ಪ್ರಾರ್ಥಿಸಿರಿ ಎಂದು ಆದೇಶಿಸಲಾಗಿದೆ.